ರಂಜನೆ ಬೋಧನೆ ಪ್ರಚೋದನೆ


ಲಂಕೇಶ್


20 ಮೇ 2015 ಪುಟ 20 ರೂ. 15/-



ಐನ್‌ಸ್ಟೀನ್ ದುಬಾರಿ ಡೈವೋರ್ಸ್


ತಾರಾತ್ರಿಗತಿ ಸಲ್ಲು





ಸುವರ್ಣ ನ್ಯೂಸ್ 24X7 ಕನ್ನಡ ಪ್ರಭ

ಭಟ್ಟ ಔಟ್ ಸುಗತ ಇನ್



ಮಂಡ್ಯ ನಗರಸಭೆ
ನಲ್ ಕಾಳಗಕ್ಕೆ
ಮುಹೂರ್ತ ಫಿಕ್ಸ್


ರಾಯಚೂರು
ಜಿ.ಪಂ.ನಲ್ಲಿ
ಕೋಟಿಕೋಟಿ
ಲೂಟಿ

ಧಾರವಾಡ
ತಮಾಟಗಾರ ಗುಂಪು
ಗೆಲುವಿನ
ಹೊಸ್ತಿಲಲ್ಲಿ

ಬಾನಿ ಆಸ್ಥಾನದಲ್ಲಿ ಪ್ರಧಾನಿಯೇ ನರ್ತಕಿಯಾದರೆ?



21ನೇ ಶತಮಾನದ ಸಿದ್ಧಾಂತ ಎಂಬುದರ



21ನೇ ಶತಮಾನದ ಚಳವಳಿ, ಸಿದ್ಧಾಂತ, ತಾತ್ವಿಕತೆ ಎಂಬ ವಿಚಾರವನ್ನು 'ಸ್ವರಾಜ್ ಅಭಿಯಾನ'ದ ಯೋಗೇಂದ್ರ ಯಾದವ್ ಅವರು ಕಳೆದೊಂದು ವರ್ಷದಿಂದ ಹಲವು ಬಾರಿ ಪ್ರಸ್ತಾಪಿಸಿದ್ದಾರೆ. 3 ತಿಂಗಳ ಹಿಂದೆ ಅವರು ಆಮ್‌ಆದ್ಮಿ ಪಕ್ಷದಲ್ಲಿ ಪ್ರಮುಖ ಸ್ಥಾನದಲ್ಲಿದ್ದರು. ಆಗಲೇ ಅವರು ಮೊದಲು ಈ ಕುರಿತು ಮಾತನಾಡಿದ್ದು. ಬಹಳ ವಿಚಿತ್ರ ಎನ್ನಬಹುದಾದ ಮಾತೊಂದನ್ನು ಅವರು ಹೇಳಿದ್ದರು. 'ಆಮ್‌ಆದ್ಮಿ ಪಕ್ಷಕ್ಕೆ ಸಿದ್ಧಾಂತ ಇಲ್ಲ'. ಇದೇ ಮಾತನ್ನು ಆಪ್‌ನ ಇತರರು ಸಾಕಷ್ಟು ಸಾರಿ ಹೇಳಿದ್ದರು. ಅವರುಗಳು ಹೇಳಿದ್ದರಲ್ಲಿ ಆಶ್ಚರ್ಯವೇನೂ ಇರಲಿಲ್ಲ, ಆದರೆ ಮೂಲತಃ ಸಮಾಜವಾದಿ ಚಿಂತನಾಧಾರೆಯ ಹಿನ್ನೆಲೆಯ ಯೋಗೇಂದ್ರ ಯಾದವ್‌ರೂ ಅದನ್ನೇ ಪುನರುಚ್ಚರಿಸಿದಾಗ ಬಹಳ ಆಶ್ಚರ್ಯವೆನಿಸಿತ್ತು.


'ವಿಧಾನಸಭೆಗೆ ಕೇಜ್ರಿವಾಲ್, ಲೋಕಸಭೆಗೆ ಮೋದಿ' ಥರದ ಘೋಷಣೆಯ ಬೆಂಬಲಿಗರಾಗಿದ್ದ ಹಲವರು ಆಪ್‌ನ ಒಳಗೂ, ಅದರ ಅಂಚಿನಲ್ಲೂ ಇದ್ದರು. ಅಂತಹವರಿಗೆ ಕಾಂಗ್ರೆಸ್ ಬಗ್ಗೆ ಹೇಗೂ ಸಿಟ್ಟಿತ್ತು; ಕಮ್ಯುನಿಸ್ಟ್ ಪಕ್ಷಗಳೂ ಅಪಥ್ಯವಾಗಿದ್ದವು. ಹಾಗೆಂದು ಬಿಜೆಪಿ ನಮ್ಮ ಪಕ್ಷ ಎಂದೂ ಹೇಳಲು ಸಾಧ್ಯವಿರಲಿಲ್ಲ, ಇನ್ನುಳಿದಂತೆ ಆಪ್‌ನಲ್ಲಿ ಬಿಜೆಪಿಯನ್ನು ವಿರೋಧಿಸುವವರೂ ಸಾಕಷ್ಟು ಸಂಖ್ಯೆಯಲ್ಲಿ ಇದ್ದರು. ಹೀಗಾಗಿ ಆಪ್‌ನ ಮುಖ್ಯ ವ್ಯಕ್ತಿಗಳು ತಮ್ಮ ತಾತ್ವಿಕತೆಯ ಕುರಿತಾಗಿ 'ಯಾವ ಸಿದ್ಧಾಂತವೂ ಇಲ್ಲ' ಎಂದು ಹೇಳಿದ್ದು ಸಹಜವಾಗಿತ್ತು, 'ಯಾವ ಸಿದ್ಧಾಂತವೂ ಇಲ್ಲ' ಎಂದು ಹೇಳುವುದೂ ಒಂದು ವಿಚಾರಧಾರೆ ಮತ್ತು ಅದಕ್ಕೆ ನಿರ್ದಿಷ್ಟವಾದ ತಾತ್ವಿಕ ಹಿನ್ನೆಲೆ ಇದೆ ಎಂದೆಲ್ಲಾ ಅವರೊಡನೆ ಚರ್ಚೆ ಕಷ್ಟವಿತ್ತು. ಅದೇನೇ ಇರಲಿ, ಆಪ್‌ನಲ್ಲಿ ಎಲ್ಲರೂ ಒಪ್ಪಿದ್ದಂತಹ ಒಂದೇ ವಿಚಾರಧಾರೆ ಇರಲಿಲ್ಲ ಎಂಬುದು ಈಗಂತೂ ಸ್ಪಷ್ಟವಿದೆ.

ಆದ್ದರಿಂದಲೇ ಕೆಲವರು ಆಪ್ ಎಂಬುದೇ 21ನೇ ಶತಮಾನದ ಕಾಂಗ್ರೆಸ್ ಎನ್ನುತ್ತಿದ್ದರು. ಅಂದರೆ, ಏಕಕಾಲದಲ್ಲಿ ಕಲ್ಯಾಣರಾಜ್ಯ (welfare state)ವನ್ನು ಪ್ರತಿಪಾದಿಸುವವರೂ, ಒಂದಷ್ಟು ಸಮಾಜವಾದಿ ಆಶಯವಿರುವವರೂ ಇರುವ, ಅದೇ ಸಂದರ್ಭದಲ್ಲಿ ಕಡು ನವ ಉದಾರವಾದೀ ಆರ್ಥಿಕತೆಯನ್ನು ಪ್ರತಿಪಾದಿಸುವವರೂ ಇರುವ ಪಕ್ಷವಾಗಿ ಕಾಂಗ್ರೆಸ್ ಅಸ್ತಿತ್ವದಲ್ಲಿತ್ತು, ಈ ರೀತಿಯ ಸ್ವರೂಪ ಕಾಂಗ್ರೆಸ್‌ಗೆ 20ನೇ ಶತಮಾನದ ಆರಂಭದಿಂದಲೂ ಇದ್ದೇ ಇತ್ತು, ಹೊಸ ಶತಮಾನದಲ್ಲಿ ಆಪ್ ಸಹ ಭಿನ್ನ ರೀತಿಯ, ಆದರೆ ಈ ಶತಮಾನದ ಕಾಂಗ್ರೆಸ್ ಎಂಬುದು ಕೆಲವರ ಅನಿಸಿಕೆಯಾಗಿತ್ತು.

ಅಂತಹ ಮಿಶ್ರತೆಗೆ ಅವಕಾಶವಿಲ್ಲ, ಇದೇನಿದ್ದರೂ ಮಿಕ್ಕ ಹಲವು ಪಕ್ಷಗಳಂತೆ 'ಭಿನ್ನ ಅಭಿಪ್ರಾಯಗಳಿಗೆ ಅವಕಾಶವಿಲ್ಲದ' ಪಕ್ಷವೇ ಆಗಿರುತ್ತದೆ ಎಂಬುದನ್ನು ಕೇಜ್ರಿವಾಲ್ ಮತ್ತವರ ಬೆಂಬಲಿಗರು ಈಗಾಗಲೇ ಸಾಬೀತುಪಡಿಸುತ್ತಿದ್ದಾರೆ. ಆದರೆ, ಆಮ್ ಆದ್ಮಿ ಪಕ್ಷದ ಈ ಬಹುಮತದಧಾರೆಗಿಂತ ಭಿನ್ನವಾದ ಹಿನ್ನೆಲೆಯನ್ನು ಹೊಂದಿದ್ದ ಯೋಗೇಂದ್ರ ಯಾದವ್‌ರು 'ಆಮ್ ಆದ್ಮಿ ಪಕ್ಷಕ್ಕೆ ಯಾವ ಸಿದ್ಧಾಂತವೂ ಇಲ್ಲ'ವೆಂದು - ಇನ್ನೂ ಅದರೊಳಗೆ ಇದ್ದಾಗಲೇ - ಏಕೆ ಹೇಳಿದರು? ಈ ಪ್ರಶ್ನೆಯನ್ನು ಆಗಲೇ ಯಾರೋ ಟಿವಿ ನಿರೂಪಕರು ಕೇಳಿದರು. ಇನ್ನೂ ಸ್ವಲ್ಪ ಮುಂದುವರೆದು ಮತ್ತೊಂದು ಪ್ರಶ್ನೆಯನ್ನೂ ಅವರ ಮುಂದಿಡಲಾಯಿತು. 'ನಿಮ್ಮ ಪಕ್ಷವು ಕೇಂದ್ರಕ್ಕಿಂತ ಎಡಕ್ಕಿರುವ (left of the centre –ಇದನ್ನು ಕನ್ನಡದಲ್ಲಿ ಕ್ಲುಪ್ತವಾಗಿ ಹೇಳುವ ಪದ ಅಥವಾ ನುಡಿಗಟ್ಟನ್ನು ಹುಡುಕಿಕೊಳ್ಳಬೇಕಿದೆ) ಮತ್ತು ಇನ್ನಷ್ಟು ತೀವ್ರ ಎಡಪಂಥಕ್ಕೆ ಸರಿಯುತ್ತಿರುವ ಪಕ್ಷವಾಗಿದೆ ಅಲ್ಲವೇ?'

ಅದಕ್ಕೆ ಯಾದವ್‌ರ ಉತ್ತರ ಹೀಗಿತ್ತು: 'ಅದಕ್ಕೆ ನನ್ನ ಅರ್ಥ ಇದು. ಆಪ್‌ನ ತಾತ್ವಿಕತೆಯನ್ನು ಏನೆಂದು ತೀರ್ಮಾನಿಸುವಾಗ 20ನೇ ಶತಮಾನದಲ್ಲಿ ನಿರ್ಧರಿತವಾಗಿರುವ ನಿರ್ದಿಷ್ಟ ಸೈದ್ಧಾಂತಿಕ ಬುಟ್ಟಿಯೊಳಗೆ ಒಂದು ಕಡೆ ಅದನ್ನು ಹಾಕುವುದು ಸರಿಯಲ್ಲವೆಂದು ನನ್ನ ಭಾವನೆ. ಏಕೆಂದರೆ, 20ನೇ ಶತಮಾನದಲ್ಲಿ ನಿರ್ದಿಷ್ಟ ಸೈದ್ಧಾಂತಿಕ ಚೌಕಟ್ಟು ಏನೆಂದು ತೀರ್ಮಾನಿಸಿದಾಗ ಅದಕ್ಕೆ ನಿರ್ದಿಷ್ಟವಾದ ವ್ಯಾಖ್ಯಾನಗಳಿವೆ. 21ನೇ ಶತಮಾನದ ಈ ಚಳವಳಿಯ ಚೌಕಟ್ಟನ್ನು ಅವ್ಯಾವುವೂ ಸೂಕ್ತವಾಗಿ ನಿರ್ವಚಿಸಲಾರವು. ಹಾಗಾಗಿ ಆ ಅರ್ಥದಲ್ಲಿ ಇದಕ್ಕೆ ಯಾವುದೇ ಸಿದ್ಧಾಂತವಿಲ್ಲ ಎಂದು ನಾನು ಹೇಳಿದೆ.'

ಈ ಉತ್ತರದಲ್ಲಿ ಜಾಣತನವಿದೆ. ಏಕೆಂದರೆ ಆಪ್‌ನ ಸಕ್ರಿಯ ಕಾರ್ಯಕರ್ತರಲ್ಲೊಬ್ಬರಾಗಿರುವ ನಟಿ ಗುಲ್‌ಪನಾಗ್ 'ನಮ್ಮನ್ನು ಹಲವರು ತೀವ್ರ



ಎಡಪಂಥೀಯರೆಂದು (extreme left) ಕರೆಯುತ್ತಿದ್ದಾರೆ. ನಮ್ಮ ಪಕ್ಷದ ಆಡಳಿತ ನೋಡಿದ ಮೇಲೆ ಅವರೆಲ್ಲರಿಗೂ ನಾವೇನು ಎಂದು ಗೊತ್ತಾಗುತ್ತದೆ'. ಆಪ್‌ನ ಹಲವರಿಗೆ ತೀವ್ರ ಎಡಪಂಥೀಯರೆಂದು ಮಾತ್ರವಲ್ಲ, ಎಡಪಂಥೀಯತೆಯ ಸೋಂಕನ್ನೂ ಹೊಂದುವುದು ಇಷ್ಟವಿಲ್ಲ. ಇಂತಹ ಹಲವು ಬಗೆಯ ವ್ಯಕ್ತಿಗಳನ್ನು ಹೊಂದಿದ್ದ ಪಕ್ಷವನ್ನು ಒಟ್ಟಿಗೆ ತೆಗೆದುಕೊಂಡು ಹೋಗಬೇಕಾದ ಜವಾಬ್ದಾರಿ ಹೊಂದಿರುವವರು ಹೆಚ್ಚು ಜವಾಬ್ದಾರಿಯುತರೂ, ಜಾಣರೂ ಆಗಿರಬೇಕಾಗುತ್ತದೆ. ಹಾಗಾಗಿ ಯೋಗೇಂದ್ರ ಯಾದವ್‌ರ ಅಂದಿನ ಕಷ್ಟ ಅರ್ಥವಾಗುವಂಥದ್ದು.

'ಗಾಂಧಿವಾದಿಗಳು, ಅಂಬೇಡ್ಕರ್‌ವಾದಿಗಳು, ಮಾರ್ಕ್ಸ್‌ವಾದಿಗಳು, ಲೋಹಿಯಾವಾದಿಗಳು ಮಾವೋವಾದಿಗಳು ಎಲ್ಲರೂ ಒಂದೆಡೆ ಕೂತು, ಈ ದೇಶಕ್ಕೆ ಬೇಕಾದ ಚಿಂತನಾಧಾರೆಯ ಕುರಿತು ಚರ್ಚಿಸಿ ಒಮ್ಮತಕ್ಕೆ ಬರುವುದು ಸಾಧ್ಯವಿಲ್ಲವೇ?


ಮೀಸಲಾತಿಯ ಕುರಿತು, ಸಬ್ಸಿಡಿಯ ಕುರಿತು ಮತ್ತು ನಿಜವಾದ ಜನಸಾಮಾನ್ಯರಿಗೆ ಸಂಬಂಧಿಸಿದ ಹತ್ತು ಹಲವು ಸಂಗತಿಗಳ ಕುರಿತು ಆಪ್ ನಿಧಾನಕ್ಕೆ ಎಡಕ್ಕೆ ಸರಿಯುತ್ತಾ ಬಂದಿದ್ದು ನಿಜ. ಚುನಾವಣಾ ಪ್ರಜಾತಂತ್ರವು ಇಂತಹ 'ಅನಿವಾರ್ಯತೆ'ಗಳನ್ನು ಮುಂದಿಡುತ್ತದೆ. ನಿರ್ದಿಷ್ಟ ಸಂದರ್ಭವೊಂದರಲ್ಲಿ ಆ ಹೊತ್ತು ಒದಗಿಬಂದ ಕಾರ್ಯಕರ್ತಗಣವನ್ನು ಆಧರಿಸಿ ಮುಂದಕ್ಕೆ ಹೋಗಬೇಕಾದಾಗ, ಆರಂಭದಲ್ಲಿ ತಾತ್ವಿಕ ಅಸ್ಪಷ್ಟತೆಗಳು, ಚೌಕಟ್ಟಿನ ಗೊಂದಲಗಳು ಇರುವುದೇ ಸಮಸ್ಯೆಯಲ್ಲ. ಆದರೆ, ಕೇವಲ ಚುನಾವಣಾ ಪ್ರಜಾತಂತ್ರದ ಅನಿವಾರ್ಯತೆಗಳ ಕಾರಣಕ್ಕೆ ಜನಸಾಮಾನ್ಯರೆಡೆಗೆ ಸಾಗದೇ, ನಿಜವಾದ ಅರ್ಥದಲ್ಲಿ ಆ ಕಡೆಗೆ ಪಯಣ ಬೆಳೆಸುತ್ತಾರಾ ಇಲ್ಲವಾ ಎಂಬುದು ಯಾವುದೇ ಜನಸಂಘಟನೆಯ ಭವಿಷ್ಯದ ದಿಕ್ಕನ್ನು ತೀರ್ಮಾನ ಮಾಡುತ್ತದೆ. ಕೇಜ್ರಿವಾಲ್‌ರು ಬಹುಶಃ ತಮ್ಮ ದಿಕ್ಕನ್ನು ತೀರ್ಮಾನಿಸಿಕೊಂಡಿದ್ದಾರೆ. ಯೋಗೇಂದ್ರ ಯಾದವ್‌ರ ಕುರಿತು ಎಷ್ಟು ಆಶಾಭಾವನೆ ಇಟ್ಟುಕೊಳ್ಳಬೇಕು ಎಂಬುದನ್ನು ಅವರು ಆಯ್ಕೆ ಮಾಡಿಕೊಳ್ಳುವ ದಿಕ್ಕಿನ ಮೇಲೆ ಆಧಾರಪಟ್ಟಿರುತ್ತದೆ.

ಇನ್ನು 21ನೇ ಶತಮಾನದ ತಾತ್ವಿಕತೆಯ ವಿಚಾರಕ್ಕೆ ವಾಪಸ್ಸು ಬರುವುದಾದರೆ, ಅಂಥದ್ದೊಂದು ಇದೆಯಾ ಎಂಬ ಪ್ರಶ್ನೆಯನ್ನು ಮೊದಲು ಹಾಕಿಕೊಂಡು ಉತ್ತರಿಸಿಕೊಳ್ಳಬೇಕಾಗುತ್ತದೆ. ಸಂದೇಹವೇ ಇಲ್ಲ, ಹೊಸ ಕಾಲಕ್ಕೆ ಹೊಸದೇ ಚೌಕಟ್ಟು, ಭಾಷೆ, ಘೋಷಣೆ, ವಿಚಾರಧಾರೆ ಬೇಕಾಗುತ್ತದೆ. 21ನೇ ಶತಮಾನಕ್ಕೂ ಇದು ಅನ್ವಯಿಸುತ್ತದೆ. 20ನೇ ಶತಮಾನದ ಚಳವಳಿಗಳು, ಹಿಂದಿನ ಸಹಸ್ರಮಾನದ ಕೊನೆಯ ಹೊತ್ತಿಗೆ ಮೊಂಡಾಗಿದ್ದೂ, ಹೊಸ

ಆಮ್ ಆದ್ಮಿ ಪಕ್ಷ ಯಶಸ್ವಿಯಾಗುವುದರ ಹಿಂದೆ, ಅದು 21ನೇ ... ಬೇಕಾದ ಭಾಷೆ, ಘೋಷಣೆಗಳನ್ನು ಹೊಂದಿರುವ ಕಾರಣವೂ ... ವಿಫಲವಾಗುತ್ತಿರುವುದಕ್ಕೆ, ಅದು 20ನೇ ಶತಮಾನದ ಚಳವಳಿಗ... ಮತ್ತು ನಕಾರಾತ್ಮಕ ಅಂಶಗಳಿಂದ ಪಾಠ ಕಲಿಯದೇ ಇರುವ ಕಾರ...

ಸಹಸ್ರಮಾನದಲ್ಲಿ ಅಷ್ಟು ಪ್ರಸ್ತುತರಾಗದೇ ಇರುವುದು ಈ ಕಾರಣಕ್ಕೇನೇ. ಅಂದರೆ, ಹೊಸ ಕಾಲಕ್ಕೆ ಬೇಕಾದ ರೀತಿಯಲ್ಲಿ ಹೊರಳಿಕೊಳ್ಳದೇ ಇರುವುದಕ್ಕೆ. ಆಮ್ ಆದ್ಮಿ ಪಕ್ಷವು ಎಷ್ಟರಮಟ್ಟಿಗೆ ಯಶಸ್ವಿಯಾಗಿದೆಯೋ, ಅಷ್ಟಕ್ಕೆ ಕಾರಣವೂ ಇದರಲ್ಲೇ ಇದೆ. ಅದು ಹೊಸ ಕಾಲಕ್ಕೆ ಬೇಕಾದ ಭಾಷೆ, ಘೋಷಣೆಯನ್ನು ಹೊಂದಿದೆ.

ಸಮಸ್ಯೆ ಇರುವುದು 21ನೇ ಶತಮಾನದ ಚಳವಳಿಯು ಈ ಇಪ್ಪತ್ತೂ ಚಿಲ್ಲರೇ ಶತಮಾನಗಳಿಂದ, ಆದರಲ್ಲೂ ಕಳೆದೆರಡು ಶತಮಾನಗಳ



ವಿಚಾರಧಾರೆಗಳಿಂದ ಏನಾದರೂ ಕಲಿಯುವುದು ಇದೆಯಾ ಇಲ್ಲವಾ ಎಂಬುದರಲ್ಲಿ, ಆಪ್ ಎಡವಿರುವ ಅಂಶಗಳಲ್ಲಿ ಇದೂ ಒಂದು ಮುಖ್ಯ ಸಂಗತಿಯಾಗಿದೆ. ಎಲ್ಲಾ ಹೊಸ ಚಳವಳಿಗಳೂ, ತಾತ್ವಿಕತೆಗಳೂ ಈ ಹಿಂದಿನ ಪ್ರಗತಿಪರ ಸಿದ್ಧಾಂತಗಳ ಮತ್ತು ಸಿದ್ಧಾಂತಿಗಳ ಹೆಗಲ ಮೇಲೆ ನಿಂತೇ ಮೇಲೇರುತ್ತವೆ. 20ನೇ ಶತಮಾನದ ಚಳವಳಿಗಳು ಜಗತ್ತಿನಾದ್ಯಂತ ಅಗಾಧವಾದದ್ದನ್ನು ಸಾಧಿಸಿವೆ. ಇನ್ನೂ 2 ಶತಮಾನಗಳದ್ದನ್ನೂ ಲೆಕ್ಕ ಹಿಡಿದರೆ, ಪ್ರಜಾತಂತ್ರ, ಸಮಾಜವಾದ, ಜಾತಿ ವಿನಾಶ, ಮಹಿಳಾ ಸಮಾನತೆ,ಆದಿವಾಸಿ ಹಕ್ಕುಗಳು, ಪರಿಸರ ಇತ್ಯಾದಿ ಇತ್ಯಾದಿ ವಿಚಾರಗಳಲ್ಲಿ ಮನುಷ್ಯ ಸಮಾಜ ಭಾರೀ ದಾಪುಗಾಲನ್ನಿಡಲು ಇವೇ ಚಳವಳಿಗಳು ಕಾರಣವಾಗಿವೆ. ನಕಾರಾತ್ಮಕ ಪಾಠಗಳೂ ಸಾಕಷ್ಟೇ ಇವೆ. ಪ್ರಜಾತಂತ್ರವನ್ನು, ಸಮಾಜವಾದವನ್ನು ಪ್ರತಿಪಾದಿಸಿದ ಸಂಘಟನೆಗಳೇ ನಂತರ ಅದನ್ನು ಅಪಹಾಸ್ಯ ಮಾಡುವ ರೀತಿಯಲ್ಲಿ ನಡೆದುಕೊಂಡಿವೆ. ಆಮ್‌ಆದ್ಮಿ ಪಕ್ಷವು ಕಲಿಯಬೇಕಿದ್ದ ಸಂಗತಿಗಳಲ್ಲಿ ಇವೆಲ್ಲವೂ ಮುಖ್ಯವಾಗಿದ್ದವು.

ಅದೇ ರೀತಿಯಲ್ಲಿ ಮಾರ್ಕ್ಸ್, ಗಾಂಧಿ, ಅಂಬೇಡ್ಕರ್, ಲೋಹಿಯಾ ಇನ್ನೂ ಕೆಲವರ ಚಿಂತನಾಧಾರೆಗಳನ್ನು ಒಪ್ಪಿಕೊಂಡು ಚಳವಳಿ ಕಟ್ಟಿದ ಪ್ರಗತಿಪರ ಸಂಘಟನೆಗಳು ಅವೆಷ್ಟೋ ಇವೆ. ಈ ಚಿಂತನಾಧಾರೆಗಳನ್ನು ಪರಸ್ಪರ ಪೂರಕವಾಗಿಯಲ್ಲದೇ, ಮುಖಾಮುಖಿ ಸ್ಥಾಪಿಸಿ ಬಹುದೀರ್ಘಕಾಲ ಪರಸ್ಪರ ಕೊಡುಕೊಳೆ ಇಲ್ಲದ ರೀತಿಯಲ್ಲಿ ಮಾಡಿದ್ದೂ ಇದೆ. ಈ ಧಾರೆಗಳು ಮುಂದುವರೆದು, ಇಂದು ಮತ್ತೆ ಅವರು ಪ್ರಸ್ತುತ, ಇವರು ಪ್ರಸ್ತುತ ಎಂದು ಹೇಳುತ್ತಾ ಪುನರುಜ್ಜೀವನದ ಪ್ರಯತ್ನಗಳೂ ನಡೆಯುತ್ತಿವೆ. ಹಾಗೆ ಹೇಳುವಾಗ ಈ ಎಲ್ಲಾ ದಾರ್ಶನಿಕರೂ, ಅವರು ಬದುಕಿದ್ದ ಕಾಲದಲ್ಲಿ ಹೇಳಿದ್ದ ಮಾತುಗಳು

ಯಥಾವತ್ ಇಂದಿಗೂ ಅನ್ವಯಿಸ...
ಎಂಬಂತೆ ವೈಭವೀಕರಿಸುವುದೂ ...
ಮಾರ್ಕ್ಸ್, ಅಂಬೇಡ್ಕರರಲ್ಲಿ ತಮಗೆ...
ಸೂಕ್ತಿಗಳನ್ನು ಆಯ್ದು ಆ ಕಡೆ ಈ...
ಇರುವುದೂ ನಡೆಯುತ್ತಿದೆ.

ಇವರುಗಳಲ್ಲಿ ಪ್ರತಿಯೊಬ್ಬರೂ...
ಶುರುವಾಗಿ ಎಲ್ಲಿಗೆ ಹೊರಟರು, ...
ಬದುಕು ಹಾಗೂ ಚಿಂತನೆಯ ಮ...
ಆಶಯವೇನಾಗಿತ್ತು, ಅವರುಗಳು...
ಮಾತುಗಳ ಸಂದರ್ಭವೇನಾಗಿತ್ತು...
ಇಂದು ನಾವು ತೆಗೆದುಕೊಳ್ಳಬೇ...
ಎಂಬುದನ್ನು ಗಮನಿಸುವುದು ...
ಇಲ್ಲದಿದ್ದಲ್ಲಿ, ನಿಜಕ್ಕೂ ಅವರುಗ...
ಪ್ರಸ್ತುತಗೊಳಿಸುವುದಕ್ಕಿಂತ ಹೆಚ್ಚು...
ಅಪ್ರಸ್ತುತಗೊಳಿಸುತ್ತಾ ಇರುತ್ತೇವೆ...
ಸಹಸ್ರಮಾನದ ಅತ್ಯಂತ ಶ್ರೇಷ್ಠ ...
ಬಿಬಿಸಿ ನಡೆಸಿದ ಆನ್‌ಲೈನ್ ಸ...
ಕಾರ್ಲ್‌ಮಾರ್ಕ್ಸ್‌ರನ್ನು ಮೊದಲ ...
ಕೂರಿಸಲಾಗಿತ್ತು. ಹಾಗೆಯೇ ಈ...
ಚಾನೆಲ್ ಒಂದು ಕಳೆದ ಶತಮಾ...
ಶ್ರೇಷ್ಠ ಚಿಂತಕ ಯಾರೆಂದು ನಡೆ...
ಡಾ.ಬಿ.ಆರ್.ಅಂಬೇಡ್ಕರರನ್ನು ಮೊ...
ಕೂರಿಸಲಾಗಿತ್ತು. ಅವರವರ ಅನು...
ಸಾಕಷ್ಟು ಪ್ರಚಾರವನ್ನೂ ಕೊಟ್ಟುಕೆ...
ಯಾರದ್ದು ಮೊದಲನೇ ಸ್ಥಾನ, ಯ...
ಸ್ಥಾನ ಇತ್ಯಾದಿ ಚರ್ಚೆಗಳು ನಡೆಯ...
ಅಸಂಗತವಾದದ್ದು. ಟಿವಿ ಚಾನೆಲ್...
ಮಾಡುವುದು ಸಹಜವಾಗಿದೆ. ಆ...
ಸಾಮಾಜಿಕ, ರಾಜಕೀಯಾರ್ಥಿಕ ಬ...
ಹಲವು ಆಯಾಮಗಳ ಕುರಿತು ...
ನಡೆಸಿ ಪ್ರಪಂಚದ ಮುಂದಿಟ್ಟ ಇ...
ಯಾರು ಶ್ರೇಷ್ಠರೆಂದು ಚಳವಳಿಗಾ...
ಅದು ಅಸಂಗತವಷ್ಟೇ ಅಲ್ಲ, ಅದ...
ತಪ್ಪಿಸುತ್ತದೆ.

21ನೇ ಶತಮಾನದಲ್ಲಿ ನಡೆಯ...
ಮುಖ್ಯ ಕೆಲಸ, 19- 20ನೇ ಶತ...
ಪಾಠಗಳ ಅನುಸಂಧಾನ.ಹೊಸ ಶ...
ತಾತ್ವಿಕತೆಯ ಕುರಿತು ಯೋಗೇಂದ...
ಮಾತ್ರ ಮಾತನಾಡಿರುವುದಲ್ಲ, ಹ...
ಚಿಂತಕರು ಮತ್ತು ಹೋರಾಟಗಾರ...
ಮಾತನಾಡುತ್ತಿದ್ದಾರೆ. ಇಲ್ಲಿ ಪ್ರಸ್ತಾಪಿ...
ಇಬ್ಬರೆಂದರೆ ಆನಂದ್ ತೇಲ್‌ತುಂ...
ಶ್ರೀಧರ್. ತೇಲ್‌ತುಂಬ್ಡೆ 'ಸೈದ್ಧಾಂ...
ಒಂದು ಅಸ್ಮಿತೆಯಾಗಿದ್ದು, ಅದನ...
ಅಗತ್ಯವಿದೆ. ಎಲ್ಲಾ ಅಸ್ಮಿತೆಗಳೂ ...
ಮಾಡಬೇಕಾದ ಹೊಸ ರೀತಿಯ ...
ತೊಡಕುಗಳೇ. ಅವುಗಳನ್ನು ತೊರ...
ಹಣೆಪಟ್ಟಿಗಳಿಲ್ಲದೇ ಎಲ್ಲರಿಂದಲೂ...
ತೆಗೆದುಕೊಂಡು ಮುಂದುವರೆಯು...
ಎನ್ನುತ್ತಾರೆ. ಶ್ರೀಧರ್ 'ಹೊಸ ಕ...
ಸಂಘಟನೆಗಳ ನಡುವೆ ಅನುಸಂಧಾ...
ನಡುವೆ ಅನುಸಂಧಾನ ಮತ್ತು ಸಿ...
ಅನುಸಂಧಾನ ಆಗಬೇಕಿದೆ. ಅದು...
ಚಳವಳಿ ನಿರ್ಮಾಣ ಮಾಡಲು ...
ಅಗತ್ಯ' ಎನ್ನುತ್ತಿದ್ದಾರೆ.


ಬೆಂಗಳೂರಿನಲ್ಲಿ ನಡೆದ 'ಸ್ವರಾ...
ಯಾದವ್‌ರು ಒಂದು ಮಾತು ...
'ಗಾಂಧಿವಾದಿಗಳು, ಅಂಬೇಡ್ಕರ್‌ವಾ...
ಮಾರ್ಕ್ಸ್‌ವಾದಿಗಳು, ಲೋಹಿಯಾ...
ಮಾವೋವಾದಿಗಳು ಎಲ್ಲರೂ ಒ...
ದೇಶಕ್ಕೆ ಬೇಕಾದ ಚಿಂತನಾಧಾರೆ...
ಒಮ್ಮತಕ್ಕೆ ಬರುವುದು ಸಾಧ್ಯವಿಲ್ಲ...
ಸಾಧ್ಯ, ಕನಿಷ್ಠ ಈ ಸ್ವರಾಜ್ ಅಂತ...
ವೇದಿಕೆಯಾಗುವ ಕಡೆಗೆ ನಾವೆಲ್ಲ...
ಬಹುಶಃ ಅಂತಹ ಒಂದು ಚಚ...
ಕಡೆಗೆ ಇಂದಿನ ಒಟ್ಟಾರೆ ರಾಜಕೀ...
ಚಲಿಸುತ್ತಿದೆ. ಇಂತಹ ಆಶಾವಾದ...

ಆಧುನಿಕ ರಾಮಾಯಣದ ಹೀರೋ ರಾವಣ

ನಮ್ಮ ಟಿವಿ ಚಾನೆಲ್‌ಗಳಲ್ಲಿ ಬರುವ ಧಾರಾವಾಹಿಗಳ ತರ್ಕಗಳು ಮತ್ತು ತಿರುವುಗಳು ವಿಚಿತ್ರವಾಗಿರುತ್ತವೆ. ಕತೆಯನ್ನು ಜಗ್ಗುವ ಏಕೈಕ ಕಾರಣಕ್ಕೆ ಪಾತ್ರಗಳ ವ್ಯಕ್ತಿತ್ವವೇ ಬದಲಾಗುತ್ತಾ ಹೋಗುತ್ತವೆ. ಅದನ್ನು ನೋಡಿ ಯಾರೂ "ಅಯ್ಯೋ, ಅವಳಿಗೆ ಇದ್ದಕ್ಕಿದ್ದಂತೆ ಏನಾಯಿತು?" ಎಂದು ಯೋಚಿಸುವ ಗೋಜಿಗೂ ಹೋಗುವುದಿಲ್ಲ, ಅದೆಲ್ಲ ಕತೆಯ ಇನ್ನೊಂದು ಆಯಾಮ ಎಂದು ಸುಮ್ಮನಾಗುತ್ತಾರೆ.

ಈಗ ಆಪ್ ನಾಯಕ ಕುಮಾರ್ ವಿಶ್ವಾಸ್ ಅವರಿಗೆ ಸಂಬಂಧಿಸಿದಂತೆ ನಡೆಯುತ್ತಿರುವ ಪ್ರಕರಣವೂ ನಮ್ಮ ಧಾರಾವಾಹಿಗಳ ತರ್ಕ ಮತ್ತು ತಿರುವುಗಳಷ್ಟೇ ಅಸಂಬದ್ಧವಾಗಿದೆ. ನಿಮಗೆ ಗೊತ್ತಿರುವಂತೆ ಈ ಪ್ರಕರಣದಲ್ಲಿ ಒಬ್ಬ ಮಹಿಳೆ ರಾಜಕೀಯ ರಾಮಾಯಣದ ಪಾತ್ರಗಳನ್ನು ಪರಿಚಯ ಮಾಡಿಕೊಳ್ಳೋಣ.

ಸೀತೆ: ಈಕೆ ಅಮೇಥಿಯಲ್ಲಿ ಆಪ್ ಪಕ್ಷಕ್ಕಾಗಿ ದುಡಿದ ಸ್ವಯಂ ಸೇವಕಿ. ಕುಮಾರ್ ವಿಶ್ವಾಸ್ ಅಮೇಥಿಯಲ್ಲಿ ರಾಹುಲ್ ಗಾಂಧಿ ವಿರುದ್ಧ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಸ್ಪರ್ಧಿಸಿದಾಗ ಈಕೆ ಮತ್ತು ಕುಮಾರ್ ನಡುವೆ ಸಂಬಂಧ ಇತ್ತೆಂದು ಆರೋಪಿಸಲಾಗಿದೆ. ಇದರಿಂದ ಸಹಜವಾಗಿಯೇ ಕಂಗಾಲಾಗಿರುವ ಸೀತೆ "ನನಗೂ ಅವರಿಗೂ ಸಂಬಂಧ ಇಲ್ಲ ಎಂದು ಎಷ್ಟೇ ಹೇಳಿದರೂ ಜನ ನಂಬುತ್ತಿಲ್ಲ" ಎಂದು ಹೇಳುತ್ತಿದ್ದಾಳೆ. ಒರಿಜಿನಲ್ ಸೀತೆಯಂತಲ್ಲದ ಈಕೆಗೆ ವನವಾಸಕ್ಕೆ ಹೋಗುವುದಕ್ಕಾಗಲಿ, ಭೂತಾಯಿಯ ಗರ್ಭ ಸೇರುವುದಕ್ಕಾಗಲಿ ಇಷ್ಟವಿಲ್ಲ, ಬದಲಾಗಿ ತನ್ನ



ನನಗೂ ಕುಮಾರ್ ವಿಶ್ವಾಸ್ ಅವರಿಗೂ ಯಾವ ಸಂಬಂಧವೂ ಇಲ್ಲ, ಹಾಗೆಂದು ವಿಶ್ವಾಸ್ ಅವರೇ ಬಹಿರಂಗವಾಗಿ ಹೇಳಬೇಕು" ಎಂದು ಒತ್ತಾಯಿಸಿದ್ದಾಳೆ. ಸಂಬಂಧ ಇದ್ದಿದ್ದರೆ ಅದನ್ನು ನಮ್ಮ ಮಾಧ್ಯಮಗಳು ವರದಿ ಮಾಡುವುದು ಸಹಜ. ಆದರೆ 'ಸಂಬಂಧ ಇಲ್ಲ' ಎಂಬುದಕ್ಕೂ ಮೈಲೇಜ್ ಕೊಡುತ್ತಿರುವುದು ತಮಾಷೆಯಾಗಿದೆ.

ಈ ಪ್ರಕರಣವನ್ನು 'ಆಧುನಿಕ ರಾಮಾಯಣ' ಎಂದು ಕರೆದಿರುವ ಸಂದೀಪ್ ರಾಯ್ ಎಂಬುವವರು ಒಂದು ಹಾಸ್ಯ ಲೇಖನ ಬರೆದಿದ್ದಾರೆ. ಅದರ ಸಾರಾಂಶ ಹೀಗಿದೆ:

ಈ ಆಧುನಿಕ ರಾಮಾಯಣದಲ್ಲಿ ಸೀತೆಯ ಅಪಹರಣವಾಗಿಲ್ಲ, ಬದಲಾಗಿ ರಾಮನೇ ನಾಪತ್ತೆಯಾಗಿದ್ದಾನೆ. ಮಾತ್ರವಲ್ಲ ಇಲ್ಲಿ ರಾವಣನೇ 'ನಾನು ನಿರ್ದೋಷಿ' ಎಂದು ಚೀರಾಡುತ್ತಿದ್ದಾನೆ. ಇಲ್ಲದರ ಸುತ್ತ ನಮ್ಮ ಮಾಧ್ಯಮಗಳು ಹೋರಾಟವನ್ನು ನಡೆಸುತ್ತಿವೆ.

ಇವತ್ತು ವಾಲ್ಮೀಕಿ ಇದ್ದಿದ್ದರೆ ಈ ಆಧುನಿಕ ರಾಮಾಯಣವನ್ನು ಕಂಡು ಬೆಚ್ಚಿ ಬೀಳುತ್ತಿದ್ದ. ಈಗ ಟಿವಿ ಪರದೆಯ ಮೇಲೆ ನಡೆಯುತ್ತಿರುವ ಈ ರಾಜಕೀಯ ರಾಮಾಯಣದ...

ಪಾವಿತ್ರ್ಯವನ್ನು ಸಾಬೀತುಪಡಿಸಲು ರಾವಣನೇ ಅಗ್ನಿಪರೀಕ್ಷೆಗೆ ಮುಂದಾಗಲಿ ಎಂದು ಒತ್ತಾಯಿಸುತ್ತಿದ್ದಾಳೆ. "ಕುಮಾರ್ ವಿಶ್ವಾಸ್ ಅವರು ಪತ್ರಿಕಾಗೋಷ್ಠಿ ಕರೆದು ನಾನು ಅವರ ತಂಗಿ ಇದ್ದಂತೆ ಎಂದು ಹೇಳುತ್ತೇನೆ ಎಂದು ಭರವಸೆ ನೀಡಿದ್ದರು" ಎಂದು ಈ ಸೀತೆ ವಾದಿಸುತ್ತಿದ್ದಾಳೆ.

ರಾಮ: ಈತ ಅಮೇಥಿಯ ಮಹಿಳೆಯ ಗಂಡ. ಈ ಆಧುನಿಕ ರಾಮಾಯಣದಲ್ಲಿ ಈತನದ್ದು ಸೈಡ್ ರೋಲ್. ಹಳೆಯ ರಾಮನಂತೆ ಈತ ತನ್ನ ಪತ್ನಿಗಾಗಿ ಯುದ್ಧ ಸಾರಿಲ್ಲ, ಯಾವನೋ ಧೋಬಿ ಹೇಳಿದ ಮಾತಿಗೆ ಬೆಲೆ ಕೊಟ್ಟು ಆಕೆಯನ್ನು ವನವಾಸಕ್ಕೂ ಅಟ್ಟಲಿಲ್ಲ, ಬದಲಾಗಿ ರಾವಣನನ್ನು ಒಮ್ಮೆ ಭೇಟಿಯಾದ ನಂತರ ಈ ಆಧುನಿಕ ರಾಮನೇ ವನವಾಸಕ್ಕೆ ತೆರಳಿದ್ದಾನೆ. ಪರಿಣಾಮವಾಗಿ ಈಗ ಸೀತೆ ಮಹಿಳಾ ಆಯೋಗದ ಮುಂದೆ ದೂರು ಸಲ್ಲಿಸಿದ್ದಾಳೆ.

ರಾವಣ: ಈ ಆಧುನಿಕ ರಾಮಾಯಣದಲ್ಲಿ ರಾವಣನ ಪಾತ್ರಧಾರಿ ಕುಮಾರ್ ವಿಶ್ವಾಸನೇ ಹೀರೋ. ಸೂಕ್ಷ್ಮ ಸಂವೇದನೆಯ ಕವಿಯೂ, ಸಭ್ಯ ಗೃಹಸ್ಥನೂ ಆಗಿರುವ ಈ ರಾವಣ "ನಾನು ಯಾವ ತಪ್ಪು ಮಾಡಿರದಿದ್ದರೂ ನನಗೆ ಅನ್ಯಾಯ ಮಾಡಲಾಗುತ್ತಿದೆ. ನಾನು ಸೀತೆಯನ್ನು ಎಂದೂ ಅಪಹರಿಸಿಲ್ಲ" ಎಂದು ಕಣ್ಣೀರಿಡುತ್ತಿದ್ದಾನಲ್ಲದೆ, ಕಾಲೇಜ್‌ನಲ್ಲಿ ಓದುತ್ತಿರುವ ಯುವಕರಂತೆ "ಆಕೆ ನನ್ನ ರಾಖಿ ಸಹೋದರಿ. ಆಕೆ ನನ್ನನ್ನು ಅಣ್ಣ ಎಂದೇ ಕರೆಯುವುದು. ನನ್ನ ಈ ಚಿಕ್ಕ ಸಹೋದರಿಗೆ ನನ್ನ ರಾಜಕೀಯ ವೈರಿಗಳು ಎಂತದ್ದನ್ನೋ ಹೇಳಿಕೊಟ್ಟು ನನ್ನ ವಿರುದ್ಧ ಪಿತೂರಿ ನಡೆಸುತ್ತಿದ್ದಾರೆ" ಎಂದು ಗೋಳಾಡುತ್ತಿದ್ದಾನೆ.

ಕುಂಭಕರ್ಣ: ದೆಹಲಿ ಪೊಲೀಸರು. ಸೀತೆ ಇವರಿಗೆ ದೂರು ನೀಡಿ ಹದಿನೈದು ದಿನಗಳಾದರೂ ಅವರು ಕೈಕಟ್ಟಿ ಕುಳಿತಿದ್ದರಿಂದ ಆಕೆ ಮಹಿಳಾ ಆಯೋಗವನ್ನು ಸಂಪರ್ಕಿಸಿದಳು. ರಾಮಾಯಣದ ಕುಂಭಕರ್ಣನು ಅಂತಿಮವಾಗಿಯಾದರೂ ಎಚ್ಚೆತ್ತ, ಆದರೆ ಇವರು ಮಾತ್ರ ತೂಕಡಿಸುತ್ತಲೇ ಇರುತ್ತಾರೆ.

ವಿಭೀಷಣ: ಶಾಜಿಯಾ ಇಲ್ಮಿ. ಹಿಂದೆ ಆಪ್ ಪಕ್ಷದಲ್ಲಿದ್ದ ಶಾಜಿಯಾ ಈಗ ವಿರೋಧ ಪಕ್ಷವಾದ ಬಿಜೆಪಿಯನ್ನು ಸೇರಿದ್ದು, ತನ್ನ ಕೈಲಾದಷ್ಟು ಕಾಟವನ್ನು ರಾವಣ ಕುಮಾರನಿಗೆ ಕೊಡುತ್ತಿದ್ದಾಳೆ. "ಆ ಮಹಿಳೆಯ ಮಾನಾಹರಣವಾಗಿದ್ದರೆ ಸೂಕ್ತ ತನಿಖೆ ಆಗಬೇಕು" ಎನ್ನುತ್ತಿರುವ ಶಾಜಿಯಾ ಅದನ್ನು ಪದೇಪದೇ ಹೇಳಿದಷ್ಟು ಆ ಮಹಿಳೆಯ ಮಾನಾಹರಣವಾಗುತ್ತಿದೆ. ಹಿಂದೊಮ್ಮೆ ರಾವಣ ಕುಮಾರ್ ಅವರು 'ಪಕ್ಷದಲ್ಲಿನ ಭಿನ್ನಾಭಿಪ್ರಾಯಗಳು ಮುಂದೊಂದು ದಿನ ನಮ್ಮ ನಾಯಕರ ಬೆಡ್‌ರೂಮನ್ನೂ ಪ್ರವೇಶಿಸುತ್ತದೆ' ಎಂದು ಎಚ್ಚರಿಸಿದ್ದರು. ಹಿಂದಿನ ರಾಮಾಯಣದ ಕಾಲದಲ್ಲಿ ವಿವಾದಗಳು ಯುದ್ಧಭೂಮಿಯಲ್ಲಿ ಬಗೆಹರಿಯುತ್ತಿದ್ದವು. ಆದರೆ ಇದು ಆಧುನಿಕ ಯುಗವಾದ್ದರಿಂದ ಈಗ ವಿವಾದಗಳು ನಾಯಕರ ಬೆಡ್‌ರೂಮ್‌ಗಳನ್ನು ಪ್ರವೇಶಿಸುತ್ತಿವೆ. ಅದಕ್ಕೆ ಸರಿಯಾಗಿ ನಮ್ಮ ಮಾಧ್ಯಮಗಳೂ ಬಾಲಾಜಿ ಫಿಲಂ ಶೈಲಿಯಲ್ಲಿ ವರದಿ ಮಾಡುತ್ತಿವೆ.

ಮಂಡೋದರಿ: ಮಂಜು ಅಲಿಯಾಸ್ ಕುಮಾರ್ ವಿಶ್ವಾಸ್ ಅವರ ಪತ್ನಿ. ಹಿಂದಿನ ರಾಮಾಯಣದಲ್ಲಿನ ಮಂಡೋದರಿಯು ತನ್ನ ಪತಿ ಮತ್ತೊಬ್ಬರ ಪತ್ನಿಯನ್ನು ಅಪಹರಿಸಿದರೂ, ಆಕೆಯನ್ನು ತನ್ನೊಂದಿಗೆ ಇಟ್ಟುಕೊಳ್ಳಲು ಯುದ್ಧದಲ್ಲಿ ಸಾವಿರಾರು ಜನರನ್ನು ಬಲಿಕೊಟ್ಟರೂ ಅದನ್ನೆಲ್ಲ ಸಹಿಸಿಕೊಂಡಿದ್ದಳು. ಆದರೆ ಇವತ್ತು ಸೀತಾಳೇ ಈ ಮಂಡೋದರಿಯ ವಿರುದ್ಧ ಮಹಿಳಾ ಆಯೋಗಕ್ಕೆ ದೂರು ಸಲ್ಲಿಸಿ "ಮಂಡೋದರಿಯು ರಾವಣ ಮತ್ತಿನ್ಯಾರೋ ಹೆಂಗಸಿನ ಜೊತೆ ಇದ್ದದ್ದನ್ನು ನೋಡಿ, ನನ್ನ ವಿರುದ್ಧ ಅಪಪ್ರಚಾರ ಮಾಡುತ್ತಿದ್ದಾರೆ" ಎಂದು ಹೇಳಿದ್ದಾಳೆ. ಈ ಮಂಡೋದರಿಗೆ ಮಹಿಳಾ ಆಯೋಗ ನೋಟಿಸ್ ಕಳುಹಿಸಿದ್ದರೂ ಆಕೆ ಹಿಂದಿನ ಮಂಡೋದರಿಯಂತೆ ಏನನ್ನೂ ಹೇಳದೆ ತೆಪ್ಪಗಿದ್ದಾಳೆ.

ಹನುಮಂತ: ಈ ಹೊಸ ಆವೃತ್ತಿಯಲ್ಲಿ ರಾಮ ನಿಷ್ಠಾವಂತ ಹನುಮಂತನನ್ನು ಹೊಂದಿಲ್ಲ, ಬದಲಾಗಿ ರಾವಣ ಅಂತಹ ಹನುಮಂತನನ್ನು ಹೊಂದಿದ್ದಾನೆ. ಆತನ ಹೆಸರು ಶೈಲ್. ಈ ಶೈಲ್ ಕುಮಾರ್ ವಿಶ್ವಾಸನ ರಾಜಕೀಯ ವ್ಯವಹಾರಗಳನ್ನು ನೋಡಿಕೊಳ್ಳುವ 'ಮ್ಯಾನ್ ಫ್ರೈಡೆ'. ಈ ಹನುಮಂತ ಸೀತೆಗೆ ಸಂದೇಶಗಳನ್ನು ಹೊತ್ತೊಯ್ಯುವುದಿಲ್ಲ, ಬದಲಾಗಿ ಆಧುನಿಕ ಸೀತೆಯ ಪ್ರಕಾರ ಈ ಹನುಮಂತ ಸೀತೆಗೇ "ನಿಮ್ಮ ಸಂಬಂಧದ ಬಗ್ಗೆ ಬಾಯಿ ಮುಚ್ಚಿಕೊಂಡಿರು" ತರಹದ ಬೆದರಿಕೆಯ ಎಸ್‌ಎಮ್‌ಎಸ್‌ಗಳನ್ನು ರವಾನಿಸುತ್ತಾನೆ.



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ಧೋಬಿ: ನಿಗೂಢ ಅಜಯ್ ವೋರಾ. ನೆನಪಿದೆಯಾ, ಹಳೆಯ ರಾಮಾಯಣದಲ್ಲಿ ಸಾರ್ವಜನಿಕವಾಗಿ ಇತರರ ಬಗ್ಗೆ ಕೆಟ್ಟದಾಗಿ ಮಾತನಾಡುತ್ತಿದ್ದ ಧೋಬಿ ಸೀತೆಯ ಪಾವಿತ್ರ್ಯತೆಯ ಬಗ್ಗೆ ಗುಮಾನಿ ವ್ಯಕ್ತಪಡಿಸಿದ್ದು? ಈಗ ಆತ ಅಜಯ್ ವೋರಾ ಹೆಸರಡಿ ಪ್ರತ್ಯಕ್ಷನಾಗಿದ್ದಾನೆ. ಇವನೇ ಆಪ್ ಪಕ್ಷದ ನಾಯಕರಿಗೆ ಪತ್ರ ಬರೆದು ಅದರಲ್ಲಿ ಕುಮಾರ್ ವಿಶ್ವಾಸ್ ಕಪ್ಪುಹಣ ಸ್ವೀಕರಿಸುತ್ತಿದ್ದಾಗ ಸಿಕ್ಕಿಬಿದ್ದಿದ್ದರೆಂದೂ, ಅಮೇಥಿಯಲ್ಲಿ ಪಕ್ಷದ ಸ್ವಯಂಸೇವಕಿಯೊಬ್ಬರ ಜೊತೆ ಅನೈತಿಕ ಸಂಬಂಧ ಹೊಂದಿದ್ದಾರೆಂದೂ ದೂರಿದ್ದ. ಈ ಕಾಲಕ್ಕೆ ತಕ್ಕಂತೆ ಈ ಧೋಬಿಯು ನಿಜವಾದ ವ್ಯಕ್ತಿಯಾಗಿರದೆ, ಕಂಪ್ಯೂಟರ್‌ನಲ್ಲಿ ಸೃಷ್ಟಿಯಾದ ವ್ಯಕ್ತಿಯಾಗಿದ್ದಾನೆ.

ಅಗ್ನಿಪರೀಕ್ಷಕರು: ದೆಹಲಿಯ ಮಹಿಳಾ ಆಯೋಗ. ಹಿಂದಿನ ಕಾಲದಲ್ಲಿ ಅಯೋಧ್ಯೆಯಲ್ಲೂ ಒಂದು ಮಹಿಳಾ ಆಯೋಗ ಇದ್ದಿದ್ದರೆ ಸೀತೆಯೂ ಅದರ ಮುಂದೆ ಹೇಳಿಕೆ ನೀಡುವುದರ ಮೂಲಕ ಅಗ್ನಿಪರೀಕ್ಷೆಯಿಂದಲೂ, ವನವಾಸದಿಂದಲೂ ಬಚಾವ್ ಆಗಬಹುದಿತ್ತು, ಯಾಕೆಂದರೆ ಅಯೋಧ್ಯಾ ಮಹಿಳಾ ಆಯೋಗವು ಆಕೆಗೆ ಸಚ್ಚಾರಿತ್ರ್ಯದ ಸರ್ಟಿಫಿಕೇಟ್ ನೀಡಿ ರಾಮಾಯಣ 'ಶುಭಂ' ಎಂದು ಅಂತ್ಯಗೊಳ್ಳುವಂತೆ ನೋಡಿಕೊಳ್ಳುತ್ತಿತ್ತು. ಈಗ ದೆಹಲಿ ಮಹಿಳಾ ಆಯೋಗದ ಸದಸ್ಯೆಯಾದ ಬರ್ಖಾ ಸಿಂಗ್ ಎಂಬಾಕೆ "ಈ ಸೀತೆಯೊಂದಿಗೆ ತನಗೆ ಯಾವ ಸಂಬಂಧವೂ ಇಲ್ಲ, ಬದಲಾಗಿ ಆಕೆ ಬೇರೆಯವಳು ಎಂದು ಸ್ಪಷ್ಟಪಡಿಸದೇ ಇರುವುದರಿಂದ ಎಲ್ಲರೂ ಈ ಸೀತೆಯನ್ನು ಅನುಮಾನಿಸುವಂತಾಗಿದೆ" ಎಂದು ವಾದಿಸುತ್ತಿದ್ದಾರೆ.

ಮಹಾಯುದ್ಧ: ಹಿಂದಿನ ಕಾಲದಲ್ಲಿ ರಾಮನಾದರೋ ಸೇತುವೆಯನ್ನು ಕಟ್ಟಬೇಕಿತ್ತು, ಮಂಗಗಳನ್ನು, ಕರಡಿಗಳನ್ನು ಒಗ್ಗೂಡಿಸಿ ಸೈನ್ಯವನ್ನು ರಚಿಸಬೇಕಿತ್ತು, ಆಮೇಲೆ ದೀರ್ಘಾವಧಿಯ ಯುದ್ಧದಲ್ಲಿ ತೊಡಗಬೇಕಿತ್ತು. ಆದರೆ ಈಗಿನ ಆಧುನಿಕ ಯುಗದಲ್ಲಿ ಸೈನ್ಯ, ಸೇತುವೆ, ಯಾವುದರ ಅಗತ್ಯವೇ ಇಲ್ಲ. ಕೊನೆಗೆ ರಮಾನಂದ ಸಾಗರ್ ಅವರ 'ರಾಮಾಯಣ' ಸೀರಿಯಲ್‌ನಲ್ಲಿ ತೋರಿಸುತ್ತಿದ್ದ ಹಾಸ್ಯಾಸ್ಪದ ಬಿಲ್ಲುಬಾಣಗಳ ಅವಶ್ಯಕತೆಯೂ ಇಲ್ಲ, ಇವತ್ತು ಟ್ವಿಟರ್ ಎಂಬ ಜಾಲತಾಣವೇ ಯುದ್ಧಭೂಮಿ. ಈ ಯುದ್ಧಭೂಮಿಯಲ್ಲಿ ಯಾವ ದೈವಸ್ತ್ರವೂ ಬೇಕಿಲ್ಲ, ಒಂದು ಹ್ಯಾಶ್ ಟಾಗ್ ಇದ್ದರೆ ಸಾಕು.

ಕುಮಾರ್ ವಿಶ್ವಾಸರ ಬಗ್ಗೆ ಸಾವಿರಾರು ಹ್ಯಾಶ್‌ಟಾಗ್‌ಗಳು ಹಾರಿ ಈ ಆಧುನಿಕ ರಾವಣನನ್ನು ಮುಗಿಸಬಹುದೇ? ಅಥವಾ ಐಪಿಸಿ 509 ಎಂಬ ಬ್ರಹ್ಮಾಸ್ತ್ರ - ಮಹಿಳೆಯರ ಮಾನಹರಣ ವಿರುದ್ಧದ ಕಾನೂನು - ಆತನಿಗೆ ಅಂಕುಶವಿಡಬಹುದೇ?

ಯಾತಕ್ಕೂ ಮುಂದಿನ ಎಪಿಸೋಡ್ ಅನ್ನು ನಿರೀಕ್ಷಿಸಿ. ಇಲ್ಲಿ ತರ್ಕ ಇರುತ್ತದೆಂದು ನಾವು ಯಾವ ಭರವಸೆಯನ್ನೂ ನೀಡುವುದಿಲ್ಲ, ಒಂದನ್ನಂತೂ ಸ್ಪಷ್ಟಪಡಿಸಬಹುದು. ಈ ಆಧುನಿಕ ರಾಮಾಯಣದಲ್ಲಿ ರಕ್ತ ಹರಿಯ ಯಾರೂ ಸಾಯುವುದಿಲ್ಲ, ಬದಲಾಗಿ ಜನರ ಪ್ರತಿಷ್ಠೆಯನ್ನು ಕೊಲ್ಲಲಾಗುತ್ತದೆ.

ಫಲಿಸಿದ ಹರಕೆ

ಸಾರ್ಥಕವು ದಿನಕರನೆ ಆ ನಿನ್ನ ಹರಕೆ
ನೆಮ್ಮದಿಯ ಹೊಂದಿಹುದು ಈ ನನ್ನ ಮನಕೆ
ಪ್ರೀತಿಯಲಿ ನೀ ಹರಸಿ ಕಳಿಸಿದ್ದು ಅಂದು
ಓ ಗುರುವೆ ಶರಣೆಂಬೆ ಫಲಿಸಿಹುದು ಇಂದು

ನನ್ನ ಗುರು

ನನ್ನ ಗುರು ದಿನಕರನ ಮನ ಹಿಂದು ಸ್ಮರಿಸಿ
ಬರೆಯುತ್ತ ಬಂದಿರುವೆ ತಲೆಬಾಗಿ ನಮಿಸಿ
ಮುಂದೆಯೂ ನೈತಿಕತೆ ಪರವಾಗಿ ಬರೆವೆ
ನಿಸ್ಪೃಹದೇ ದಾರಿಯಲಿ ನಡೆಯುತ್ತ ಮಡಿವೆ

ಶರಣೆಂಬೆ

ನನ್ನ ಗುರು ಹೆಚ್ಚಿನ ಕೇಳಿದವನಲ್ಲ
ಕಾಣಿಕೆಯ ಹೊಂದಿರಿಸಿ ಬಯಸಲೂ ಇಲ್ಲ
ಈ ಬದುಕ ಚಟುವಟಿಕೆಗಳ ತಿರುಳನ್ನು ತಿಳಿಸಿ
ಹರಸಿದ್ದ ಬೆನ್ನನ್ನು ತಟ್ಟುತ್ತ ಹರಸಿ

ಭಾಗವತ್ ಹೇಳಿದ್ದು

ಭಾರತದ ಎಲ್ಲರೂ ಹಿಂದೂಗಳು ಎಂದು
ಭಾಗವತ್ ಅಪ್ಪಣೆಯ ಕೊಡಿಸಿದನು ಅಂದು
ಮನುಷ್ಯ ಧರ್ಮಕ್ಕಿಂತ ಹಿರಿಧರ್ಮವಿಲ್ಲ
ಹಿಂಸೆ ಪ್ರಚೋದಿಸುವುದು ಧರ್ಮವೇ ಅಲ್ಲ

ಮನುಷ್ಯತ್ವ

ನನ್ನ ದೇವರ ಒಲಿಸೆ ಘೋರಭಕ್ತಿ ಬೇಡ
ಆ ಹಣ್ಣು ಕಾಯಿಗಳು ಕಾಣಿಕೆಯು ಕೂಡ
ಬರೆ ಒಂದು ಒಗರಿರದ ಪ್ರೀತಿಯೇ ಸಾಕು
ಧನ್ಯನಲ್ಲವೆ ನಾನು ಇನ್ನೇನು ಬೇಕು?


ಒಳ್ಳೆ ದಿನ

ಕಾರ್ಪೊರೇಟರ್‌ಗಳಿಗೆ ಒಳ್ಳೆ ಕಾಲ ಬಂತು
ಕೂಳಿರದ ಬಡವರಿಗೆ ಏನೇನು ತಂತು?
ಈ ಜನರು ಕಾಯುತ್ತ ನಿಂತಿಹರು ನೋಡಿ
ಜೊದಲು ಸುಡುವುದಕೊಂದು ಕಟ್ಟಿಗೆಯ ನೀಡಿ


■ ವಿಡಂಬಾರಿ

ಕೃಷ್ಣಾ ಮತ್ತು ತುಂಗಭದ್ರಾ ನದಿಗಳು, ನೀರಾವರಿ ಕಾಲುವೆಗಳು ಹಾಗೂ ಅಪಾರ ಅಂತರ್ಜಲಗಳಿದ್ದರೂ ರಾಯಚೂರು ಹಳ್ಳಿಗಳು ಪ್ರತೀ ಬೇಸಿಗೆಯಲ್ಲಿ ಕುಡಿಯುವ ನೀರಿಲ್ಲದೇ ಬಳಲುತ್ತವೆ. ಸಮೃದ್ಧ ಜಲಸಂಪನ್ಮೂಲವಿದ್ದರೂ, ಕುಡಿಯುವ ನೀರಿನ ಯೋಜನೆಗಳಿಗಾಗಿಯೇ ಪ್ರತೀವರ್ಷ ನೂರಾರು ಕೋಟಿ ಹರಿದುಬರುತ್ತಿದ್ದರೂ ಜನ ನೀರಿಗಾಗಿ ಪರದಾಡುವುದು ತಪ್ಪುತ್ತಿಲ್ಲ. ಅದರ ಹಿಂದಿನ ಅಸಲಿ ಕಾರಣಗಳನ್ನು ತೆರೆದಿಡುವ ತಲಸ್ಪರ್ಶಿ ವರದಿ...

ರಾಯಚೂರು ಜಿಲ್ಲಾ ಪಂಚಾಯತ್‌ನಲ್ಲಿ ಕೋಟಿ ಕೋಟಿ ಲೂಟಿ, ತೆಪ್ಪಗೆ ಕುಳಿತ ಜ್ಯೋತ್ಸ್ನಾ



ವಿಜಯ ವಿ ಜ್ಯೋತ್ಸ್ನಾ



ಕೇಶವರೆಡ್ಡಿ

ದಕ್ಷಿಣ ಭಾರತದ ಎರಡು ಪ್ರಮುಖ ನದಿಗಳ ನಡುವೆ ಮೈಚಾಚಿ ಮಲಗಿರುವ ದೋಅಬ್ ನಾಡು ರಾಯಚೂರು. ನಾಡಿನ ಜೀವನದಿಗಳಾದ ತುಂಗಭದ್ರಾ ಮತ್ತು ಕೃಷ್ಣಾ ನದಿಗಳು ಕ್ರಮವಾಗಿ ರಾಯಚೂರು ಜಿಲ್ಲೆಯ ದಕ್ಷಿಣ ಮತ್ತು ಉತ್ತರದ ಗಡಿಗಳಾಗಿದ್ದು ಜಲಸಂಪನ್ಮೂಲದ ವಿಷಯದಲ್ಲಿ ಬಹಳ ಸಮೃದ್ಧವಾಗಿರುವ ನಾಡಿದು. ಹೊಸಪೇಟೆ ಬಳಿ ನಿರ್ಮಿಸಲಾಗಿರುವ ಬೃಹತ್ ತುಂಗಭದ್ರಾ ಅಣೆಕಟ್ಟಿನಿಂದ ಹೊರಟ ತುಂಗಭದ್ರಾ ಎಡದಂಡೆ ಕಾಲುವೆ ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳ ಸುಮಾರು ಆರು ಲಕ್ಷ ಎಕರೆಗೂ ಹೆಚ್ಚಿನ ಪ್ರದೇಶಕ್ಕೆ ನೀರುಣಿಸಿ ಹಚ್ಚಹಸಿರಿನಿಂದ ಕಂಗೊಳಿಸುವಂತೆ ಮಾಡಿದೆ. ಅದೇ ರೀತಿಯಲ್ಲಿ ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳ ನಡುವೆ ನಾರಾಯಣಪುರದಲ್ಲಿ ಕೃಷ್ಣಾ ನದಿಗೆ ಅಡ್ಡಲಾಗಿ ಬಸವಸಾಗರ ಎಂಬ ಬೃಹತ್ ಅಣೆಕಟ್ಟನ್ನು ಕಟ್ಟಲಾಗಿದೆ. ಇಲ್ಲಿಂದ ಹೊರಟ ನಾರಾಯಣಪುರ ಬಲದಂಡೆ ಕಾಲುವೆ ರಾಯಚೂರು ಜಿಲ್ಲೆಯ ಇನ್ನೊಂದಿಷ್ಟು ಭಾಗಗಳಿಗೆ ನೀರುಣಿಸಿ ಹಸಿರಾಗಿಸಿದೆ.

ಹೀಗೆ, ತುಂಗಭದ್ರ, ಕೃಷ್ಣಾ ನದಿಗಳು, ತುಂಗಭದ್ರಾ ಎಡದಂಡೆ ಕಾಲುವೆ, ನಾರಾಯಣಪುರ ಬಲದಂಡೆ ಕಾಲುವೆ ಮತ್ತು ಅವುಗಳ ಉಪಕಾಲುವೆಗಳು, ಹೊಲಗಾಲುವೆಗಳ ಜಾಲ ರಾಯಚೂರು ಜಿಲ್ಲೆಯ ಬಹುತೇಕ ಭಾಗದಲ್ಲಿ ನರನಾಡಿಗಳಂತೆ ಹಬ್ಬಿವೆ. ಈ ಕಾರಣಕ್ಕಾಗಿ ಇಡೀ ಜಿಲ್ಲೆಯಲ್ಲಿ ಅಂತರ್ಜಲದ ಮಟ್ಟವೂ ತುಂಬಾ ಚೆನ್ನಾಗಿದೆ. ಎಲ್ಲಿ ಬೋರ್‌ವೆಲ್ ಕೊರೆದರೂ ನೂರೈವತ್ತು ಅಡಿಗೆ ಬೇಕಾದಷ್ಟು ನೀರು ಸಿಕ್ಕುಬಿಡುತ್ತದೆ. ಜಲಸಂಪನ್ಮೂಲದಿಂದ ಇಷ್ಟೊಂದು ಸಮೃದ್ಧವಾಗಿರುವ ಇನ್ನೊಂದು ಜಿಲ್ಲೆ ಕರ್ನಾಟಕದಲ್ಲಿ ಇಲ್ಲ ಎಂದರೆ ಪ್ರಾಯಶಃ ತಪ್ಪಾಗಲಿಕ್ಕಿಲ್ಲ.

ಮೇಲಿನ ಎಲ್ಲಾ ಅಂಶಗಳನ್ನು ಪರಿಗಣಿಸಿದರೆ ರಾಯಚೂರು ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯೇ ಎದುರಾಗಬಾರದು. ಆದರೆ, ದುರಂತ ನೋಡಿ. ಸಮುದ್ರದಲ್ಲಿದ್ದರೂ ಕುಡಿಯುವ ನೀರಿಗೆ ಬರ ಎಂಬಂತೆ ಸಮೃದ್ಧ ಜಲಧಾರೆಯನ್ನು ಹೊಂದಿರುವ ರಾಯಚೂರು ಜಿಲ್ಲೆ ವರ್ಷದಲ್ಲಿ ಆರು ತಿಂಗಳಾದರೂ ಕುಡಿಯುವ ನೀರಿಲ್ಲದೇ ಬಾಯಾರಿಕೆಯಿಂದ ಬಳಲುತ್ತಿರುತ್ತದೆ. ಸಮುದ್ರದ ಉಪ್ಪು ನೀರಿನಂತೆ ರಾಯಚೂರಿನ ನೀರು ಕುಡಿಯಲು ಯೋಗ್ಯವಲ್ಲ ಅಂತೇನಿಲ್ಲ, ಕೃಷ್ಣ ಮತ್ತು ತುಂಗಭದ್ರೆಯರ ನೀರು ಕುಡಿಯಲು ಯೋಗ್ಯವಾಗಿರುವ ನೀರೆ. ಆದರೂ, ರಾಯಚೂರು ಕುಡಿಯುವ ನೀರಿನ ಬವಣೆಯಲ್ಲಿ ಬೇಯುತ್ತಿದೆ ಎಂದರೆ ಸರ್ಕಾರ ಈ ಜಲಸಂಪನ್ಮೂಲವನ್ನು ಬಳಸಿಕೊಂಡು ನೀರಿನ ಅಭಾವದಿಂದ ಬಳಲುತ್ತಿರುವ ಹಳ್ಳಿಗಳಿಗೆ ನೀರುಣಿಸುವ ಪ್ರಯತ್ನ ಮಾಡಿಲ್ಲ ಎಂಬ ಅನುಮಾನ ಮೂಡುತ್ತದೆ. ಆದರೆ, ಅದೂ ಕೂಡ ವಾಸ್ತವವಲ್ಲ, ಏಕೆಂದರೆ, ಪ್ರತಿವರ್ಷ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕುಡಿಯುವ ರಾಯಚೂರಿನ ಹಳ್ಳಿಗರ ನೀರಡಿಕೆಯನ್ನು ನೀಗಿಸುವುದಕ್ಕಾಗಿಯೇ ಸುಮಾರು 130 ಕೋಟಿಯಷ್ಟು ದುಡ್ಡನ್ನು ಹರಿಸುತ್ತಲೇ ಬಂದಿವೆ. ಅಂದರೆ, ಒಂದೆಡೆ ನೀರು ಬೇಕಾದಷ್ಟು ಹರಿಯುತ್ತಿದೆ, ಇನ್ನೊಂದೆಡೆ ಅದನ್ನು ಹಳ್ಳಿಗಳಿಗೆ ತಲುಪಿಸುವುದಕ್ಕಾಗಿ ದುಡ್ಡೂ ನೀರಿನಂತೆಯೇ ಹರಿಯುತ್ತಿದೆ. ಆದರೂ ಹಳ್ಳಿಗಳ ಬಾಯಾರಿಕೆ ಇಂಗಿಲ್ಲ. ಹಾಗಿದ್ದರೆ ಇದಕ್ಕೆ ಅಸಲಿ ಕಾರಣವೇನು?


ನೀರಿನ ಬವಣೆಯ ಅಸಲಿ ಕಾರಣಗಳು

ಒಂದು ಉದಾಹರಣೆಯನ್ನು ನೋಡಿ. ನಮ್ಮ ಪತ್ರಿಕೆಗೆ ಲಭ್ಯವಾಗಿರುವ ಅಧಿಕೃತ ದಾಖಲೆಗಳ ಪ್ರಕಾರ 2013-14ನೇ ಸಾಲಿನಲ್ಲಿ ತಾಲೂಕಿಗೆ 300 ಬೋರ್‌ವೆಲ್‌ಗಳಂತೆ ಜಿಲ್ಲೆಯ ಒಟ್ಟು ಐದು ತಾಲೂಕುಗಳಲ್ಲಿ 1500ದಷ್ಟು ಬೋರ್‌ವೆಲ್‌ಗಳನ್ನು ಕೊರೆಯಲಾಗಿದೆ. ಮರುವರ್ಷ, ಅಂದರೆ 2014-15ನೇ ಸಾಲಿನಲ್ಲಿ ಮತ್ತೆ ಹೆಚ್ಚುಕಡಿಮೆ ಅಷ್ಟೇ ಸಂಖ್ಯೆಯ ಬೋರ್‌ವೆಲ್‌ಗಳನ್ನು ಕೊರೆಯಲಾಗಿದೆ. ಅಂದರೆ, ಎರಡು ವರ್ಷಗಳಲ್ಲಿ 3000 ಬೋರ್‌ವೆಲ್‌ಗಳನ್ನು ಕೊರೆಯಲಾಗಿದೆ. ಯಾವ ಯಾವ ಊರಿನಲ್ಲಿ ಎಷ್ಟೆಷ್ಟು ಬೋರ್‌ವೆಲ್‌ಗಳನ್ನು ಕೊರೆಯಲಾಗಿದೆ ಎಂಬ ಪಟ್ಟಿಯನ್ನು ಹಿಡಿದುಕೊಂಡು ನಮ್ಮ ಪತ್ರಿಕೆ ಆ ಊರುಗಳಲ್ಲಿ ಸುತ್ತಾಡಿದಾಗ ಅಸಲಿಯತ್ತು ಅಂತಿಮವಾಗಿ ಹೊರಬಿತ್ತು.

"ಈ ಎರಡೂ ವರ್ಷಗಳಲ್ಲಿ ನಮ್ಮ ಊರಿನಲ್ಲಿ ಒಂದೇ ಒಂದು ಬೋರ್‌ವೆಲ್ ಕೊರೆದಿಲ್ಲ, ಬೇಸಿಗೆಯಲ್ಲಿ ಜನರು, ಜಾನುವಾರುಗಳು ಕುಡಿಯುವ ನೀರಿಗಾಗಿ ಪರದಾಡಿದ್ದು ಅಷ್ಟಿಷ್ಟಲ್ಲ" ಎಂದು ಜನ ತಮ್ಮ ಅಳಲು ತೋಡಿಕೊಳ್ಳುತ್ತಾರೆ! ಅಂದರೆ, ಮೂರು ಸಾವಿರ ಬೋರ್‌ವೆಲ್‌ಗಳನ್ನು ಕೇವಲ ದಾಖಲೆಗಳಲ್ಲಿ ಕೊರೆದು ಬಿಲ್ಲೆತ್ತಿರುವುದು ಸ್ಪಷ್ಟವಾಗಿ ಕಾಣಿಸುತ್ತದೆ.

ಕೇಶವರೆಡ್ಡಿಯ ಬಿಲ್‌ವಿದ್ಯೆ!

ಅವನ ಹೆಸರು ಕೇಶವರೆಡ್ಡಿ. ಈಗ್ಗೆ ಇಪ್ಪತ್ತೈದು ವರ್ಷಗಳ ಹಿಂದೆ ಲಾರಿ ತೊಳೆಯುವ ಕ್ಲೀನರ್ ಆಗಿದ್ದವ. ಈಗ ರಾಯಚೂರಿನ ಆಗರ್ಭ ಶ್ರೀಮಂತರ ಪೈಕಿ ಒಬ್ಬನಾಗಿದ್ದಾನೆ.



ಶರಣ್ ಪ್ರಕಾಶ್ ಪಾಟೀ...


ಲಾರಿ ಕ್ಲೀನರ್ ಆಗಿದ್ದವ ಅದ್ಹೇಗೋ ರಾಯಚೂರಿನ ಹಳ್ಳಿಗಳಿಗೆ ಕುಡಿಯುವ ನೀರು ಒದಗಿಸುವುದಕ್ಕಾಗಿ ಸರ್ಕಾರ ಬೋರ್‌ವೆಲ್ ಕೊರೆಸುವ ಯೋಜನೆಗೆ ಕೈಹಾಕಿದಾಗ ಬೋರ್‌ವೆಲ್ ಕೊರೆಯುವ ಗುತ್ತಿಗೆಯನ್ನು ಈತನೇ ಹಿಡಿಯಲಾರಂಭಿಸಿದ. ಅದು ಎಮ್ಮೆಲ್ಲೆ ಫಂಡಿರಲಿ, ಜಿಲ್ಲಾಧಿಕಾರಿಗಳ ಸ್ಪೇರ್‌ಸಿಟಿ ಫಂಡಿರಲಿ, ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ನೀಡಿದ ದುಡ್ಡಿರಲಿ, ಕೇಂದ್ರ ಸರ್ಕಾರದ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಕಾರ್ಯಕ್ರಮವಿರಲಿ ಅಥವಾ ರಾಜ್ಯ ಸರ್ಕಾರ ಜಿಲ್ಲಾ ಪಂಚಾಯತಿ ಮೂಲಕ ನೀಡುವ ಹಣವಿರಲಿ - ಕುಡಿಯುವ ನೀರಿನ ಬವಣೆಯನ್ನು ತೀರಿಸುವುದಕ್ಕಾಗಿ ದುಡ್ಡು ಯಾವ ಮೂಲದಿಂದ ಹರಿದುಬಂದರೂ ಅದು ಅಂತಿಮವಾಗಿ ಸೇರುತ್ತಿದ್ದುದು ಕೇಶವರೆಡ್ಡಿಯ ತಿಜೋರಿಯನ್ನೆ! ಪರಿಣಾಮವಾಗಿ, ಅತ್ತ ಹಳ್ಳಿಗಾಡಿನಲ್ಲಿ ಜನ ನೀರಿಲ್ಲದೇ ಬಳಲಿ ಸಾಯುತ್ತಿದ್ದರೆ ಇತ್ತ ಕೇಶವರೆಡ್ಡಿ ಒಂದೊಂದು ಊರಿಗೆ ಎರಡೆರಡು ಬೋರ್‌ವೆಲ್ ಕೊರೆದಿದ್ದಾಗಿ ಹಾಳೆಯ ಮೇಲೆ ತೋರಿಸಿ ಬಿಲ್ ಎತ್ತುತ್ತಾ ಹೋದ. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ[...] ಅಧಿಕಾರಿ, ಉಪಕಾರ್ಯದರ್ಶಿ, ಸಹಾಯಕ ಕಾ[...] ಇಂಜಿನಿಯರ್, ಜೂನಿಯರ್ ಎಂಜಿನಿಯರ್ [...] ಎಲ್ಲಾ ಸ್ತರದ ಅಧಿಕಾರಿಗಳಿಗೆ ಅವರ ಪಾಲಿನ ಪ[...] ಕೊಡುತ್ತಿದ್ದ. ಎಮ್ಮೆಲ್ಲೆ ಫಂಡಾಗಿದ್ದರೆ ಎಮ್ಮೆಲ್ಲೆಗ[...] ಪಾಲು ಹೋಗುತ್ತಿತ್ತು. ಇದರಿಂದಾಗಿ ಇವನ [...] ಸರಾಗವಾಗಿ ಪಾಸಾಗುತ್ತಿದ್ದವು. ಬೋರ್‌ವೆಲ್ ಕ[...] ಬಿಲ್ ಎತ್ತಿದ್ದರಿಂದ ಹಳ್ಳಿಗಳ ನೀರಿನ ಸಮ[...] ಮುಂದುವರೆಯುತ್ತಿತ್ತು. ಮಾಧ್ಯಮಗಳು [...] ನೀರಿಗಾಗಿ ಹಳ್ಳಿಯ ಜನ ಪರದಾಡುವುದನ್ನು ಹ[...] ಬಿತ್ತರಿಸುತ್ತಿದ್ದುದರಿಂದ ಮತ್ತೆ ಸರ್ಕಾರ [...] ಪರಿಹಾರಕ್ಕಾಗಿ ದುಡ್ಡು ಹರಿಸುತ್ತಿತ್ತು. ಅದು ಯ[...] ಮತ್ತೆ ಕೇಶವರೆಡ್ಡಿಯ ತಿಜೋರಿಗೆ [...] ಶೇಖರವಾಗುತ್ತಿತ್ತು.

"ನಿಮಗೆ ಕೇವಲ ಎರಡು ವರ್ಷಗಳ ದಾ[...] ಸಿಕ್ಕಿವೆ. ಜಿಲ್ಲಾ ಪಂಚಾಯತ್‌ನಲ್ಲಿ ಕುಡಿಯುವ [...] ಕಾಗದದಲ್ಲಿ ಬೋರ್‌ವೆಲ್ ಕೊರೆದು ಬಿಲ್ ಎ[...] ದಂಧೆಯನ್ನು ಕೇಶವರೆಡ್ಡಿ ಕಳೆದ ಇಪ್ಪತ್ತು ವ[...] ಮಾಡುತ್ತಾ ಬಂದಿದ್ದಾನೆ. ಅದಕ್ಕೆ ಜಿಲ್ಲಾ ಪ[...] ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಿಂದ [...] ಎಲ್ಲಾ ಅಧಿಕಾರಿಗಳ ಸಕ್ರಿಯ ಬೆಂಬಲ ಇದೆ. ಅವರೆಲ್ಲರೂ ಕೇಶವರೆಡ್ಡಿಯ ಎಂಜಲು ತಿನ[...] ಎಂದು ಒಬ್ಬ ಹಿರಿಯ ಅಧಿಕಾರಿ ಗೌಪ್ಯತೆಯ [...] ಮೇಲೆ ಪತ್ರಿಕೆಗೆ ಹೇಳಿದರು.


ಕೆಲಸ ಮಾಡದೇ ಬಿಲ್ ಎತ್ತಿಕೊಳ್ಳುವ [...] ಬಿಲ್‌ವಿದ್ಯೆಯಲ್ಲಿ ಪಾರಂಗತನಾದ ಕೇಶವರೆ[...] ಆಗಿದ್ದವನು ಆಗರ್ಭ ಶ್ರೀಮಂತನಾಗದೇ ಇರು[...] ರಾಯಚೂರಿನ ಹೃದಯ ಭಾಗದಲ್ಲಿ ಹತ್ತಾ[...] ಖರ್ಚು ಮಾಡಿ ಅರಮನೆಯನ್ನು ನಾಚಿಸುವ[...] ಬಂಗಲೆಯನ್ನು ಕಟ್ಟಿಸದಿರುತ್ತಾನೆಯೆ? ಪ[...] ಟಾಕೀಸನ್ನು ಕೊಂಡುಕೊಳ್ಳದಿರುತ್ತಾನೆಯೆ?

ಎಲ್ಲಾ ಬೋರ್‌ವೆಲ್‌ಗೂ 64,000 ರೂಪಾಯಿ

2013-14 ಮತ್ತು 2014-15ನೇ ಸಾಲಿ[...] 3000 ಬೋರ್‌ವೆಲ್‌ಗಳನ್ನು ಕೊರೆಯಲಾಗಿ[...] ದಾಖಲೆಗಳು ಹೇಳುತ್ತವಲ್ಲಾ, ಆ ಎಲ್ಲಾ ಬೋರ್[...] ಕೊರೆದದ್ದು ಮೂರು ಏಜೆನ್ಸಿಗಳು: ಶ್ರೀ[...] ಬೋರ್‌ವೆಲ್ಸ್, ಶ್ರೀ ದುರ್ಗಾ ಬೋರ್‌ವೆ[...] ಶ್ರೀ ಬಾಲಾಜಿ ಬೋರ್‌ವೆಲ್ಸ್. ಈ ಮೂರೂ[...]







...ಾಲಿಕ ಕೇಶವರೆಡ್ಡಿ! ಈ ಎರಡೇ ವರ್ಷದಲ್ಲಿ ಆತ ...ಂಗಿದ್ದು ಕನಿಷ್ಠ 25 ಕೋಟಿ ರೂಪಾಯಿ!

ಸಾಮಾನ್ಯವಾಗಿ ಬೋರ್‌ವೆಲ್ ಅನ್ನು ಎಷ್ಟು ಆಳ ...ೊರೆಯಲಾಗಿದೆ ಎಂಬುದರ ಆಧಾರದ ಮೇಲೆ ...ಡಬೇಕಾದ ಹಣದ ಮೊತ್ತ ನಿಗದಿಯಾಗುತ್ತದೆ. ತುಂಬಾ ...ಳ ಕೊರೆದಿದ್ದರೆ ಹೆಚ್ಚು ಹಣ, ಕಡಿಮೆ ಆಳ ಕೊರೆದಿದ್ದರೆ ...ಡಿಮೆ ಹಣ. ಡಿವಿಜನಲ್ ಬಿಲ್ ರಿಜಿಸ್ಟರ್ ದಾಖಲಾತಿ ...ಸ್ತಕವನ್ನು (ಅದರ ಪೂರ್ಣ ಜೆರಾಕ್ಸ್ ಪ್ರತಿಯೇ ನಮ್ಮ ...ತ್ರಿಕೆಯ ಬಳಿ ಇದೆ) ತೆರೆದು ನೋಡಿದರೆ ಪ್ರತೀ ...ೋರ್‌ವೆಲ್‌ಗೂ 64,000 ರೂಪಾಯಿ ಪಾವತಿ ...ಾಡಿರುವುದು ಕಂಡು ಬರುತ್ತದೆ. ತುಂಬಾ ಅನುಮಾನ ...ರದಿರಲೆಂದು ಕೊನೆಯ ಮೂರು ಅಂಕಿಗಳನ್ನು ಅಲ್ಲಲ್ಲಿ ...ದಿಷ್ಟು ಹೆಚ್ಚುಕಡಿಮೆ ಮಾಡಲಾಗಿದೆ. 64,000 ...ೂಪಾಯಿ ಪಾವತಿಸಬೇಕೆಂದರೆ ಕನಿಷ್ಠ 500 ಅಡಿಯ ...ೋರ್‌ವೆಲ್ ಕೊರೆದಿರಬೇಕು. ಎಲ್ಲಾ 3000 ...ೋರ್‌ವೆಲ್‌ಗಳಿಗೂ ತಲಾ 64,000 ರೂಪಾಯಿ ...ವತಿಸಲಾಗಿದೆ ಎಂದರೆ ಎಲ್ಲಾ ಬೋರ್‌ವೆಲ್‌ಗಳನ್ನೂ ...00 ಅಡಿ ಕೊರೆದಿದ್ದಾರೆಂದಾಯಿತು. ಅಂದರೆ, ಇಡೀ ...ಯಚೂರು ಜಿಲ್ಲೆಯಲ್ಲಿ ಎಲ್ಲೇ ಬೋರ್‌ವೆಲ್ ಕೊರೆದರೂ ...00 ಅಡಿಗೆ ನೀರು ಸಿಗುತ್ತದೆ ಎಂದರೆ ಇಡೀ ...ಲ್ಲೆಯಾದ್ಯಂತ ಅಂತರ್ಜಲದ ಮಟ್ಟ ಒಂದೇ ಆಗಿದೆ ...ಂದಾಯಿತು!

ಇದು ಎಲ್ಲಿಯಾದರೂ ಸಾಧ್ಯವೆ? ಮೊದಲನೇ ವಿಷಯ ...ದರೆ, ಪ್ರಪಂಚದ ಯಾವ ಪ್ರದೇಶದಲ್ಲೂ ಅಂತರ್ಜಲದ ...ಟ್ಟ ಒಂದೇ ಆಗಿರುವುದಕ್ಕೆ ಸಾಧ್ಯವಿಲ್ಲ. ನಮ್ಮ ಹೊಲದಲ್ಲಿ ...0 ಅಡಿಗೆ ನೀರು ಸಿಕ್ಕರೆ ಪಕ್ಕದ ಹೊಲದಲ್ಲಿ 500 ...ಡಿಗೆ ಸಿಗುತ್ತದೆ, ಅದರ ಪಕ್ಕದ ಹೊಲದಲ್ಲಿ ಕೇವಲ ...0 ಅಡಿಗೇ ಸಿಗಬಹುದು. ಆದರೆ, ಇಲ್ಲಿ ಎಲ್ಲಾ ...ೋರ್‌ವೆಲ್‌ಗಳನ್ನೂ 500 ಅಡಿ ಕೊರೆದಿದ್ದೇವೆ ಎಂದು ...ಳೆಯಲ್ಲಿ ತೋರಿಸಿ ಬಿಲ್ ಎತ್ತಿರುವುದು ದೊಡ್ಡ ಮಟ್ಟದ ...ವ್ಯವಹಾರ ನಡೆದಿರುವುದಕ್ಕೆ ಸ್ಪಷ್ಟ ಉದಾಹರಣೆ.

ಇನ್ನು ಎರಡನೇ ವಿಷಯ ಎಂದರೆ, ಈಗಾಗಲೇ ...ವರಿಸಿದಂತೆ ತುಂಗಭದ್ರಾ ಮತ್ತು ಕೃಷ್ಣಾ ನದಿಗಳು, ...ುಂಗಭದ್ರಾ ಎಡದಂಡೆ ಮತ್ತು ನಾರಾಯಣಪುರ ಬಲದಂಡೆ ...ಲೆಗಳು, ಉಪಕಾಲುವೆಗಳು, ಹೊಲಗಾಲುವೆಗಳ ಜಾಲ ...ೀ ಜಿಲ್ಲೆಯಾದ್ಯಂತ ನರನಾಡಿಗಳಂತೆ ಹರಡಿರುವುದರಿಂದ ಎಲ್ಲಿ ಬೋರ್‌ವೆಲ್ ತೋಡಿದರೂ ಸುಮಾರು ನೂರೈವತ್ತು ಅಡಿಗೆ ನೀರು ಸಿಗುತ್ತದೆ. ಆದರೂ ಐನೂರು ಅಡಿ ಕೊರೆದಿದ್ದೇವೆಂದು ತೋರಿಸಿದ್ದಾರೆ! ಇದು ಅವ್ಯವಹಾರ ನಡೆದಿರುವುದಕ್ಕೆ ಇನ್ನೊಂದು ನಿದರ್ಶನ.

ನಿಯಮಗಳು ಬಿರುಗಾಳಿಗೆ!


ಜಿಲ್ಲಾ ಪಂಚಾಯತ್‌ನಲ್ಲಿ ಒಂದು ಬೋರ್‌ವೆಲ್ ತೋಡಿ ಹ್ಯಾಂಡ್‌ಪಂಪ್ ಕೂರಿಸಬೇಕೆಂದರೆ ಹಲವಾರು ನೀತಿ ನಿಯಮಾವಳಿಗಳನ್ನು ಅನುಸರಿಸಬೇಕಾಗುತ್ತದೆ. ಮೊದಲು ಕಾರ್ಯಯೋಜನೆ ರೂಪುಗೊಳ್ಳಬೇಕು, ಖರ್ಚಾಗಲಿರುವ ಅಂದಾಜುಪಟ್ಟಿ ಸಲ್ಲಿಸಬೇಕು, ಎಂಜಿನಿಯರಿಂಗ್ ವಿಭಾಗದಿಂದ ತಾಂತ್ರಿಕ ಅನುಮೋದನೆ ಸಿಗಬೇಕು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಿಂದ ಆಡಳಿತಾತ್ಮಕ ಮಂಜೂರಾತಿ ಸಿಗಬೇಕು, ಬೋರ್‌ವೆಲ್ ಕೊರೆಯುವ ಏಜೆನ್ಸಿ ಮತ್ತು ಜಿಲ್ಲಾ ಪಂಚಾಯತಿ ನಡುವೆ ಲಿಖಿತ ಒಪ್ಪಂದವಾಗಬೇಕು, ಆ ಮೇಲೆ ವರ್ಕ್ ಆರ್ಡರ್ ಇಶ್ಯೂ ಮಾಡಬೇಕು, ಬೋರ್‌ವೆಲ್ ಎಲ್ಲಿ ಕೊರೆಯಬೇಕು ಎಂಬುದನ್ನು ನಿರ್ಧರಿಸುವುದಕ್ಕಾಗಿ ಅಧಿಕೃತ ಭೂಗರ್ಭಶಾಸ್ತ್ರಜ್ಞ ಸ್ಥಳ ಅಧ್ಯಯನ ಮಾಡಿ ನೀರಿನ ಲಭ್ಯತೆಯ ವರದಿ ನೀಡಬೇಕು, ಬೋರ್‌ವೆಲ್ ಕೊರೆಯುವ ಏಜೆನ್ಸಿ ಪ್ರತಿನಿತ್ಯ ಜಿಲ್ಲಾ ಪಂಚಾಯತ್‌ಗೆ ಕೆಲಸದ ಪ್ರಗತಿ ವರದಿ ನೀಡಬೇಕು, ಕೆಲಸ ಪೂರ್ಣವಾಗಿರುವ ಬಗ್ಗೆ ಸರ್ಕಾರ ಮತ್ತು ಬೋರ್‌ವೆಲ್ ಕೊರೆದ ಏಜೆನ್ಸಿ ಹೊರತಾಗಿ ಮೂರನೇ ಪಕ್ಷ (ಥರ್ಡ್ ಪಾರ್ಟಿ) ವರದಿ ನೀಡಬೇಕು, ಕೆಲಸ ಪೂರ್ಣವಾಗಿರುವುದನ್ನು ಖಚಿತಪಡಿಸಿಕೊಂಡು ಜೂನಿಯರ್ ಎಂಜಿನಿಯರ್ ಬಿಲ್ ಸಿದ್ಧಗೊಳಿಸಬೇಕು, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಆ ಬಿಲ್ಲನ್ನು ಪುನರ್‌ಪರಿಶೀಲನೆ ಮಾಡಬೇಕು, ಎಲ್ಲಾ ಸರಿಯಾಗಿದೆ ಎಂದು ಖಾತ್ರಿಯಾದ ಮೇಲಷ್ಟೇ ಚೆಕ್ ಮೂಲಕ ಬಿಲ್ ಪಾವತಿಸಬೇಕು.

ಆದರೆ, ಕೇಶವರೆಡ್ಡಿಯ ವಿಷಯದಲ್ಲಿ ಈ ಪ್ರಕ್ರಿಯೆಯನ್ನು ಅನುಸರಿಸಲಾಗಿಲ್ಲ, ಭೂಗರ್ಭಶಾಸ್ತ್ರಜ್ಞ ವರದಿ ನೀಡಿಲ್ಲ, ಮೂರನೇ ವ್ಯಕ್ತಿಯ ಪರಿಶೀಲನೆ ನಡೆದಿಲ್ಲ. ಆದರೂ ಬಿಲ್ ಪಾವತಿ ಮಾಡಲಾಗಿದೆ! ಅಸಲಿಗೆ ಬೋರ್‌ವೆಲ್ ಕೊರೆದರೆ ತಾನೆ ಪರಿಶೀಲನೆ ಮಾಡೋದು?

ವಿಜಯ ಜ್ಯೋತ್ಸ್ನಾ ರಕ್ಷಣೆ?

ರಾಯಚೂರಿನ ಗ್ರಹಚಾರವೇ ಸರಿಯಿಲ್ಲವೋ ಏನೋ ಗೊತ್ತಿಲ್ಲ, ಒಟ್ಟಿನಲ್ಲಿ ಪುಷ್ಕಳವಾಗಿ ಕಮೀಷನ್ ನುಂಗಿ, ಖದೀಮರಿಗೆ ಲೂಟಿ ಹೊಡೆಯುವುದಕ್ಕೆ ಅವಕಾಶ ಕೊಡುವ ಅಧಿಕಾರಿಗಳೇ ಸಾಮಾನ್ಯವಾಗಿ ಇಲ್ಲಿಗೆ ಬರುತ್ತಾರೆ. ಈ ಹಿಂದಿನ ಸಂಚಿಕೆಗಳಲ್ಲಿ ರಾಯಚೂರಿನ ಪೊಲೀಸ್ ವರಿಷ್ಠಾಧಿಕಾರಿ ಎಂ.ಎನ್.ನಾಗರಾಜನ ದಗಲ್ಬಾಜಿ ದಂಧೆಗಳನ್ನು ಬಯಲಿಗೆಳೆದಿದ್ದು ನಿಮಗೆ ನೆನಪಿರಬಹುದು. ಈಗ ಜಿಲ್ಲಾ ಪಂಚಾಯತಿಯಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಲೂಟಿ ನಡೆಯುತ್ತಿದ್ದರೂ ನಿರುಮ್ಮಳವಾಗಿ ಕುಳಿತಿರುವ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ವಿಜಯ ವಿ ಜ್ಯೋತ್ಸ್ನಾ ಬಗ್ಗೆಯೂ ಬರೆಯಲೇಬೇಕಾಗಿದೆ. ಅತ್ತ ರಾಯಚೂರಿನ ಹಳ್ಳಿಗಳಲ್ಲಿ ಜನ ನೀರಿನ ದಾಹದಿಂದ ಬಳಲುತ್ತಿದ್ದರೆ, ಜನರ ದಾಹ ನೀಗಿಸುವುದಕ್ಕಾಗಿ ಬಿಡುಗಡೆಯಾದ ಕೋಟಿ ಕೋಟಿ ಹಣ ಕೇಶವರೆಡ್ಡಿಯ ತಿಜೋರಿ ಸೇರುತ್ತಾ ಜನರ ಬವಣೆಯನ್ನು ಇನ್ನೂ ಹೆಚ್ಚಾಗುತ್ತಿದ್ದರೆ ಅದಕ್ಕೂ ತನಗೂ ಸಂಬಂಧವೇ ಇಲ್ಲ ಎಂಬಂತೆ ಕುಳಿತಿರುವ ವಿಜಯ ಜ್ಯೋತ್ಸ್ನಾ ಅವರನ್ನು ಪ್ರಶ್ನಿಸದಿದ್ದರೆ ಹೇಗೆ? ಅವರೊಬ್ಬ ಹೆಣ್ಣು ಎಂಬ ಒಂದೇ ಒಂದು ಕಾರಣಕ್ಕೆ ಅವರು ಮಾಡುವ ಭ್ರಷ್ಟಾಚಾರ, ತಪ್ಪು ಎಲ್ಲವನ್ನೂ ಮುಚ್ಚಿಡುವುದು ಸರಿಯೆ? ಈ ಬೋರ್‌ವೆಲ್ ಹಗರಣದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಜ್ಯೋತ್ಸ್ನಾ ಅವರೇ ನೇರ ಹೊಣೆಗಾರರಾಗುತ್ತಾರೆ.

ಹಾಗೆ ನೋಡಿದರೆ ಅವರೊಬ್ಬ ದಕ್ಷ ಅಧಿಕಾರಿಯೇ ಅಲ್ಲ, ಅತ್ತ ತುಂಬಾ ದಕ್ಷನೂ ಅಲ್ಲದ, ಇತ್ತ ತುಂಬಾ ಕಳಪೆಯೂ ಅಲ್ಲದ ಸಾಮಾನ್ಯ ದರ್ಜೆಯ ಅಧಿಕಾರಿಯಿಂದ ಯಾವ ಮಟ್ಟದ ಕೆಲಸವನ್ನು ನಿರೀಕ್ಷಿಸುತ್ತೇವೆಯೋ ಅದನ್ನೂ ಅವರಿಂದ ನಿರೀಕ್ಷೆ ಮಾಡುವುದಕ್ಕೆ ಆಗುವುದಿಲ್ಲ. ಆಫೀಸಿನಲ್ಲಿ ಆಕೆಯ ಮುಖ ಕಾಣಸಿಗುವುದು ಬಹಳ ಅಪರೂಪ. ಜಿಲ್ಲೆಯಾದ್ಯಂತ ತಿರುಗಾಡಿ ಕೆಲಸ ಮಾಡುತ್ತಿರಬೇಕು ಅಂತ



ತಪ್ಪು ಭಾವಿಸಬೇಡಿ. ಆಕೆ ಆಫೀಸಿನಲ್ಲೂ ಇರೋದಿಲ್ಲ, ಫೀಲ್ಡಿನಲ್ಲೂ ಇರೋದಿಲ್ಲ, ತಮ್ಮ ಪುಟ್ಟ ಮಗು ಮತ್ತು ಗಂಡನ ಜೊತೆ ಮನೆಯಲ್ಲೇ ಹೆಚ್ಚು ಸಮಯ ಕಳೆಯುತ್ತಾಳೆ. ಇಲ್ಲಿ ಆಫೀಸಿನಲ್ಲಿ ಕೆಲಸಗಳು ಆಮೆಗತಿಯಲ್ಲಿ ನಡೆಯುತ್ತಿದ್ದರೆ, ಭ್ರಷ್ಟಾಚಾರ ತಾಂಡವಾಡುತ್ತಿದ್ದರೆ, ಹಳ್ಳಿಗಾಡಿನಲ್ಲಿ ಜನ ಕುಡಿಯಲು ನೀರಿಲ್ಲದೆ ಪರದಾಡುತ್ತಿದ್ದರೆ ಅತ್ತ ಜ್ಯೋತ್ಸ್ನಾ ಮನೆಯಲ್ಲಿ ಆರಾಮಾಗಿರುತ್ತಾರೆ. ಅವರನ್ನು ತುರ್ತಾಗಿ ಭೇಟಿಯಾಗಬೇಕೆಂದರೂ ಸಾಧ್ಯವಾಗುವುದಿಲ್ಲ, ಏಕೆಂದರೆ, ಅವರು ಸಾಮಾನ್ಯವಾಗಿ ಫೋನು ಎತ್ತುವುದಿಲ್ಲ. ಮನೆಗೆ ಹೋಗುವುದಕ್ಕಂತೂ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಮುಕ್ಕಣ್ಣ ಕರಿಗಾರ್ ಮತ್ತು ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಪ್ರಕಾಶ್‌ಗೆ ಮಾತ್ರ ಅವಕಾಶ. ಉಳಿದವರು ಮನೆಯತ್ತ ಸುಳಿಯುವ ಅವಕಾಶವೂ ಇಲ್ಲ.

ಇಲ್ಲಿಯ ತನಕ ಜ್ಯೋತ್ಸ್ನಾ ಬಗ್ಗೆ ಜನರಲ್ಲಿ ಬೇರೆಯದೇ ಅಭಿಪ್ರಾಯವಿತ್ತು. ಆಂಧ್ರಪ್ರದೇಶದ ಶ್ರೀಮಂತ ಕುಟುಂಬದಿಂದ ಬಂದ ಅವರಿಗೆ ನೌಕರಿ ಮಾಡಿ ಹೊಟ್ಟೆ ಹೊರೆದುಕೊಳ್ಳಬೇಕೆಂಬ ಜರೂರತ್ತೂ ಇಲ್ಲ, ಭ್ರಷ್ಟಾಚಾರ ಮಾಡಿ ಮೈಕೈ ಹೊಲಸು ಮಾಡಿಕೊಳ್ಳುವ ಅಗತ್ಯವೂ ಇಲ್ಲ, ಸುಮ್ಮನೆ ಶೋಕಿಗಾಗಿ ಮೊದಲು ಐಪಿಎಸ್ ಮಾಡಿ, ಆನಂತರ ಐಎಎಸ್ ಮಾಡಿ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದಾಳೆ ಎಂದೇ ಜನ ಭಾವಿಸಿದ್ದರು. ಆದರೆ ಇತ್ತೀಚೆಗೆ ಅವರ ನಿಜಬಣ್ಣ ಬಯಲಾಗುತ್ತಿದೆ.

ಈಗ ಕೆಲವು ತಿಂಗಳ ಹಿಂದೆ ಅವರನ್ನು ಬೆಂಗಳೂರಿಗೆ ವರ್ಗಾವಣೆ ಮಾಡಲಾಗಿತ್ತು, ಹಿರಿಯ ಅಧಿಕಾರಿಗಳೆಲ್ಲಾ ಸೇರಿಕೊಂಡು ಒಂದು ಬೀಳ್ಕೊಡುಗೆ ಕೂಡ ಕೊಟ್ಟಿದ್ದರು. ಆದಾಗಿ ಇಪ್ಪತ್ನಾಲ್ಕು ಗಂಟೆಯೊಳಗೆ ಅವರ ವರ್ಗಾವಣೆ ರದ್ದಾಗಿತ್ತು! ಆಗಲೇ ವಾಸ್ತವದಲ್ಲಿ ಎಲ್ಲರೂ ಅವರ ಬಗ್ಗೆ ಹುಬ್ಬೇರಿಸಿದ್ದು. ಒಂದೋ ವರ್ಗವಾಗಿ ಹೋಗುವುದಕ್ಕೆ ಅವರಿಗೇ ಮನಸ್ಸಿಲ್ಲ, ಇಲ್ಲವೇ ಈಗಾಗಲೇ ಅವರ ಸಹಕಾರದಿಂದ ಚೆನ್ನಾಗಿ ಲೂಟಿ ಹೊಡೆಯುತ್ತಿದ್ದ ಕೇಶವರೆಡ್ಡಿಯಂತಹ ಕುಳಗಳಿಗೆ ಅವರು ವರ್ಗಾವಣೆಯಾಗುವುದು ಇಷ್ಟವಿರಲಿಲ್ಲ, ಹೀಗಾಗಿ, ರಾತ್ರೋರಾತ್ರಿ ವರ್ಗಾವಣೆಯನ್ನು ರದ್ದು ಮಾಡಿಕೊಂಡು ಬಂದಿದ್ದರು. ರಾಯಚೂರು ಜಿಲ್ಲಾಪಂಚಾಯತಿ ಎಂಬ ಹುಲ್ಲುಗಾವಲಿಗೆ ಜ್ಯೋತ್ಸ್ನಾ ಅವರು ಕಾವಲುಗಾರರಾಗಿರುವಷ್ಟು ದಿನ ಕೇಶವರೆಡ್ಡಿಯಂತ ಕುಳಗಳು ನಿರಾತಂಕವಾಗಿ ಮೇಯುವುದಕ್ಕೆ, ಅನುಕೂಲವಾಗುತ್ತದೆ ಎಂಬ ಕಾರಣವಲ್ಲದೇ ವರ್ಗಾವಣೆ ರದ್ದತಿಗೆ ಮತ್ತೇನಿರಲು ಸಾಧ್ಯ ಹೇಳಿ?

ಕೇಶವರೆಡ್ಡಿ ಈ ಎರಡು ವರ್ಷದಲ್ಲಿ ಬೋರ್‌ವೆಲ್ ದಂಧೆಯನ್ನು ನಿರಾತಂಕವಾಗಿ ಮುಂದುವರೆಸುವುದಕ್ಕೆ ಆತನಿಗೂ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಜ್ಯೋತ್ಸ್ನಾಗೂ ನಡುವೆ ಕೊಂಡಿಯಾಗಿ ಕಾರ್ಯನಿರ್ವಹಿಸಿದವನು ಪ್ರಕಾಶ್ ಎಂಬ ಸಹಾಯಕ ಕಾರ್ಯಪಾಲಕ ಎಂಜಿನಿಯರ್. ಈತನ ಭ್ರಷ್ಟಾಚಾರಗಾಥೆಯನ್ನು ಬರೆದರೆ ಅದೇ ಒಂದು ಉದ್ಗ್ರಂಥವಾಗುತ್ತದೆ. ಈ ಪ್ರಕಾಶ್ ಹಲವಾರು ವರ್ಷಗಳಿಂದ ಎಲ್ಲೂ ವರ್ಗಾವಣೆಯಾಗದೇ ಇಲ್ಲೇ ಗೂಟ ಹೊಡೆದುಕೊಂಡು ಕುಳಿತಿದ್ದಾನೆ. ಈತ ಬೇರೆಡೆ ವರ್ಗಾವಣೆಯಾಗದಂತೆ ನೋಡಿಕೊಳ್ಳುವುದಕ್ಕಾಗಿಯೇ ಜ್ಯೋತ್ಸ್ನಾ ಅವರ ಗಂಡ ಬರೊಬ್ಬರಿ 25 ಲಕ್ಷ ಪಡೆದಿದ್ದಾನೆ ಎಂಬ ಮಾತು ಜಿಲ್ಲೆಯಾದ್ಯಂತ ಅನುರಣಿಸುತ್ತಿರುವುದು ಪೂರ್ತಿ ಸುಳ್ಳಾಗಿರಲಿಕ್ಕಿಲ್ಲ. ಈ ಎಂಜಿನಿಯರ್ ಪ್ರಕಾಶ್ ಕುಡಿಯುವ ನೀರಿನ ಯೋಜನೆಯೊಂದರಲ್ಲಿ ಕಂಠಪೂರ್ತಿ ತಿಂದು ಭ್ರಷ್ಟಾಚಾರ ಮಾಡಿದ್ದಕ್ಕಾಗಿ ಸದ್ಯ ಅಮಾನತ್ತಿನಲ್ಲಿದ್ದಾನೆ.

ಖದೀಮರನ್ನು ವಿಜಯ ಜ್ಯೋತ್ಸ್ನಾ ರಕ್ಷಣೆ ಮಾಡಿದರೇನಂತೆ. ಈಗಾಗಲೇ ಬೋರ್‌ವೆಲ್ ಅವ್ಯವಹಾರದ ಪೂರ್ಣ ಪ್ರಮಾಣದ ಮಾಹಿತಿ ಜಿಲ್ಲಾಧಿಕಾರಿ ಎಸ್ ಸಸಿಕಾಂತ್ ಸೆಂಥಿಲ್ ಕೈ ಸೇರಿದೆ. ವಿಷಯವನ್ನು ಗಂಭೀರವಾಗಿ ಪರಿಗಣಿಸಿರುವ ಅವರು ಕಳೆದ ಮೂರ್ನಾಲ್ಕು ವರ್ಷಗಳಲ್ಲಿ ಕೊರೆದ ಬೋರ್‌ವೆಲ್‌ಗಳ ಸಂಪೂರ್ಣ ಮಾಹಿತಿ ಕಲೆ ಹಾಕುವುದಕ್ಕೆ ಸಹಾಯಕ ಆಯುಕ್ತ ಎಂ.ಪಿ. ಮಾರುತಿ ಅವರಿಗೆ ವಹಿಸಿದ್ದಾರೆ. ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಶರಣಪ್ರಕಾಶ್ ಪಾಟೀಲ್ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಎಚ್.ಕೆ. ಪಾಟೀಲ್ ಕೂಡ ಈ ಹಗರಣವನ್ನು ಗಂಭೀರವಾಗಿ ಪರಿಗಣಿಸಿದ್ದು ಆಳವಾಗಿ ತನಿಖೆ ನಡೆಸುವುದಕ್ಕೆ ಮುಂದಾಗಿದ್ದಾರೆ. ವಿಜಯ ಜ್ಯೋತ್ಸ್ನಾ ಒಳಗೊಂಡಂತೆ ಈ ಹಗರಣದಲ್ಲಿ ಭಾಗಿಯಾಗಿರುವ ಎಲ್ಲರ ಬಣ್ಣ ಸದ್ಯದಲ್ಲೇ ಬಯಲಾಗಲಿದೆ.


■ ವರದಿಗಾರ

...ಸಕ್ಕರೆಯಲ್ಲೂ ಗೋವಿನ ಎಲುಬು ಇದೆ!

...ಕೇವಲ ಭಾರತದಲ್ಲಿ ಮಾತ್ರ ಇತರ ಜನರ ಆಹಾರ ...ದ್ಧತಿಯ ಬಗ್ಗೆ ಹೀಗಳೆದು ಅವಮಾನಿಸುವ ಹೀನ ಪ್ರವೃತ್ತಿ ...ನಾದಿಕಾಲದಿಂದಲೂ ನಡೆದುಬಂದಿರುವುದು. ನಮ್ಮ ...ಶದ ಪ್ರಾಥಮಿಕ ಶಾಲೆಗಳಲ್ಲೂ ವಿದ್ಯಾರ್ಥಿಗಳಲ್ಲಿ ಹಾಗೂ ...ಕರಲ್ಲೂ ಶಾಖಾಹಾರಿ ಮಾಂಸಾಹಾರಿ ಎಂದು ವಿಭಜನೆ ...ಡಿ ಮಕ್ಕಳ ಎಳೆ ಮನಸಲ್ಲೂ ಜನರ ಆಹಾರ ಪದ್ಧತಿಯ ...ಿ, ಚಿಕ್ಕಂದಿನಲ್ಲಿಯೇ ವಿಷ ಬಿತ್ತಲಾಗುತ್ತದೆ. ಇಂತಹ ...ಗರಿಕ ತುಚ್ಛ ಪ್ರವೃತ್ತಿ ಜಗತ್ತಿನ ಬೇರೆ ಯಾವ ದೇಶದ ...ರಲ್ಲಿಯೂ ಇಲ್ಲ!

...ಪುರಾಣಕಾಲದಲ್ಲಿ ಭಾರತದಲ್ಲಿ ಬ್ರಾಹ್ಮಣರ ಸಹಿತ ...ರೂ ಮಾಂಸಾಹಾರಿಗಳಾಗಿದ್ದರು, ಆದರೆ ಜೈನ ಧರ್ಮ ...ಗಮವಾದ ನಂತರ ಮೊಟ್ಟ ಮೊದಲ ಬಾರಿಗೆ ...ರತೀಯರಿಗೆ ಶುದ್ಧ ಶಾಖಾಹಾರ ಅಂದರೆ ಏನೆಂದು ...ರ್ಚವಾಗಿದ್ದು ಎಂದು ಸ್ವಾಮಿ ವಿವೇಕಾನಂದರೇ ಹೇಳಿದ್ದಾರೆ. ...ದ ಜೈನರಿಗೆ ಸಮಾಜದಲ್ಲಿ ಹೆಚ್ಚು ಗೌರವ ಸಿಗುವುದು ...ಡಿ ಹಿಂದೂಗಳಲ್ಲಿಯೂ ಕೆಲವು ಮೇಲ್ಜಾತಿಯವರು ...ಾಹಾರಿಗಳಾಗಿ ಪರಿವರ್ತಿತರಾದರು ಅಷ್ಟೇ.

...ರಾಹುಲ್ ಗಾಂಧಿ ಗೋಮಾಂಸ ತಿಂದು ಕೇದಾರನಾಥಕ್ಕೆ ...ೋಗಿದ್ದರಿಂದ ಕೇದಾರನಾಥದ ಸಹೋದರ ಕ್ಷೇತ್ರ ...ಶುಪತಿನಾಥದಲ್ಲಿ ಭೂಕಂಪವಾಯಿತು ಎಂದು ಸಾಕ್ಷಿ ...ಮಹಾರಾಜ್ ಹೇಳಿದಕ್ಕೆ, ಟೀಕೆಗಳ ಮಹಾಪೂರ ...ರಿದುಬಂತು. ಆದರೆ ಸಾಕ್ಷಿಯ ಹೇಳಿಕೆಗೆ ಇನ್ನೊಂದು



ಮಗ್ಗಲು ಸಹ ಇದೆ. ರಾಹುಲ್ ಗಾಂಧಿ ಕೇದಾರನಾಥಕ್ಕೆ ಹೋಗಿದ್ದರಿಂದ ಅದರ ಸಹೋದರ ಪಶುಪತಿನಾಥ ದೇಗುಲ ಸುರಕ್ಷಿತವಾಗಿ ಉಳಿಯಿತು. ಒಂದು ವೇಳೆ ರಾಹುಲ್ ಗಾಂಧಿ ಕೇದಾರನಾಥದಲ್ಲಿಯ ಜನರ ಮನೆಗಳಿಗೆ ಹಾಗೂ ಇತರ ದೇವಸ್ಥಾನಗಳಿಗೂ ಭೇಟಿ ಇತ್ತಿದ್ದರೆ ಪಶುಪತಿನಾಥದ ಸುತ್ತಮುತ್ತಲಿನ ಜನರ ಮನೆಗಳು ಹಾಗೂ ಇತರ ದೇವಳಗಳೂ ಉಳಿಯುತ್ತಿದ್ದವು ಎಂಬುದೇ ಸಾಕ್ಷಿಯ ಮಾತಿನ ಇಂಗಿತವಾಗಿರಲೂಬಹುದು.

ಗಿರೀಶ್ ಕಾರ್ನಾಡರು ಗೋಮಾಂಸ ಸೇವನೆಯ ಪರವಾಗಿದ್ದಾರೆ ಎಂಬ ಕಾರಣಕ್ಕೆ, ಉಡುಪಿಯ ನರಸಿಂಹ ದೇಗುಲದ ಆಡಳಿತ ಮಂಡಳಿ ತಮ್ಮ ದೇವಾಲಯದ ಉತ್ಸವದಲ್ಲಿ ಕಾರ್ನಾಡರ 'ನಾಗಮಂಡಲ' ನಾಟಕ ಪ್ರದರ್ಶನಕ್ಕೆ ತಡೆ ಒಡ್ಡಿದೆ. ಹಾಗಾದರೆ ಗೋವಿನ ಚರ್ಮದಿಂದ ಮಾಡಲಾದ ಚೆಂಡೆ ನಗಾರಿ ತಮಟೆ ಇವುಗಳ ವಾದನವನ್ನೂ ಆ ದೇವಸ್ಥಾನದಲ್ಲಿ ನಿಲ್ಲಿಸಬೇಕು.

ಸಕ್ಕರೆ ಕಾರ್ಖಾನೆಗಳಲ್ಲಿ ಕೊನೆಯ ಘಟ್ಟದಲ್ಲಿ ಸಕ್ಕರೆಗೆ ಬಿಳಿ ಬಣ್ಣ ಬರಲು ಗೋವಿನ ಎಲುಬಿನ ಕಾರ್ಬನ್ ಉಪಯೋಗಿಸು ತ್ತಾರೆ. ಹಾಗಾದರೆ ದೇವಸ್ಥಾನಗಳಲ್ಲಿ ಸಕ್ಕರೆ ಬಳಸಿ ಪಂಚಾಮೃತ ಕಜ್ಜಾಯ ಪ್ರಸಾದಗಳನ್ನು ತಯಾರಿಸುವುದನ್ನೂ ನಿಲ್ಲಿಸಬೇಕು. ಪುರೋಹಿತರು ಹಾಗೂ ಆಡಳಿತ ಮಂಡಳಿಯವರು ಗೋವಿನ ಕರುವಿನ ಚರ್ಮದಿಂದ (ಕಾಫ್ ಲೆದರ್) ಮಾಡುವ ಪರ್ಸ್, ವಾಚಿನ ಬೆಲ್ಟ್, ಸೊಂಟದ ಬೆಲ್ಟ್, ಚಪ್ಪಲಿ, ಮೊಬೈಲ್ ಕವರ್ ಇವುಗಳ ಉಪಯೋಗವನ್ನೂ ನಿಲ್ಲಿಸಬೇಕು. ಪ್ರತಿಯೊಂದು ತರಹದ ಔಷಧದ ಕ್ಯಾಪ್ಸೂಲ್ ಮೇಲಿನ ಕವರ್ ಮಾಡುವುದು ಕೇವಲ ಜಿಲೆಟಿನ್ ಎಂಬ ಗೋವಿನ ಕೊಬ್ಬಿನಿಂದ ಮಾತ್ರ. ಜಿಲೆಟಿನ್ ಇಲ್ಲದೆ ಕ್ಯಾಪ್ಸುಲ್ ತಯಾರಿಸಲು ಸಾಧ್ಯವಿಲ್ಲ. ವಿಟಮಿನ್ ಕ್ಯಾಪ್ಸುಲುಗಳಿಗೂ ಜಿಲೆಟಿನ್ ಬೇಕು. ಪ್ರತಿಯೊರ್ವನೂ ಜೀವನದಲ್ಲಿ ಕನಿಷ್ಠ ಹತ್ತು ಬಾರಿಯಾದರೂ ಬೇರೆ ಬೇರೆ ರೋಗಕ್ಕೆ ಕ್ಯಾಪ್ಸುಲ್ ಮೂಲಕ ಗೋಮಾಂಸದ ಅಂಶ ಸೇವಿಸಿಯೇ ಇರುತ್ತಾನೆ.

ಹಾಗಾಗಿ ರೋಗದಿಂದ ಸತ್ತರೂ ಪರವಾಗಿಲ್ಲ ಇನ್ನು ಮುಂದೆ ಗೋವಿನ ಮಾಂಸದ ಜಿಲೆಟಿನ್‌ನಿಂದ ಮಾಡಲಾದ ಕ್ಯಾಪ್ಸುಲ್ ಸೇವಿಸುವುದೇ ಇಲ್ಲ ಎಂದು ದೇವಸ್ಥಾನದ ಆಡಳಿತ ಮಂಡಳಿ ಹಾಗೂ ಅರ್ಚಕರು ಅವರದೇ ನರಸಿಂಹ ದೇವರ ಎದುರು ಪ್ರಮಾಣ ಮಾಡಲಿ. ಆಗ ಕಾರ್ನಾಡರ ನಾಟಕ ಬಹಿಷ್ಕರಿಸಿದ್ದಕ್ಕೆ ಒಂದು ತರ್ಕ ಕಾಣಬಹುದು. ನಿಜವಾಗಿ ಅವರ ನರಸಿಂಹ ದೇವರೇ ಹಿರಣ್ಯಕಶಿಪುವಿನ ಹೊಟ್ಟೆ ಬಗೆದು ರಕ್ಕಸನ ರಕ್ತ ಕರುಳು ಮಾಂಸ ಭಕ್ಷಿಸಿ ಭಯಂಕರ ನರಭಕ್ಷಕನಾಗಿ ಪರಿವರ್ತಿತನಾದ. ಆದರೆ ಶಿವನು ಶರಭ ರೂಪದಲ್ಲಿ ಬಂದು ನರಸಿಂಹನನ್ನು ಸೋಲಿಸಿ ಶಾಂತಗೊಳಿಸದೇ ಇದ್ದಿದ್ದರೆ ಬ್ರಹ್ಮಾಂಡದ ಎಲ್ಲ ನರರನ್ನು ನರಸಿಂಹ ಭಕ್ಷಿಸುತ್ತಿದ್ದ ಎಂದು ಅವರ ವಿಷ್ಣು ಪುರಾಣದಲ್ಲಿಯೇ ಹೇಳಲಾಗಿದೆ.


-ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು

ಒಂದು ಪತ್ರ

ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್

ಹುಬ್ಬಳ್ಳಿ

ಸಿಮಿ ಆರೋಪ ಸುಳ್ಳಾಯ್ತು, 'ಕೇಸರಿ' ಬಣ್ಣ ಬಯಲಾಯ್ತು!



ಅಲ್ಲಾ ಭಕ್ಷ್ ಯಾದವಾಡ

ಏಪ್ರಿಲ್ 30ರಂದು ಹುಬ್ಬಳ್ಳಿ ನ್ಯಾಯಪೀಠದಿಂದ ಹೊರಬಿದ್ದ ತೀರ್ಪು ಬಿಜೆಪಿಗಳ 'ಕೋಮು'ಖ ಮತ್ತು ಚೆಡ್ಡಿವಾಲಾಗಳ ಕುತಂತ್ರವನ್ನು ಬೆತ್ತಲಾಗಿಸಿದೆ. 2008ರಲ್ಲಿ ರಾಜ್ಯದ ಚುಕ್ಕಾಣಿ ಹಿಡಿದು ಕೂತಿದ್ದ ಬಿಜೆಪಿ ಚೆಡ್ಡಿ ಸರ್ಕಾರ ಯಾವ ಅಮಾಯಕ ಮುಸ್ಲಿಂ ಯುವಕರಿಗೆ ಸಿಮಿ ಭಯೋತ್ಪಾದಕರೆಂಬ ಪಟ್ಟ ಕಟ್ಟಿ ಜೈಲಿಗೆ ತಳ್ಳಿತ್ತೊ ಅಷ್ಟೂ ಆರೋಪಿಗಳನ್ನು ಕೋರ್ಟ್ ದೋಷಮುಕ್ತರೆಂದು ತೀರ್ಪು ನೀಡಿದೆ. ರಾಜಕೀಯ ಕುತಂತ್ರಕ್ಕೆ ಬಲಿಯಾಗಿ ಏಳು ವರ್ಷ, ಎರಡು ತಿಂಗಳು ಜೈಲಿನಲ್ಲಿ ಕಳೆದಿದ್ದ ಹದಿನೇಳು ಜನರನ್ನೂ ಬೆನೆಫಿಟ್ ಆಫ್ ಡೌಟ್ ಆಧಾರದಲ್ಲಿ ನ್ಯಾಯಮೂರ್ತಿ ಗೋಪಾಲ್‌ಕೃಷ್ಣ ಕೊಳ್ಳಿ ಖುಲಾಸೆ ಮಾಡಿದ್ದಾರಾದರೂ ಅವರಲ್ಲಿ ಬಿಡುಗಡೆಯ ಭಾಗ್ಯ ಸಿಗುತ್ತಿರೋದು ಕೇವಲ ಮೂರು ಮಂದಿಗಷ್ಟೆ. ಇನ್ನುಳಿದವರ ಮೇಲೆ ಬೇರೆಬೇರೆ ರಾಜ್ಯಗಳಲ್ಲಿ ದಾಖಲಾಗಿರುವ ಕೇಸುಗಳು ಇತ್ಯರ್ಥವಾಗದಿರುವ ಕಾರಣ ಇನ್ನೂ ಅವರ ಪಾಲಿಗೆ ಕತ್ತಲೆ ಕಳೆದಿಲ್ಲ! ಅಂದಹಾಗೆ, ಅಧಿಕಾರಶಾಹಿ ಮತ್ತು ಆಡಳಿತಶಾಹಿಗಳ ಕೋಮುಪೀಡಿತ ಕಿತಾಪತಿಯಿಂದ ಜೈಲು ಸೇರಿದ್ದ ಅಷ್ಟು ಜನರಲ್ಲಿ ಬಹುಪಾಲು ಮಂದಿ ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಕೋರ್ಸ್‌ಗಳನ್ನು ಮುಗಿಸಿ ಹೆತ್ತವರಿಗೋಸ್ಕರ ನೆಮ್ಮದಿಯ ಬದುಕು ಕಟ್ಟಿಕೊಡಬೇಕೆಂಬ ತುಡಿತದಲಿದ್ದವರು.

ಹೊನ್ನಾಳಿಯಿಂದ ಶುರು...

ಅದು 2008ರ ಜನವರಿ ತಿಂಗಳು. ಅಂದರೆ ಆ ವರ್ಷದ ವಿಧಾನಸಭೆ ಚುನಾವಣೆ ನಡೆಯುವುದಕ್ಕೂ ನಾಲ್ಕು ತಿಂಗಳು ಮುನ್ನ (ಚುನಾವಣೆ ನಡೆದದ್ದು ಮೇ ತಿಂಗಳಲ್ಲಿ). ಇಡೀ ರಾಜ್ಯದಲ್ಲಿ ಯಡ್ಡಿಯ ಕಣ್ಣೀರು, ಕುಮ್ಮಿಯ ನಂಬಿಕೆ ದ್ರೋಹದ್ದೇ ಹವಾ ಜೋರಾಗಿತ್ತು. ತನ್ನ ಪರವಾಗಿದ್ದ ಸಿಂಪಥಿ ಅಲೆಯನ್ನು ಗಟ್ಟಿ ಮಾಡಿಕೊಳ್ಳುವ ಎಲ್ಲಾ ಕಸರತ್ತನ್ನು ಬಿಜೆಪಿ ಮಾಡಿಕೊಳ್ಳುವ ಹುನ್ನಾರದಲ್ಲಿತ್ತು. ಆ ಸಂದರ್ಭದಲ್ಲೇ ದಾವಣಗೆರೆ ಜಿಲ್ಲೆಯ ಹೊನ್ನಾಳಿಯಲ್ಲಿ (ಇದು ಬಿಜೆಪಿ ಹೆಂಡದ ಮಂತ್ರಿ ರೇಣುಕಾಚಾರ್ಯನ ಕ್ಷೇತ್ರ) ಫೇಕ್ ನಂಬರ್ ಪ್ಲೇಟ್ ಬಳಸಿದ್ದ ಬೈಕ್ ಬಳಸುತ್ತಿದ್ದ ಕಾರಣಕ್ಕೆ ರಜಿಯುದ್ದೀನ್ ನಾಸಿರ್ ಮತ್ತು ಅಸಾದುಲ್ ಅಖ್ತರ್ ಎಂಬಿಬ್ಬರನ್ನು ಅಲ್ಲಿನ ಪೊಲೀಸರು ಬಂಧಿಸಿದ್ದರು.

ಅಲ್ಲಿಂದಾಚೆಗೆ ನಡೆದದ್ದೆಲ್ಲಾ ಸಂಘಪರಿವಾರ ನಿರ್ದೇಶಿತ ಹೈಡ್ರಾಮಾ. ಹಾಗೆ ಸಿಕ್ಕವರನ್ನು ನಿಷೇಧಿತ ಸ್ಟುಡೆಂಟ್ ಇಸ್ಲಾಮಿಕ್ ಮೂವ್‌ಮೆಂಟ್ ಆಫ್ ಇಂಡಿಯಾ (ಸಿಮಿ) ಸಂಘಟನೆಯೊಡನೆ ತಳುಕು ಹಾಕಲಾಯ್ತು. ಅಷ್ಟರಲ್ಲಾಗಲೆ ನಿರೀಕ್ಷೆಯಂತೆ ಗೆದ್ದು ಗದ್ದುಗೆ ಹಿಡಿದಿದ್ದ ಬಿಜೆಪಿ ಈ ವಿಷಯವನ್ನು ಸೆನ್ಸೇಷನಲ್ ಮಾಡುವ ಸಲುವಾಗಿ ವ್ಯವಸ್ಥಿತ ವ್ಯೂಹವೊಂದನ್ನು ರಚಿಸಿ ಸಿಒಡಿ ತನಿಖೆಗೆ ಒಪ್ಪಿಸಿತು. ಅಷ್ಟಕ್ಕೂ ಆ ತನಿಖೆಯ ಉಸ್ತುವಾರಿಯನ್ನು ನೀಡಿದ್ದು ಡಿ.ವೈ.ಎಸ್ಪಿ ಜಗದೀಶ್ ಖೋತ್ ಮತ್ತು ಡಾ|| ಮಾಲಿನಿ ವಿ.ಎಂ ಜ್ಯೋತಿ ಎಂಬ ಅಧಿಕಾರಿಗಳಿಗೆ. ಇವರಿಬ್ಬರೂ ಸಂಘ ಪರಿವಾರದೊಂದಿಗೆ ಹತ್ತಿರದ ಒಡನಾಟ ಹೊಂದಿದ್ದವರು.

ಭಯೋತ್ಪಾದಕ ಇಶ್ಯೂ ಜೀವಂತವಾಗಿದ್ದಷ್ಟೂ ಅದನ್ನು ತಮಗೆ ಅಗತ್ಯಬಿದ್ದಾಗ, ಬೇಕಾದಂತೆ ಬಳಸಿಕೊಳ್ಳಬಹುದೆಂಬ ಇರಾದೆಯಿಂದ ಹೊನ್ನಾಳಿ ಬೈಕ್ ಪ್ರಕರಣಕ್ಕೆ ಸಿಮಿ ಸಂಘಟನೆಯ ಮಾಜಿ ಮುಖ್ಯಸ್ಥ ಸಫ್ದಾರ್ ನಗೋರಿಯನ್ನು ಲಿಂಕ್ ಮಾಡಿದ್ದಲ್ಲದೇ ಸಿಕ್ಕಿಬಿದ್ದಿದ್ದ ರಜಿಯುದ್ದೀನ್ ನಾಸಿರ್ ಪಾಕಿಸ್ತಾನದಲ್ಲಿ ಲಷ್ಕರ್-ಇ-ತೊಯ್ಬಾ ಉಗ್ರ ಸಂಘಟನೆಯಿಂದ ತರಬೇತಿ ಪಡೆದಿದ್ದಾನೆ ಅಂತಲೇ ಸಾಕ್ಷಿಗಳನ್ನು ಸೃಷ್ಟಿಸುವ ಕೆಲಸವೂ ನಡೆಯಿತು. ಟೆರರಿಸಂ ವಿಚಾರವೆಂದ ಮೇಲೆ ಕೇವಲ ಒಬ್ಬರು ಇಬ್ಬರನ್ನಿಟ್ಟುಕೊಂಡು ಕೇಸು ನಡೆಸಲಾಗದು. ಅದೊಂದು ದೊಡ್ಡ ವ್ಯೂಹ ಅಂತ ತೋರಿಸಿದಾಗಲೇ ಜನ ಕೂಡಾ ನಂಬುವುದು. ಸಿಒಡಿ ತನಿಖಾ ತಂಡದ ಈ 'ಬುದ್ಧಿವಂತಿಕೆ'ಗೆ ಬಲಿಯಾಗಿದ್ದೇ ಈಗ ನಿರ್ದೋಷಿಗಳೆಂದು ಖುಲಾಸೆಗೊಂಡ ಮುಸ್ಲಿಂ ಯುವಕರು. ರಜಿಯುದ್ದೀನ್ ನಾಸಿರ್ ಮತ್ತು ಅಸಾದುಲ್ ಅಖ್ತರ್ ಜೊತೆಗೆ ಒಡನಾಟ ಹೊಂದಿದ್ದಾರೆ ಎಂಬ ನೆಪವಿಟ್ಟುಕೊಂಡು ರಾಯಚೂರು, ಗುಲ್ಬರ್ಗಾ, ಯಾದಗಿರಿ, ಕೇರಳ, ಅಹ್ಮದಾಬಾದ್ ಮೊದಲಾದೆಡೆ ಸುತ್ತಿ ಹಫೀಜ್ ಹುಸೇನ್, ಕೇರಳ ಮೂಲದ ಯಾಹ್ಯ ಕಮ್ಮುಕುಟ್ಟಿ, ಪೀಡಿಕಲ್ ಶಿಬ್ಲಿ ಪೀಡಿಕಲ್ ಶಾದಲಿ (ಇವರಿಬ್ಬರೂ ಅಣ್ಣತಮ್ಮಂದಿರು), ಮಹೊಮದ್ ಆಸಿಫ್, ಅಲ್ಲಾ ಭಕ್ಷ್ ಯಾದವಾಡ, ಮಿರ್ಜಾ ಅಹ್ಮದ್ ಬೇಗ್, ಅಸಾದುಲ್ಲಾ ಅಖ್ತರ್, ಮುನ್ರೋಜ್ ಜವಾನ್ ಮೊದಲಾದವರನ್ನೆಲ್ಲಾ ತಂದು ಜೈಲು ತುಂಬಿಸಿದರು. ಅಲ್ಲದೇ ಸಫ್ದಾರ್ ನಗೋರಿ, ಮೊಹಮ್ಮದ್ ಅನ್ಸಾರ್, ಶಕೀಲ್ ಅಹ್ಮದ್ ಮಲಿ, ಸಾದಿಕ್ ಸಮೀರ್, ಮೊಹ್ಮದ್ ಯಾಸಿನ್, ಅಬ್ದುಸ್ ಸುಭಾನ್ ಖುರೇಷಿ ಮೊದಲಾದವರನ್ನೂ ಆರೋಪಿಗಳನ್ನಾಗಿಸಿ ಅವರೆಲ್ಲಾ ಭೂಗತರಾಗಿದ್ದಾರೆ ಅಂತ ಸಿಒಡಿ ಪೊಲೀಸರು ವ್ಯವಸ್ಥಿತ ಕಥೆ ಕಟ್ಟಿದರು.

ಕಮರಿದ ಕನಸುಗಳು

ಹೀಗೆ ಸಿಒಡಿ ತನಿಖೆಯ ಬಲಿಪಶುಗಳಾಗಿ ಜೈಲು ಸೇರಿಕೊಂಡ ಬಹುಪಾಲು ಮಂದಿಯಲ್ಲಿ ಅಮಾಯಕರೇ ಹೆಚ್ಚಾಗಿದ್ದರು. ಅದರಲ್ಲೂ ಕೇರಳದ ಯಾಹ್ಯಾ ಕಮ್ಮುಕುಟ್ಟಿ ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ ಮುಗಿಸಿ ಬೆಂಗಳೂರಿನ ಸಾಫ್ಟ್‌ವೇರ್ ಕಂಪನಿಯಲ್ಲಿ ದುಡಿದು ಹೆತ್ತವರಿಗೆ ಆಸರೆಯಾಗಿದ್ದ. ಆತ ಅರೆಸ್ಟ್ ಆಗುವುದಕ್ಕೂ ಕೆಲ ದಿನ ಮೊದಲು, ಸರಿಸುಮಾರು 2007ರ ಅಂತ್ಯದಲ್ಲಿ ಆತನ 'ನಡವಳಿಕೆ ಸರಿಯಿಲ್ಲ' ಎಂಬ ಕಾರಣಕೊಟ್ಟು ಆತನನ್ನು ಕೆಲಸದಿಂದ ಆ ಕಂಪನಿ ತೆಗೆದುಹಾಕಿದ್ದನ್ನೇ ನೆಪ ಮಾಡಿಕೊಂಡು ಸಿಮಿ ಸಂಘಟನೆಯ ಚಟುವಟಿಕೆಗೆ ಹಣ ಸಹಾಯ ಮಾಡುತ್ತಾನೆ ಎಂಬ ಆರೋಪವನ್ನು ಪೊಲೀಸರು ಹೊರಿಸಿದ್ದರು. ಆಗ ಅಸಾದುಲ್ಲಾ ಅಖ್ತರ್ ಮತ್ತು ಮುನ್ರೋಜ್ ಜಮಾನ್ ಹೋಮಿಯೋಪಥಿಯ ಅಂತಿಮ ವರ್ಷದ ವಿದ್ಯಾರ್ಥಿಗಳಾಗಿದ್ದರು. ಇನ್ನೇನು ಕೆಲವೇ ದಿನಗಳಲ್ಲಿ ಎದುರಾಗುತ್ತಿದ್ದ ಪರೀಕ್ಷೆ ಬರೆದು ಹೋಮಿಯೋಪಥಿ ವೈದ್ಯರಾಗಬೇಕೆಂದು ಆಶಾ ಗೋಪುರ ನಿರ್ಮಿಸಿಟ್ಟುಕೊಂಡಿದ್ದರು.

ಮಹ್ಮದ್ ಆಸೀಫ್ ಕಥೆ ಕೂಡಾ ಇದಕ್ಕಿಂತ ಭಿನ್ನವಾಗಿಲ್ಲ, 2002ರಲ್ಲಿ ಸರಕಾರಿ ಕೋಟಾದಡಿ ಹುಬ್ಬಳ್ಳಿಯ ಕಿಮ್ಸ್‌ನಲ್ಲಿ ಸೀಟು ಪಡೆದುಕೊಂಡಿದ್ದ ಪ್ರತಿಭಾವಂತ. ಮುಂದೆ ತಾನು ವೈದ್ಯನಾಗಿ ಅದೇ ಕಿಮ್ಸ್ ಆಸ್ಪತ್ರೆ ಸೇರಿಕೊಂಡು ರೋಗಿಗಳಿಗೆ ನೆರವಾಗಬೇಕೆಂಬ ತುಡಿತ ಅವನದಾಗಿತ್ತು. ಆದರೆ ಅವನನ್ನು ಸಿಮಿ ಕಾರ್ಯಕರ್ತನೆಂದು ಬಂಧಿಸಿದ ಪೊಲೀಸರು 'ದೇಶದ್ರೋಹಿ' ಪಟ್ಟಕಟ್ಟಿ ಜೈಲಿಗೆ ತಳ್ಳಿದ್ದರು. ಜೈಲಿನ ಹಕ್ಕಿಯಾಗಿಯೇ ತನ್ನ ಅಂತಿಮ ವರ್ಷದ ಪರೀಕ್ಷೆ ಬರೆಯಲು ಹೋದಾಗ ಸಂಘ ಪರಿವಾರಿಗಳು ಪೊಲೀಸರ ಎದುರಲ್ಲೇ ಅವನ ಮೇಲೆ ಹಲ್ಲೆ ನಡೆಸಿ ಅದನ್ನೂ ಹಾಳುಗೆಡವಲು ಯತ್ನಿಸಿದ್ದರು. ಆದರೂ ಆತ ಎದೆಗುಂದದೆ ಪರೀಕ್ಷೆ ಬರೆದು ವೈದ್ಯ ಪದವಿ ಪಡೆದಿದ್ದ. ಒಬ್ಬ ಭಯೋತ್ಪಾದಕನಿಗೆ ಇಷ್ಟೆಲ್ಲಾ ತ್ರಾಸು ಪಟ್ಟು ಓದು ಮುಂದುವರೆಸುವ ಬಯಕೆಯಾದರೂ ಯಾಕಿರುತ್ತೆ?

ಇನ್ನು ಹುಬ್ಬಳ್ಳಿಯವನೇ ಆದ ಅಲ್ಲಾಭಕ್ಷ್ ಯಾದವಾಡ ಎಂಬಿಬಿಎಸ್ ವ್ಯಾಸಂಗದ ಅಂತಿಮ ವರ್ಷವನ್ನು ಪೂರೈಸಿ ಇನ್ನೇನು ಇಂಟರ್ನ್‌ಶಿಪ್ ಶುರು ಮಾಡಬೇಕೆನ್ನುವ ತಯಾರಿಯಲ್ಲಿದ್ದ. ಅವನನ್ನೂ ಏಕಾಏಕಿ ಭಯೋತ್ಪಾದಕನನ್ನಾಗಿಸಿದ ಪೊಲೀಸರು ಜೈಲಿನಲ್ಲಿ ಕೊಳೆಯುವಂತೆ ಮಾಡಿದ್ದರು.

ಇವರೆಲ್ಲಾ ತಮ್ಮ ಧರ್ಮದ ಬಗ್ಗೆ ಆಕ್ರಮಣಕಾರಿಯಾಗಿ ವಾದಿಸುತ್ತಿದ್ದರು, ಕಾಲೇಜುಗಳಲ್ಲಿ ಸಿಮಿ ಸಂಘಟನೆ ಸೇರುವಂತೆ ವಿದ್ಯಾರ್ಥಿಗಳನ್ನು ಪ್ರಚೋದಿಸುತ್ತಿದ್ದರು, ಸಿಮಿ ಮುಖ್ಯಸ್ಥ ನಗೋರಿಯೊಂದಿಗೆ ಹಲವಾರು ಗುಪ್ತ ಸಭೆಗಳಲ್ಲಿ ಪಾಲ್ಗೊಂಡಿದ್ದರು ಎಂಬ ಆರೋಪಗಳಲ್ಲದೆ 2007ರಲ್ಲಿ ಕೇರಳದ ಕೊಟ್ಟಾಯಂ ಜಿಲ್ಲೆಯ ತಂಗಲಪಾರಾ ಎಂಬಲ್ಲಿ ನಡೆದ ಸಿಮಿ ಸಂಘಟನೆಯ ರಹಸ್ಯ ತರಬೇತಿಯಲ್ಲಿ ಪಾಲ್ಗೊಂಡಿದ್ದ 38 ಆರೋಪಿಗಳಲ್ಲಿ ಇವರೂ ಇದ್ದರೂ ಅಂತ ಪೊಲೀಸರು ಆರೋಪಿಸಿದ್ದರು. ಆ ತರಬೇತಿ ಅವಧಿಯಲ್ಲಿ ಇವರಿಗೆ ಶಸ್ತ್ರಾಸ್ತ್ರಗಳ ಬಳಕೆ, ಪೆಟ್ರೋಲ್ ಬಾಂಬ್ ತಯಾರಿಕೆ, ಮೋಟಾರ್ ಬೈಕ್ ರೇಸಿಂಗ್, ಟ್ರೆಕ್ಕಿಂಗ್ ಮೊದಲಾದ ಪಾಠಗಳನ್ನೆಲ್ಲಾ ಹೇಳಿಕೊಡಲಾಗಿತ್ತು ಅಂತ 1624 ಪುಟಗಳ ತಮ್ಮ ಚಾರ್ಜ್‌ಶೀಟ್‌ನಲ್ಲಿ ಬರೆದುಕೊಂಡಿದ್ದರು. ಇವರೆಲ್ಲಾ ಕಲಘಟಗಿ ಸಮೀಪದ ಸಾತು ಸೈದಾ ದರ್ಗಾದಲ್ಲಿ ಗೆರಿಲ್ಲಾ ಯುದ್ಧದ ತರಬೇತಿ ಪಡೆದಿದ್ದರು ಅಂತಲೂ ಆರೋಪಿಸಲಾಗಿತ್ತು. ವಿಪರ್ಯಾಸವೆಂದರೆ ಸದಾಕಾಲ ಭಕ್ತರಿಂದ ಗಿಜಿಗಿಡುವ ದರ್ಗಾ ಆಸುಪಾಸಿನಲ್ಲಿ ಗೆರಿಲ್ಲಾ ತರಬೇತಿ ನೀಡಲು ಹೇಗೆ ಸಾಧ್ಯವಾದೀತು ಎಂಬ ಕಾಮನ್‌ಸೆನ್ಸ್ ಕೂಡಾ ನಮ್ಮ ಚೆಡ್ಡಿ ಪೊಲೀಸರಿಗೆ ಇದ್ದಂತಿರಲಿಲ್ಲ, ಆದರೆ ಅವೆಲ್ಲಾ ಈಗ ಸುಳ್ಳು ಎಂಬುದಾಗಿ ಸ್ವತಃ ಕೋರ್ಟ್ ತೀರ್ಪು ನೀಡಿದೆ.

ಪ್ರಾಮಾಣಿಕ ಅಪ್ಪನ ಮಗ


'ಸಿಮಿ ಎಂಬುದರ ಬಗ್ಗೆ ನನಗ್ಯಾವ ಆಸಕ್ತಿಯೂ ಇಲ್ಲ, ಗೆರಿಲ್ಲಾ ಅಂದರೇನೆಂಬುದೇ ಗೊತ್ತಿಲ್ಲ, ಆದರೆ ಮುಸ್ಲಿಂ ಆಗಿ ಹುಟ್ಟಿದ ಕಾರಣಕ್ಕೆ ನನ್ನ ಮೇಲೆ ದೇಶದ್ರೋಹದ ಆರೋಪ ಹೊರಿಸಿ ಜೈಲಿಗೆ ತಳ್ಳಲಾಯ್ತು. ಈಗೇನೋ ಕೋರ್ಟ್ ನಮ್ಮನ್ನೆಲ್ಲಾ ದೋಷಮುಕ್ತರೆಂದು ತೀರ್ಪಿತ್ತು ಬಿಡುಗಡೆ ಮಾಡಿದೆ. ಆದರೆ ವಿನಾಕಾರಣ ಏಳು ವರ್ಷ ಜೈಲಿನಲ್ಲಿದ್ದು ನಮ್ಮ ಬದುಕೇ ನಾಶವಾಗಿ ಹೋಯ್ತಲ್ಲ ಅದಕ್ಕೇನು ಪರಿಹಾರ? ಈ ಅವಧಿಯಲ್ಲಿ ನಾವೂ ಮತ್ತು ನಮ್ಮ ಮನೆಯವರು ಅನುಭವಿಸಿದ ಅವಮಾನ, ಯಾತನೆಗಳಿಗೆ ಏನು ಸಾಂತ್ವಾನ? ಜೈಲಿನಲ್ಲಿದ್ದ ಹದಿನಾಲ್ಕು ಮಂದಿಯಲ್ಲಿ ಈಗ ಮೂವರು ಮಾತ್ರ ಬಿಡುಗಡೆ ಆಗುತ್ತಿದ್ದೇವೆ. ಆದರೆ ಇನ್ನುಳಿದವರ ಪಾಡೇನು? ಈ ಷಡ್ಯಂತ್ರಕ್ಕೆ ಸಿಕ್ಕಿ ಬಂಧಿತರಾದ ನಮ್ಮಲ್ಲಿ ಆರು ಜನ ವೈದ್ಯರಿದ್ದೆವು. ಅವರುಗಳ ಕನಸುಗಳಿಗೆ, ಶ್ರಮಕ್ಕೆ ಪ್ರತಿಫಲವೇನು?'

ಬಿಡುಗಡೆಯಾಗಿ ಹೊರಬಂದ ಅಲ್ಲಾಭಕ್ಷ್ 'ಪತ್ರಿಕೆ'ಯೊಂದಿಗೆ ಹಂಚಿಕೊಂಡ ವೇದನೆಯ ಮಾತುಗಳಿವು. ಹೌದು ಹುಬ್ಬಳ್ಳಿಯ ಸಬ್‌ಜೈಲಿನಲ್ಲಿ 1 ತಿಂಗಳು, ಬಳ್ಳಾರಿಯಲ್ಲಿ 9 ತಿಂಗಳು; ಬೆಳಗಾಂನಲ್ಲಿ 3 ವರ್ಷ 3 ತಿಂಗಳು, ಧಾರವಾಡದ ಸಬ್‌ಜೈಲಿನಲ್ಲಿ 3 ವರ್ಷ 5 ತಿಂಗಳು. ಒಟ್ಟು 7 ವರ್ಷ 3 ತಿಂಗಳು ಈ ಡಾಕ್ಟರ್ ಕಂಬಿ ಹಿಂದೆ ಜೀವನ ಕಳೆದು ಹೊರಬಂದಿದ್ದಾನೆ. ಅದೂ ತಾನು ಮಾಡದ ತಪ್ಪಿಗಾಗಿ!

ಹಾಗೆ ನೋಡಿದರೆ ಅಲ್ಲಾಭಕ್ಷ್ ಸುಸ್ಥಿತ ಕುಟುಂಬದಿಂದ ಬಂದವನು. ಅವನ ತಂದೆ ವಲಿಯಾಲ್ಲಾ ಯಾದವಾಡ ನೈರುತ್ಯ ರೇಲ್ವೆಯ ಪ್ರಧಾನ ವ್ಯವಸ್ಥಾಪಕರ ಕಾನೂನು ಸಲಹೆಗಾರರಾಗಿ ವೃತ್ತಿ ಜೀವನದಲ್ಲಿದ್ದಾರೆ. ತಮ್ಮ ಪ್ರಾಮಾಣಿಕತೆ ಮತ್ತು ಸರಳತೆಯ ಕಾರಣಕ್ಕೆ ಗೆಳೆಯರ ನಡುವೆ ಬಾಬಾಜಾನ್ ಅಂತಲೇ ಆತ್ಮೀಯವಾಗಿ ಗುರುತಿಸಿಕೊಳ್ಳುವ ವ್ಯಕ್ತಿತ್ವ ಅವರದ್ದು, ರೈಲ್ವೆ ಕಾರ್ಮಿಕರಲ್ಲಿ ಮಾನ್ಯತೆ ಪಡೆದ ಮಜ್ದೂರ್ ಯುನಿಯನ್‌ನ ವಲಯ ಅಧ್ಯಕ್ಷ ಕೂಡಾ ಆಗಿದ್ದರು. ಅಂತವರ ಹಿರಿಮಗನೇ ಈ ಅಲ್ಲಾಬಾಕ್ಷ್ ಯಾದವಾಡ.

ಸ್ವತಃ ವಲಿಯಾಲ್ಲಾ ಯಾದವಾಡ (ಬಿ.ಎಸ್‌ಸಿ, ಎಲ್‌ಎಲ್‌ಬಿ-ಸ್ಪೆಷಲ್) ಸುಶಿಕ್ಷಿತರಾದ್ದರಿಂದ ತಮ್ಮ ಆರು ಜನ ಮಕ್ಕಳಿಗೂ ಒಳ್ಳೆಯ ವಿದ್ಯಾಭ್ಯಾಸ ಕೊಡಿಸಿದ್ದಾರೆ. ಇವರ ಎರಡನೇ ಮಗ ಎಂ.ಟೆಕ್ ಎಲೆಕ್ಟ್ರಾನಿಕ್ ಮುಗಿಸಿ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರೆ ಮೂರನೇ ಮಗ ಎಂ.ಎಸ್. ಮುಗಿಸಿ ವೈದ್ಯನಾಗಿದ್ದಾನೆ. ಇನ್ನು ನಾಲ್ಕನೆಯವನು ಎಂ.ಟೆಕ್, ಐದನೆಯವನು ಬಿ.ಟೆಕ್. ಕೊನೆಯ ಮಗಳು ಇಂಜಿನಿಯರಿಂಗ್ ವ್ಯಾಸಂಗ ಮಾಡುತ್ತಿದ್ದಾಳೆ. ಹಾಗಂತ ವಲಿಯಾಲ್ಲಾ ಯಾದವಾಡ 'ಭಾರೀ' ಕುಳವೇನಲ್ಲ, ಕೋಟಿಗಟ್ಟಲೆ ಕಮಾಯಿ ಮಾಡಿಕೊಳ್ಳುವ ಎಲ್ಲಾ ಅವಕಾಶಗಳಿದ್ದರೂ ಪ್ರಾಮಾಣಿಕತೆಗೆ ಕಟ್ಟುಬಿದ್ದು ಈಗಲೂ ಎರಡು ರೂಮಿನ ಹಳೇ ಮನೆಯಲ್ಲೇ ಸೀದಾಸಾದಾ ಜೀವನ ನಡೆಸುತ್ತಿದ್ದಾರೆ. ಅಡ್ಡದಾರಿಗೆ ಎಂದೂ ಆಸೆಪಟ್ಟವರಲ್ಲ, ಇನ್ನವರ ಮಕ್ಕಳೆಲ್ಲಾ ಓದಿದ್ದು ಸರ್ಕಾರಿ ಕೋಟಾದಲ್ಲೇ. ಪ್ರತಿಭಾವಂತರಾದ್ದರಿಂದ ಡೊನೇಷನ್ ಹಾವಳಿಗೆ ಸಿಲುಕಿಕೊಳ್ಳದೆ ಅಚ್ಚುಕಟ್ಟಾಗಿ ವಿದ್ಯಾಭ್ಯಾಸ ಮುಗಿಸಿದ್ದಾರೆ. ಕೇವಲ ಶಿಕ್ಷಣದಲ್ಲಿ ಮಾತ್ರವಲ್ಲ, ನಡೆ-ನುಡಿಯಲ್ಲೂ ಮಕ್ಕಳಿಗೆ ತಮ್ಮ ಬದುಕನ್ನೇ ಪಾಠವಾಗಿಸಿ ಧಾರೆ ಎರೆದಿದ್ದಾರೆ. ಅಂತವರ ಮಗನಿಗೂ ಕೇಸರಿ ಬ್ರಿಗೇಡಿನ ಖಾಕಿ ಪೊಲೀಸರು ಭಯೋತ್ಪಾದಕನ ಪಟ್ಟ ಕಟ್ಟಿದ್ದರು.

ಅತ್ತ ಅಲ್ಲಾಭಕ್ಷ್ ಜೈಲು ಸೇರಿದರೆ ಇತ್ತ ಅವನ ಕುಟುಂಬಕ್ಕೆ ಸಂಘ ಪರಿವಾರಿಗಳು ಕೊಟ್ಟ ಕಾಟ ಅಷ್ಟಿಷ್ಟಲ್ಲ. ವಲಿಯಾಲ್ಲಾ ಯಾದವಾಡರ ಎರಡು ಹಾಗೂ ನಾಲ್ಕನೇ ಮಗ ಎಂ.ಟೆಕ್ ವಿದ್ಯಾಭ್ಯಾಸ ಮುಗಿಸಿ ವಿದೇಶಕ್ಕೆ ಹೋಗಬೇಕೆಂದು ಎಷ್ಟು ಪ್ರಯತ್ನಿಸಿದರೂ ಅವರಿಗೆ ಪಾಸ್‌ಪೋರ್ಟ್ ಸಿಗದಂತೆ ಪಿತೂರಿ ಮಾಡಲಾಗಿದೆ. ಇನ್ನು ಈ ಪ್ರಕರಣ ಕೋರ್ಟ್ ಮೆಟ್ಟಲೇರಿದ್ದಾಗ ಯಾರು ಕೂಡಾ



ಜಾಲಗಾರ್

ಅಲ್ಲಾಭಕ್ಷ್ ಪರವಾಗಿ ವಕಾಲತ್ತು ವಹಿಸಬಾರದೆಂದು ಹು ವಕೀಲರ ಸಂಘ 'ಫತ್ವಾ' ಹೊರಡಿಸಿತ್ತು, ಯಾವ ಆಪಾದಿತನಿಗೆ ತನ್ನ ಪರವಾಗಿ ವಾದ ಮಂಡಿಸುವ ಹ ಸ್ವತಃ ಸಂವಿಧಾನವೇ ನೀಡಿದೆ. ಅಂತಹ ಸಂವಿಧಾನ ತಮ್ಮ ವೃತ್ತಿಯನ್ನಾಗಿಸಿಕೊಂಡ ವಕೀಲರು ಈ ಏಕಪಕ್ಷೀಯ ನಿರ್ಧಾರಕ್ಕೆ ಬರಬಾರದೆಂದು ಕೆಲ ಹಿರಿ ನ್ಯಾಯವಾದಿಗಳು ವಿರೋಧ ವ್ಯಕ್ತಪಡಿಸಿದರೂ ಹಿಂ ಸಂಘಟನೆಗಳಿಗೆ ಸೇರಿದ ವಕೀಲರ ತಂಡ ಇಂತಹದ್ದೊ ಬಹಿಷ್ಕಾರ ಹೇರಿತ್ತು. ಅಲ್ಲಾಭಕ್ಷ್‌ನ ತಂದೆ ವಕೀಲನಾಗಿದ್ದರೂ ಕೇಸು ಕೈಗೆತ್ತಿಕೊಳ್ಳಬೇಕೆಂದರೆ ಇಲಾಖೆಯ ತನ್ನ ಕೆಲಸ ಬಿಟ್ಟು ಬರಬೇಕಿತ್ತು. ಆ ಆಗಿನ್ನು ಉಳಿದ ಮಕ್ಕಳು ಓದುತ್ತಿದ್ದರಿಂದ ಅ ವಿದ್ಯಾಭ್ಯಾಸಕ್ಕೆ ಮನೆಯ ದೇಖಾರೇಖಿಗೆ ಬೇರೆ ಮೂಲವಿ ವಲಿಯಾಲ್ಲಾ ಯಾದವಾಡ ಮಗನ ಪರವಾಗಿ ವಾದಿಸಲಾ ಪರಿತಪಿಸುವಂತಾಗಿತ್ತು, ಕೊನೆಗೆ ಹಿರಿಯ ವ ಇಸ್ಮಾಯಿಲ್ ಜಾಲಗಾರ, ಅಲ್ಲಾಭಕ್ಷ್ ಪರ ಕೋರ್ಟ ವಕಾಲತ್ತು ವಹಿಸಲು ಮುಂದಾಗಿದ್ದರು. ಇದರಿ ರೊಚ್ಚಿಗೆದ್ದ ಕೇಸರಿ ಬ್ರಿಗೇಡು ಕಿತ್ತೂರು ಚೆನ್ನಮ್ಮ ವ ಹತ್ತಿರದ ಯುರೇಕಾ ಟಾವೇರಿನಲ್ಲಿದ್ದ ಜಾಲಗಾರರ ಕಚೇ ಬೆಂಕಿ ಹಚ್ಚಿದ್ದರು. ಅವರ ಜೂನಿಯರ್ ಆಗಿ ಕ ಮಾಡುತ್ತಿದ್ದ ವಕೀಲನ ನವನಗರದ ಮನೆ ಮೇಲೆ ತೂರಿ ಗಲಾಟೆ ಮಾಡಿದ್ದರು.


ನ್ಯಾಯ ಗೆದ್ದಿತು

ಇಷ್ಟೆಲ್ಲಾ ವ್ಯವಸ್ಥಿತ ಪಿತೂರಿ ಮತ್ತು ರಾಜಕೀ ಷಡ್ಯಂತ್ರಗಳ ಹೊರತಾಗಿಯೂ ನ್ಯಾಯದ ಕತ್ತು ಹಿಸು ಸಂಘ ಪರಿವಾರಿಗಳಿಗೆ ಸಾಧ್ಯವಾಗಲೇ ಇಲ್ಲ, ಸಾವಿರ ಪುಟಗಟ್ಟಲೆ ಚಾರ್ಜ್‌ಶೀಟ್ ಜಡಿದಿದ್ದ ಸಿಒಡಿ ಪೊಲಿ ಆಟವೂ ಬರ್ಕತ್ತಾಗಲಿಲ್ಲ, ಅಲ್ಲಾಭಕ್ಷ್ ಮತ್ತು ಉಳಿದವ ಉಗ್ರರ ಸಾಲಿಗೆ ಸೇರಿಸಲು ಪೊಲೀಸರು 300 ಸಾಕ್ಷಿ ಪಟ್ಟಿ ಮಾಡಿದ್ದರು. ಅದರಲ್ಲಿ 278 ಸಾಕ್ಷಿಗಳು ಕೋರ್ಟ ಮುಂದೆ ಬಂದು ತಮ್ಮ ಸಾಕ್ಷಿ ಹೇಳಿವೆ. ಸಂಘ ಪರಿ ಮತ್ತು ಬಿಜೆಪಿ ಹಿಕಮತ್ತಿನ 135 ಸಾಕ್ಷಿಗಳನ್ನು ಬ ಸುಮಾರು 143 ಸಾಕ್ಷಿಗಳು, ಅಂದರೆ ಅರ್ಧಕ್ಕಿಂತ ಹೆಚ್ಚು ಸಾಕ್ಷಿಗಳು ಆಪಾದಿತರು ನಿರ್ದೋಷಿಗ ಎಂಬರ್ಥದಲ್ಲೇ ತಮ್ಮ ಸಾಕ್ಷ್ಯ ನುಡಿದಿದ್ದರು. ಮುಖ್ಯ ಸರ್ಕಾರಿ ಸಾಕ್ಷಿಯಾಗಿದ್ದ ಖಾಜಿ ಎಂಬಾತನು ಯಾದವ ಕುಟುಂಬದ ಮೇಲಿನ ವೈಯಕ್ತಿಕ ದ್ವೇಷಕ್ಕಾಗಿ ಪೊಲ ಸಾಕ್ಷಿ ನುಡಿದಿದ್ದು ಕೋರ್ಟ್‌ಗೆ ರುಜುವಾತಾಗಿತ್ತು, ಸುಮ ಏಳು ವರ್ಷ ಸುದೀರ್ಘ ಕಾಲ ನಡೆದ ಈ ವಿಚಾರಣೆಯಲ್ಲಿ ಮೂರು ನ್ಯಾಯಮೂರ್ತಿಗಳು ಬದಲಾಗಿದ್ದರು. ಮೊದ ಜೆ.ಆರ್. ಕುಲಕರ್ಣಿ, ಈಶಪ್ಪ ಭೂತೆ ಎಂಬ ನ್ಯಾಯಾಧೀಶರು ವಿಚಾರಣೆ ಆಲಿಸಿದ್ದರೆ, ಕೊನೆಯ ತೀರ್ಪು ನೀಡಿದ ಗೋಪಾಲಕೃಷ್ಣ ಎಲ್ಲಾ ಹದಿನೇಳು ಜನ ಆರೋಪ ಮುಕ್ತರನ್ನಾಗಿಸಿ ತೀರ್ಪು ನೀಡಿದ್ದಾರೆ. ಅಂದ ಈ ಪ್ರಕರಣದಲ್ಲಿ ಎಂಬಿಬಿಎಸ್ ವ್ಯಾಸಂಗ ಮಾಡುತ್ತಿ ವಿದ್ಯಾರ್ಥಿಗಳಿರುವುದರಿಂದ ಅವರ ಭವಿಷ್ಯಕ್ಕೆ ಧಕ್ಕೆ ಆಗು ಕೇಸನ್ನು ಬೇಗ ಇತ್ಯರ್ಥಪಡಿಸಲು ನಿರ್ದೇಶನ ನೀಡು ವಕೀಲರಾದ ಜಾಲಗಾರ ಹಾಗೂ ಶಿರಳ್ಳಿಯ ಹೈಕೋರ್ಟ್‌ನಲ್ಲಿ ವಿನಂತಿಸಿದ್ದರು. ಅದರ ಫಲ 2013ರಿಂದ ಒಟ್ಟು 181 ದಿನ ವಿಚಾರಣೆ ನ ತೀರ್ಪು ಹೊರಬಿದ್ದಿದೆ.

ಅಷ್ಟಕ್ಕೂ ಈ ತೀರ್ಪಿನಿಂದ ಬಿಡುಗಡೆ ಕಾಣುತ್ತಿರೋದು ಕೇರಳ ಮೂಲದ ಇಂಜಿನಿಯರ್ ಯ ಕುಟ್ಟಿ, ಹುಬ್ಬಳ್ಳಿಯ ಅಲ್ಲಾ ಭಕ್ಷ್ ಯಾದವಾಡ ಬೆಂಗಳೂರಿನ ಸೈಯದ್ ಸಾದಿಕ್ ಸಮೀರ್ ಇನ್ನುಳಿದವರ ಮೇಲೆ ಬೇರೆಬೇರೆ ರಾಜ್ಯಗಳಲ್ಲಿ ರೀತಿ ಕೇಸುಗಳು ದಾಖಲಾಗಿರೋದರಿಂದ ಅವರನ್ನು ಜೈಲುಗಳಿಗೆ ರವಾನಿಸುವ ಕೆಲಸ ನಡೆಯುತ್ತಿದೆ.

-ಹುಬ್ಬಳ್ಳಿಯಾ

ಕಂಡದ್ದು ಕಂಡಂತೆ ಹೇಳಿದರೆ ರಾಘುನ ಕುಂಡೆಗೆ ಉರಿ!




ರಾಮಚಂದ್ರಾಪುರ ಮಠದ ಕಾಮೇಶ್ವರ ಸ್ವಾಮಿಯ ದ್ವೇಷ ಧರ್ಮದ ದಾದಾಗಿರಿ ಅವ್ಯಾಹತವಾಗಿ ಮುಂದುವರಿದಿದೆ! ತನ್ನ ಬಣ್ಣ ಬಯಲಾಗಿಸುವವರ ಬಗ್ಗುಬಡಿಯಲು ರಾಘು ಮಾಣಿ ಹಣ-ಪ್ರಭಾವ ಪ್ರಯೋಗಿಸುತ್ತಿರುವ ಪರಿ ಘನಘೋರವಾಗಿದೆ. ಸುಳ್ಳು-ಅಪಪ್ರಚಾರ-ಬಹಿಷ್ಕಾರ-ಧಮಕಿ ಮತ್ತು ಪೊಲೀಸರ ಛೂಬಿಡುವ ಮೂಲಕ ತನ್ನ ಬುರ್ನಾಸ್ ಬುದ್ಧಿಯ ಬಗ್ಗೆ ಮಾತಾಡುವವರನ್ನು ಆತ ಚಿತ್ರಹಿಂಸೆಗೀಡುಮಾಡಿ ಪೀಠ ಉಳಿಸಿಕೊಳ್ಳಲು ಹವಣಿಸುತ್ತಿದ್ದಾನೆ. ರಾಘು ತಾನು ಸಚ್ಚಾರಿತ್ರ್ಯದ ಯತಿವರ್ಯನೆಂದು ಅಮಾಯಕ ಅನುಯಾಯಿಗಳಿಗೆ ತೋರಿಸಿಕೊಳ್ಳಲು ತಿಪ್ಪರಲಾಗ ಹಾಕಿದಂತೆಲ್ಲ ಆತನ ಅತ್ಯಾಚಾರ-ಅನಾಚಾರ-ಅವ್ಯವಹಾರದ ವಸ್ತುನಿಷ್ಠ ಚರ್ಚೆಗೆ ತಂತಾನೆ ಬಿರುಸು ಬರುತ್ತಿದೆ.

ಹಾಗೆ ನೋಡಿದರೆ ರಂಗೀಲಾ ರಾಘುನ ಕಪಟ ಸನ್ಯಾಸತ್ವದ ಕುರಿತು ಗುಮಾನಿ-ಗೌಜಿ ಎದ್ದು ಹದಿನೈದು ವರ್ಷಗಳೇ ಕಳೆದಿದೆ; ಗೆಜ್ಜೆ-ಬಳೆಗಳ ನಿನಾದದಲ್ಲಿ ಮೈಮರೆಯುತ್ತ, ಸಂಗೀತ-ನೃತ್ಯ-ಯಕ್ಷಗಾನದಂಥ ಲಲಿತಕಲೆಗಳ ರಸಾಸ್ವಾದದಲ್ಲಿ ಸುಖಿಸುತ್ತ ಸ್ನಾನ-ಪೂಜೆ-ಅನುಷ್ಠಾನ ಸಮಯಕ್ಕೆ ಸರಿಯಾಗಿ ರಾಘು ಮಾಡುತ್ತಿಲ್ಲ ಎಂಬ ಬೇಸರ ಹವ್ಯಕ ಹಿರಿಯರಲ್ಲಿ ಮೂಡಿ ಆಗಾಗ ರಾದ್ಧಾಂತ-ರಗಳೆ ಮಠದಲ್ಲಿ ಆಗಿದ್ದೂ ಇದೆ. ಡಾ. ಟಿ.ಟಿ. ಹೆಗಡೆ, ಕೆ.ಎಚ್.ಶ್ರೀನಿವಾಸ್‌ರಂಥ ಹವ್ಯಕ ಮುತ್ಸದ್ದಿಗಳು, ದತ್ತಾತ್ರೇಯ ಹೊಸಬಾಳೆ, ಸಚ್ಚಿದಾನಂದ ಹೆಗಡೆ, ಚ.ಮ.ಕೃಷ್ಣಶಾಸ್ತ್ರಿಯಂಥ ಕಠೋರ ಸನಾತನವಾದಿ ಚೆಡ್ಡಿ ಚತುರರು ರಾಮಚಂದ್ರಾಪುರ ಮಠದ ಪೀಠಸ್ಥ ಗುರುವಿನ ಆಚರಣೆ ಶಂಕರಾಚಾರ್ಯ ಪರಂಪರೆಗೆ ತದ್ವಿರುದ್ಧವಾಗಿ ಸಾಗಿದೆ ಎಂಬ ಬಲವಾದ ಆಕ್ಷೇಪಗಳನ್ನು ಎತ್ತುತ್ತಲೇ ಬಂದಿದ್ದಾರೆ.

ಹವ್ಯಕರ ರಾಮಚಂದ್ರಾಪುರ ಮಠದ ಪೀಠಾಧಿಪತಿಯಾಗುವವನಿಗೆ ಶಂಕರಾಚಾರ್ಯ ವಿರಚಿತ 'ವಿವೇಕ ಚೂಡಾಮಣಿ' ಎಂಬ ಗ್ರಂಥವೇ ಸಂವಿಧಾನ! ಅದರ ಪ್ರಕಾರ ಗುರು ಆಗಿರಬೇಕೆಂದರೆ ಆತ ಸಾಧನ ಚತುಷ್ಟಯ ಸಂಪನ್ನನಾಗಿರಬೇಕು. ಶ್ರೋತ್ರಿಯನಾಗಿರಬೇಕು, ಶುದ್ಧ ಚಾರಿತ್ರನಾಗಿರಬೇಕು. ಆದರೆ ರಾಘುನ ಆಚಾರ-ವಿಚಾರ-ಆಚರಣೆಗಳೆಲ್ಲ ಆತ ಸನ್ಯಾಸತ್ವಕ್ಕೆ ಅನರ್ಹ ಎಂಬುದು ಸಾಬೀತುಪಡಿಸುವಂತಿದೆ. 2004ರ ಚಾತುರ್ಮಾಸ್ಯ ವ್ರತದ ಹೊತ್ತಲ್ಲಿ ರಾಘು ಅಲಂಕೃತ ಯುವತಿ ಒಬ್ಬಳ ನೊಸಳಿಗೆ ನಗು-ನಗುತ್ತ ರಾಘು ತಿಲಕವಿಟ್ಟಿದ್ದ. ಈ ಸ್ತ್ರೀ ಸಾಮೀಪ್ಯದ ಫೋಟೋ ಮಠದ ಮುಖವಾಣಿ "ಶ್ರೀಮುಖ"ದಲ್ಲೂ ಅಚ್ಚಾಗಿತ್ತು. ಆಗಲೇ ರಾಘು ಹೆಂಗಸರ ತಲೆ ಮೇಲೆ ಕೈಯಿಟ್ಟು ಆಶೀರ್ವದಿಸುವ, ಕಾಲಿಗೆ ಬಿದ್ದ ಹೆಣ್ಣುಗಳ ಭುಜ ಹಿಡಿದು ಎತ್ತುವ, ಕೆನ್ನೆ ಸವರಿ ಹಲ್ಲು ಕಿಸಿಯುವ ಪದ್ಧತಿ ನಾಜೂಕಾಗಿ ಅಳವಡಿಸಿಕೊಂಡಾಗಿತ್ತು. ಯಾರ್‍ಯಾರದೋ ಮುತ್ತೈದೆಯರಿಗೆ ಕುಂಕುಮಧಾರಣೆ ಮಾಡಿ ವಿಕೃತಾನಂದ ರಾಘು ಪಡೆಯುವುದು ಮಠದ ವಿಶಿಷ್ಟ ಆಚರಣೆಯಾಗಿ ಹೋಯ್ತು!

ಸನ್ಯಾಸಿಯಾದವನು ಯಾರನ್ನೂ ಮುಟ್ಟಬಾರದು, ಸ್ತ್ರೀಯರನ್ನಂತೂ ಎಂದಿಗೂ ಸ್ಪರ್ಶಿಸಲಾಗದು! "ಪರಾಪಿ ಯುವತೀಂ ಭಿಕ್ಷುಃ ನಸ್ಪೃಶೇತ್ ಧಾರವೀಮಪಿ.... ಅಂಗಸಂಗತಃ" ಎಂಬ ಉಕ್ತಿಯೇ ಇದೆ. ವೇದದ ನೀತಿ ಶ್ಲೋಕ, ವೇದ, ಮಂತ್ರ, ಪಠಿಸುವ ರಾಘುಗೆ ಮತ್ತಾತನ ಸಾಕುತ್ತ ಬೇಳೆ ಬೇಯಿಸಿಕೊಳ್ಳುತ್ತಿರುವ ಕೇಡಿ ಪತ್ರಕರ್ತನಿಗೆ ಇವೆಲ್ಲ ಗೊತ್ತಿಲ್ಲವಾ? ಮಠಾಂಧರಿಗಿದು ತಿಳಿಯದಾ? ರಾಘು ದಗಾಕೋರ ಉದ್ಯಮಿಗಳು, ಗೂಂಡಾಗಳು, ರಾಜಕಾರಣಿಗಳು ಬಂದರೆ ಮಡಿ-ಮೈಲಿಗೆ ನೋಡದೆ ಮಂತ್ರಾಕ್ಷತೆ, ಆಶೀರ್ವಾದ ನೀಡುತ್ತಾನೆ. ಸಾಮಾನ್ಯರು ಬಂದರೆ ಅಂ[illegible]ಲು ಹೊದ್ದುಕೊಂಡು ಮಡಿಯಲ್ಲಿ ಬಂದು ಅದ್ಧ [illegible]ಬಂತೆ ಹೇಳುತ್ತಾನೆ.

ಮಲ್ಲಿಕಾ ಶರಾವತ್‌ಳಂಥ ಬಾಲಿವುಡ್ ಬಿಚ್ಚಮ್ಮನನ್ನು ವಿಶೇಷ ಆಸಕ್ತಿಯಿಂದ ಮಠಕ್ಕೆ ಕರೆಸಿ ನೂರಾರು ಕಮಲದ ಹೂವಿಂದ ಅಲಂಕೃತ ಪೀಠದಲ್ಲಿ ಪ್ರತಿಷ್ಠಾಪಿಸಿ ತಾನು ಪಕ್ಕದಲ್ಲೇ ಕುಳಿತು ಕಳ್ಳನೋಟ ಬೀರುತ್ತಾನೆ. ಸನ್ಯಾಸಿ ಯಾವ ಮನೆಗೆ ಹೋಗಬಾರದೆಂದಿದೆ; ಹೋದರೂ ರಾತ್ರಿ ವಾಸ್ತವ್ಯ ಹೂಡಬಾರದೆಂಬುದು ಕಟ್ಟುನಿಟ್ಟಿನ ಸನ್ಯಾಸಸಂಹಿತೆ. ಆದರೆ ರಾಘು ಸ್ವಾಮಿ ಚೆಂದದ ಮುತ್ತೈದೆಯರು ಅಥವಾ ಎಳೆ ಪ್ರಾಯದ ಹೆಣ್ಣುಗಳಿರುವ ಮನೆ ಹುಡುಕಿ ತಾನೇ ಪಾದಪೂಜೆ-ಭಿಕ್ಷೆ ನೆಪದಲ್ಲಿ ಭಿಜಯಂಗೈಯ್ಯುತ್ತಾನೆ. ಅಲ್ಲೆ ಮೂರ್‍ನಾಲ್ಕು ದಿನ ಟೆಂಟ್ ಹಾಕಿ ಢೋಂಗಿ ಪ್ರವಚನ, ಆಶೀರ್ವಚನ ನಡೆಸಿ "ರಹಸ್ಯ ಕಾರ್ಯ ಸೂಚಿ" ಈಡೇರಿಸಿಕೊಂಡ ಹಲವು ಉದಾಹರಣೆಗಳಿವೆ. ಈ "ಮುತ್ತೈದೆ ಭಾಗ್ಯ"ದ ಬಗ್ಗೆ ಸಿಐಡಿ ವಿಶೇಷ ತನಿಖೆಯೂ



ನಡೆಸಿದೆ. ಶುದ್ಧ ಚಿತ್ತದಿಂದ ಶಿವ ಚಿಂತನೆಯಲ್ಲಿ ನಿರತವಾಗಬೇಕಾದ 'ಶಿವರಾತ್ರಿ ರಾತ್ರಿ'ಯಲ್ಲಿ ಗೋಕರ್ಣದ ಸಮುದ್ರ ತಟದಲ್ಲಿ ವಿದೇಶಿ ನರ್ತಕಿಯರಿಂದ ಡ್ಯಾನ್ಸ್ ಮಾಡಿಸಿ ಧನ್ಯನಾದ "ಕೀರ್ತಿ" ರಾಘುನದು!!


ಸೋಗಲಾಡಿ ಸನ್ಯಾಸಿ ರಾಘುನ ಸ್ತ್ರೀ ಲೋಲತೆ ಸುತ್ತ ಈಗ ದೊಡ್ಡ ಚರ್ಚೆ-ತರ್ಕ ಭುಗಿಲೆದ್ದಿದೆ! ಬ್ರಾಹ್ಮಣ ಸಮಾಜದಲ್ಲಿ, ಸಾಮಾಜಿಕ ಜಾಲತಾಣದಲ್ಲಿ ರಾಘುನ ವಿಕೃತಿಗಳ ಬಗ್ಗೆ ಚರ್ಚೆಗಳಾಗುತ್ತಿದೆ. ಈ ಕಚ್ಚೆ ಹರುಕ ಧರ್ಮ-ಮಠ-ಶ್ರೀರಾಮನ ಭಯ-ಭಕ್ತಿ ನೆಪ ಮಾಡಿಕೊಂಡು ಅಮಾಯಕ ಗೃಹಿಣಿಯರ, ಯುವತಿಯರ, ಅಪ್ರಾಪ್ತ ಬಾಲಕಿಯರ ಮೈ-ಮುಖ ಮುಟ್ಟಿ ಮಜಾ ತೆಗೆದುಕೊಳ್ಳುತ್ತಿರುವ ಭಾವಚಿತ್ರಗಳು ಜಾಲತಾಣದಲ್ಲೀಗ ಹರಿದಾಡುತ್ತಿವೆ. ಈ ಚರ್ಚೆಗಳಲ್ಲಿ ರಾಘುನ ಕಾಮಾತಿರೇಕ, ಕೊಳಕು ಸನ್ಯಾಸತ್ವದ ವಿಮರ್ಶೆ, ಟೀಕೆ, ಟಿಪ್ಪಣಿಗಳಾಗುತ್ತಿವೆಯೇ ಹೊರತು ಈತನ ಚಪಲಕ್ಕೆ ಬಲಿಯಾದ ಮುಗ್ಧ ಹೆಣ್ಣುಗಳ ಬಗ್ಗೆ ಯಾರೂ ಕೆಟ್ಟದಾಗಿ-ಮಾನಹಾನಿಕರವಾಗಿ ಅಭಿಪ್ರಾಯ ವ್ಯಕ್ತಪಡಿಸುತ್ತಿಲ್ಲ. ರಾಘುನ ವಿಕೃತಿ-ವಿಕಾರ-ಕಪಟ ಸನ್ಯಾಸತ್ವವೇ ಈ ಚರ್ಚೆಗಳ ವಸ್ತು.

ಜಾಲತಾಣದಲ್ಲಿ ತನ್ನ ಜನ್ಮ ಜಾಲಾಡುತ್ತಿರುವವರ ಹುಟ್ಟಡಗಿಸುವ ಹಠಕ್ಕೆ ರಾಘು ಬಿದ್ದಿದ್ದಾನೆ. "ಸತ್ಯಶೋಧ ಮಿತ್ರ ಮಂಡಳಿ" ನಡುವೆ ತನ್ನ ಕಳ್ಳಾಟದ ಫೋಟೋ-ಚರ್ಚೆ ಹರಿದಾಡಿದಂತೆಲ್ಲ ಈ ಸ್ತ್ರೀ ವ್ಯಾಮೋಹಿಗುರು ಮೈಪರಚಿಕೊಳ್ಳುತ್ತಿದ್ದಾನೆ. ಗೂಂಡಾಗಳ, ಪೊಲೀಸರ ಬಟ್ಟು ಟೀಕಾಕಾರರ ಬಾಯಿ ಮುಚ್ಚಿಸುವ ಮಸಲತ್ತು ಮಾಡುತ್ತಿದ್ದಾನೆ. ಜಾಲತಾಣದಲ್ಲಿ ರಾಘುನ ಕಾಮಕಥಾ ಬಿತ್ತರಿಸುವವರ ಮೇಲೆ ಮಠಾಂಧರು ಸುಳ್ಳು ಕೇಸುಗಳನ್ನು ಜಡಿಯುತ್ತಿದ್ದಾರೆ. ಅಟ್ರಾಸಿಟಿ ಮತ್ತು ಪೋಕ್ಸೋರಂಥ ಭೀಭತ್ಸ ದಂಡಪ್ರಯೋಗ ನಡೆಯುತ್ತಿದೆ. ನ್ಯಾಯಾಲಯವನ್ನೇ ದಿಕ್ಕುತಪ್ಪಿಸಿದ ರಾಘು ಗ್ಯಾಂಗ್ ಈಗ ಪೊಲೀಸರನ್ನು ದುರುಪಯೋಗಪಡಿಸಿಕೊಳ್ಳುತ್ತಿದೆ!!


ದುರಂತ ಎಂದರೆ, ಗಂಡಾಗುಂಡಿ ಗುರುವಿನ ಹುಸಿ ಪ್ರತಿಷ್ಠೆಗಾಗಿ ಮತಾಂಧ ಅನುಯಾಯಿಗಳು ತಮ್ಮ ಹೆಂಡತಿ-ಮಗಳು-ಕುಟುಂಬದ ಮಾನವನ್ನೇ ಪಣಕ್ಕಿಟ್ಟು ಗುದ್ದಾಡುವಂತಾಗಿದೆ!! ಇಂಥದೊಂದು ಇಚ್ಛಾ ಪ್ರಾರಬ್ಧ ಬಂಟವಾಳದ ವಿಟ್ಲದಲ್ಲಿ ಆಗಿದೆ. ಆತ "ಉದಯವಾಣಿ" ಪತ್ರಿಕೆಯ ಅರೆಕಾಲಿಕ ವರದಿಗಾರ ಮಹಾಶಯ. ಪಕ್ಕಾ ಮಠಾಂಧನಾದ ಈತನಿಗೆ ಹರೆಯಕ್ಕೆ ಬಂದಿರುವ ಮಗಳ ಭವಿಷ್ಯಕ್ಕಿಂತ ನೀತಿಗೆಟ್ಟ ಗುರು ರಾಘುನ "ಮಾನ" ಮುಖ್ಯವಾಗಿದೆ. ತಾನೊಬ್ಬ ಮಹಾ ಬುದ್ಧಿವಂತ ಪತ್ರಕರ್ತನೆಂಬ ಅಹಂ ಬೆಳೆಸಿಕೊಂಡಿರುವ ಈ ಎಡವಟ್ಟು ಆಸಾಮಿ ರಾಘು ಪಟಾಲಮ್‌ನ ಮಾತು ಕೇಳಿ ಮಗಳನ್ನು ಬೀದಿ ಚರ್ಚೆ ವಸ್ತುವಾಗಿಸಿದ್ದು ದುರಂತವೇ ಸರಿ.

ಒಂದು ವರ್ಷದ ಹಿಂದೆ ಈ "ಪೈ ವಾಣಿ" ಪತ್ರಿಕೆಯ ಬಿಡಿ ವರದಿಗಾರನ ಮನೆಗೆ ರಾಘು ಸವಾರಿ ಚಿತ್ತೈಸಿತ್ತು. ಆಗ ಶಿಷ್ಯ ಪರಿವಾರಕ್ಕೆ ರಾಘು ಮಂತ್ರಾಕ್ಷತೆ ಕೊಟ್ಟಿದ್ದ. ಆಗ ಬೆಳೆದುನಿಂತ ವರದಿಗಾರನ ಮಗಳಿಗೂ ಈ ಕಳ್ಳ ಸ್ವಾಮಿ ಮಂತ್ರಾಕ್ಷತೆ ನೀಡಿದ್ದಾನೆ. ಆಗ ಆ ಹುಡುಗಿ 9ನೇ ತರಗತಿಯ ಅಪ್ರಾಪ್ತೆ ಎಂಬುದು ತಂದೆಯ ವಾದ. ಆದರೆ ಫೋಟೋ ನೋಡಿದರೆ ಅಥವಾ ಆಕೆಯನ್ನು ನೋಡಿದರೆ "ಯುವತಿ"ಯಂತೆ ದೈಹಿಕವಾಗಿ ಬೆಳೆದಿರುವುದು ಎಂಥವರಿಗೂ ಕಾಣಿಸುತ್ತದೆ. ಇಂಥ ಹುಡುಗಿಗೆ ರಾಘು ಮಂತ್ರಾಕ್ಷತೆ ಕೊಡುವ ನೆಪದಲ್ಲಿ ಕೆನ್ನೆ ಸವರಿದ್ದಾನೆ. ಆಕೆ ನಿಷ್ಕಲ್ಮಶ ಭಕ್ತಿಯಿಂದ ಗುರುವನ್ನು ನೋಡುತ್ತ ನಗುತ್ತಿದ್ದರೆ, ರಾಘುನ ಮಂದಹಾಸದಲ್ಲಿ ಒಂಥರಾ ಮಾದಕತೆ ಎದ್ದು ಕಾಣುತ್ತದೆ.

ಈ ಫೋಟೋ ಬಿಡಿ ವರದಿಗಾರ ತನ್ನ ಫೇಸ್‌ಬುಕ್ ಅಕೌಂಟಿಗೆ ಹಾಕಿಕೊಂಡಿದ್ದ. ಅದನ್ನು ನೈಜೀರಿಯಾದಲ್ಲಿ ಶಾಂತಾರಾಮ ಹೆಗಡೆಕಟ್ಟೆ ಸತ್ಯಶೋಧ ಮಿತ್ರ ಮಂಡಳಿ ಗ್ರೂಪ್‌ಗೆ ಅಪ್‌ಲೋಡ್ ಮಾಡಿದ್ದಾರೆ. ರಾಘು ಭಂಗಿ ನೋಡಿ ತನಗೆ ಅನಿಸಿದ್ದನ್ನು ಕಮೆಂಟ್ ಮಾಡಿದ್ದಾರೆ. "ಸ್ತ್ರೀ, ಸ್ತ್ರೀ, ಸ್ತ್ರೀ ಕಾಮುಕೇಶ್ವರ ಸ್ವಾಮಿ" ಎಂದು ಆತ ಬರೆದಿದ್ದರು.



ಬಾಲಕೃಷ್ಣರಾಜ್ ನೀರ್ಚಲ್



ಶಾಂತಾರಾಮ ಹೆಗಡೆಕಟ್ಟೆ

ಈ ಫೋಟೋ ಕಮೆಂಟ್‌ಗೆ ಬಾಲಕೃಷ್ಣರಾಜ್ ನೀರ್ಚಲ್ ಶೇರ್ ಮಾಡಿದ್ದು... "ಆಹಾ ಎಂಥಹ ನಿಷ್ಕಲ್ಮಶ ಗುರು-ಶಿಷ್ಯೆಯ ಸಂಬಂಧ.... ಹೌದು ಇವರು ಏನು ಮಾಡುತ್ತಿದ್ದಾರೆ?" ಎಂದು ಬರೆದಿದ್ದಾರೆ. ಇದು ಅಂತರ್ಜಾಲದಲ್ಲಿ ಚರ್ಚೆಯಾಗುತ್ತಿದ್ದಂತೆ ರಾಘು ಸಿಟ್ಟಿಗೆದ್ದು ತಿಣುಕಾಡಿದ್ದಾನೆ. ಹಿಂದೊಮ್ಮೆ ಇದೇ ಶಾಂತಾರಾಮ ಹೆಗಡೆಕಟ್ಟೆ ಮೇಲೆ ಅಟ್ರಾಸಿಟಿ ಕೇಸು ಹಾಕಲು ವಿಫಲ ಯತ್ನ ಮಾಡಿ ಸೇಡು ತೀರಿಸಿಕೊಳ್ಳುವ ಹಠಕ್ಕೆ ಬಿದ್ದಿದ್ದ. ಅದೇ ಪ್ರಕಾರ ಬಾಲಕೃಷ್ಣ ರಾಜ್ ನೀರ್ಚಲ್ ಮೇಲೂ ರಾಘು ಪಟಾಲಮ್ ದ್ವೇಷವಿತ್ತು. ರಾಘುನ ಜೀವವಿಮಾ ಕಂತು ಕಟ್ಟಿದ್ದ ಹೆಂಗಸಿನ ಫೋಟೋ ಅಂತರ್ಜಾಲದಲ್ಲಿ ತಿರುಗಾಡಿದಾಗಲೂ ಇಂಥದೇ ಭಾನ್ಗಡಿ ರಾಘು ಬಳಗ ಎಬ್ಬಿಸಿತ್ತು. ನೀರ್ಚಲ್‌ನಿಂದ ಆ ಹೆಂಗಸಿನ ಮಾನಹಾನಿಯಾಗಿದೆ ಎಂದಾಕೆಯ ಗಂಡ ಕಂಪ್ಲೇಂಟು ಕೊಟ್ಟಿದ್ದ. ಫಿರ್ಯಾದುದಾರ ಬೇರೆ ಯಾರೂ ಅಲ್ಲ, ಮಠದ ಶಾನುಭೋಗ ಅರ್ಥಾತ್ ರಾಘುನ ಪರ್ಸನಲ್ ಅಸಿಸ್ಟೆಂಟ್! ಆ ಕೇಸಿನಲ್ಲಿ ನೀರ್ಚಲ್‌ಗೆ ಏನೂ ಮಾಡಲಾಗಿರಲಿಲ್ಲ ರಾಘುನ "ನಾವಿದ್ದೇವೆ" ಗೂಂಡಾ ಪಡೆಗೆ.

ವಿಟ್ಲದ ಹುಡುಗಿಯ ಕೆನ್ನೆ ಸವರುವ ಫೋಟೋ ಮತ್ತು ಕಮೆಂಟ್ ಕೇಸಲ್ಲಿ ನೀರ್ಚಲ್ ಹಾಗು ಹೆಗಡೆಕಟ್ಟೆಯನ್ನು ಹಣಿಯಲು ರಾಘು ತಂಡ ಸ್ಕೆಚ್ ಹಾಕಿದೆ. ತನ್ನ ಮಗಳ ಮಾನಹಾನಿ ನೀರ್ಚಲ್-ಹೆಗಡೆಕಟ್ಟೆ ಮಾಡಿದ್ದಾರೆಂದು ಬಿಡಿ ಸುದ್ದಿಗಾರ ವಿಟ್ಲ ಠಾಣೆಯಲ್ಲಿ ದೂರು ದಾಖಲಿಸುವಂತೆ ಮಠ ಮಾಫಿಯಾ ನೋಡಿಕೊಂಡಿದೆ. ಪ್ರೇಮಲತಾ ದಂಪತಿಗಳ ಮೇಲೆ ಬ್ಲಾಕ್‌ಮೇಲ್ ಕೇಸು ಮಠ ಪರಿವಾರ ಹಾಕುವ ಮುನ್ನ ಹೇಗೆ ಹೊನ್ನಾವರ ಪೊಲೀಸರನ್ನು ಬುಕ್ ಮಾಡಿತ್ತೋ ಅದೇ ಶೈಲಿಯಲ್ಲಿ ವಿಟ್ಲದ ಪೊಲೀಸರನ್ನೂ ಬುಟ್ಟಿಗೆ ಹಾಕಿಕೊಳ್ಳಲಾಗಿದೆ. ಬಿಡಿ ವರದಿಗಾರನ ಕಂಪ್ಲೇಂಟು "ಕರ್ತವ್ಯನಿಷ್ಠೆ"ಯಿಂದ ಸ್ವೀಕರಿಸಿದ ವಿಟ್ಲದ ಅನಾಹುತಕಾರಿ ಪೊಲೀಸರು ಹಿಂದೆ-ಮುಂದೆ ನೋಡದೆ "ಪೋಕ್ಸೋ" ಕೇಸು ಜಡಿದು ರಾಘುನ "ಮಂತ್ರಾಕ್ಷತೆ"ಯ ಅನುಗ್ರಹಕ್ಕೆ ಪಾತ್ರವಾಗಿದೆ!


ಆ ಫೇಸ್‌ಬುಕ್ ಚರ್ಚೆಯಲ್ಲಿ ರಾಘುನ ಜೊತೆಗಿರುವ ಹುಡುಗಿಯ ಬಗ್ಗೆ ಒಂದೇ ಒಂದು ಮಾತಿಲ್ಲ; ಟೀಕೆಯಿಲ್ಲ; ಅಪಮಾನಕರ ಶಬ್ದವಿಲ್ಲ; ಚಾರಿತ್ರ್ಯಹನನವಾಗಿಲ್ಲ. ಆದರೆ ಆಕೆಯ ಅಪ್ಪನಿಗೆ ಮಗಳ ಮಾನಹರಣ ಆದಂತೆ ಭಾಸವಾಗಿರುವುದು ಹಾಸ್ಯಾಸ್ಪದ. ಫೇಸ್‌ಬುಕ್ ಚರ್ಚೆಯ ಗುರಿ ರಾಘುನ ಸ್ತ್ರೀಚಪಲ; ಢೋಂಗಿ ಸನ್ಯಾಸತ್ವವೇ ಹೊರತು ಪಾಪದ ಹುಡುಗಿ ಅಲ್ಲವೇ ಅಲ್ಲ. ಹೀಗಿರುವಾಗ ವಿಟ್ಲದ ಖಾಕಿ ಕಿರಾತಕರು "ಪೋಕ್ಸೋ" ಕೇಸು ಹಾಕುತ್ತಾರೆಂದರೆ, ಇದು ರಾಘುನ ಷಡ್ಯಂತ್ರವಲ್ಲದೆ ಬೇರೇನೂ ಅಲ್ಲ! ಹೇಗಾದರೂ ಮಾಡಿ ನೀರ್ಚಲ್ ಮತ್ತು ಹೆಗಡೆಕಟ್ಟೆಯನ್ನು ಜೈಲಿಗೆ ಕಳಿಸಿ ತನ್ನ ವಿರೋಧಿಗಳಿಗೆ ಎಚ್ಚರಿಕೆ ಸಂದೇಶ ರವಾನಿಸಿ ಶಕ್ತಿ ಪ್ರದರ್ಶನ ಮಾಡುವ ರಾಘುನ ಹಿಕಮತ್ತಿದಷ್ಟೇ!

ಸುಳ್ಳು "ಪೋಕ್ಸೋ" ಕೇಸು ಹಾಕಿದ ಪೊಲೀಸ್ ಅಧಿಕಾರಿಗಳನ್ನು ತಕ್ಷಣ ಗೃಹಮಂತ್ರಿ ಜಾರ್ಜ್ ಮನೆಗೆ ಕಳಿಸಬೇಕಾಗಿದೆ. ಹೀಗೆ ಕಾವಿ ಪ್ರಭಾವಕ್ಕೆ ಪಕ್ಕಾಗಿ ಖಾಕಿ ಖದರು ಕಳೆಯುವ ಹೇತ್ಲಾಂಡಿ ಪೊಲೀಸರಿಂದಾಗಿಯೇ ರಾಘು ಇಷ್ಟು ದಿನ ಬಚಾವಾಗಿರುವುದು. ಕಾನೂನು ಕೊಲ್ಲುವ ದಕ್ಷಿಣ ಕನ್ನಡದ ಪೊಲೀಸರಿಗೆ ಸಿದ್ದು ಸರ್ಕಾರದಿಂದ ಪಾಠ ಮಾಡಲಾಗದಿರುವುದು ನಿಜಕ್ಕೂ ನಾಚಿಕೆಗೇಡು. ಹಾಗೆಯೇ ಫೋಟೋದಲ್ಲಿರುವ ಹುಡುಗಿ ಅಪ್ರಾಪ್ತೆಯೋ ಅಥವಾ ಪ್ರಾಪ್ತೆಯೋ ಎಂಬುದು ಸಂನ್ಯಾಸಸಂಹಿತೆಗೆ ಒಳಪಡದ ಅಂಶ. ಹೆಣ್ಣು ಹೇಗೇ ಇರಲಿ; ವಯಸ್ಸು ಎಷ್ಟೇ ಇರಲಿ ಸ್ವಾಮಿಯಾದವನು ಮುಟ್ಟುವುದು ನಿಷಿದ್ಧ. ಅದರಲ್ಲೂ 9ನೇ ತರಗತಿಗೆ ಹೋಗುವ ಹುಡುಗಿಯ ಮೈ ಮುಟ್ಟುವ ಅನಿವಾರ್ಯತೆ ರಾಘು ಸ್ವಾಮಿಗೆ ಏನಿತ್ತು.

ಈಗ ವಿಟ್ಲದ ಪೊಲೀಸರು ಇಕ್ಕಟ್ಟಿಗೆ ಸಿಲುಕಿದ್ದಾರೆ. ನೈಜೀರಿಯಾದಲ್ಲಿರುವ ಹೆಗಡೆಕಟ್ಟೆಯನ್ನು ಹಿಡಿಯಲು ಆಗುತ್ತಿಲ್ಲ; ನೀರ್ಚಲ್‌ರನ್ನಾದರೂ ಜೈಲಿಗೆ ದಬ್ಬಿ ಎಂದು ಮಠ ಮಾಫಿಯಾ ಒತ್ತಡ ಹೇರುತ್ತಿದೆ. ಸ್ವಾಮಿ ಪರಿವಾರದ ಮಾತು ಕೇಳಿ "ಪೋಕ್ಸೋ" ಕೇಸು ಸುಳ್ಳು-ಸುಳ್ಳೇ ಹಾಕಿರುವ ಪೊಲೀಸರು ಅಷ್ಟು ಸುಲಭಕ್ಕೆ ಬಚಾವಾಗೋದು ಕಷ್ಟ. ಬಿಡಿ ವರದಿಗಾರ ಗುರುಗಳ ಸಂಪ್ರೀತಗೊಳಿಸಲು ಢೋಂಗಿ ಫಕೀರನಂತಾಗಿದ್ದಾನೆ. ತನ್ನ ಮಗಳ ಮಾನ ತಾನೇ ಹರಾಜು ಹಾಕುತ್ತಿದ್ದಾನೆ. ಆ ಹುಡುಗಿಗೆ ಫೇಸ್ ಬುಕ್ಕಿಗಿಂತ ಹೆಚ್ಚು ಅವಮಾನ-ಮುಜುಗರ ಹೆತ್ತ ಅಪ್ಪ ಮತ್ತು ಹಾಳಿದ ಕುಲ ಗುರುವೇ ಮಾಡುತ್ತಿರುವುದು ವಿಪರ್ಯಾಸ!

■ ಶುದ್ಧೋಧನ

ಮಂಡ್ಯ ನಗರಸಭೆ: ಫೈನಲ್ ಕಾಳಗಕ್ಕೆ ಮುಹೂರ್ತ ಫಿಕ್


ಸಿದ್ದರಾಜು

ಮಂಡ್ಯ ನಗರಸಭೆ ಅಧ್ಯಕ್ಷಗಾದಿ ಕಾಳಗ ಫೈನಲ್ ಘಟ್ಟ ತಲುಪಿದಂತೆ ಕಾಣುತ್ತಿದೆ. ಅಂಬಿಯ ಕುಮ್ಮಕ್ಕಿನಿಂದಲೇ ಅಧ್ಯಕ್ಷನಾಗಿ ಕೊನೆಗೆ ಗುರುವಿಗೇ ತಿರುಮಂತ್ರ ತೀಡಿದ್ದ ಹಾಲಿ ಅಧ್ಯಕ್ಷ ಸಿದ್ದರಾಜು ತನ್ನ ಕಾಂಚಾಣ ಬಲದಿಂದ ಸದಸ್ಯರನ್ನು ಖರೀದಿಸಿ ಗಾದಿ ಬಿಟ್ಟು ಕೆಳಗಿಳಿಯದೆ ಸತಾಯಿಸಿದ್ದ. ಇದನ್ನು ಪ್ರತಿಷ್ಠೆಯ ವಿಷಯವಾಗಿ ತೆಗೆದುಕೊಂಡ ಅಂಬಿ ಪರಮಾಪ್ತ ಮಂಡ್ಯ ಡಿಫ್ಯಾಕ್ಟೊ ಮಿನಿಸ್ಟರ್ ಅಮರಾವತಿ ಚಂದ್ರಶೇಖರ್, ಸಿದ್ದರಾಜು ದೊಂಬರಾಟಕ್ಕೆ ಬ್ರೇಕ್ ಹಾಕಲು ಎಲ್ಲಾ ತಯಾರಿ ಮಾಡಿಕೊಂಡು ಮೇ 14ಕ್ಕೆ ಮುಹೂರ್ತವನ್ನೂ ಫಿಕ್ಸ್ ಮಾಡಿಕೊಂಡು ಕೂತಿದ್ದಾನೆ. ಕಳೆದ 5 ತಿಂಗಳಿನಿಂದ ನಯಾಪೈಸೆ ಅಭಿವೃದ್ಧಿ ಕೆಲಸ ಮಾಡದೆ ಕೇವಲ ತನ್ನ ಅಧ್ಯಕ್ಷ ಸ್ಥಾನವನ್ನು ಉಳಿಸಿಕೊಳ್ಳಲು ಕ್ರಿಮಿನಲ್ ಬ್ರೈನ್‌ನಲ್ಲಿರುವ ಅಸ್ತ್ರಗಳನ್ನು ಬಿಡುತ್ತಿರುವ ಸಿದ್ದರಾಜು ಕೂಡಾ ಸುಮ್ಮನೇ ಕೂತಿಲ್ಲ. ಆದರೆ ಈ ಬಾರಿ ಆತನನ್ನು ಬಚಾವು ಮಾಡಲು ಪವಾಡವೇ ನಡೆಯಬೇಕಷ್ಟೆ.

ಮೂರೂ ಬಿಟ್ಟವರು

ಸಿದ್ದರಾಜು ವಿರುದ್ಧ ಅವಿಶ್ವಾಸ ಮಂಡಿಸಲು ಮೇ 14ರಂದು ನಗರಸಭೆ ಸದಸ್ಯರ ಸಭೆ ಕರೆಯಲಾಗಿದೆ. ಸಭೆಯನ್ನು ವಿಫಲಗೊಳಿಸಲು ಸಿದ್ದರಾಜು ಡಿಸಿ ಕೋರ್ಟ್, ಹೈಕೋರ್ಟ್ ಎಂದೆಲ್ಲಾ ಅರೆಹುಚ್ಚನಂತೆ ಗರಗರ ಸುತ್ತುತ್ತಿದ್ದಾನೆ. ಹಡಬಿಟ್ಟ ದುಡ್ಡನ್ನು ಎರಚುತ್ತಿರುವ ಸಿದ್ದರಾಜುಗೆ ಈ ಬಾರಿ ಅಧ್ಯಕ್ಷ ಸ್ಥಾನ ಉಳಿಸಿಕೊಳ್ಳುವುದು ಕಷ್ಟ ಎಂಬುದು ಮನದಟ್ಟಾಗಿರುವುದರಿಂದ ಕಂಡಕಂಡವರ ಮೇಲೆ ಏರಿಹೋಗುತ್ತಾ ತನ್ನ ವಿರುದ್ಧವಿರುವ ಸದಸ್ಯರ ಬುಡಕ್ಕೆ ಕೈಯಿಡುತ್ತಾ ವ್ಯಗ್ರನಾಗಿ ವರ್ತಿಸುತ್ತಿದ್ದಾನೆ. ಒಪ್ಪಂದದಂತೆ ಅವಧಿ ತರುವಾಯ ಅಧ್ಯಕ್ಷ ಸ್ಥಾನ ಬಿಟ್ಟುಕೊಟ್ಟು ಮಾನ ಉಳಿಸಿಕೊಳ್ಳದ ಸಿದ್ದರಾಜು ಅಧಿಕಾರಕ್ಕಾಗಿ ಚರಂಡಿ ಮಟ್ಟಕ್ಕೆ ಇಳಿದಿದ್ದರಿಂದ ಜನರ ಕಣ್ಣಲ್ಲಿ ಆತನ ಇಮೇಜು ಕೂಡ ಚರಂಡಿ ಮಟ್ಟಕ್ಕೆ ಕುಸಿದುಹೋಗಿದೆ.

ಕಳೆದ ನಾಲ್ಕು ತಿಂಗಳಿಂದ ಅಧ್ಯಕ್ಷ ಸ್ಥಾನದಿಂದ ಸಿದ್ದರಾಜುನನ್ನು ಕೆಳಗಿಳಿಸಲು ಅಂಬಿಯ ಬಲಗೈಭಂಟ ಅಮರಾವತಿ ಚಂದ್ರಶೇಖರ್ ತಿಪ್ಪರಲಾಗ ಹಾಕುತ್ತಿದ್ದರೂ ಅದು ಸಾಧ್ಯವಾಗುತ್ತಿಲ್ಲ. ಮಾ.31ರಂದು ಸಿದ್ದರಾಜು ಕರೆದಿದ್ದ ಬಜೆಟ್ ಸಭೆಗೆ ಕೋರಂ ಇಲ್ಲದಂತೆ ಮಾಡಲು ಅಮರಾವತಿ ಚಂದ್ರು ಜೆಡಿಎಸ್‌ನ ಜಂಟಿ ಸ್ವಾಮಿಗಳಾದ ಕುಮಾರಸ್ವಾಮಿ ಹಾಗೂ ಚಲುವರಾಯಸ್ವಾಮಿಯನ್ನು ವಿಧಾನಸೌಧದಲ್ಲಿ ಭೇಟಿ ಮಾಡಿ ಬೆಂಬಲ ಪಡೆದಿದ್ದರು. ತಮ್ಮ ಪಕ್ಷದ 9 ಮಂದಿ ಸದಸ್ಯರನ್ನು ಬಜೆಟ್ ಸಭೆಗೆ ಹಾಜರಾಗದಂತೆ ತಡೆಯಬೇಕೆಂದು ವಿನಂತಿಸಿದ್ದರು. ಇದಕ್ಕೆ ಕುಮಾರಸ್ವಾಮಿ ಹಾಗೂ ಚಲುವರಾಯಸ್ವಾಮಿ ಅಸ್ತು ಎಂದಿದ್ದರು. ಆದರೆ ಸಿದ್ದರಾಜು 'ಮನಿ' ಮೋಡಿಗೆ ಶರಣಾದ ಮಾಜಿ ಶಾಸಕ ಎಂ.ಶ್ರೀನಿವಾಸ್ ತನ್ನ ಬೆಂಬಲಿಗ ಸದಸ್ಯರಾದ ಮುಜಾಯಿದ್, ಶಿವರತ್ನ, ಸುಮಿತ್ರ, ಮಧುಶ್ರೀ ಹಾಗೂ ಷುಗರ್‌ಟೌನ್ ಬೋರೇಗೌಡರನ್ನು ಬಜೆಟ್ ಸಭೆಗೆ ಹಾಜರಾಗುವಂತೆ ತಿಳಿಸಿ ಫೋನ್ ಸ್ವಿಚ್‌ಆಫ್ ಮಾಡಿಕೊಂಡು ಶಬರಿಮಲೆ ಯಾತ್ರೆಗೆ ತೆರಳಿ ವರಿಷ್ಠರಾದ ಕುಮಾರಣ್ಣ ಹಾಗೂ ಚಲುವಣ್ಣನಿಗೆ ಚಾಪಾಳ ಮಾತ್ರೆ ನುಂಗಿಸಿದ್ದರು. ಇನ್ನು ಕುಮಾರಣ್ಣನಿಗೆ ಮಾತೇ ವೇದವಾಕ್ಯ ಎಂದು ಹೂಂಗುಟ್ಟಿದ ಶ್ರೀನಿವಾಸ್ ಬೆಂಬಲಿಗ ಸದಸ್ಯರು ಸಿದ್ದರಾಜು ಕೊಟ್ಟ ಎಂಜಲುಕಾಸಿಗೆ ಕೈಯೊಡ್ಡಿ ಬಜೆಟ್ ಸಭೆಗೆ ಹಾಜರಾಗಿ ಕೋರಂ ಸಿಗುವಂತೆ ಮಾಡಿದ್ದರು.

ಶಿವರತ್ನ ಹಾಗೂ ಸುಮಿತ್ರ ಇತ್ತ ಅಮರಾವತಿ ಚಂದ್ರಣ್ಣ ಕೊಟ್ಟ 1 ಲಕ್ಷ ಹಣವನ್ನು ಪಡೆದು ಕೂಡ ಸಿದ್ದರಾಜುನ ಬಜೆಟ್ ಸಭೆಗೆ ಹಾಜರಾಗಿದ್ದರು. ಎಂದರೆ ಸಿದ್ದರಾಜು ಇವರಿಬ್ಬರ ಉಡಿಗೆ ಅದೆಷ್ಟು ದುಡ್ಡು ತುಂಬಿದ್ದಿರಬೇಡ.

ಅಧ್ಯಕ್ಷಗಾದಿಗೆ ಸಿದ್ದರಾಜು ಫೆವಿಕಲ್ ಅಂಟಿಸಿಕೊಂಡು ಕೂತಿದ್ದರೆ, ಇತ್ತ ಕಾಂಗ್ರೆಸ್ ಪಕ್ಷದಿಂದ ಗೆದ್ದು ಅಂಬರೀಶ್ ಹಾಗೂ ಅಮರಾವತಿ ಚಂದ್ರಶೇಖರ್ ಕೃಪೆಯಿಂದ ಉಪಾಧ್ಯಕ್ಷೆಯಾಗಿರುವ ಚಂದ್ರಕಲಾ ಮೇಡಮ್ಮು ಕೂಡ ಕಾಮಗಾರಿಯಲ್ಲಿ ಬರುವ ಪರ್ಸೆಂಟೇಜ್ ಎಂಬ ಎಂಜಲು ಕಾಸಿನ ರುಚಿ ಕಂಡು ಉಪಾಧ್ಯಕ್ಷೆ ಸ್ಥಾನದಿಂದ ಇಳಿಯೋಲ್ಲ ಎಂದು ಸಿದ್ದರಾಜು ಜೊತೆ ಸೇರಿ ಸೆಡ್ಡು ಹೊಡೆದಿದ್ದಾರೆ. ಒಟ್ಟಿನಲ್ಲಿ ಇವರೆಲ್ಲಾ ಮೂರು ಬಿಟ್ಟವರು ಊರಿಗೆ ದೊಡ್ಡವರು ಎಂಬ ಗಾದೆ ಮಾತಿಗೆ ಸಾಕ್ಷಿಯಾಗಿದ್ದಾರೆ.

ಕ್ರಿಮಿನಲ್ ಸಿದ್ದರಾಜು

ಪಕ್ಷೇತರ ಸದಸ್ಯನಾದ ಸಿದ್ದರಾಜುನನ್ನು ಅಧ್ಯಕ್ಷ ಸ್ಥಾನಕ್ಕೆ ಏರಿಸುವಂತೆ ಅಮರಾವತಿ ಚಂದ್ರಶೇಖರನನ್ನು ದಾರಿ ತಪ್ಪಿಸಿದ್ದೇ ಸಿದ್ದರಾಜು ಆಪ್ತ ಮಿತ್ರರಾದ ಪುರುಷೋತ್ತಮ, ಮೆಡ್ಡಾಚಂದ್ರ, ಸಾತನೂರು ನಾಗ, ಅಂಬುಜಮ್ಮನ ಅಳಿಯ ಚಂದ್ರು ಮೊದಲಾದವರು. ಸಿದ್ದರಾಜು ಇವರಿಗೆಲ್ಲಾ ಅದೇನು ಮೋಡಿ ಮಾಡಿದನೋ ಗೊತ್ತಿಲ್ಲ, ಇವರೆಲ್ಲಾ ಅಮರಾವತಿ ಚಂದ್ರುನ ಬೆನ್ನುಬಿದ್ದು ಅಧ್ಯಕ್ಷ ಸ್ಥಾನಕ್ಕೆ ಏರಿಸುವಂತೆ ತಲೆ ತಿಂದರು. ಇವರ ಮಾತಿಗೆ ಕಟ್ಟುಬಿದ್ದ ಅಮರಾವತಿ ಚಂದ್ರು ಗುರು ಅಂಬರೀಶ್ ಬೆನ್ನು ಬಿದ್ದು ಪಕ್ಷೇತರ ಸದಸ್ಯರನ್ನು ಖರೀದಿಸಿದ್ದ ಸಿದ್ದರಾಜುನನ್ನು ನಗರಸಭೆ ಅಧ್ಯಕ್ಷರನ್ನಾಗಿ ಮಾಡೇಬಿಟ್ಟರು. ಕಾಂಗ್ರೆಸ್‌ನಿಂದ ಮೂರು ಬಾರಿ ಗೆದ್ದಿದ್ದ ಹೊಸಹಳ್ಳಿ ಬೋರೇಗೌಡ, ಲೋಕೇಶರನ್ನು ಬಿಟ್ಟು ದುಡ್ಡಿನ ಕುಳ ಸಿದ್ದರಾಜುನನ್ನು 15 ತಿಂಗಳ ಅವಧಿಗೆ ಅಧ್ಯಕ್ಷ ಸ್ಥಾನದಲ್ಲಿ ಕೂರಿಸಿದ್ದರು. ಆದರೆ 15 ತಿಂಗಳಾದರೂ ಸಿದ್ದರಾಜು ಅಧ್ಯಕ್ಷ ಸ್ಥಾನ ಬಿಟ್ಟುಕೊಡಲೇ ಇಲ್ಲ ಮಾತ್ರವಲ್ಲ ಅಂತಹ ಯಾವ ಒಪ್ಪಂದವೂ ಆಗಿಲ್ಲ ಅಂತ ಕೈಯೆತ್ತಿಬಿಟ್ಟ.


ಸಿದ್ದರಾಜು ಭಂಡತನದಿಂದ 15 ತಿಂಗಳ ಅಧಿಕಾರ ಅನುಭವಿಸಿ ಅದರ ಮೇಲೆ ಮತ್ತೆ 5 ತಿಂಗಳ ಅಧಿಕಾರ ನಡೆಸಿದ್ದಾನೆ. ಉಳಿದಿರುವ 10 ತಿಂಗಳ ಅಧಿಕಾರವನ್ನು ಬೇರೆಯವರಿಗೆ ಕೊಡಿಸಬೇಕಾದ್ದು ಅಮರಾವತಿ ಚಂದ್ರುನಿಗೆ ಪ್ರತಿಷ್ಠೆ ಪ್ರಶ್ನೆಯಾಗಿದೆ. ಈಗಾಗಲೇ 22 ಸದಸ್ಯರನ್ನು ಕಲೆಹಾಕಿರುವ ಅಮರಾವತಿ ಚಂದ್ರು ಅವರಿಂದಲೇ ಸಿದ್ದರಾಜುಗೆ ಅವಿಶ್ವಾಸ ಮಂಡನೆ ಸಭೆ ಕರೆಯುವಂತೆ ಒತ್ತಾಯಿಸುವ ಪತ್ರವನ್ನು ಕೊಡಿಸಿದ್ದರು. ಆದರೆ ಆ ಪತ್ರವನ್ನು ಎಡಗೈಲೂ ಮುಟ್ಟದ ಸಿದ್ದರಾಜು ತನ್ನ ವಿರುದ್ಧ ನಿಂತಿರುವ ಸದಸ್ಯರಿಗೆ ಕಿರುಕುಳ ನೀಡಲು ತನ್ನ ಕ್ರಿಮಿನಲ್ ಬುದ್ಧಿಯನ್ನು ಪ್ರಯೋಗಿಸಲಾರಂಭಿಸಿದ. ಅದರಂತೆ ತನ್ನ ವಿರುದ್ಧ ನಿಂತು ಅವಿಶ್ವಾಸಕ್ಕೆ ಸಹಿಹಾಕಿದ್ದ ಸದಸ್ಯರಾದ ಮಧುಸೂದನ್ 3 ಸಾಮಾನ್ಯಸಭೆಗೆ ಹಾಗೂ ಶಹಜಹಾನ್ 4 ಸಭೆಗಳಿಗೆ ಅನುಮತಿ ಪಡೆಯದೆ ಗೈರುಹಾಜರಾಗಿದ್ದಾರೆ. ಹಾಗಾಗಿ ಅವರು ಸದಸ್ಯರಾಗಿ ಮುಂದುವರಿಸಲು ಅನರ್ಹರೆಂದು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ದೂರು ದಾಖಲಿಸಿದ ಸಿದ್ದರಾಜು ಇವರಿಬ್ಬರ ಸದಸ್ಯತ್ವವನ್ನು ಕೂಡಲೇ ರದ್ದುಗೊಳಿಸುವಂತೆ ಮನವಿ ಮಾಡಿದ್ದ. ಕೇವಲ ಅಧಿಕಾರವನ್ನು ಉಳಿಸಿಕೊಳ್ಳಲು ಇಂತಹ ಕೆಳಮಟ್ಟಕ್ಕೆ ಇಳಿದ ಸಿದ್ದರಾಜು ಜಿಲ್ಲಾಧಿಕಾರಿ ಅಜಯ್‌ನಾಗಭೂಷಣ್‌ಗೆ ಕಾನೂನಿನ ಪಾಠ ಹೇಳಲು ಹೋಗಿದ್ದ. ಇದರಿಂದ ಸಿಟ್ಟಾದ ಡಿಸಿ ಅಜಯ್‌ನಾಗಭೂಷಣ್ 'ನನಗೆ ಕಾನೂನಿನ ಅರಿವು ಸಾಕಷ್ಟಿದೆ. ನಿಮ್ಮಿಂದ ಕಲಿಯಬೇಕಿಲ್ಲ' ಎಂದು ಹೇಳಿ ಕಳುಹಿಸಿದ್ದರು.

ಜಿಲ್ಲಾಧಿಕಾರಿಗಳ ಮಾತಿನಿಂದ ಮತ್ತಷ್ಟು ಕ್ರುದ್ಧನಾದ ಸಿದ್ದರಾಜು ಡಿಸಿ ಕಚೇರಿ ಮುಂದೆ ಗುತ್ತಿಗೆ ಪೌರಕಾರ್ಮಿಕರ ಸಂಘದ ಎಂ.ಬಿ.ನಾಗಣ್ಣ ಕಾಣಿಸುತ್ತಿದ್ದಂತೆ ತಾಳ್ಮೆ ಕಳೆದುಕೊಂಡು ಗುತ್ತಿಗೆ ಪೌರಕಾರ್ಮಿಕರಿಗೆ ನಾಲ್ಕು ತಿಂಗಳಿನಿಂದ ಸಂಬಳ ಕೊಟ್ಟಿಲ್ಲದಿರುವ ಬಗ್ಗೆ ಪತ್ರಿಕಾಗೋಷ್ಠಿ ನಡೆಸಿದ್ದನ್ನೇ ಮುಂದಿಟ್ಟುಕೊಂಡು ಗುತ್ತಿಗೆ ಪೌರಕಾರ್ಮಿಕರಿಗೂ ನಗರಸಭೆಗೂ ಯಾವುದೇ ಸಂಬಂಧವಿಲ್ಲ. ಗುತ್ತಿಗೆದಾರರು ಸಂಬಳ ಕೊಡಬೇಕು ಎಂದೆಲ್ಲಾ ರೋಪು ಹಾಕಿದ ಸಿದ್ದರಾಜು 'ಪತ್ರಿಕಾಗೋಷ್ಠಿ ಏಕೆ ನಡೆಸಿದೆ' ಎಂದು ನಾಗಣ್ಣನನ್ನು ಕೇಳಿದ್ದಾನೆ. ಪತ್ರಿಕಾಗೋಷ್ಠಿ ನಡೆಸುವುದು ನಮ್ಮ ಹಕ್ಕು, ನಾಲ್ಕು ತಿಂಗಳಿನಿಂದ ಸಂಬಳ ಕೊಡಲಿಲ್ಲದ ಕಾರಣಕ್ಕೆ ಮಾಧ್ಯಮದ ಮುಂದೆ ಹೋಗಿದ್ದೇನೆ ಎನ್ನುತ್ತಿದ್ದಂತೆ ಸಿಟ್ಟಿಗೆದ್ದ ಸಿದ್ದರಾಜು 'ನಿನ್ನ ನೋಡಿದೀನಿ, ನೀನ್ಯಾವ ರೀತಿ ಹೋರಾಟಗಾರ ಅಂತ ಗೊತ್ತು, ನಿನ್ನ ಅಕ್ರಮಗಳನ್ನು ಬಯಲಿಗೆ ತರುತ್ತೇನೆ' ಎಂದೆಲ್ಲಾ ಹುಚ್ಚನಂತೆ ಕಿರುಚಾಡಿದ್ದಾನೆ.

ಇನ್ನು ಸ್ಥಾಯಿ ಸಮಿತಿ ಅಧ್ಯಕ್ಷ ಸ್ಥಾನ ನಿನಗೆ ಎಂದು ಮಾಜಿ ಶಾಸಕ ಎಂ.ಶ್ರೀನಿವಾಸ್ ಬೆಂಬಲಿಗ ಷುಗರ್ ಟೌನ್ ಬೋರೇಗೌಡನ ತುಟಿಗೆ ತುಪ್ಪ ಸವರಿರುವ ಸಿದ್ದರಾಜು ಆತನನ್ನು ದಾಳವಾಗಿ ಉರುಳಿಸಿದ್ದಾನೆ. ಕರ್ನಾಟಕ ಮುನಿಸಿಪಾಲಿಟಿ ಕಾಯ್ದೆ 1964ರ ಕಲಂ16 (2)ಸಿ ಪ್ರಕಾರ ಸದಸ್ಯರಾದ ಅನಂತಪದ್ಮನಾಭ, ರಾಜೇಶ್, ರವೀಂದ್ರ, ಲೋಕೇಶ್, ಅರುಣ್‌ಕುಮಾರ್, ಶಶಿಧರ್, ಹೆಚ್.ಸಿ.ಬೋರೇಗೌಡ, ಸುಜಾತಮಣಿ, ಸುಮಾರಾಣಿ, ನರಸಮ್ಮ, ಸುಕುಮಾರ್, ಗುರುಮ್ಮ, ಸಲ್ಮತಾಜ್ ಇವರೆಲ್ಲಾ 10-2-2015 ಹಾಗೂ 31-3-2015ರಂದು ನಡೆದ ಸಾಮಾನ್ಯ ಸಭೆಗೆ ಅನುಮತಿ ಪಡೆಯದೆ ಗೈರುಹಾಜರಾಗಿರುವುದರಿಂದ ಎಲ್ಲಾ 13 ಮಂದಿ ಸದಸ್ಯರ ಸದಸ್ಯತ್ವವನ್ನು ರದ್ದು ಮಾಡಬೇಕೆಂದು ಸಿದ್ದರಾಜು ಶುಗರ್‌ಟೌನ್ ಬೋರೇಗೌಡನ ಕೈಲಿ ನ್ಯಾಯಾಲಯದಲ್ಲಿ ದೂರು ದಾಖಲಿಸಿದ್ದಾನೆ. ಸ್ವತಃ ಬೋರೇಗೌಡನೇ ಎರಡು ಸಭೆಗೆ ಗೈರುಹಾಜರಾಗಿದ್ದಾನೆಂಬುದಕ್ಕೆ ದಾಖಲೆಗಳಿವೆ. ಆದರೂ ಬೋರೇಗೌಡ ಸಿದ್ದರಾಜು ಆಡಿಸುವ ಗೊಂಬೆಯಂತಾಗಿ ದೂರು ಧಾಖಲಿಸಿದ್ದಾನೆ.

ಹಾಗೆಯೇ ಇದುವರೆಗೂ ತನ್ನ ಬಣದಲ್ಲಿದ್ದ ಜೆಡಿಎಸ್‌ನ ಕೆರಗೋಡು ಸೋಮಶೇಖರ್ ತನ್ನ ಶತ್ರು ಪಾಳೆಯ ಸೇರಿ ಅವಿಶ್ವಾಸ ಮಂಡನೆ ಪತ್ರಕ್ಕೆ ಸಹಿ ಹಾಕುತ್ತಿದ್ದಂತೆ ಕುದ್ದುಹೋದ ಸಿದ್ದರಾಜು ಸೋಮಶೇಖರ್ ಕೆರಗೋಡು ನಗರಸಭಾ ಸದಸ್ಯನಾಗಿದ್ದು, ಕೆಮ್ಮುಗಿಲು ಎಂಬ ಪತ್ರಿಕೆಯ ಸಂಪಾದಕರಾಗಿದ್ದಾರೆ. ತಮ್ಮ ಪ್ರಭಾವ ಬಳಸಿ ಸರ್ಕಾರಿ ಜಾಹೀರಾತು ಪಡೆಯುತ್ತಿದ್ದಾರೆ. ಹಾಗಾಗಿ ಅವರ ಸದಸ್ಯತ್ವ ರದ್ದು ಮಾಡಬೇಕೆಂದು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ದೂರು ದಾಖಲಿಸಿದ್ದಾನೆ. ಪತ್ರಿಕೆ ನಡೆಸಿಕೊಂಡೇ ನಗರಸಭೆ ಅಧ್ಯಕ್ಷರಾಗಿ, ಶಾಸಕರಾಗಿರುವವರ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಸೋಮಶೇಖರ್ ಕೆರಗೋಡು ವಿವರಣೆ ನೀಡಿದ್ದರು. ಈ ಪ್ರಕರಣದಲ್ಲಿ ಜಿಲ್ಲಾಧಿಕಾರಿ ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ, ಇಲ್ಲೂ ಕೂಡ ಸಿದ್ದರಾಜು ಪರಿಸ್ಥಿತಿ ಇಂಗುತಿಂದ ಮಂಗನಂತಾಗಿತ್ತು.





ಅವಿಶ್ವಾಸಕ್ಕೆ ಮುಂದಾಗಿರುವ ಮತ್ತೊಬ
ಎಂ.ಜೆ.ಚಿಕ್ಕಣ್ಣನ ಲಾವಣ್ಯ ಪ್ಲಾಜಾ, ಹೌಸಿಂಗ್‌ಬ
ರಸ್ತೆಯ ಬಿಲ್ಡಿಂಗ್ ಮತ್ತಿತರರ ಕಟ್ಟಡಗಳಲ್ಲಿ ಏ
ಲೋಪವಿದೆಯೇ ಎಂದೆಲ್ಲಾ ಹುಡ
ಶುರುವಿಟ್ಟುಕೊಂಡಿರುವ ಸಿದ್ದರಾಜು 'ಚಿಕ್ಕಣ್ಣನಿ
ಮಾಡ್ತೀನಿ ನೋಡ್ತಾ ಇರಿ' ಎಂದು ನಗರದ
ಅಡ್ಡಾಡುತ್ತಿದ್ದಾನೆ. ಅವನನ್ನು ಕಂಡ ಜನ ಪಾಪ ಈ
ನಗರಸಭೆ ಅಧ್ಯಕ್ಷಗಾದಿಯ ಹುಚ್ಚು ನೆತ್ತಿಗಡರಿ
ಮಾತಾಡಿಕೊಳ್ಳುತ್ತಿದ್ದಾರೆ.

ಬೇರೆಯವರ ಜನ್ಮ ಜಾಲಾಡು
ಸಿದ್ದರಾಜುನಾದರೂ ಪ್ರಾಮಾಣಿಕನೆ? ಅಶೋಕನಗ
ಕ್ರಾಸ್‌ನಲ್ಲಿ ಭರ್ಜರಿ ಮನೆ ಕಟ್ಟಿಸಿಕೊಂಡಿದ್ದಾನೆ.
ಶಾರದ ಹೆಸರಿನಲ್ಲಿರುವ ನಿವೇಶನ ಖಾತೆ ಸಂ. ಡಿ
1204/ಕಿಟಿಆರ್ ನಂ.30/148/12-13 ಮನೆ ನಂ
ಬ್ಲಾಕ್ ನಂ. 1 ಆಗಿದೆ. ಕಾನೂನು ಬಗ್ಗೆ ಜಿಲ್ಲಾ
ಸದಸ್ಯರಿಗೆ ಪಾಠ ಹೇಳುವ ಸಿದ್ದರಾಜುರವರೇ ನಗ
ಅನುಮತಿ ಪಡೆಯದೆ ನಗರಸಭೆಗೆ ಸೇರಿದ
ಅಳತೆಯ ಗಲ್ಲಿ ಜಾಗವನ್ನು ಒತ್ತುವರಿ ಮಾಡಿ
ಮನೆ ನಿರ್ಮಿಸಿಕೊಂಡಿದ್ದಾನೆ. 60x9 ಅಳತೆ
ಜಾಗ ಅಂದರೆ ಸುಮಾರು 540 ಚ.ಅ. ಅಶೋಕನ
1 ಚ.ಅಡಿಗೆ 3500ರೂಗಳಿಗಿಂತ ಹೆಚ್ಚಿದೆ. ಒಟ
ಲಕ್ಷ ರೂ. ಮೌಲ್ಯದ ಗಲ್ಲಿ ಜಾಗವನ್ನು ನಗರಸಭೆ ಗ
ತರದೆ ಒತ್ತುವರಿ ಮಾಡಿಕೊಂಡಿದ್ದಾರೆ ಎಂದು
ಸೋಮಶೇಖರ್ ಆರೋಪಿಸಿ ಕ್ರಮ ಕೈಗೊ
ಆಯುಕ್ತರಿಗೆ ಒತ್ತಾಯಿಸಿದ್ದಾರೆ.

ಮೇ.14ರಂದು ಅವಿಶ್ವಾಸ ಸ


ನಗರಸಭೆ ಅಧ್ಯಕ್ಷ ಸಿದ್ದರಾಜು ವಿರುದ್ಧ
ಮಂಡಿಸಲು ಸಭೆ ಕರೆಯಬೇಕೆಂದು 22 ಮಂದಿ
ಸಹಿ ಹಾಕಿ ಕೊಟ್ಟ ಮನವಿ ಪತ್ರವನ್ನು ಅಂದಿ
ಹಾಕಿ ಬೆಚ್ಚಗೆ ಕೂತಿದ್ದ ಸಿದ್ದರಾಜು ಅವಿಶ್ವಾಸ ಸಭೆ
ಮುಂದಾಗಲೇ ಇಲ್ಲ, ಅಧ್ಯಕ್ಷರು' ಸಭೆ ಕರೆ
ಉಪಾಧ್ಯಕ್ಷೆ ಚಂದ್ರಕಲಾ ಸಭೆ ಕರೆಯಬೇಕಿತ್ತು
ವ್ಯಾಮೋಹಿ ಸಿದ್ದರಾಜು ಗರಡಿಯಲ್ಲೇ ಪಳಗಿರು
ಅದೇಗೆ ಸಭೆ ಕರೆಯಲು ಸಾಧ್ಯ. ಹಾಗಾಗಿ ಇ
ಸಭೆ ಕರೆಯದ 15 ಮಂದಿ ಸದಸ್ಯರ ಸದ
ವಜಾಗೊಳಿಸಲು ಭರ್ಜರಿ ಸ್ಕೆಚ್ ಹಾಕಿದ್ದರು. ಸಿ
ಆಟಾಟೋಪ ಕಂಡ ಅಮರಾವತಿ ಚಂದ್ರಶೇಖ
ಮಂದಿ ನಗರಸಭಾ ಸದಸ್ಯರಾದ ಎಂ.ಜೆ.ಚಿಕ್ಕಣ್ಣ
ಅನಂತಪದ್ಮನಾಭ, ಮಧುಸೂದನ್, ರವೀಂದ್ರ, ಲ
ಅರುಣ್‌ಕುಮಾರ್, ಮುಜಾಹಿದ್, ಮಹೇಶ್‌ಕೃಷ್ಣ
ಸುಕುಮಾರ್, ಸೋಮಶೇಖರ್‌ಕೆರಗೆ
ಹೊಸಹಳ್ಳಿಬೋರೇಗೌಡ, ಸುಜಾತಮಣಿ, ಸು
ನರಸಮ್ಮ, ನಯಾಜ್‌ಪಾಷ, ಗುರುಮ್ಮ, ನಲ್ಲಣ್ಣ ಸ
ಶಹಜಹಾನ್, ರಾಜೇಶ್‌ರನ್ನು ಕರೆದುಕೊಂಡು
ಜಿಲ್ಲಾಧಿಕಾರಿ ಅಜಯ್‌ನಾಗಭೂಷಣ್‌ರವರಿಗೆ ವಿ
ಸಿದ್ದರಾಜು ಕಾರ್ಯವೈಖರಿಯ ಬಗ್ಗೆ ಮನವಿ
ಅಧ್ಯಕ್ಷ ಸಿದ್ದರಾಜು ಕರ್ತವ್ಯ ಲೋಪ,
ನಿರ್ವಹಣೆಯಲ್ಲಿ ದುರ್ವರ್ತನೆ ತೋರುತ್ತಿದ್ದು
ಹಾಗೂ ಕಾನೂನಿನ ವಿರುದ್ಧವಾಗಿ ಅಧಿಕಾರ
ಮಾಡುತ್ತಿದ್ದಾರೆ. ಕೂಡಲೇ ಅವರನ್ನು ನಗರಸಭ
ಸ್ಥಾನದಿಂದ ವಜಾಗೊಳಿಸಲು ಅವಿಶ್ವಾಸ ಮಂ
ಕರೆಯುವಂತೆ ಸೂಚಿಸಬೇಕೆಂದು ಅವರೆಲ್ಲ ಒತ್ತಾ
ಮುನ್ಸಿಪಲ್ ಕಾಯ್ದೆ ಪ್ರಕಾರ ಪ್ರತಿ ತಿಂಗ

...ಂಬಾನಿ ಅದಾನೀಸ್ ಆಸ್ಥಾನದಲ್ಲಿ ಪ್ರಧಾನಿಯೇ ನರ್ತಕಿಯಾದರೆ?!

...ಸಿದೆಯಾ? ಕಳೆದ ಲೋಕಸಭಾ ಚುನಾವಣೆಗೆ ...ಮೋದಿಯವರ ನಾಲಿಗೆ ನುಡಿದ ಒಂದು ಮಾತು- ...ಅಧಿಕಾರಕ್ಕೆ ಬಂದರೆ ರೈತರ ಆತ್ಮಹತ್ಯೆಯನ್ನು ...ಮಾಡುತ್ತೇವೆ, ಜೀರೋ ಮಾಡುತ್ತೇವೆ." - ಈ ...ನ್ನ ಬಿಜೆಪಿಯವರು ದೇಶದ ಉದ್ದಗಲಕ್ಕೂ ...ರು. ಮೋದಿ ಹಾಕಿದರು. ಮತದಾರರು ...ದರು. ಆಯ್ತು, ಬಿಜೆಪಿ ಅಧಿಕಾರಕ್ಕೂ ಬಂತು. ...ಯವರು ಪ್ರಧಾನಿಯೂ ಆದರು. ರೈತರ ...ಯನ್ನು ಶೂನ್ಯ ಮಾಡುತ್ತೇವೆಂದ ಮೋದಿಯ ...ರ್ಕಾರ ಮಾಡಿದ್ದೇನು? ಭೂಸ್ವಾಧೀನ ಸುಗ್ರೀವಾಜ್ಞೆ! ...! ರೈತರನ್ನು ಭೂಮಿಯಿಂದ ಕಿತ್ತೆಸೆದು ಅವರನ್ನು ...ನರನ್ನಾಗಿಸಿ ರೈತರೇ ಶೂನ್ಯವಾಗುವ ಕಾಯಿದೆ- ...ಸ್ವಾಧೀನ ಸುಗ್ರೀವಾಜ್ಞೆ ಕಾಯಿದೆ!

...ಯೋಚನೆ ಮಾಡಿ- ಭೂಮಿ ಇಟ್ಟು ಕೊಂಡವನು ...ಮಾಡಿಕೊಂಡರೆ ತಾನೇ ಅದು ರೈತನ ಆತ್ಮಹತ್ಯೆ? ...ಗೆ ಅಂಟಿಕೊಂಡು ಜೀವಿಸುವ ರೈತರನ್ನು ಉಳಿಸಿ ...ಆತ್ಮಹತ್ಯೆಯನ್ನು ಶೂನ್ಯ ಮಾಡುವ ಬದಲು ...ಯಿಂದ ರೈತರನ್ನು ಕ್ರೂರವಾಗಿ ಕಿತ್ತೆಸೆದು ರೈತರನ್ನೇ ...ಮಾಡುವುದೇ ಈ ಬಿಜೆಪಿ ಸರ್ಕಾರದ ಭೂಸ್ವಾಧೀನ ...ಯೆಂಬ ಈ ಜೇಡರ ಬಲೆಯ ಕಾರ್ಯಕ್ರಮ.

...ರತದ ಭೂಮಿಯ ಜೀವಂತಿಕೆಯನ್ನು ಅರಿತವರು, ...ಭೂಸ್ವಾಧೀನ ಕಾನೂನು ಮಾಡಲಾರರು. ಭಾರತದಲ್ಲಿ ... ಅಂದರೆ ಒಂದು ವೃಕ್ಷ ಇದ್ದಂತೆ. ಆ ವೃಕ್ಷ ... ಪಶು, ಪಕ್ಷಿ, ಜಾನುವಾರುಗಳು ತಮ್ಮ ಬದುಕು ...ಸುವಂತೆ- ಒಂದು ಎಕರೆ ಭೂಮಿಯಲ್ಲೇ ಆ ...ಯ ರೈತನಷ್ಟೇ ಅಲ್ಲದೆ ಸುತ್ತಮುತ್ತಲಿನ ಹತ್ತಾರು ...ಗಳು ತಂತಮ್ಮ ಗಂಜಿ ಹುಟ್ಟಿಸಿಕೊಂಡು ಬದುಕು ...ಸುತ್ತಾರೆ! ರೈತ ತನ್ನ ಭೂಮಿಜತೆ ನೇರವಾಗಿ ...ಹುಟ್ಟವನಾಗಿ ಬದುಕು ಕಟ್ಟಿಕೊಂಡರೆ ಸುತ್ತಮುತ್ತಲಿನ ... ಜೀವಗಳು ಪರೋಕ್ಷವಾಗಿ ಆ ಭೂಮಿಗೆ ...ವರಾಗಿರುತ್ತಾರೆ. ಇದು ಭಾರತದ ಕೃಷಿ ಬದುಕು. ...ಭಾರತದ ಭೂಮಿಯ ಲಕ್ಷಣ. ಹಾಗೇ ಜೀವನ ...ತ. ಇದೇ ಹಳ್ಳಿಗಾಡಿನ ಸಂಸ್ಕೃತಿ ಕೂಡ. ಇದನ್ನು ...ದವರು ದೆಹಲಿಯಲ್ಲಿ ಕೂತುಕೊಂಡು ಈ ...ಧೀನ ಕಾಯ್ದೆ ತಂದಿದ್ದಾರೆ.



ಆಗ ಬ್ರಿಟಿಷರಿಗೆ ಭಾರತ ಗುಲಾಮ ಆಗಿತ್ತು, ಅವರೂ ಈ ಹಿಂದೆ ಇಂಥದೇ ಭೂಸ್ವಾಧೀನ ಕಾಯ್ದೆ ತಂದಿದ್ದರು. ಅದನ್ನು ಅರ್ಥ ಮಾಡಿಕೊಳ್ಳಬಹುದಿತ್ತು, ಬ್ರಿಟಿಷ್ ಭೂಸ್ವಾಧೀನ ಕಾಯ್ದೆಗಿಂತಲೂ ಅತ್ತತ್ತ ಅನ್ನುವಂತೆ, ಜನರನ್ನು ಜಾನುವಾರುಗಳು ಎಂಬಂತೆ ಕಾಣುವ ಈ ಭೂಸ್ವಾಧೀನ ಕಾಯ್ದೆಯನ್ನು ನಮ್ಮವರೇ ತಂದರೆ ಇದನ್ನು ಹೇಗೆ ಅರ್ಥ ಮಾಡಿಕೊಳ್ಳೋಣ? ನಮ್ಮವರಿಗೆ ನಾವೇ ಗುಲಾಮರೇ? ಅರ್ಥವಾಗುತ್ತಿಲ್ಲ. ಒಂದು ಉದ್ದೇಶಕ್ಕಾಗಿ ಸ್ವಾಧೀನಪಡಿಸಿ ಕೊಂಡ ಭೂಮಿಯನ್ನು ಆ ಉದ್ದೇಶಕ್ಕೆ ಬಳಸಲ್ಪಡದಿದ್ದರೆ- ಅದನ್ನು ರೈತರಿಗೆ ಹಿಂತಿರುಗಿಸುವುದಿಲ್ಲ ವಂತೆ. ಇದು ಪರಮ ವಂಚನೆ ಅಲ್ಲವೆ? ಇದರೊಳಗೆ ಲ್ಯಾಂಡ್ ಮಾಫಿಯಾ ವಹಿವಾಟು ಅಡಗಿಕೂತಿದೆ. ಇದು ದ್ರೋಹವಲ್ಲವೆ?

ಹಿಂದೆ ರಾಜರುಗಳು ಇದ್ದರು. ಆ ರಾಜರ ಇಚ್ಛೆಗೆ ತಕ್ಕಂತೆ ವೇಷಭೂಷಣ ಹಾಕಿ ನರ್ತಿಸುವ ನರ್ತಕಿಯರೂ ಇದ್ದರು. ಈಗ ಭಾರತದಲ್ಲಿ ಅಂಬಾನಿ, ಅದಾನಿ ಇತ್ಯಾದಿಗಳೇ ರಾಜರುಗಳು ಆಗಿಬಿಟ್ಟಿದ್ದಾರೆ. ನಮ್ಮ ಪ್ರಧಾನಿ, ಮಂತ್ರಿ ಮಹೋದಯರು ಬಂಡವಾಳಗಾರರ ಆಸ್ಥಾನದಲ್ಲಿ ತರಾವರಿ ವೇಷ ಹಾಕಿಕೊಂಡು ಕುಣಿಯುವ ನರ್ತಕಿಯರಾಗಿ ಬಿಟ್ಟಿದ್ದಾರೆ. ಬಂಡವಾಳಗಾರರು ಕಾಲ್ಸನ್ನೆಯಲ್ಲಿ ತೋರಿಸಿದ್ದನ್ನು ನಮ್ಮ ಮಂತ್ರಿ ಮಹೋದಯರುಗಳು ಕೈಮುಗಿದು ಕಾನೂನು ಮಾಡುತ್ತಿದ್ದಾರೆ. ರಾಜ್ಯಗಳ ಮಂತ್ರಿ ಮಹೋದಯರುಗಳು ತಮ್ಮ ಚಾನ್ಸ್‌ಗಾಗಿ ಹಲ್ಲುಗಿಂಜುತ್ತಿದ್ದಾರೆ. ಇದು ಭಾರತದಲ್ಲಿ ಬಂಡವಾಳ ಮತ್ತು ರಾಜಕಾರಣದ ಜಂಟಿ ಘೋರ ದುರಂತ ನಾಟಕ. ಈ ದುರಂತ ನಾಟಕದ ಕೊನೆ ಎಲ್ಲಿ ಮುಟ್ಟಬಹುದು? ನಮ್ಮ ಕಣ್ಣೆದುರಿಗೆ ಕಾಣುತ್ತಿರುವುದನ್ನೇ ನೋಡಿ ಹೇಳುವುದಾದರೆ, ಈ ಕ್ಯಾನ್ಸರ್ ಅಭಿವೃದ್ಧಿಯ ಲಕ್ಷಣವು ಬಾಂಬೆಯ ಕೊಳಗೇರಿಯೊಂದರ ನಡುವೆ ಆಕಾಶಕ್ಕೆ ಚಾಚುತ್ತಾ ನಿಂತಿರುವ ಅಂಬಾನಿಯ ಸಂಪತ್ತಿನ ದೌಲತ್ತಿನಲ್ಲಿ ಈಗಾಗಲೇ ಕಾಣಿಸಿಕೊಂಡಿದೆ. ಅಂಬಾನಿ ನಿವಾಸ ಇರುವ ಈ ಕೊಳಗೇರಿ ಬಡಾವಣೆಯ ಸಂಪತ್ತಿನ ಸರಾಸರಿ ಅಂದರೆ, ಜಿಡಿಪಿ ದರ ತೆಗೆದರೆ-ಆಗ ಆ ಕೊಳಗೇರಿ ನಿವಾಸಿಗಳೆಲ್ಲರೂ ಲೆಕ್ಕದಲ್ಲಿ ಕೋಟ್ಯಾಧೀಶ್ವರರಾಗಿ ಬಿಡುತ್ತಾರೆ! ಆದರೆ ವಾಸ್ತವದಲ್ಲಿ ಆ ಕೊಳಗೇರಿಯ ಮುಕ್ಕಾಲು ಪಾಲು ಜನ ದಿನಕ್ಕೆ ನೂರು ರೂಪಾಯನ್ನೂ ಕಾಣದೇ ಹಸಿದು ಮಲಗಿರಲೂಬಹುದು. ಹೀಗೆ ಸಂಪತ್ತು ಪೈಶಾಚಿಕ ಆಗುವುದನ್ನು ಈಗಲಾದರೂ ಎಚ್ಚೆತ್ತುಕೊಂಡು ತಡೆಯದಿದ್ದರೆ, ಇದು ಇಡೀ ಭಾರತದ ನಾಳಿನ ದೃಶ್ಯಾವಳಿ ಆಗಿಬಿಡಬಹುದು. ಇದು ಕೊನೆಗೆ ಭಾರತವನ್ನು ವೇಶ್ಯಾವಾಟಿಕಾ ಪ್ರವಾಸೋದ್ಯಮ ರಾಷ್ಟ್ರವಾಗಿಸಿ ಹೊಟ್ಟೆಯಾಪ್ತಿ ಮಾಡುವಲ್ಲಿಗೆ ತಂದುಬಿಡಬಹುದೇನೋ? ಭಾರತ ಮಾತೆ ಎಂದು ಉಚ್ಚರಿಸುವವರು ಇದನ್ನು ಕಾಣಬೇಕಾಗಿದೆ.


ಜೊತೆಗೆ, ವಿದೇಶಿ ಬಂಡವಾಳಶಾಹಿ ಸ್ವಭಾವವೇ ಬೇರೆ- ಭಾರತದ ಬಂಡವಾಳಶಾಹಿ ಸ್ವಭಾವವೇ ಬೇರೆ. ಭಾರತದ ಬಂಡವಾಳಶಾಹಿ ಬಕಾಸುರನ ಸಂತಾನ. ಸ್ವಾರ್ಥ ಹಾಗೂ ನಿರ್ಲಜ್ಜ. ಭಾರತದಲ್ಲಿ ಖಾಸಗಿ ಎಂದರೆ- ಹೆಚ್ಚೂ ಕಮ್ಮಿ ಜಾತಿಯಂತೇ ಆಗಿಬಿಡುತ್ತದೆ. ಅದು ನಿರ್ದಯಿಕೂಡ. ಇದನ್ನು ನಮ್ಮ ವಿದ್ಯಾವಂತ ನಾಗರಿಕರ ವಾಸಸ್ಥಳಗಳು ಆಯಾಯಾ ಜಾತಿಗೆ ಅನುಗುಣ ಬಡಾವಣೆಗಳಾಗಿ ನಿರ್ಮಾಣವಾಗುತ್ತಿರುವುದನ್ನು ನೋಡಿದರೂ ಕಾಣಬಹುದು.

ಇದರ ನಡುವೆ ಇತ್ತೀಚೆಗೆ ಕಾಂಗ್ರೆಸ್ ರಾಷ್ಟ್ರೀಯ ನಾಯಕ ಜೈರಾಂ ರಮೇಶ್ ಹೇಳಿದರು -'ಎನ್‌ಡಿಎ ಈ ಭೂಸ್ವಾಧೀನ ಕಾಯ್ದೆ ತಂದಿರುವುದು ಕಾಂಗ್ರೆಸ್ ಪುನಶ್ಚೇತನಕ್ಕೆ ಒಂದು ಸದವಕಾಶ' ಅಂತ. ಈ ಮಾತು ಗಾಯದ ಮೇಲೆ ಎಳೆದ ಬರೆ. ಎನ್.ಡಿ.ಎ. ಸರ್ಕಾರದ ಈ ಭೂಸ್ವಾಧೀನ ಕಾಯಿದೆ ವಿರುದ್ಧದ ಹೋರಾಟವಿದೆಯಲ್ಲ, ಇದು ಪಕ್ಷಾತೀತ ಹೋರಾಟ. ಈ ಹೋರಾಟದ ಮುಂದೆ ಪಕ್ಷಗಳು ಕ್ಷುಲ್ಲಕ. ಉರಿಯುತ್ತಿರುವ ಮನೆಯಲ್ಲಿ ಗಳ ಇರಿಯಬಾರದು. ಬಾಯಿಬಿಟ್ಟರೆ ಮಾತೃಭೂಮಿ, ಮಾತೃಭೂಮಿ ಎನ್ನುವ ಆರ್‌ಎಸ್‌ಎಸ್‌ನವರು - ಅವರಲ್ಲಿ ಎಚ್ಚರ ಇರುವವರು ಇದ್ದಲ್ಲಿ - ಅವರು ಕೂಡ ಮಾಡಬೇಕಾದ ಹೋರಾಟ ಇದು. ಅವರು ಬೆಂಬಲಿಸಿದ ಪ್ರಧಾನಿ ಮೋದಿಯವರು 'ಮಾತೃಭೂಮಿಯ ಮಾರಾಟಗಾರ' ಎಂಬ ಬಿರುದಿಗೆ ಬಾಧ್ಯರಾಗುವುದನ್ನು ತಪ್ಪಿಸುವ ಹೊಣೆಗಾರಿಕೆ ಅವರ ಮೇಲೂ ಇದೆ.

ಇದು ಎಲ್ಲರೂ ಎಚ್ಚರಗೊಳ್ಳಬೇಕಾದ ಕಾಲ. ಅನ್ನ ತಿನ್ನುವರೆಲ್ಲರೂ ಈ ಎನ್‌ಡಿಎ ಭೂಸ್ವಾಧೀನ ಕಾಯ್ದೆಯನ್ನು ಪ್ರತಿಭಟಿಸಬೇಕಾಗಿದೆ.

ನೆನಪಿರಲಿ, ಮಹಾಕವಿ ಬೇಂದ್ರೆಯವರ 'ಚಿಗರಿಗಂಗಳ ಚೆಲುವಿ' ಕವಿತೆಯ ಸಾಲುಗಳು. ತನ್ನ ವಿಧ್ವಂಸಕ ಮಕ್ಕಳಿಂದಲೇ ದಾಳಿಗೊಳಗಾದ ಭೂಮಿ ತಾಯಿ ಚೀತ್ಕರಿಸುತ್ತಾಳೆ: "ಇದು ಎಂಥಾ ಜೀವದ ಬ್ಯಾಟೀ ಹಾಡೇ ಹಗಲ"- ಅನ್ನುತ್ತಾಳೆ. ಕೊನೆಗೆ, ಭೂಮಿ ತಾಯಿಯ ಸಂಕಟಕ್ಕೆ ಬೇಂದ್ರೆ ದನಿ ಕೊಡುತ್ತಾರೆ: "ಒಡವ್ಯಲ್ಲೋ ಮಗನೇ ಉಸಿರಿದ್ದೊಡಲಂತಾಳೋ" ಭೂಮಿ ತಾಯಿ ಒಡವೆ ಅಲ್ಲ, ವಸ್ತು ಅಲ್ಲ, ಉಸಿರು ಇರುವ ಒಡಲು. ನೆನಪಿರಲಿ.

■ ದೇವನೂರ ಮಹಾದೇವ



...ಸಭೆ ಕರೆಯಬೇಕು. ಆದರೆ ಸಿದ್ದರಾಜು 19 ...ಲ್ಲಿ 6 ಬಾರಿ ಮಾತ್ರ ಸಭೆ ಕರೆದಿದ್ದಾನೆ. ಅವಿಶ್ವಾಸ ...ಸಭೆ ಕರೆಯಲು ಸಹಿ ಹಾಕಿದ್ದಾರೆಂಬ ಏಕೈಕ ...ರದಿಂದ 15 ಮಂದಿ ಸದಸ್ಯರು ಸದಸ್ಯತ್ವ ...ಳೊಂಡಿದ್ದೀರಿ ಎಂದು ಹೇಳುವ ಮೂಲಕ ಅಧಿಕಾರ ...ಯೋಗಮಾಡಿಕೊಂಡಿದ್ದಾನೆ. ಯಾವುದೇ ಅನುಮತಿ ...ದೆ 9 ದಿನ ವಿದೇಶ ಪ್ರವಾಸಕ್ಕೆ ತೆರಳಿದ್ದ. ಒಟ್ಟಿನಲ್ಲಿ ...ಲೋಪ ಹಾಗೂ ಕಾನೂನಿಗೆ ವಿರುದ್ಧವಾಗಿ ಅಧಿಕಾರ ...ಯೋಗಪಡಿಸಿಕೊಂಡಿರುವ ಸಿದ್ದರಾಜು ವಿರುದ್ಧ ...ವಿಶ್ವಾಸವಿಲ್ಲ. ಆದ್ದರಿಂದ ಕರ್ನಾಟಕ ಪುರಸಭಾ ...ಯಮ 47(2) ಹಾಗೂ 42(9)ಪ್ರಕಾರ ಅವಿಶ್ವಾಸ ...ಸಭೆ ಕರೆಯುವಂತೆ ಸೂಚನೆ ನೀಡಬೇಕು ...ದು ಆ ಪತ್ರದ ಸಾರಾಂಶವಾಗಿತ್ತು, ಅಂತದೇ ಪತ್ರವನ್ನು ...ಭಾ ಆಯುಕ್ತ ಶಶಿಕುಮಾರ್‌ಗೂ ನೀಡಲಾಗಿತ್ತು. ...ತೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ವಿರುದ್ಧ ಅವಿಶ್ವಾಸ ...ಸಭೆ ಕರೆಯಲು ಮುಂದಾದ ಶಶಿಕುಮಾರ್ ...14ರಂದು ಮುಹೂರ್ತ ಫಿಕ್ಸ್ ಮಾಡಿ ಎಲ್ಲಾ ...ಗೆ ನೋಟಿಸ್ ಕಳುಹಿಸಿದ್ದಾರೆ.

...5 ಮಂದಿ ಸದಸ್ಯರ ವಿರುದ್ಧ ಕ್ರಮಕೈಗೊಳ್ಳುವಂತೆ ...ಗಾಗಿ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ಅರ್ಜಿ ಜೂನ್ 2ಕ್ಕೆ ಮುಂದೂಡಲಾಗಿದೆ. ಅಲ್ಲದೆ ಮೇ 14ರ ಸಭೆಗೆ ಹಾಜರಾಗುವಂತೆ ಎಲ್ಲಾ 35 ಮಂದಿ ಸದಸ್ಯರಿಗೆ ನೋಟಿಸ್ ಕಳುಹಿಸಿದ್ದರಿಂದ ಕಂಗಾಲಾದ ಕುರ್ಚಿ ಪ್ರಿಯ ಸಿದ್ದರಾಜು ಹೈಕೋರ್ಟ್‌ನಲ್ಲಿ ತಡೆಯಾಜ್ಞೆ ತರಲು ಓಡಾಡುತ್ತಿದ್ದಾನೆ. ಇತ್ತ 22 ಮಂದಿ ಸದಸ್ಯರು ಹೈಕೋರ್ಟ್‌ನಲ್ಲಿ ಕೇವಿಯಟ್ ಸಲ್ಲಿಸಿ ಸಿದ್ದರಾಜುನನ್ನು ಈ ಬಾರಿ ಕೆಳಗಿಳಿಸಿಯೇ ಸಿದ್ಧ ಎಂದು ಹೂಂಕರಿಸುತ್ತಿದ್ದಾರೆ.

ಎಲ್ಲಾ ಪಕ್ಷಗಳಿಂದಲೂ ವಿಪ್

ಕ್ರಿಮಿನಲ್ ಬುದ್ಧಿಯ ಪಕ್ಷೇತರ ಸದಸ್ಯ ಸಿದ್ದರಾಜುನನ್ನು ಈ ಬಾರಿ ಕೆಳಗಿಳಿಸಲು ಜೆಡಿಸ್, ಕಾಂಗ್ರೆಸ್, ಬಿಜೆಪಿ ಪಕ್ಷಗಳು ತನ್ನ ಸದಸ್ಯರಿಗೆ ವಿಪ್ ನೀಡಲು ಮುಂದಾಗಿವೆ. ಇಷ್ಟು ದಿನ ಮಾಜಿ ಶಾಸಕ ಎಂ.ಶ್ರೀನಿವಾಸ್‌ರನ್ನು ತನ್ನ ಮನಿ ಪವರ್‌ನಿಂದ ಸೆಳೆದಿಟ್ಟುಕೊಂಡು ಆಟವಾಡಿದ್ದ ಸಿದ್ದರಾಜು ಈ ಬಾರಿ ಯಾವುದೇ ಆಟ ಆಡದಂತೆ ಅಮರಾವತಿ ಚಂದ್ರ ಸಾಕಷ್ಟು ಎಚ್ಚರ ವಹಿಸಿದ್ದಾನೆ. ತನ್ನ ಬಣದ ಬೇಲೂರು ಸೋಮಶೇಖರನನ್ನು ಈ ಕಾಯಕಕ್ಕೆ ನೇಮಿಸಿದ್ದು, ಆತ ಕೂಡ ಸಿದ್ದರಾಜು ಕೆಳಗಿಳಿಸುವ ಹೋರಾಟದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದಾನೆ. ಅದರಂತೆ ಜೆಡಿಎಸ್ ಪಕ್ಷ ಕೂಡ ಹಿಂದೆ ಆದ ಮುಖಭಂಗದಿಂದ ಸಾಕಷ್ಟು ಪಾಠ ಕಲಿತಿದೆ. ಅದರಂತೆ ಜೆಡಿಎಸ್ ರಾಜ್ಯಾಧ್ಯಕ್ಷ ಕುಮಾರಸ್ವಾಮಿ ತನ್ನ ಪಕ್ಷದ 9 ಮಂದಿ ಸದಸ್ಯರಿಗೆ ವಿಪ್ ಜಾರಿ ಮಾಡಲಿದ್ದಾರೆ. ಅವಿಶ್ವಾಸ ಮಂಡನೆ ಪ್ರಕ್ರಿಯೆ ಸುಗಮವಾಗಿ ನೆರವೇರಲು ವಿಧಾನಪರಿಷತ್ ಸದಸ್ಯ ಬಿ.ರಾಮಕೃಷ್ಣರನ್ನು ಜೆಡಿಎಸ್ ಪಕ್ಷ ವೀಕ್ಷಕರಾಗಿ ಕಳುಹಿಸಲು ತೀರ್ಮಾನಿಸಿದೆ. ಪೂರ್ವಭಾವಿಯಾಗಿ ಶಾಸಕ ಚಲುವರಾಯಸ್ವಾಮಿ, ಮಾಜಿ ಶಾಸಕ ಎಂ.ಶ್ರೀನಿವಾಸ್, ಎಂಎಲ್‌ಸಿ ರಾಮಕೃಷ್ಣ ನೇತೃತ್ವದಲ್ಲಿ ಜೆಡಿಎಸ್ ಸಭೆಯನ್ನೂ ಕರೆಯಲಾಗಿದೆ. ಈ ಸಭೆಯಲ್ಲಿ ಎಲ್ಲಾ ಸದಸ್ಯರಿಗೂ ವಿಪ್ ನೀಡುವ ಸಾಧ್ಯತೆ ಇದೆ.

ಹಾಗೆಯೇ ಕಾಂಗ್ರೆಸ್ ಪಕ್ಷವೂ ತನ್ನ ಸದಸ್ಯರಿಗೆ ವಿಪ್ ನೀಡಲು ಮುಂದಾಗಿದ್ದು, ಈ ಪ್ರಕ್ರಿಯೆ ನೋಡಿಕೊಳ್ಳಲು ಕೊಳಚೆ ನಿರ್ಮೂಲನಾ ಮಂಡಳಿ ಮಾಜಿ ಅಧ್ಯಕ್ಷ ನಾರಾಯಣಸ್ವಾಮಿಯವರನ್ನು ವೀಕ್ಷಕರಾಗಿ ನೇಮಿಸಿದೆ. ವಿಪ್ ನೀಡಿದರೆ ಸಿದ್ದರಾಜು ಪರ ನಿಂತಿರುವ ಕಾಂಗ್ರೆಸ್ ಸದಸ್ಯರಾದ ಅನಿಲ್‌ಕುಮಾರ್, ಮಹೇಶ್, ರಾಮಲಿಂಗಯ್ಯ, ಚಂದ್ರಕಲಾ, ಪುಷ್ಪಾವತಿ ವಿಪ್ ಉಲ್ಲಂಘಿಸುವರೆ ಎಂಬುದನ್ನು ಕಾದು ನೋಡಬೇಕಿದೆ. ಇನ್ನು ಬಿಜೆಪಿ ಕೂಡ ಇರುವ ಏಕೈಕ ಸದಸ್ಯ ಶಿವಪ್ರಕಾಶ್‌ಬಾಬುಗೆ ವಿಪ್ ನೀಡಲಿದೆ. ಈ ಬಗ್ಗೆ ಮಾಜಿ ಸಚಿವ ಆರ್.ಅಶೋಕ್‌ರವರೇ ಖಚಿತ ಪಡಿಸಿದ್ದು, ಜಿಲ್ಲಾಧ್ಯಕ್ಷ ಹೊನ್ನಪ್ಪ ವಿಪ್ ನೀಡಲಿರುವುದಾಗಿ ತಿಳಿದು ಬಂದಿದೆ. ಪಕ್ಷದ ಪರವಾಗಿ ನಿಲ್ಲದಿದ್ದರೆ ಎಲ್ಲರಿಗೂ ಸದಸ್ಯತ್ವ ಕಳೆದುಕೊಳ್ಳುವ ಭೀತಿ ಇರುವುದರಿಂದ, ಉಳಿದಿರುವ ಮೂರೂವರೆ ವರ್ಷ ಅವಧಿಯನ್ನು ಸುಖಾಸುಮ್ಮನೆ ಕಳೆದುಕೊಳ್ಳಲು ಯಾವುದೇ ಸದಸ್ಯರು ಸಿದ್ಧರಿಲ್ಲ.

ಇನ್ನು ಪಕ್ಷೇತರ ಸದಸ್ಯರಾದ ಪುಟ್ಟತಾಯಮ್ಮ, ಚಂದ್ರಕುಮಾರ್, ಸಿದ್ದರಾಜು ಪರ ನಿಲ್ಲುತ್ತಾರೋ ಅವತ್ತಿನ ಸಂದರ್ಭ ನೋಡಿ ತಮ್ಮ ನಿಷ್ಠೆ ಬದಲಾಯಿಸುತ್ತಾರೋ ಎಂಬುದು ಒಂದೆರಡು ದಿನಗಳಲ್ಲಿ ಗೊತ್ತಾಗಲಿದೆ. ಸದಸ್ಯೆ ಪುಟ್ಟತಾಯಮ್ಮ ನಗರಸಭಾ ಸದಸ್ಯತ್ವವನ್ನು ಕಾಸು ಕೊಡುವ ಕಾಮಧೇನು ಎಂದು ಭಾವಿಸಿದಂತಿದೆ. ಈಕೆಯ ಪುತ್ರ ಸುಂದರ ಅಲಿಯಾಸ್ ತ್ರಿಪುರ ಸುಂದರ ತನ್ನ ತಾಯಿಯ ಬೆಂಬಲ ಬೇಕಿದ್ದವರು 10 ಲಕ್ಷ ರೂ. ಕೊಡುವಂತೆ ಸದಸ್ಯತ್ವವನ್ನು ಮಾರಾಟಕ್ಕಿಟ್ಟಿದ್ದಾನೆ. ಅಮರಾವತಿ ಚಂದ್ರಶೇಖರ್ ಹತ್ತಿರ 10ಲಕ್ಷ ಕೇಳಿದ ತ್ರಿಪುರಸುಂದರನನ್ನು ಅವರೇ ಉಗಿದು ಆಚೆಗಟ್ಟಿದ್ದಾರೆ. ಹಾಗಾಗಿ ಸಿದ್ದರಾಜು ಕೊಟ್ಟ ಪ್ರಸಾದವನ್ನೇ ಸ್ವೀಕರಿಸಿದ ತ್ರಿಪುರ ಸುಂದರ ಅಮರಾವತಿ ಚಂದ್ರು ವಿರುದ್ಧ ತನ್ನ ತಾಯಿ ನಿಲ್ಲುವಂತೆ ಮಾಡಿದ್ದಾನೆ.

ಒಟ್ಟಿನಲ್ಲಿ ಮಂಡ್ಯ ನಗರಸಭೆ ಇತಿಹಾಸದಲ್ಲಿಯೇ ಕುರ್ಚಿಪ್ರಿಯ ಅಧ್ಯಕ್ಷನೊಬ್ಬ ಅಧಿಕಾರ ಉಳಿಸಿಕೊಳ್ಳಲು ಇಷ್ಟೆಲ್ಲಾ ಕ್ರಿಮಿನಲ್ ಬುದ್ಧಿಯನ್ನು ಉಪಯೋಗಿಸಿದ್ದು ಇದೇ ಮೊದಲು. ಅಧ್ಯಕ್ಷ ಸಿದ್ದರಾಜು ಅದಕ್ಕಾಗಿ ಖರ್ಚು ಮಾಡಿದ ಕ್ರಿಮಿನಲ್ ಬುದ್ಧಿ ಕಂಡೇ ಮಂಡ್ಯ ನಾಗರಿಕರು ದಂಗು ಬಡಿದಿದ್ದಾರೆ. ಇಷ್ಟೆಲ್ಲಾ ತಂತ್ರ- ಕುತಂತ್ರಗಳ ಮಧ್ಯೆ ಮೇ14 ರಂದು ನಡೆಯುವ ಅವಿಶ್ವಾಸ ಮಂಡನೆ ಸಭೆ ಸಾಕಷ್ಟು ಕುತೂಹಲ ಕೆರಳಿಸಿದ್ದು, ಈ ಬಾರಿಯಾದರೂ ಅಧ್ಯಕ್ಷ ಸ್ಥಾನದಿಂದ ಸಿದ್ದರಾಜು ನಿರ್ಗಮಿಸುವಂತಾಗಲಿ ಎಂಬುದು ಮಂಡ್ಯ ನಾಗರಿಕರ ಹಂಬಲ.

■ ವರದಿಗಾರ



ಮಂಡ್ಯ ನಗರಸಭಾಧ್ಯಕ್ಷ ಹಾಗೂ ಉಪಾಧ್ಯಕ್ಷರ ವಿರುದ್ಧ ಅವಿಶ್ವಾಸ ಸಭೆ ಕರೆಯುವಂತೆ ಒತ್ತಾಯಿಸಿ ನಗರಸಭಾ ಸದಸ್ಯರುಗಳು ಆಯುಕ್ತ ಶಶಿಕುಮಾರ್ ಅವರಿಗೆ ಮನವಿ ಸಲ್ಲಿಸಿದರು. ಎಂ.ಜೆ. ಚಿಕ್ಕಣ್ಣ, ಲೋಕೇಶ್, ಹೊಸಹಳ್ಳಿ ಬೋರೇಗೌಡ, ಸೋಮಶೇಖರ್, ಸುನೀತಾ, ಸುಜಾತಮಣಿ, ಗುರುಮನ್ನ


ತಾರಾತಿಗಡಿ ಸಲ್ಲು

ಅದೆಷ್ಟೇ ಯಶಸ್ಸು ಸಿಕ್ಕಿದ್ದರೂ, ಲಕ್ಷಾಂತರ ಅಭಿಮಾನಿಗಳನ್ನು ಹೊಂದಿದ್ದರೂ, ಸಿನಿಮಾಗಳು ಕೋಟಿಕೋಟಿ ಲೆಕ್ಕದಲ್ಲಿ ಹಣ ಗಳಿಸಿದ್ದರೂ, ಚಿತ್ರರಂಗದಲ್ಲಿ ಸಹಸ್ರಾರು ಆಪ್ತ ಸ್ನೇಹಿತರಿದ್ದರೂ, ಶಿಕ್ಷೆಯಿಂದ ಬಚಾವಾಗಲು ಅದೆಷ್ಟೇ ತಾರಾತಿಗಡಿ ತಂತ್ರಗಳನ್ನು ಹೊಸೆದಿದ್ದರೂ, ಅದ್ಯಾವುದೂ ಬರಕತ್ತಾಗದೆ ಕೊನೆಗೂ ನಟ ಸಲ್ಮಾನ್ ಖಾನ್‌ಗೆ ನ್ಯಾಯಾಲಯ ಶಿಕ್ಷೆ ವಿಧಿಸಿದೆ; ಮಾಡಿದ್ದುಣ್ಣೋ ಮಹಾರಾಯ ಎಂದಿದೆ.

ತೆರೆಯ ಮೇಲೆ ದೇಶವನ್ನೋ, ಹೆತ್ತವರನ್ನೋ, ಗೆಳತಿಯನ್ನೋ ಸುಲಭವಾಗಿ ಅಪಾಯದಿಂದ ರಕ್ಷಿಸುವ ಹೀರೋ ಸಲ್ಲು ಬಾಬಾ ಈಗ ನಿಜಜೀವನದಲ್ಲಿ ವಿಲವಿಲನೆ ಪರದಾಡುತ್ತಿದ್ದಾನೆ. ಯಶಸ್ಸು ಎಂಬ ಪಿತ್ತ ನೆತ್ತಿಗೇರಿದರೆ ಎಂತೆಂತಹ ಅಪಾಯ ಕಾದಿರುತ್ತದೆ ಎಂಬುದಕ್ಕೆ ಇವತ್ತು ಸಲ್ಮಾನ್ ಖಾನ್ ಒಂದು ಸಂಕೇತವಾಗಿದ್ದಾನೆ.

ಬಾಲಿವುಡ್‌ನ ಖಾನ್ ತ್ರಯರಲ್ಲಿ– ಸಲ್ಮಾನ್, ಶಾರುಖ್ ಮತ್ತು ಅಮೀರ್ –ಈತ ವಿಭಿನ್ನ. ಮೂವರೂ ಯಶಸ್ವೀ ಸಿನಿಮಾಗಳಲ್ಲಿ ನಟಿಸಿದ್ದರೂ ಇತರೆ ಖಾನ್‌ಗಳಿಗೆ ಸಲ್ಮಾನ್ ಕಂಡರೆ ಅದೆಂತಹುದ್ದೋ ಹೊಟ್ಟೆಕಿಚ್ಚು. 'ಸಲ್ಮಾನ್ ನನ್ನಷ್ಟು ಬುದ್ಧಿವಂತನಲ್ಲ, ಆದರೂ ಆತನ ಸಿನಿಮಾಗಳು ಹಿಟ್ ಆಗುತ್ತವೆ, ಸಹಸ್ರಾರು ಅಭಿಮಾನಿಗಳು ಆವನ ಬೆನ್ನಿಗೆ ನಿಲ್ಲುತ್ತಾರೆ. ಹಿಂಗ್ಯಾಕೆ?' ಎಂಬ ಗುಟ್ಟು ಇವತ್ತೂ ಅಮೀರ್ ಖಾನ್‌ಗೆ ರಟ್ಟಾಗಿಲ್ಲ. ಹಾಗೆಯೇ 'ಈತನಿಗೆ ನನ್ನಷ್ಟು ಚಾರ್ಮ್ ಇಲ್ಲ, ಗೆಳೆಯರ ಬಳಗವೂ ಇಲ್ಲ. ಆದರೂ ಸಲ್ಮಾನ್ ನನಗಿಂತ ಯಾಕೆ ಯಶಸ್ವಿ' ಎಂಬ ಒಗಟು ಶಾರುಖ್ ಖಾನ್‌ನನ್ನು ಕಾಡುವುದನ್ನು ನಿಲ್ಲಿಸಿಲ್ಲ. ಇನ್ನು ನಟಿಯರನ್ನು ಬಿಡಿ; ಎಲ್ಲರೂ ಈತನೊಂದಿಗೆ ನಟಿಸುವ ಅವಕಾಶಕ್ಕಾಗಿ ಕಾಯುವವರೆ.

ಅಷ್ಟೇನು ಎತ್ತರ ಇಲ್ಲದಿದ್ದರೂ ಸಲ್ಮಾನ್‌ನದ್ದು ಯುವತಿಯರನ್ನು ಆಕರ್ಷಿಸುವ ತುಂಟ ಹುಡುಗನ ಮುಖ. ಆತನ ಮೈಕಟ್ಟು ಎಲ್ಲ ಯುವಕರೂ ಬಯಸುವಂತಹದ್ದು. ತೆರೆಯ ಮೇಲೆ ಆತ ಬಿಂಬಿಸುವ ಪಾತ್ರಗಳೂ ತಮಾಷೆ ಮಾಡುತ್ತ, ಸಾಹಸ ಮೆರೆಯುತ್ತಾ, ಪ್ರೀತಿಯನ್ನು ವ್ಯಕ್ತಪಡಿಸುತ್ತಾ ಎಲ್ಲರನ್ನು



ರಂಜಿಸುವಂತಹವು.

'ಬಿವಿ ಹೊ ತೋ ಐಸಾ' ಎಂಬ ಸಿನಿಮಾದಲ್ಲಿ ಚಿಕ್ಕ ಪಾತ್ರವನ್ನು ನಿರ್ವಹಿಸುವ ಮೂಲಕ ಬಾಲಿವುಡ್‌ಗೆ ಎಂಟ್ರಿ ಕೊಟ್ಟ ಸಲ್ಮಾನ್ 1989ರಲ್ಲಿ ನಟಿಸಿದ 'ಮೈನೆ ಪ್ಯಾರ್ ಕಿಯಾ' ಚಿತ್ರದಲ್ಲಿ ಹೀರೋ ಪಾತ್ರಕ್ಕೆ ಬಡ್ತಿ ಪಡೆದ. ಆ ಸಿನಿಮಾ ಸೂಪರ್ ಡೂಪರ್ ಹಿಟ್ ಆಗಿದ್ದೇ ತಡ ಸಲ್ಮಾನ್ ಯಾರ ಕೈಗೂ ಸಿಗದಂತಾದ. ಇಲ್ಲಿಯವರೆಗೂ ಆತ 90ಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿದ್ದು ಅವುಗಳಲ್ಲಿ ಬೆರಳೆಣಿಕೆಯಷ್ಟು ಮಾತ್ರ ಫ್ಲಾಪ್ ಆಗಿವೆ.

ಒಂದೆಡೆ ಆತನ ಸಿನಿಮಾಗಳು ಹಿಟ್ ಆಗುತ್ತಿದ್ದಂತೆ ಇನ್ನೊಂದೆಡೆ ಆತನ ಖಾಸಗಿ ಬದುಕಿನ ಶೈಲಿಯ ಬಗ್ಗೆ ಕೆಟ್ಟ ಸುದ್ದಿಗಳು ಕೇಳಿಬರಲಾರಂಭಿಸಿದವು. ಮೊದಮೊದಲು ಆತ ತನ್ನ ಪ್ರೇಯಸಿಯರ ಮೇಲೆ ಸಾರ್ವಜನಿಕವಾಗೇ ಕೈ ಮಾಡಿದ ಪ್ರಕರಣಗಳು ವರದಿಯಾದವು. ಒಮ್ಮೆ ಒಬ್ಬಳ ತಲೆಗೆ ಬಾಟಲಿಯಿಂದ ಹೊಡೆದಿದ್ದ ಎಂದೂ

⏭ 12

ಸಲ್ಲೂನ ಸರಣಿ ಪ್ರೇಯಸಿಯರು

ಬಾಲಿವುಡ್‌ನ ಖಾನ್ ತ್ರಯರಲ್ಲಿ ಸಲ್ಮಾನ್ ಒಬ್ಬನೇ ಇನ್ನೂ ಬ್ಯಾಚುಲರ್ ಆಗಿರುವುದು. ಇನ್ನಿಬ್ಬರಾದ ಅಮೀರ್ ಖಾನ್ ಎರಡನೆ ಹೆಂಡತಿ ಜೊತೆ ಮೂರನೆ ಬಾರಿ ತಂದೆಯಾಗಿದ್ದರೆ, ಶಾರುಖ್ ಖಾನ್ ಈಗಲೂ ತನ್ನ ಮೊದಲನೆ ಮಡದಿ ಗೌರಿ ಜೊತೆಯೇ ಇದ್ದು ಮೂವರು ಮಕ್ಕಳ ತಂದೆಯಾಗಿದ್ದಾರೆ. ಸರಿಸುಮಾರು ಅವರಿಬ್ಬರಷ್ಟೆ ವಯಸ್ಸು ಸಲ್ಲೂಗೆ ಆಗಿದ್ದರೂ ಆತ ಮಾತ್ರ ಈಗಲೂ ಮದುವೆಯಾಗದೆ 'ಆರಾಮಾಗಿ'ದ್ದಾನೆ. ಅಂದಮಾತ್ರಕ್ಕೆ ಆತನಿಗೆ ಗೆಳತಿಯರಾಗಲಿ, ಪ್ರೇಯಸಿಯರಾಗಲಿ ಇಲ್ಲ ಎಂದಲ್ಲ.

ಸಲ್ಮಾನ್ ಚಿತ್ರರಂಗಕ್ಕೆ ಕಾಲಿಟ್ಟ ಆರಂಭದ ದಿನಗಳಲ್ಲಿ ಅವನ ಗರ್ಲ್ ಫ್ರೆಂಡ್ ಆಗಿದ್ದವಳು ಸಂಗೀತಾ ಬಿಜಲಾನಿ. 1980ರಲ್ಲಿ ಮಿಸ್ ಇಂಡಿಯಾ ಸ್ಪರ್ಧೆ ಗೆದ್ದಿದ್ದ ಸಂಗೀತಾ ವಯಸ್ಸಿನಲ್ಲಿ ಸಲ್ಮಾನ್‌ಗಿಂತಲೂ ಐದು ವರ್ಷ ಹಿರಿಯಳಾಗಿದ್ದರೂ ಆಕೆಯೂ ಆಗತಾನೆ ಚಿತ್ರರಂಗವನ್ನು ಪ್ರವೇಶಿಸಿದ್ದಳು. ಆದರೆ ಅವರಿಬ್ಬರ ಸಂಬಂಧ ಕೆಲವರ್ಷಗಳ ನಂತರ ಅಂತ್ಯಗೊಂಡಿತು. ಆಮೇಲೆ ಸಂಗೀತಾ ಕ್ರಿಕೆಟರ್ ಅಜರುದ್ದೀನ್‌ನ ಸಂಗಕ್ಕೆ ಬಿದ್ದಳು. ಪರಿಣಾಮವಾಗಿ ಆತ ಆಗಿನ ತನ್ನ ಮಡದಿಗೆ ತಲಾಖ್ ಕೊಟ್ಟು ಸಂಗೀತಾಳನ್ನು ಮದುವೆಯಾಗಿದ್ದ. ಆದರೆ ಅದೂ ಕೂಡ ಬಹಳ ವರ್ಷ ಉಳಿಯಲಿಲ್ಲ. ಸಂಗೀತಾ ಮತ್ತು ಅಜರುದ್ದೀನ್ ಸಂಸಾರದಲ್ಲಿ ಬಿರುಕುಗಳು ಮೂಡಿದಾಗ ಆಕೆಯ ಬೆಂಬಲಕ್ಕೆ ನಿಂತದ್ದು ಬೇರೆ ಯಾರೂ ಅಲ್ಲ ಇದೇ ಸಲ್ಮಾನ್.

ಸಂಗೀತಾಳ ನಂತರ ಸಲ್ಮಾನ್ ಬದುಕಿನಲ್ಲಿ ಪಾದಾರ್ಪಣೆ ಮಾಡಿದ್ದು ಸೋಮಿ ಅಲಿ ಎಂಬ ಮತ್ತೋರ್ವ ನಟಿ. ಆದರೆ ಅಷ್ಟು ಹೊತ್ತಿಗೆ ಸಲ್ಮಾನನ ಕುಡಿತದ ಚಟ ಹೆಚ್ಚಾಗಿದ್ದರಿಂದ ಅದನ್ನು ಸಹಿಸಲು ಸೋಮಿ ಆಗದೆ ಅವನಿಗೆ ಕೈಕೊಟ್ಟು ಹೊರನಡೆದಿದ್ದಳು. ಆದರೆ ಇವತ್ತಿಗೂ ಅವರಿಬ್ಬರು ಸ್ನೇಹಿತರಾಗಿದ್ದು ಆಕೆ ನಡೆಸುವ ಎನ್‌ಜಿಓ ಸಂಸ್ಥೆಗೆ ಸಲ್ಮಾನ್ ಆರ್ಥಿಕ ನೆರವು ನೀಡುತ್ತಿರುತ್ತಾನೆ.

ಅಲಿಯ ನಂತರ ಸಲ್ಮಾನ್ ಮನಸೋತಿದ್ದು ಐಶ್ವರ್ಯ ರೈಳ ಸೌಂದರ್ಯಕ್ಕೆ. ಆವಳನ್ನು ಆತ ಅದೆಷ್ಟು ಹಚ್ಚಿಕೊಂಡ ಎಂದರೆ ಒಮ್ಮೆ ಆಕೆ ಶಾರುಖ್ ಖಾನ್ ಸಿನಿಮಾದಲ್ಲಿ ನಟಿಸುತ್ತಿದ್ದಾಗ ಶೂಟಿಂಗ್ ಸ್ಪಾಟಿಗೆ ಬಂದ ಸಲ್ಮಾನ್ ರಾದ್ಧಾಂತವನ್ನೇ ಮಾಡಿದ್ದ. ಆನಂತರ ವಿಧಿ ಇಲ್ಲದೆ ಐಶ್ವರ್ಯ ಆ ಸಿನಿಮಾದಿಂದ ಹೊರನಡೆದಿದ್ದಳು.

ಕುಡಿತದ ಜೊತೆಗೆ ತನ್ನ ಪ್ರೇಯಸಿಯರಿಗೆ ಹೊಡೆಯುವುದನ್ನೂ ರೂಢಿಸಿಕೊಂಡಿದ್ದ ಸಲ್ಮಾನ್ ಉಪಟಳ ಹೆಚ್ಚಾಗುತ್ತಾ ಹೋಯಿತು. ಎಷ್ಟರಮಟ್ಟಿಗೆಂದರೆ ಐಶ್ವರ್ಯಳ



ಮನೆಗೇ ಹೋಗಿ ಆತ ಗಲಾಟೆ ಮಾಡಿದ್ದೂ ಉಂಟು. ಕೊನೆಗೆ ವಿಧಿ ಇಲ್ಲದೆ ಆಕೆಯ ತಂದೆ ಮತ್ತು ತಾಯಿ ಸಲ್ಮಾನ್ ವಿರುದ್ಧ ಪೊಲೀಸರಿಗೆ ದೂರನ್ನೂ ಸಲ್ಲಿಸಿದರು. ಸಹಜವಾಗಿಯೇ ಆಗ ಸಲ್ಮಾನ್ ಮತ್ತು ಐಶ್ವರ್ಯ ಸಂಬಂಧ ಕಳಚಿಬಿತ್ತು.

ಆದರೆ ಸಲ್ಮಾನ್ ಸುಮ್ಮನಿರಲಿಲ್ಲ. ಆಗ ಐಶ್ವರ್ಯ ವಿವೇಕ್ ಒಬೆರಾಯ್ ಎಂಬ ನವನಟನ ಸಂಗಕ್ಕೆ ಬಿದ್ದಳು. ಅದನ್ನು ಸಹಿಸದ ಸಲ್ಮಾನ್ ಆತನ ಮೊಬೈಲ್‌ಗೆ ಬೆದರಿಕೆ ಕರೆಗಳನ್ನು ಮತ್ತು ಮೆಸೇಜ್‌ಗಳನ್ನೂ ಮಾಡಿದ್ದ. ಅವುಗಳನ್ನೆಲ್ಲ ವಿವೇಕ್ ಒಂದು ಪತ್ರಿಕಾಗೋಷ್ಠಿಯಲ್ಲಿ ಬಹಿರಂಗಪಡಿಸಿದ್ದ. ಈಗ ಅದೇ ವಿವೇಕ್ ಒಬೆರಾಯ್ ದಿವಂಗತ ಜೀವರಾಜ್ ಆಳ್ವಾ ಅವರ ಮಗಳನ್ನು ಮದುವೆಯಾಗಿ ಒಂದು ಮಗುವಿನ ತಂದೆಯಾಗಿದ್ದರೆ, ಐಶ್ವರ್ಯ ರೈ ಕೂಡ ಅಭಿಷೇಕ್ ಬಚ್ಚನ್‌ನನ್ನು ಮದುವೆಯಾಗಿ ಒಬ್ಬ ಮಗಳ ತಾಯಿಯಾಗಿದ್ದಾಳೆ. ಸಲ್ಮಾನ್ ಮಾತ್ರ ಅವಿವಾಹಿತನಾಗಿದ್ದಾನೆ.

ಐಶ್ವರ್ಯ ರೈ ಕೈಕೊಟ್ಟನಂತರ, ಒರಿಜಿನಲ್ ಇಲ್ಲದಿದ್ದರೆ ಡೂಪ್ಲಿಕೇಟ್ ಪಡೆಯುತ್ತೇನೆ ಎಂಬ ಹಟಕ್ಕೆ ಬಿದ್ದ ಸಲ್ಮಾನ್ ಆಕೆಯನ್ನು ತುಂಬಾ ಹೋಲುತ್ತಿದ್ದ ಸ್ನೇಹಾ ಉಳ್ಳಾಲ್ ಎಂಬಾಕೆಯೊಂದಿಗೆ ಸರಸಸಲ್ಲಾಪ ಶುರುಹಚ್ಚಿಕೊಂಡ. ಅಂದಹಾಗೆ ಐಶ್ವರ್ಯಳಂತೆ ಸ್ನೇಹಾಳ ಅಪ್ಪ ಕರ್ನಾಟಕ ಮೂಲದವರು. ಹೈದರಾಬಾದಿನ ಚೆಡಗಿ ಸ್ನೇಹಾಳನ್ನು ಬಾಲಿವುಡ್‌ಗೆ ಪರಿಚಯಿಸಿದ ಸಲ್ಮಾನ್ ಆವಳೊಂದಿಗೆ 'ಲಕ್ಕಿ' ಎಂಬ ಸಿನಿಮಾದಲ್ಲೂ ನಟಿಸಿದ. ಆದರೆ ಆ ಸಿನಿಮಾಗೆ ಲಕ್ ಎಂಬುದು ಇಲ್ಲದೆ ಬಾಕ್ಸ್ ಆಫೀಸಿನಲ್ಲಿ ಗೋರಿಕೆ ಹೊಡೆಯಿತು. ಅಲ್ಲಿಗೆ ಸಲ್ಮಾನ್-ಸ್ನೇಹಾ ಸಂಬಂಧ ಕೂಡ ಮುರಿದುಬಿತ್ತು. ಈಗ ಆಕೆ ತೆಲುಗು ಚಿತ್ರರಂಗದಲ್ಲಿ ಸಕ್ರಿಯಳಾಗಿದ್ದಾಳೆ.

ಭಾರತ ಮತ್ತು ಬ್ರಿಟಿಷ್ ತಳಿಗಳ ಮಿಶ್ರಣವಾಗಿರುವ ಕತ್ರೀನಾ ಕೈಫ್ ಚಿತ್ರರಂಗಕ್ಕೆ ಎಂಟ್ರಿಕೊಟ್ಟಿದ್ದು 'ಬೂಮ್' ಎಂಬ ಚಿತ್ರದ ಮೂಲಕ. ಆದರೆ ಆ ಚಿತ್ರ ಬಾಕ್ಸ್‌ಆಫೀಸಲ್ಲಿ 'ಬಾಂಬ್' ಆಯಿತು. ಆಗ ಕತ್ರೀನಾ ಎಲ್ಲೂ ಸಲ್ಲದ ನಟಿಯಾಗಿ ಎಲ್ಲರಿಗೂ ಕಂಡಿದ್ದಳು. ಆ ಸಂದರ್ಭದಲ್ಲಿ ಎಲ್ಲ ರೀತಿಯಲ್ಲೂ ಆಕೆಯ ಕೈ ಹಿಡಿದದ್ದು ಇದೇ ಸಲ್ಮಾನ್. ಆಕೆಯೊಂದಿಗೆ 'ಮೈನೆ ಪ್ಯಾರ್ ಕ್ಯೂ ಕಿಯಾ' ಎಂಬ ಸಿನಿಮಾದಲ್ಲಿ ನಟಿಸಿದ ನಂತರವೇ ಆಕೆಗೆ ಬಾಲಿವುಡ್‌ನಲ್ಲಿ ಒಂದಿಷ್ಟು ಯಶಸ್ಸು ಸಿಕ್ಕಿದ್ದು. ಅವರಿಬ್ಬರೂ 'ಏಕ್ ಥಾ ಟೈಗರ್' ಸಿನಿಮಾದಲ್ಲಿ ನಟಿಸುತ್ತಿದ್ದಾಗ ಆಕೆಯೂ ಸಲ್ಮಾನನ ಒದೆಗಳಿಗೆ ಗುರಿಯಾದಳು. ಆಮೇಲೆ ಅವರಿಬ್ಬರ ಸಂಬಂಧವೂ ಬಿದ್ದುಹೋಯಿತು. ಈಗ ಕತ್ರೀನಾ ರಣಬೀರ್ ಕಪೂರ್‌ನೊಂದಿಗೆ 'ಡೇಟ್' ಮಾಡುತ್ತಿದ್ದಾಳೆ.

ಕತ್ರೀನಾ ಕೂಡ ಕೈಕೊಟ್ಟನಂತರ ಕೆಲ ಸಮಯ ಸಲ್ಮಾನ್ ಮತ್ತದೇ ತನ್ನ ಡೂಪ್ಲಿಕೇಟ್ ಬುದ್ಧಿ ತೋರಿಸಿದ. ಹಲವಾರು ಆ್ಯಂಗಲ್‌ಗಳಿಂದ ಕತ್ರೀನಾಳಂತೆ ಕಾಣಿಸುತ್ತಿದ್ದ ಜರೀನ್ ಖಾನ್ ಎಂಬ ಚೆಡಗಿಯೊಂದಿಗೆ ಒಂದಷ್ಟು ದಿನ ಸುತ್ತಾಡಿದ. ಇತ್ತೀಚಿಗಿನ ಸುದ್ದಿ ಪ್ರಕಾರ ಈಗ ಸಲ್ಮಾನ್ ಇಯುಲಿಯಾ ವಂಟೂರ್ ಎಂಬ ರೋಮೇನಿಯಾದ ಸುಂದರಿಯೊಂದಿಗಿದ್ದಾನೆ. ಅದೆಷ್ಟು ದಿನವೋ ಬಲ್ಲವರಿಲ್ಲ.

ಹೀಗೆ ಸಾಲುಸಾಲು ಸುಂದರಿಯರೊಂದಿಗೆ ಸಲ್ಮಾನ್ ಹೆಸರು ತಳಕುಹಾಕಿಕೊಂಡಿದ್ದರೂ ಆತ ಕರಣ್ ಜೋಹರ್ ನಡೆಸಿಕೊಡುತ್ತಿದ್ದ 'ಕಾಫಿ ವಿತ್ ಕರಣ್' ಎಂಬ ಶೋನಲ್ಲಿ "ನಾನಿನ್ನೂ ವರ್ಜಿನ್" ಎಂದು ಘೋಷಿಸಿದ್ದ!

ನ್ನಡಪ್ರಭ: ಭಟ್ಟ ಔಟ್ ಸುಗತ ಇನ್!



ಹೊರಬಿದ್ದ ಮೊಸಳೆಗಳಿಲ್ಲದೆ ಹೊಂಡದ ಬಗ್ಗಡ ಾದಂತೆ 'ಕನ್ನಡ ಪ್ರಭ'ದೊಳಗೆ ನೀರವ ಮೌನ. ಸುಳಿಗಾಳಿಯೋ ಅಪ್ಪುಡುಗಚ್ಚಿದ ಪತ್ರಕರ್ತರ ಿರೋ ಇನ್ನೂ ನಿಖರವಿಲ್ಲ. ತಪ್ಪಾಯ್ತು ತಿದ್ಕೋತೀವಿ, ಡ್ತಾ ಇರಿ ಏನೇನ್ ಮಾಡ್ತೀವಿ; ಎಂದೆಲ್ಲ ಬಾಣ ು ಠುಸ್ ಪಟಾಕಿ ಹೊಡೆದವರಿಗೆ ಏಷ್ಯಾನೆಟ್ ' ಲಿಮಿಟೆಡ್ ಕಂಪೆನಿ ಅಂತಿಮವಾಗಿ "ಬಾಗಿಲ ' ಯೋಜನೆಯ ಅದ್ಭುತ ಕೊಡುಗೆಯನ್ನೇ ನೀಡಿದೆ! ಿದರರ್ಥ ವಿಶ್ವೇಶ್ವರ ಭಟ್ಟರನ್ನು ಕನ್ನಡ ಪ್ರಭದಿಂದ ಿದಬ್ಬಲಾಗಿದೆ. ಪಾತಾಳಕ್ಕೆ ಕುಸಿದ ಸರ್ಕ್ಯುಲೇಷನ್ನು ಹಿಡಿದು ಜಾಹಿರಾತು ಕಲೆಕ್ಷನ್ನು, ರಾಶಿ ರಾಶಿ ಿಂದಲೇ ತುಂಬಿಹೋದ ಗೋಡೌನು, ಬಿಟ್ಟಿ ಸಂಬಳಕ್ಕೆ ದಂಡಪಿಂಡಗಳ ಟೆನ್ಷನ್ನುಗಳಿಂದ ಮುಕ್ತಿ ಕಾಣಲು ಪ್ರಭದ ಧಣಿಗೆ ಬೇರೆ ದಾರಿ ತಾನೇ ಎಲ್ಲಿತ್ತು?

ಮೊನ್ನೆ ಅಂದರೆ ಮೇ 4ರ ಸೋಮವಾರ ಮಧ್ಯಾಹ್ನ ು ಇದ್ದಕ್ಕಿದ್ದಂತೆ ಕನ್ನಡ ಪ್ರಭದ ಸಿಬ್ಬಂದಿಗಳನ್ನೆಲ್ಲ ೇಳಿದಾಗಲೇ ಸುದ್ದಿ ನಿಕ್ಕಿಗೊಂಡಾಗಿತ್ತು. ನೋಡ್ತಾ ಏನೇನ್ ಮಾಡ್ತೀವಿ ಎಂಬುದನ್ನೇ ನೆರೆದ ಸಿಬ್ಬಂದಿ ್ಪಷ್ಟದವಾಗಿ ಕೆಣಕಿದರೀತಿತ್ತು. ಉಗುಳುನುಂಗುತ್ತ ೀವರು ತಿಕ್ಕುತ್ತಾ ಭಟ್ಟರು 'good bye to all of '. ನನಗೇನೋ ನಿಮ್ಮನ್ನೆಲ್ಲ ಬಿಟ್ಟುಹೋಗಲು ್ಟಾಗುತ್ತಿಲ್ಲ. ಆದರೆ ಇದು ಕಂಪೆನಿ ಡಿಸಿಷನ್. ಿಯೇ ಇಂಥಾದ್ದೊಂದು ನಿರ್ಧಾರಕ್ಕೆ ಬಂದಿರುವಾಗ ನೀವು ತಾನೇ ಏನು ಮಾಡಲು ಸಾಧ್ಯ? ಇಷ್ಟು ನನಗೆ ನೀಡಿದ ಸಹಕಾರಕ್ಕಾಗಿ ನಿಮಗೆಲ್ಲಾ ತುಂಬಾ ್ಸ್...!' ಎಂದಿದ್ದೇ ಛೇಂಬರಿನಿಂದ ಹೊರನಡೆದರಂತೆ. ತ ಯುದ್ಧದ ಗಾಯಾಳು ದಳಪತಿಯ ಬೆನ್ನಿಗೆ ಹೇರಿ ಕಾಲಾಳುಗಳಂತೆ ಹೆಜ್ಜೆ ಇಟ್ಟವರು ರಾಧಾಕೃಷ್ಣ ಭಡ್ತಿ ್ತು ವಿನಾಯಕ ಭಟ್ ಮೂರೂರು ಎಂಬಿಬ್ಬರು ಿಗಿಗಳು ಮಾತ್ರ.

ಭಟ್ಟ ಚತುಷ್ಟಯ!

ಿದಳೇ ತ್ರಿಗುಣಾಕಾರಂ ಎಂಬಂತೆ ಹೊರಬಿದ್ದ ವಷ್ಟೂ ಉಳಿದ ಸಿಬ್ಬಂದಿ ಪ್ರಶ್ನಾರ್ಥಕವಾಗಿ ನೋಡು ಹೋಗಲೋ ಬೇಡವೋ ಎಂಬ ಜಿಜ್ಞಾಸೆಯಲ್ಲೇ ದದ್ದು ಭಟ್ಟರ ಜಂಬಾಜ್ ತ್ಯಾಗರಾಜ್. ಕನ್ನಡ ಪ್ರಭದಲ್ಲಿ ಚತುಷ್ಟಯವಿತ್ತೋ ... ಲ್ಲವೋ ಆದರೆ ಭಟ್ಟ ಷ್ಟಯವಂತೂ ಇತ್ತೇ ಇತ್ತು. ಅಂತಹ ಶೌರ್ಯದ ಪ್ರತಾಪ ು ಮೋದಿ ಅಲೆಯಿಂದ ಮೈಸೂರಿನಿಂದ ಗೆದ್ದ ದ ಕನ್ನಡ ಪ್ರಭದ ಪಾಲಿಗೆ 'ಗ್ಯಾಂಗ್ ಆಫ್ ಸಫರನ್'ನ ... ನಾಲ್ಕಕ್ಕೆ ಬಿತ್ತು ... ದ ಕಿಚನ್ ಕ್ಯಾಬಿನೆಟ್‌ನ ಕೆ.ವಿ. ಪ್ರಭಾಕರ್ ಬೇರೆ ಮುಖ್ಯಮಂತ್ರಿ ಸಿದ್ದು ಪಟಾಲಮ್ಮಿಗೆ ಜಮೆಯಾದರಲ್ಲ, ಭಟ್ಟರ ಕೋರ್ ಗ್ಯಾಂಗ್ ಮಾತ್ರವೇ ಕ.ಪ್ರ. ಕಚೇರಿಯಿಂದ ಹೊರಬಿದ್ದಿದೆ.



ಸದ್ಯ ಭಟ್ಟರ ಜಾಗಕ್ಕೆ ವಿಜಯ ಕರ್ನಾಟಕದ ಸುಗತ ಶ್ರೀನಿವಾಸ ರಾಜುರನ್ನು ಏಷ್ಯಾನೆಟ್ ನೇಮಿಸಿಕೊಂಡಿದೆ. ಏಷ್ಯಾನೆಟ್‌ನ ಸುವರ್ಣ ನ್ಯೂಸ್ ಚಾನೆಲ್, ಕನ್ನಡ ಪ್ರಭ ಸೇರಿದಂತೆ ಹೊಸ ಇಂಗ್ಲಿಷ್ ನ್ಯೂಸ್ ಚಾನಲ್ಲಿಗೂ ಸುಗತ ಸಾರಥ್ಯ ವಹಿಸಲಿದ್ದಾರೆ. ಕಳೆದ ಆರು ತಿಂಗಳ ಹಿಂದಿನಿಂದಲೇ ಕನ್ನಡಪ್ರಭಕ್ಕೆ ಸುಗತಾಗಮನದ ಸುದ್ದಿಯಿತ್ತು. ವಿ.ಕ.ಕ್ಕೆ ತಿಮ್ಮಪ್ಪ ಭಟ್ಟರು ಬಂದನಂತರ ಟೈಮ್ಸ್ ಬಳಗದ ರಾಜ್ಯವಾರು ಇಂಗ್ಲಿಷೇತರ ದೈನಿಕಗಳಿಗೆಲ್ಲ ಎಡಿಟೋರಿಯಲ್ ಅಡ್ವೈಸರ್ ಹುದ್ದೆಗೇರಿದ ಸುಗತರನ್ನು



ಏಷ್ಯಾನೆಟ್ ಭಾರೀ ಬೆಲೆತೆತ್ತೇ ತನ್ನ ಬುಟ್ಟಿಗೆ ಸೆಳೆದಿತ್ತು. ಕನ್ನಡಪ್ರಭದಿಂದ ಬಡ್ತಿ ಮತ್ತು ಮೂರೂರು ಭಟ್ಟರ ಜೊತೆ ತ್ಯಾಗರಾಜ್ ಕೂಡ ಹೊರನಡೆದದ್ದು ಸುಗತರ ಪಾಲಿಗೆ ತಲೆನೋವು ತಪ್ಪಿದಂತಾಗಿದೆ. ಏಕೆಂದರೆ ಮೇಲೆ ಬಿದ್ದು ಹೊರದಬ್ಬುವ ತಾಪತ್ರಯ ತಪ್ಪಿದಂತಾಯ್ತು!

ಹೀಗೆ ಭಟ್ಟ ಬದಲಾಗಿ ಸುಗತರನ್ನು ತೆಕ್ಕೆಗೆಳೆದುಕೊಂಡ ಏಷ್ಯಾನೆಟ್ ಧಣಿ ರಾಜೀವ್ ಚಂದ್ರಶೇಖರ್ ಲೆಕ್ಕಾಚಾರಕ್ಕೂ ಕಾರಣವಿಲ್ಲದಿಲ್ಲ. ರಂಗನಾಥ್‌ರನ್ನು ಸುವರ್ಣ ಮತ್ತು ಕನ್ನಡ ಪ್ರಭದಿಂದ ಏಕಕಾಲಕ್ಕೆ ಕೈಬಿಟ್ಟು ಆ ಜಾಗಕ್ಕೆ ಭಾರೀ ಭರವಸೆಯಿಟ್ಟೇ ವಿ. ಭಟ್ಟರನ್ನು ತರಲಾಗಿತ್ತು. ಸಂಕೇಶ್ವರ್ ಶ್ರಮ ಮತ್ತು ವಿಆರ್‌ಎಲ್ ಜಾಲದ ಪರಿಣಾಮವಾಗಿ ವಿಜಯ ಕರ್ನಾಟಕ ನಂ.1 ಸ್ಥಾನಕ್ಕೇರಿದ್ದನ್ನು ಏಷ್ಯಾನೆಟ್ ಧಣಿ ರಾಜೀವ್ ಭಟ್ಟರ ಪರಿಶ್ರಮ ಮತ್ತು ಪ್ರತಿಭೆಯ ಫಲವೆಂದು ತಪ್ಪಾಗಿ ಗ್ರಹಿಸಿದ್ದರು. ಅದು ಅರ್ಥವಾಗುವ ಹೊತ್ತಿಗೆ ಕಾಲ ಮಿಂಚಿತ್ತು.

ಖಾದ್ರಿ ಶಾಮಣ್ಣ, ವೈಎನ್ಕೆ, ವೆಂಕಟನಾರಾಯಣ ಮತ್ತು ರಂಗನಾಥ್ ನೇತೃತ್ವದ ಕನ್ನಡ ಪ್ರಭದ ರುಚಿಯೇ ಒಂದಾದರೆ ಭಟ್ಟರಿಗದು ಅರ್ಥವಾಗುವುದೂ ಕಷ್ಟವಿತ್ತು. ಏಕೆಂದರೆ ಅವರದ್ದು ಪ್ರತಿಭೆಯಿಂದಾಗಲಿ ಯೋಗ್ಯತೆಯಿಂದಾಗಲಿ ದಕ್ಕಿದ ಸಂಪಾದಕತ್ವವಾಗಿರಲಿಲ್ಲ. ಮೊದಲು ಸಂಯುಕ್ತ ಕರ್ನಾಟಕದಲ್ಲಿ ಡೆಸ್ಕು, ಆ ನಂತರ ಸಂಸದ ಅನಂತ್‌ಕುಮಾರ್ ಚಾಕರಿ, ತದನಂತರ ವಿಷನ್ ಸ್ಕೂಲಿನಲ್ಲಿ ನೌಕರಿ ಹೀಗೆ ಭಟ್ಟಂಗಿತನದಿಂದಲೇ ಪತ್ರಕರ್ತನ ಪಟ್ಟಕ್ಕೆ ಬಂದ ಭಟ್ಟರಿಗೆ ಪತ್ರಿಕೋದ್ಯಮ ತಾನೇ ಹೇಗೆ ಅರ್ಥವಾದೀತು?

ಆ ಹೊತ್ತಿಗೆ ವಿಜಯ್ ಸಂಕೇಶ್ವರ್ ಪ್ರಾರಂಭಿಸಿದ್ದ ವಿಜಯ ಕರ್ನಾಟಕದ ಸಂಪಾದಕ ಸ್ಥಾನ ಖಾಲಿಯಿತ್ತು, ಬಿಜೆಪಿಯಲ್ಲಿ ಸಕ್ರಿಯರಾಗಿದ್ದ ಸಂಕೇಶ್ವರ್‌ಗೆ ಅನಂತ್‌ಕುಮಾರ್ ಮುಲಾಜಿತ್ತಲ್ಲ, ಅದರ ಫಲವಾಗಿ ಭಟ್ಟರ ಅದೃಷ್ಟ ಕುದುರಿತು. ನೆಟ್ಟಗೊಂದು ವರದಿಯನ್ನೂ ಬರೆಯದ, ಜನ್ಮಾಪಿ ಒಂದೇ ಒಂದು ಸ್ಕೂಪ್ ಮಾಡದ, ಅಸಲಿಗೆ ವರದಿಗಾರಿಕೆಯ ಯಾವ ಲಕ್ಷಣವೂ ಇಲ್ಲದ ಭಟ್ಟರಿಗೆ ಯೋಗ್ಯತೆಯಿಲ್ಲದೆ ಒಲಿದ ವಿ.ಕ. ಸಂಪಾದಕತ್ವ ಟೈಮ್ಸ್ ಬಳಗದಲ್ಲಿ ಚಲಾವಣೆಯಾಗಲಿಲ್ಲ. ಭಟ್ಟರು ವಿ.ಕ.ದಿಂದ ಹೊರದಬ್ಬಿಸಿಕೊಂಡಾಗ ಅವರ ನೆರಳಂತೆ ಹಿಂಬಾಲಿಸಿದ್ದು ಇದೇ ತ್ಯಾಗರಾಜ್, ಭಡ್ತಿ, ಮರೂರು ಮತ್ತು ಸಿಂಹ. ಏಷ್ಯಾನೆಟ್ ಧಣಿ ರಾಜೀವ್ ಚಂದ್ರಶೇಖರ್ ಹೇಳಿಕೇಳಿ ಪಕ್ಕಾ ವ್ಯವಹಾರಸ್ಥ ಇತ್ತ ವಿ. ಭಟ್ಟರಿಗೆ ತನ್ನ ಸಂಸ್ಥೆಯಲ್ಲೊಂದು ಗಂಜಿ ಕೇಂದ್ರ ತೆರೆದಂತೆ ಮಾಡುವುದು ಅತ್ತ ಬಿಜೆಪಿ ರಾಷ್ಟ್ರನಾಯಕ ಅನಂತ್‌ಕುಮಾರ್‌ರನ್ನೂ ಓಲೈಸುವುದು ತನ್ಮೂಲಕ ಬಿಜೆಪಿಯ ಹೆಚ್ಚುವರಿ ಮತಗಳನ್ನು ಗಿಟ್ಟಿಸಿ ತನ್ನ ರಾಜ್ಯಸಭೆಯ ಸ್ಥಾನವನ್ನು ಗಟ್ಟಿ ಮಾಡಿಕೊಳ್ಳುವ ಗುರಿಯಿಟ್ಟೇ ವಿ.ಭಟ್ಟರಿಗೆ ಮಣೆ ಹಾಕಿದ್ದರು.



ಇದನ್ನು ತನ್ನ ಯೋಗ್ಯತೆಗೆ ತಕ್ಕ ಮನ್ನಣೆಯೆಂದು ಭ್ರಮಿಸಿದ್ದು ವಿ. ಭಟ್ಟರು. ಬಂದುಬಂದಿದ್ದೇ ಸುವರ್ಣ ಚಾನೆಲ್ಲಿಗೆ ತನ್ನ ಚೇಲಾಗಳನ್ನೆಲ್ಲ ತುರುಕಿದರು. ವಿ.ಕದಿಂದ ಗುಳೇ ಬಂದಿದ್ದ ಪ್ರತಾಪ್ ಸಿಂಹ, ತ್ಯಾಗರಾಜ್, ಬಡ್ತಿ, ಮರೂರು ಭಟ್ಟ ಇತ್ಯಾದಿಗಳನ್ನೆಲ್ಲ ಕನ್ನಡ ಪ್ರಭದ ಅಯಕಟ್ಟಿಗೆ ತಂದರು. ತ್ಯಾಗರಾಜ್ ಹೊರತುಪಡಿಸಿ ವಿ. ಭಟ್ಟರೂ ಸೇರಿದಂತೆ ಸಿಂಹ, ಬಡ್ತಿ, ಮರೂರು ಮುಂತಾದವರೆಲ್ಲ ಆರೆಸ್ಸೆಸ್ ಕಟ್ಟಾಳುಗಳೇ ಹೊರತು ವೃತ್ತಿನಿಷ್ಠ ಪತ್ರಕರ್ತರಲ್ಲ. ಪತ್ರಕರ್ತರ ಸೋಗಿನಲ್ಲಿದ್ದ ಈ ಹುಟ್ಟಾ ಚೆಡ್ಡಿಗಳಿಂದಾಗಿ ಕನ್ನಡ ಪ್ರಭದ ಮೂಲ ಲಕ್ಷಣವೇ ಬದಲಾಯಿತು. ಈ ಹಿಂದೆ ವಿಕ್ರಮ, ಹೊಸ ದಿಗಂತದಂಥ ಕೇಸರಿ ಪತ್ರಿಕೆಗಳಿದ್ದವಲ್ಲ, ಇವುಗಳಿಗಿಂತಲೂ ಅಸಹ್ಯದ ಕೇಸರಿ ಕರಪತ್ರವಾಗಿ ಕನ್ನಡ ಪ್ರಭ ರೂಪುಗೊಳ್ಳತೊಡಗಿತು.

ನೋಡ್ತಾ ಇರಿ...


ನೋಡ್ತಾ ಇರಿ ಏನೇನ್ ಮಾಡ್ತೀವಿ ಎಂದೇ ಕನ್ನಡ ಪ್ರಭವನ್ನು ಕೈಗೆತ್ತಿಕೊಂಡ ಭಟ್ಟರಿಗೆ ಪತ್ರಿಕಾ ಧರ್ಮದ ಹಂಗಿಲ್ಲ; ಕನಿಷ್ಠ ಓದುಗನಿಗಾದರೂ ನಿಷ್ಠೆಯಿಂದಿರಬೇಕಾದ ಪರಿವೆಯಿಲ್ಲ. ಕಂಬಾರರಿಗೆ ಜ್ಞಾನಪೀಠ ಬಂದರೆ ತಪ್ಪು, ಮೊಯ್ಲಿಗೆ ಸರಸ್ವತಿ ಸಮ್ಮಾನ ಸಿಕ್ಕರೆ ತಪ್ಪು, ಭೈರಪ್ಪಗೆ ಜ್ಞಾನಪೀಠ ಬಾರದ್ದೂ ದೊಡ್ಡ ಸ್ಕೂಪು. ಆರೆಸ್ಸೆಸ್ ಮುಖವಾಣಿ ಹೊಸ ದಿಗಂತಕ್ಕೂ ಮೀರಿದ ಕೇಸರಿ ಕರಪತ್ರದಂಥ ಲೇಖನಗಳು ಬಂದವು. ಕಂಬಾರರಿಗೆ ಜ್ಞಾನಪೀಠ ಬಂದಾಗ ಭೈರಪ್ಪನವರನ್ನು ಬೆಂಬಲಿಸಿ 'ಸಮ್ಮಾನ ಹೋಯ್ತು ಪೀಠ ಬಂತು' ಎಂದು ವಿಷಕಾರಿಕೊಂಡರು. ಮೊಯ್ಲಿಗೆ ಸರಸ್ವತಿ ಸಮ್ಮಾನ್ ಬಂದರೆ 'ಮೊಯ್ಲಿಗೆ ಸಮ್ಮಾನ ಸರಸ್ವತಿಗೆ ಅವಮಾನ' ಎಂದರು.

ಅತಿರೇಕ ಯಾವ ಮಟ್ಟಕ್ಕಿತ್ತೆಂದರೆ ಮೊಯ್ಲಿಗೆ ಸರಸ್ವತಿ ಸಮ್ಮಾನ್ ಸಿಕ್ಕಿದ್ದು ಡಿಂಗ್ರಿ ನಾಗರಾಜ್‌ಗೆ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಬಂದಷ್ಟು ಅಸಹ್ಯವೆಂಬಂತೆ ಕಿಡಿಕಾರಿ ಬಿಟ್ಟರು. ಟ್ಯಾಬ್ಲೋಯ್ಡ್‌ಗಳಾದರೆ ಒಂದು ರೀತಿ. ಕ.ಪ್ರ ದಿನಪತ್ರಿಕೆ. ಆರೆಸ್ಸೆಸ್ ಮುಖವಾಣಿಯಾಗಲಿ ಭಟ್ಟರ ಏಕವಾಣಿಯಾಗಲಿ

⏭ 13

ಐಷಾರಾಮೀ ಛೇಂಬರ್‌ಗಳು, ಆಫೀಸಿನೊಳಗೇ ಗನ್‌ಮನ್‌ಗಳು ಮತ್ತು ಟೇಬಲ್ಲಿನ ಮೇಲೆ ರಿವಾಲ್ವರ್!

ಹಿಂದೆ ಶಿವಸುಬ್ರಹ್ಮಣ್ಯ ಕನ್ನಡ ಪ್ರಭಕ್ಕೆ ಸಂಪಾದಕರಾಗಿ ಆಯ್ಕೆಗೊಂಡಾಗ ಸಹಜವಾಗೇ ಮ್ಯಾನೇಜ್‌ಮೆಂಟು ಅವರಿಗೊಂದು ಛೇಂಬರ್ ಕಟ್ಟಿಸಹೊರಟಿತ್ತು. ಇದನ್ನು ಸೂಕ್ಷ್ಮವಾಗಿ ಗಮನಿಸಿದ ಶಿವಸುಬ್ರಹ್ಮಣ್ಯ ನನಗೇನೂ ವಿಶೇಷ ಛೇಂಬರ್‌ನ ಅಗತ್ಯವಿಲ್ಲ. ಏಕೆಂದರೆ ನಾನೂ ಎಲ್ಲರಂತೆ ಇಲ್ಲಿ ಸಾಮಾನ್ಯ ಎಂದುಬಿಟ್ಟರು. ಆದರೂ ಮ್ಯಾನೇಜ್‌ಮೆಂಟ್ ಬಿಡಲಿಲ್ಲ. ಎಡಿಟರ್ ಎಂದಮೇಲೆ ಹೀಗೇ ಇರಬೇಕೆಂಬ ಹಠಕ್ಕೆ ಬಿತ್ತು. ಆದಾಗಿಯೂ ತಮ್ಮ ಛೇಂಬರ್ ಪಾರದರ್ಶಕವಾಗಿರಬೇಕೆಂದು ಶಿವು ಛೇಂಬರಿನ ಗಾಜುಗಳಿಗೆ ಕೂಲಿಂಗ್ ಪೇಪರ್ ಹಾಕಗೊಡಲಿಲ್ಲ.



ಆದರೆ ಭಟ್ಟರು ವಕ್ಕರಿಸಿದ್ದೇ ತಡ, ತಮಗೊಂದು ಅದ್ದೂರಿಯ ಛೇಂಬರ್ ಬೇಕೆಂದು ಹಠಕ್ಕೆ ಬಿದ್ದರು. ಐಷಾರಾಮಿ ಛೇಂಬರಿನ ಗಾಜುಗಳಿಗೆ ಸುತ್ತ ಕೂಲಿಂಗ್ ಪೇಪರ್ ಬಿತ್ತು. ಹೊರಗೆ ಚಿನ್ನದ ಲೇಪನದ ನಾಮಫಲಕ ಬೇರೆ. ಅದರ ಕೆಳಗೆ 'ಪ್ರಧಾನ ಸಂಪಾದಕರು' ಎಂಬ ಶಿರೋನಾಮೆ. ಹೊರಗೊಬ್ಬ ಅಟೆಂಡರ್. ಬಂದವರಿಗೆ ಚಹಾ, ಕಾಫಿ. ಒಳಗೆ ಏನು ನಡೆಯುತ್ತಿದೆ, ಯಾರು ಬಂದಿದ್ದಾರೆ ಏನೊಂದೂ ಗೊತ್ತಾಗದ ಹಾಗೆ ಭಟ್ಟರ ದಿನಚರಿ ಶುರುವಾಯಿತು. ಜೊತೆಗೊಬ್ಬ ಗನ್‌ಮನ್ ಬೇರೆ. ಸಾಲದ್ದಕ್ಕೆ ಭಟ್ಟರಿಗಂತಲೇ ಒಬ್ಬ ಪಿ.ಎ. ಇದೆಲ್ಲವೂ ಮ್ಯಾನೇಜ್‌ಮೆಂಟಿನ ಖರ್ಚಿನಲ್ಲಿ!

ಏಕೆಂದರೆ ತಾನೊಬ್ಬ ಪತ್ರಕರ್ತ ಎಂಬುದಕ್ಕಿಂತಲೂ [illegible] ಎಂಬ ಭ್ರಮೆ ಭಟ್ಟರ ತಲೆ ಹೊಕ್ಕಿತು. ಅವರಿಗೆ ತಕ್ಕಂತೆ [illegible] ಛೇಂಬರಿನ [illegible] ಪ್ರತಾಪ್ [illegible] ಛೇಂಬರ್ [illegible]

ಇನ್ನು ಭಟ್ಟರ ಪಾಳಯದ ವರದಿಗಾರರಿಗೂ ಇದೇ ಖಯಾಲಿ ಅಂಟಿಕೊಂಡಿತ್ತು. ಪ್ರತಿಯೊಬ್ಬರ ಟೇಬಲ್ಲಿನ ಮೇಲೂ ನಾಮಪಟ್ಟಿಗಳು. ಹೆಸರಿನ ಕೆಳಗೆ ಅವರ ಹುದ್ದೆ ಪದನಾಮಗಳ ಬರಹ. ಪ್ರಧಾನ ಸಂಪಾದಕರಾದ ಭಟ್ಟರು ಗನ್‌ಮನ್ ಸಮೇತ, ಪಿಎ ಜೊತೆ ಬಿಜಯಂಗೈದರೆ ಪ್ರತಾಪ್ ಸಿಂಹ ಕೂಡ ಜೊತೆಗೊಬ್ಬ ಗನ್‌ಮನ್‌ನನ್ನು ಕರೆ ತರಲಾರಂಭಿಸಿದ. ಸಾಲದ್ದಕ್ಕೆ ಪಕ್ಕದಲ್ಲೇ ಗನ್‌ಮನ್ ಕಾಯುತ್ತಿದ್ದರೂ ಸೊಂಟದಿಂದ ತನ್ನ ಖಾಸಗಿ ರಿವಾಲ್ವರ್ ಅನ್ನು ತೆಗೆದು ಅದನ್ನು ಎಲ್ಲರೂ ನೋಡುವಂತೆ ಟೇಬಲ್ಲಿನ ಮೇಲಿಡುತ್ತಿದ್ದ!

ಇದು ಕನ್ನಡ ಪ್ರಭದ 'ಭಟ್ಟ ಕೂಟ'ದ ಮಂಗಾಟಗಳು. ಒಂದೇ ಒಂದು ಭೂ ಹಗರಣವನ್ನು ಬಯಲಿಗೆಳೆಯಲಿಲ್ಲ. ಗಣಿ ಧಣಿಗಳ ಯಾವ ದರೋಡೆಯನ್ನೂ ಭೇದಿಸಲಿಲ್ಲ. ಯಾರೇ ಡಾನ್‌ನನ್ನು ಖಂಡಿಸಲಿಲ್ಲ. ಸರ್ಕಾರದ ಯಾವುದೇ ಹಗರಣ, ಯಾರೇ ಬಿಲ್ಡರ್ ರಿಯಲ್ ಎಸ್ಟೇಟ್ ದೊರೆಯನ್ನೂ ಎದುರು ಹಾಕಿಕೊಂಡವರಲ್ಲ. ಗಂಜಿ ಕುಡಿದು ಎಂತೆಂಥದೋ ಸಮಾಜ ಕಂಟಕರ ಕೆಂಗಣ್ಣಿಗೆ ಗುರಿಯಾದ ಅದೆಷ್ಟೋ ಪತ್ರಕರ್ತರಿಗೆ ರಿವಾಲ್ವರ್ ಹಾಳಾಗಲಿ ಕಾಲಿಗೊಂದು ಜೊತೆ ಚಪ್ಪಲಿಗೂ ಗತಿಯಿಲ್ಲ.

ಅಂಥಾದರಲ್ಲಿ [illegible] ಗನ್‌ಮನ್ [illegible] ರಿವಾಲ್ವರ್ [illegible] ಭಟ್ಟರ ಪಟಾಲಮ್ಮಿಗೆ ಪತ್ರಿಕೋದ್ಯಮದ [illegible]

[illegible] ರಿವಾಲ್ವರ್ [illegible] ಹೇಗೆ [illegible]



ತಾರಾತಿಗಡಿ...

10 ⏮

ಆದೆಲ್ಲ ಅತಿರೇಕಕ್ಕೆ ಹೋಗಿದ್ದು 1998ರಲ್ಲಿ. ಆಗ 'ಹಮ್ ಸಾತ್ ಸಾತ್ ಹೈ' ಎಂಬ ಸಿನಿಮಾದ ಚಿತ್ರೀಕರಣಕ್ಕೆ ರಾಜಸ್ಥಾನಕ್ಕೆ ಹೋಗಿದ್ದ ಸಲ್ಮಾನ್ ಅಲ್ಲಿನ ಕಾಡಿನಲ್ಲಿ ಎರಡು ಜಿಂಕೆಗಳನ್ನು ಕೊಂದದ್ದನ್ನು ಹಲವರು ನೋಡಿ, ಅರಣ್ಯ ಇಲಾಖೆಗೆ ದೂರು ನೀಡಿದ್ದರು. ಆ ಕೇಸಿನ ವಿಚಾರಣೆ ಇನ್ನೂ ನ್ಯಾಯಾಲಯದ ಮುಂದೆ ನಡೆಯುತ್ತಿದೆ.

ಆ ಪ್ರಕರಣ ಆದ ನಂತರವಾದರೂ ಸಲ್ಮಾನ್ ನೆಟ್ಟಗಾಗುತ್ತಾನೆ, ಹುಚ್ಚಾಟವನ್ನೆಲ್ಲ ನಿಲ್ಲಿಸುತ್ತಾನೆ ಎಂದು ಆತನ ಆಪ್ತರು ಮತ್ತು ಅಭಿಮಾನಿಗಳು ನಿರೀಕ್ಷಿಸಿದ್ದರು. ಆದರೆ ಸಲ್ಮಾನ್ ಎಚ್ಚರಗೊಳ್ಳಲಿಲ್ಲ, ಪರಿಣಾಮವಾಗಿ 2002ರಲ್ಲಿ ಆತ ಕುಡಿದ ಅಮಲಿನಲ್ಲಿ ಮುಂಬೈನ ರಸ್ತೆಯಲ್ಲಿ ತನ್ನ ಟೊಯೊಟಾ ಲ್ಯಾಂಡ್ ಕ್ರೂಸರ್ ಅನ್ನು ವೇಗವಾಗಿ ಓಡಿಸಿದ್ದರ ಫಲವಾಗಿ ರಸ್ತೆ ಬದಿ ನಿದ್ರಿಸುತ್ತಿದ್ದ ನುರುಲ್ಲಾ ಶರೀಫ್ ಎಂಬ ಅಮಾಯಕ, ಬಡ, ಕೂಲಿ ಕಾರ್ಮಿಕ ತನ್ನ ಪ್ರಾಣವನ್ನೇ ತೆರಬೇಕಾಯಿತು.

ತೆರೆಯ ಮೇಲೆ ಅಸಹಾಯಕರ, ಬಡವರ ಪರವಾಗಿ ಹೋರಾಡುವ, ಅಂಥವರಿಗಾಗಿ ಕಣ್ಣೀರು ಹಾಕುವ ಸಲ್ಮಾನ್ ನಿಜಜೀವನದಲ್ಲಿ ಮಾತ್ರ ತಾನು ಮಾಡಿದ್ದ ತಪ್ಪನ್ನು ಒಪ್ಪಿಕೊಳ್ಳುವ ಬದಲಾಗಿ ಅದನ್ನು ಮುಚ್ಚಿಹಾಕಲು ಯತ್ನಿಸಿದ್ದೇ ಹೆಚ್ಚು.

ಮೊದಲು ಅಪಘಾತ ಸಂಭವಿಸಿದಾಗ ತಾನು ವಾಹನವನ್ನು ಚಲಾಯಿಸುತ್ತಿರಲಿಲ್ಲ, ಬದಲಾಗಿ ತನ್ನ ರಕ್ಷಣೆಗೆ ಪೊಲೀಸ್ ಇಲಾಖೆ ನೇಮಿಸಿದ್ದ ಪೊಲೀಸ್



ಪೇದೆ ರವೀಂದ್ರ ಪಾಟೀಲ್ ವಾಹನವನ್ನು ಓಡಿಸುತ್ತಿದ್ದ ಎಂಬ ಸಬೂಬನ್ನು ಸಲ್ಮಾನ್ ಹೇಳಿದ. ಆದರೆ ಪೇದೆ ಪಾಟೀಲ್ "ನನಗೆ ಕಾರ್ ಓಡಿಸುವುದೇ ಗೊತ್ತಿಲ್ಲ" ಎಂದು ನಿಜಸಂಗತಿಯನ್ನು ಬಿಚ್ಚಿಟ್ಟ. ಆದರೆ ಕೆಲ ದಿನಗಳಲ್ಲೇ ತನ್ನ ಹಣಬಲದಿಂದ ಪೇದೆ ಪಾಟೀಲನ ಮನ ಬದಲಾಯಿಸಿದ ಸಲ್ಮಾನ್ ಆತನಿಂದ "ನಾನೇ ಗಾಡಿ ಓಡಿಸುತ್ತಿದ್ದದ್ದು" ಎಂದು ಹೇಳಿಸಿದ. ಪೇದೆ ಪಾಟೀಲ್ ಹೀಗೆ ತನ್ನ ಹೇಳಿಕೆಯನ್ನು ಬದಲಾಯಿಸಿದ್ದರಿಂದ ಆತನನ್ನು ಪೊಲೀಸ್ ಇಲಾಖೆಯಿಂದಲೇ ವಜಾ ಮಾಡಲಾಯಿತು. ಅಷ್ಟು ಹೊತ್ತಿಗೆ ತನ್ನ ಅವಶ್ಯಕತೆಯನ್ನು ಪೂರೈಸಿಕೊಂಡಿದ್ದ ಸಲ್ಮಾನ್ ಕೂಡ ಅವನನ್ನು ನಿರ್ಲಕ್ಷಿಸಿದ. ಅತ್ತ ಪೊಲೀಸ್ ಕೆಲಸವೂ ಇಲ್ಲ, ಇತ್ತ ಸಲ್ಮಾನನ ನೆರವೂ ಇಲ್ಲ ಎಂಬಂತಹ ಪರಿಸ್ಥಿತಿಗೆ ಬಿದ್ದ ಮಾಜಿ ಪೇದೆ ಪಾಟೀಲ್ ಸಂಪೂರ್ಣವಾಗಿ ನಿರ್ಗತಿಕನಾಗಿ, ಟಿಬಿ ರೋಗಕ್ಕೆ ಮದ್ದನ್ನು ಪಡೆಯಲೂ ಕಾಸಿಲ್ಲದಂತಾಗಿ 2007ರಲ್ಲಿ ಕೊನೆಯುಸಿರೆಳೆದ.

ಅಷ್ಟೇ ಅಲ್ಲದೆ, ಅಪಘಾತ ಸಂಭವಿಸಿದಾಗ ತಾನು ಕುಡಿದಿರಲಿಲ್ಲ ಎಂದೂ ಆತ ನ್ಯಾಯಾಲಯದ ಮುಂದೆ ವಾದಿಸಿದ. ಆದರೆ ಅಷ್ಟು ಹೊತ್ತಿಗಾಗಲೇ ಪೊಲೀಸರು ಹತ್ತಾರು ಪ್ರತ್ಯಕ್ಷ ಸಾಕ್ಷಿಗಳಿಂದ ಅವತ್ತು ಸಲ್ಮಾನ್ ಪಂಚತಾರಾ ಹೋಟೆಲ್ ಒಂದರಲ್ಲಿ ಕುಡಿದಿದ್ದರ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿದ್ದರು.

ಆಗ ಸಲ್ಮಾನನ ವಕೀಲರು ನ್ಯಾಯಾಲಯದ ಮುಂದೆ ಇನ್ನೊಂದು ತಂತ್ರವನ್ನು ಬಿಚ್ಚಿಟ್ಟರು. ಅದೇನೆಂದರೆ ನುರುಲ್ಲಾ ಶರೀಫ್ ಸತ್ತಿದ್ದು ಸಲ್ಮಾನನ ಕಾರು ಆತನ ಮೈಮೇಲೆ ಸಾಗಿದ್ದರಿಂದಲ್ಲ, ಆತ ಹಾಗೆ ಕಾರಿನಡಿ ಸಿಕ್ಕಿಹಾಕಿಕೊಂಡಿದ್ದಾಗ ಅವನನ್ನು ಕಾಪಾಡಲು ಬಂದ ಕ್ರೇನ್ ಕಾರನ್ನು ಎತ್ತುತ್ತಿದ್ದಾಗ ಅದರ ಬಂಪರ್ ಕಳಚಿ ಬಿದ್ದಿದ್ದರಿಂದ ಅವನ ಸಾವು ಸಂಭವಿಸಿತು ಎಂದು ವಾದಿಸಿದರು. ಆ ತರ್ಕಕ್ಕೆ ನ್ಯಾಯಾಲಯ ಸೊಪ್ಪು ಹಾಕಲಿಲ್ಲ.

ಹನ್ನೊಂದು ವರ್ಷಗಳ ಕಾಲ ನ್ಯಾಯಾಲಯದಲ್ಲಿ ತೆವಳುತ್ತಾ ಸಾಗಿದ ಈ ಕೇಸು ಮರುಜೀವ ಪಡೆದದ್ದು 2013ರಲ್ಲಿ. ಆದರೆ ಅಷ್ಟುಹೊತ್ತಿಗೆ ಸಲ್ಮಾನ್ ತಂಡ ಇನ್ನೊಂದು ವಂಚನೆಯನ್ನು ಎಸಗಿತ್ತು. ಅದೇನೆಂದರೆ ಈ ಕೇಸಿಗೆ ಸಂಬಂಧಿಸಿದಂತೆ ಪೊಲೀಸರು ನ್ಯಾಯಾಲಯಕ್ಕೆ ಸಲ್ಲಿಸಿದ್ದ ಕೇಸ್ ಡೈರಿ ಮತ್ತು 56 ಸಾಕ್ಷಿಗಳ ಹೇಳಿಕೆ ಪತ್ರಗಳೇ ನಾಪತ್ತೆ ಆಗಿದ್ದವು. ಇದರ ಹಿಂದೆಯೂ ಸಲ್ಮಾನನ ಹಣಬಲ ಕೆಲಸ ಮಾಡಿತ್ತು. ಅಷ್ಟು ಮಾತ್ರವಲ್ಲ ಅಪಘಾತ ನಡೆದಾಗ ಸಲ್ಮಾನನ ಜೊತೆ ಕಾರಿನಲ್ಲಿದ್ದ ಹಾಡುಗಾರ ಕಮಾಲ್ ಖಾನ್‌ನ ಹೆಸರನ್ನೇ ಸಾಕ್ಷಿಗಳ ಪಟ್ಟಿಯಿಂದ ಕೈಬಿಡಲಾಗಿತ್ತು.

ತಾನು ಶಿಕ್ಷೆಯಿಂದ ಬಚಾವಾಗಲು ಸಾಕ್ಷಿಗಳನ್ನೇ ಕೊಂದಿದ್ದರೂ, ದಾಖಲೆಗಳನ್ನೇ ನಾಪತ್ತೆ ಮಾಡಿಸಿದ್ದರೂ, ಖೊಟ್ಟಿ ಸಾಕ್ಷ್ಯಗಳನ್ನು ಹೇಳಿಸಿದ್ದರೂ ಯಾವುದೂ ವರ್ಕ್ ಔಟ್ ಆಗದಿದ್ದಾಗ ಸಲ್ಮಾನ್ ತಂಡ ಇನ್ನೊಂದು ಹೊಸ ತಂತ್ರವನ್ನು ಪ್ರಯೋಗಿಸಿತು. ಅದೇನೆಂದರೆ ಹಲವು ದಶಕಗಳಿಂದ ಅವರ ಕುಟುಂಬದ ಕಾರ್ ಡ್ರೈವರ್ ಆಗಿರುವ ಅಶೋಕ್ ಸಿಂಗ್ ಎಂಬಾತನಿಂದ "ಅವತ್ತು ಸಲ್ಮಾನ್ ಕಾರ್ ಓಡಿಸುತ್ತಿರಲಿಲ್ಲ, ನಾನು ಓಡಿಸುತ್ತಿದ್ದದ್ದು" ಎಂದು ನ್ಯಾಯಾಲಯದ ಮುಂದೆ ಹೇಳಿಸಲಾಯಿತು. ಅದೂ ಯಾವ ಹಂತದಲ್ಲಿ, ಕಳೆದ ಮಾರ್ಚ್ ತಿಂಗಳಲ್ಲಿ. "ಇಷ್ಟು ವರ್ಷಗಳ ಕಾಲ ಯಾಕೆ ಸುಮ್ಮನಿದ್ದೆ?" ಎಂದು ಕೋರ್ಟ್ ಪ್ರಶ್ನಿಸಿದಾಗ ಈ ಸಿಂಗ್ ಎಂಬ ಪುಣ್ಯಾತ್ಮ "ಅದು ಮುಖ್ಯ ಎಂದು ನನಗೆ ಅನ್ನಿಸಿರಲಿಲ್ಲ" ಎಂದು ಉತ್ತರಿಸಿದ. ಸಹಜವಾಗಿಯೇ ನ್ಯಾಯಾಲಯ ಅವನ ಮಾತನ್ನು ತಿರಸ್ಕರಿಸಿತು ಮಾತ್ರವಲ್ಲ, ಸದ್ಯದಲ್ಲೇ ನ್ಯಾಯಾಲಯದ ಮುಂದೆ ಸುಳ್ಳು ಹೇಳಿದ್ದರಿಂದ ಆತನ ವಿರುದ್ಧ ಕ್ರಮ ತೆಗೆದುಕೊಳ್ಳಲಿದೆ.

ಇದೆಲ್ಲದರ ಮಧ್ಯೆ ಸಲ್ಮಾನ್ ಇನ್ನೊಂದು 'ರೂಪ' ತಾಳಿದ. 'ಬೀಯಿಂಗ್ ಸಲ್ಮಾನ್' ಎಂಬ ಸಂಸ್ಥೆಯನ್ನು ಹುಟ್ಟು ಹಾಕಿ, ಬಡವರಿಗೆ, ಅಸಹಾಯಕರಿಗೆ ನೆರವು ನೀಡುವುದಾಗಿ ಘೋಷಿಸಿದ. ತಾನು ಮುಂಚಿನಂತಿಲ್ಲ, ಈಗ ತುಂಬಾ 'ಮೆಚೂರ್' ಆಗಿದ್ದೇನೆ ಎಂಬಂತೆ ವರ್ತಿಸಲಾರಂಭಿಸಿದ. ಇದೆಲ್ಲದರ ಹಿಂದಿನ ತರ್ಕ: ತನ್ನಂತಹ ಜನೋಪಯೋಗಿ ವ್ಯಕ್ತಿ ಬೇಜವಾಬ್ದಾರಿಯಿಂದ ಇನ್ನೊಬ್ಬರ ಸಾವಿಗೆ ಕಾರಣವಾಗುವುದಿಲ್ಲ ಎಂದು ಸಮಾಜಕ್ಕೂ, ನ್ಯಾಯಾಲಯಕ್ಕೂ ತೋರಿಸುವುದೇ ಆಗಿತ್ತು.

ಆದರೆ ಪಾಪದ ಕೊಡ ತುಂಬಿತು ಎಂದರೆ ಯಾವ ತಂತ್ರ, ಕುತಂತ್ರ, ಪ್ರೋಸು ಗೀಸು, ಯಾವುದೂ ಸಹಾಯಕ್ಕೆ ಬರುವುದಿಲ್ಲ, ಸಲ್ಮಾನ್ ಖಾನ್‌ಗೆ ಅದು ಅರ್ಥವಾಗಲಿಲ್ಲ. ಈಗ ಅದೆಲ್ಲದರ ಫಲ ಅನುಭವಿಸುವ ಹಂತಕ್ಕೆ ಬಂದಿದ್ದಾನೆ.

ತೆರೆಯ ಮೇಲೆ ಹೀರೋ ಆಗಿದ್ದ ಸಲ್ಲು ಈಗ ಜೈಲು ಸೇರುವ ವಿಲನ್ ಆಗಿ ರೂಪಾಂತರಗೊಂಡಿದ್ದಾನೆ.

ಪಾಪ, ಸಲ್ಲು ಅಲ್ಲ, ಸಲ್ಲುವಿನ ಅಟ್ಟಹಾಸಕ್ಕೆ ರಸ್ತೆ ಬದಿ ಸತ್ತ ನುರುಲ್ಲಾ ಶರೀಫ್ ಎಂಬ ಅಮಾಯಕ ಬಡವ. ಆತನ ಆತ್ಮಕ್ಕೆ ಈಗಲಾದರೂ ಶಾಂತಿ ಸಿಗಲಿ.

■ ಸಾವಂತ್ರಿ


ಬಾಲಿವುಡ್‌ನ ಜೈಲು, ಬೈಲು ಕತೆ

ಅಕ್ರಮವಾಗಿ ಶಸ್ತ್ರಾಸ್ತ್ರಗಳನ್ನು ಹೊಂದಿದ್ದಕ್ಕೋ, ಅತ್ಯಾಚಾರ ಮಾಡಿದ್ದಕ್ಕೋ, ಕುಡಿದು ಗಲಾಟೆ ಮಾಡಿದ್ದಕ್ಕೋ ಪೊಲೀಸ್ ಬಂಧನಕ್ಕೆ ಗುರಿಯಾಗಿ ಜೈಲು ಕಂಬಿ ಎಣಿಸುವ ಹಂತಕ್ಕೆ ಬಾಲಿವುಡ್‌ನ ಹಲವಾರು ನಟ-ನಟಿಯರು ಬಂದು ನಿಂತದ್ದು ಇದೇ ಮೊದಲ ಬಾರಿ ಏನಲ್ಲ.

ಎಲ್ಲರಿಗೂ ಗೊತ್ತಿರುವಂತೆ ಈಗಲೂ ಅಕ್ರಮವಾಗಿ ಶಸ್ತ್ರಾಸ್ತ್ರಗಳನ್ನು ಹೊಂದಿದ್ದಕ್ಕೆ ಸಂಜಯ್ ದತ್ ಎಂಬ ಖ್ಯಾತ ನಟ ಜೈಲಿನಲ್ಲಿದ್ದಾನೆ. ಆತನಿಗೆ ನ್ಯಾಯಾಲಯ ಐದು ವರ್ಷ ಸೆರೆವಾಸವನ್ನು ವಿಧಿಸಿದೆ. ಅಂದಹಾಗೆ ಇದೇ ಸಲ್ಮಾನ್ ಮತ್ತು ಸಂಜಯ್ ಹಲವಾರು ವರ್ಷಗಳ ಹಿಂದೆ 'ಸಾಜನ್' ಎಂಬ ಸಿನಿಮಾದಲ್ಲಿ ನಟಿಸಿದ್ದರು. ಆ ಸಿನಿಮಾದಲ್ಲಿ ಅವರಿಬ್ಬರೂ ಹೀರೋಯಿನ್ ಮಾಧುರಿ ದೀಕ್ಷಿತ್‌ಳನ್ನು ವರಿಸಿದ್ದರು. ಈಗ ಜೈಲಿನಲ್ಲೂ ಅವರಿಬ್ಬರು ಜೊತೆಯಾಗಿ ಕಂಬಿಗಳನ್ನು ವರಿಸಲಿದ್ದಾರೆ ಎಂದು ಹಲವರು ಸಾಮಾಜಿಕ ಜಾಲತಾಣಗಳಲ್ಲಿ ತಮಾಷೆ ಮಾಡುತ್ತಿದ್ದಾರೆ!

ಇನ್ನು ಶೈನಿ ಆಹುಜಾ ಎಂಬ ಮತ್ತೊಬ್ಬ ನಟ ತನ್ನ ಮನೆ ಕೆಲಸದ ಯುವತಿಯ ಮೇಲೆ ಅತ್ಯಾಚಾರವೆಸಗಿ ಜೈಲುಪಾಲಾಗಿದ್ದ. ಹಣದ ಆಮಿಷವೋ, ಮತ್ತಿನ್ನೆಂತದ್ದೋ ವರ್ಕ್ ಔಟ್ ಆಗಿದ್ದರಿಂದ ಆ ಯುವತಿ ಆನಂತರ ತನ್ನ ಮೇಲೆ ಶೈನಿ ಶನಿಯಂತೆ ಮುಗಿಬೀಳಲಿಲ್ಲ ಎಂದು













ಹೇಳಿದರೂ ನ್ಯಾಯಾಲಯ ಸಾಕ್ಷ್ಯಗಳನ್ನು ಆಧರಿಸಿ ಆ ವಿಕೃತ ನಟನಿಗೆ ಏಳು ವರ್ಷ ಕಠಿಣ ಜೈಲು ಶಿಕ್ಷೆಯನ್ನು ವಿಧಿಸಿದೆ. ಈಗ ಬೈಲ್ ಮೇಲೆ ಹೊರಬಂದಿರುವ ಆತ ಮಹಾರಾಷ್ಟ್ರದ ಹೈಕೋರ್ಟ್ ಮುಂದೆ ತಾನು ನಿರಪರಾಧಿ ಎಂದು ಅರ್ಜಿ ಸಲ್ಲಿಸಿದ್ದಾನೆ.

ಹಿಂದಿ ಚಿತ್ರರಂಗದಲ್ಲಿ ಹಿಂದೊಮ್ಮೆ ಅಪಾರ ಖ್ಯಾತಿ ಪಡೆದಿದ್ದ ದಿವಂಗತ ರಾಜ್‌ಕುಮಾರ್ ಎಂಬ ನಟನ ಹಿರಿಯ ಪುತ್ರ ಪುರು ಎಂಬಾತನೂ ಥೇಟ್ ಸಲ್ಮಾನ್ ಖಾನ್‌ನಂತೆ ಕುಡಿದ ಅಮಲಿನಲ್ಲಿ ರಸ್ತೆಬದಿ ಮಲಗಿದ್ದ ಏಳು ಜನ ಬಡವರ ಮೇಲೆ ತನ್ನ ಕಾರ್ ಅನ್ನು ಹಾಯಿಸಿದ್ದ, ಅವರಲ್ಲಿ ಮೂವರು ಸ್ಥಳದಲ್ಲೇ ಸಾವನ್ನಪ್ಪಿದ್ದರು. ಆನಂತರ ಆತ ಅಪರಾಧಿ ಎಂದು ನ್ಯಾಯಾಲಯ ಹೇಳಿದರೂ ಆತ ಮೃತರ ಕುಟುಂಬಗಳಿಗೆ ತಲಾ ಮೂವತ್ತು ಸಾವಿರ ರೂಪಾಯಿಗಳನ್ನು ನೀಡಿ, ಅವರು ತಮ್ಮ ದೂರನ್ನು ವಾಪಸ್ಸು ತೆಗೆದುಕೊಳ್ಳುವಂತೆ ನೋಡಿಕೊಂಡಿದ್ದ. ಪರಿಣಾಮವಾಗಿ ಆತ ಶಿಕ್ಷೆಯಿಂದ ಬಚಾವ್ ಆದನಲ್ಲದೆ ಇತ್ತೀಚೆಗೆ ಕ್ರಿಕೆಟ್ ಬೆಟ್ಟಿಂಗ್ ಹಗರಣದಲ್ಲೂ ಭಾಗಿಯಾಗಿದ್ದಕ್ಕೆ ಸಿಕ್ಕಿಬಿದ್ದಿದ್ದ.

ಜಾನ್ ಅಬ್ರಹಾಮ್ ಎಂಬ ಮತ್ತೊಬ್ಬ ನಟನಿಗೆ ಮೋಟರ್ ಬೈಕ್ ಹುಚ್ಚು ಅಪಾರವಾಗಿ ಇದೆ. 2006ರಲ್ಲಿ ಆತ ಸುಜುಕಿ ಹಯಬೂಸ ಎಂಬ ಅತ್ಯಾಧುನಿಕ ಮತ್ತು ಭಾರಿ ಮೊತ್ತದ ಬೈಕ್ ಅನ್ನು ವೇಗವಾಗಿ ಓಡಿಸಿದ್ದರಿಂದ ಇಬ್ಬರಿಗೆ ಗಾಯಗಳಾಗಿದ್ದವು. ವಿಚಾರಣೆ ನಡೆಸಿದ ಸೆಷನ್ಸ್ ಕೋರ್ಟ್ ಆರು ವರ್ಷಗಳ ನಂತರ ಜಾನ್‌ಗೆ ಹದಿನೈದು ದಿನಗಳ ಕಠಿಣ ಜೈಲುವಾಸವನ್ನು ಘೋಷಿಸಿತ್ತು. ಬಂಧನವಾಗದಂತೆ ಜಾಮೀನು ಪಡೆದಿದ್ದ ಜಾನ್ ಆ ತೀರ್ಪನ್ನು ಹೈಕೋರ್ಟ್ ಮುಂದೆ ಪ್ರಶ್ನಿಸಿ ಈಗ ಲವ್ ಡವ್, ಸಿನಿಮಾ ಜಾಹೀರಾತು ಎಂದೆಲ್ಲ ಬ್ಯುಸಿ ಆಗಿದ್ದಾನೆ.

ಈ ಹಿಂದೆ ಇದೇ ಸಲ್ಮಾನ್ ರಾಜಸ್ಥಾನದ ಕಾಡಿನಲ್ಲಿ ಎರಡು ಜಿಂಕೆಗಳನ್ನು ಕೊಂದ ಆರೋಪವನ್ನೂ ಹೊತ್ತಿದ್ದಾನೆ. ಆ ಪ್ರಕರಣದಲ್ಲಿ ಅವನಿಗೆ 'ಸಾಥ್' ನೀಡಿದ್ದ ಇತರರು ಸೈಫ್ ಅಲಿ ಖಾನ್, ತಬು, ನೀಲಮ್ ಮತ್ತು ಸೋನಾಲಿ ಬೇಂದ್ರೆ ಎಂಬ ನಟನಟಿಯರು. ಅಂದಹಾಗೆ ಇವರೆಲ್ಲರೂ ಆ ಸಮಯದಲ್ಲಿ 'ಹಮ್ ಸಾತ್ ಸಾತ್ ಹೈ' ಎಂಬ ಸಿನಿಮಾದಲ್ಲಿ ನಟಿಸುತ್ತಿದ್ದರು. ಇತ್ತೀಚೆಗೆ ಸೈಫ್ ಅಲಿ ಖಾನ್ ಮುಂಬೈನ ಹೋಟೆಲ್ ಒಂದರಲ್ಲಿ ಕುಡಿದು ಚಿತ್ ಆಗಿ ಯಾರದೋ ಮೇಲೆ ದಾಳಿ ಮಾಡಿದ್ದ ಆರೋಪವನ್ನೂ ಎದುರಿಸುತ್ತಿದ್ದಾನೆ. ಮೋನಿಕಾ ಬೇದಿ ಎಂಬ ಮತ್ತೋರ್ವ ನಟಿ (ಈಕೆ ಒಂದು ಕನ್ನಡ ಸಿನಿಮಾದಲ್ಲೂ ನಟಿಸಿದ್ದಳು) ಭೂಗತ ಲೋಕದ ಡಾನ್ ಅಬು ಸಲೇಮ್‌ನನ್ನು ಮದುವೆಯಾಗಿ ಭಾರತದಿಂದ ಓಡಿಹೋಗಿದ್ದಳು. ಇಂಟರ್‌ಪೋಲ್ ಪೊಲೀಸರು ಅಬು ಸಲೇಮ್‌ನನ್ನು ಬಂಧಿಸಿದಾಗ ಮೋನಿಕಾಳು ಸಿಕ್ಕಿಬಿದ್ದಿದ್ದಳು. ಕ್ಯಾಸೆಟ್ ಕಂಪನಿಯ ಮಾಲೀಕ ಗುಲ್ಶನ್ ಕುಮಾರ್‌ನನ್ನು ಕೊಂದಿದ್ದ ಅಬು ಸಲೇಮ್ ಈಗಲೂ ಜೈಲಿನಲ್ಲಿದ್ದಾನೆ. ಆದರೆ ಮೋನಿಕಾ ಎರಡೂವರೆ ವರ್ಷ ಜೈಲುವಾಸವನ್ನು ಅನುಭವಿಸಿ ಈಗ ಹೊರಬಂದಿದ್ದಾಳೆ.

ಹೀಗೆ, ಬಾಲಿವುಡ್‌ಗೆ ಖ್ಯಾತಿ ಮಾತ್ರವಲ್ಲ, ಅಪಖ್ಯಾತಿ ತಂದವರ ದಂಡು ದೊಡ್ಡದಾಗಿಯೇ ಇದೆ.

250 ಕೋಟಿ ನಷ್ಟ: ನಡುಗದ ಬಾಲಿವುಡ್

ಸಲ್ಮಾನ್ ಖಾನ್‌ಗೆ ನ್ಯಾಯಾಲಯ ಐದು ವರ್ಷಗಳ ಸೆರೆವಾಸವನ್ನು ವಿಧಿಸಿದ್ದರಿಂದ ಬಾಲಿವುಡ್‌ಗೆ ಸುಮಾರು 250 ಕೋಟಿ ರೂಪಾಯಿಗಳಷ್ಟು ನಷ್ಟವಾಗಲಿದೆ ಎಂದು ಹಲವರು ಅಂದಾಜಿಸಿದ್ದಾರೆ. ಯಾಕೆಂದರೆ ಸಲ್ಮಾನ್ ಖಾನ್‌ನನ್ನು ಹಲವಾರು ಸಿನಿಮಾಗಳು ಮತ್ತು ಜಾಹೀರಾತುಗಳು ಅವಲಂಬಿಸಿವೆ. ಈತ ಜೈಲಿಗೆ ಹೋದರೆ ಅವೆಲ್ಲ ನೆನೆಗುದಿಗೆ ಬಿದ್ದು ನಿರ್ಮಾಪಕರಿಗೆ ಲುಕ್ಸಾನು ಆಗಲಿದೆ.

ಸೋಜಿಗದ ಸಂಗತಿ ಏನೆಂದರೆ ಬಾಲಿವುಡ್ ಇಷ್ಟು ದೊಡ್ಡ ಮೊತ್ತದ ನಷ್ಟದ ಮುಂದೆಯೂ ಚಿಂತವಾಗದೆ ಆರಾಮಾಗಿದೆ. ಅದಕ್ಕೆ ಕಾರಣ ನಮ್ಮ ನ್ಯಾಯಾಲಯಗಳ ಪರಿಸ್ಥಿತಿ.

ಹೇಳಿಕೇಳಿ, ಸಲ್ಮಾನ್ ಖಾನ್ ಕುಡಿತದ ಅಮಲಿನಲ್ಲಿ ನುರುಲ್ಲಾ ಶರೀಫ್ ಎಂಬಾತನನ್ನು ಅಪಘಾತದಲ್ಲಿ ಕೊಂದ ಪ್ರಕರಣ ನಡೆದದ್ದು 2002ರಲ್ಲಿ. ಅದಾದನಂತರ ಬರೋಬ್ಬರಿ ಹನ್ನೊಂದು ವರ್ಷಗಳ ಕಾಲ ಹಿಂದಕ್ಕೂ ಹೋಗದೆ, ಮುಂದಕ್ಕೂ ಸಾಗದೆ ಈ ಕೇಸ್ ನ್ಯಾಯಾಲಯದ ಮುಂದೆ ತೆವಳುತ್ತಾ ಸಾಗಿತ್ತು. ಇದು ಮರುಜೀವ ಪಡೆದದ್ದೇ ಎರಡು ವರ್ಷಗಳ ಹಿಂದೆ. ಅಂದರೆ ಈಗ ಪ್ರಕರಣ ನಡೆದ ಹದಿಮೂರು ವರ್ಷಗಳ ನಂತರ ಸೆಷನ್ಸ್ ನ್ಯಾಯಾಲಯ ತನ್ನ ತೀರ್ಪು ನೀಡಿದೆ. ಅದನ್ನು ಪ್ರಶ್ನಿಸಿರುವ ಸಲ್ಮಾನ್ ಖಾನನ ವಕೀಲರು ಸದ್ಯಕ್ಕೆ ಎರಡು ದಿನಗಳ ಮಟ್ಟಿಗೆ ಜಾಮೀನು ಪಡೆದಿದ್ದಾರೆ.

ಸದ್ಯದಲ್ಲೇ ಈ ಪ್ರಕರಣ ಹೈಕೋರ್ಟ್ ಮುಂದೆ ಹೋಗುತ್ತದೆ. ಅಲ್ಲೂ ಸಲ್ಮಾನನಿಗೆ ಶಿಕ್ಷೆಯಾದರೆ ಅದೇ ಹೈಕೋರ್ಟಿನ ವಿಭಾಗೀಯ ಪೀಠಕ್ಕೆ ಅರ್ಜಿ ಸಲ್ಲಿಸಬಹುದು. ಅಲ್ಲೂ ಅದೇ ತೀರ್ಪು ಬಂದರೆ ಸುಪ್ರೀಮ್‌ಕೋರ್ಟಿಗೆ ಹೋಗಬಹುದು. ಆಮೇಲೆ ಅಲ್ಲೂ ವಿಭಾಗೀಯ ಪೀಠ ಎಂದೆಲ್ಲ ವರ್ಷಗಳನ್ನೇ ದೂಡಬಹುದು.

ಅಂದರೆ ಇದಕ್ಕೆಲ್ಲಾ ಕನಿಷ್ಠ ಇಪ್ಪತ್ತು ವರ್ಷ ಹಿಡಿಯಬಹುದು.

ಈಗ ಸಲ್ಮಾನ್ ವಯಸ್ಸು 49. ಹೆಚ್ಚೆಂದರೆ ಆತ ಇನ್ನೊಂದು ದಶಕ ಹೀರೋ ಆಗಿ ಮೆರೆಯಬಹುದು. ಆಮೇಲೆ ನಿವೃತ್ತಿ ಇದ್ದದ್ದೇ. ಆಗ ಐದು ವರ್ಷ ಆತ ಜೈಲಿಗೆ ಹೋದರೂ ಯಾರಿಗೂ ಆರ್ಥಿಕವಾಗಿ ನಷ್ಟವಿಲ್ಲ ಎಂಬ ಭಂಡ ಧೈರ್ಯ ಬಾಲಿವುಡ್ ಜನರದ್ದು.

...ನ್ನಡಪ್ರಭ...

ಲಿಲ್ಲ. ಅಷ್ಟಕ್ಕೂ ಏಷ್ಯಾನೆಟ್ ಧಣಿ ರಾಜೀವ್ ...ಶೇಖರ್‌ರ ಬಂಡವಾಳದಲ್ಲಿ ಬದುಕಿದ್ದ ಪತ್ರಿಕೆಯಲ್ಲಿ ... ವೈಯಕ್ತಿಕ ತೀಟೆಯನ್ನು ತೀರಿಸಿಕೊಂಡಿದ್ದರು ವಿ. ...ಟು!

...ದೆಲ್ಲ ನೋಡ್ತಾ ಇರಿ ಏನೇನ್ ಮಾಡ್ತೀವಿ ...ಗಾದರೆ ತಪ್ಪಾಯ್ತು ತಿದ್ಕೋತೀವಿ ಹುಚ್ಚಾಟಗಳದ್ದೇ ...ಂದು ಕತೆ. ಪ್ರತಿನಿತ್ಯ ತಪ್ಪಾಯ್ತು ತಿದ್ಕೋತೀವಿ ... ಬರುತ್ತಲೇ ಇತ್ತು. ಅಂದರೆ ದಿನ ಪತ್ರಿಕೆಯೊಂದು ...ನಿತ್ಯವೂ ಒಂದಲ್ಲ ಒಂದು ಯಡವಟ್ಟು ...ತ್ತಿದೆಯೆಂದೇ ಅರ್ಥ.


...ರುಬರುತ್ತ ಇದು ಕ.ಪ್ರ.ದ ವರದಿಗಾರರ ನಡುವಿನ ...ಂಗಣವಾಯಿತು. ತನಗಾಗದವನ ಯಾವುದೋ ...ಯ ವಿರುದ್ಧ ಮತ್ತೊಬ್ಬ ಪತ್ರ ಬರೆಸುವುದು, ಇನ್ನೊಬ್ಬನ ...ಯ ವಿರುದ್ಧ ಮಗದೊಬ್ಬ ಬೇನಾಮಿಯಾಗಿ ...ವುದು; ಹೀಗೆ ಒಬ್ಬನ ವಿರುದ್ಧ ಮತ್ತೊಬ್ಬ ಬರೆಸಿದ್ದೆಲ್ಲ ...ದ್ದೇ ಪತ್ರಿಕೆಯಲ್ಲಿ ಪ್ರಕಟವಾಗುವುದು, ಇದನ್ನೆಲ್ಲ ...ಗರು ಓದಿ ಬಿಟ್ಟೀ ಮನರಂಜನೆ ಗಿಟ್ಟಿಸುವುದೇ ...ರಿಯಾಗಿ ಹೋಯಿತು.


...ಂಥ ಹುಚ್ಚಾಟದ ವಿರುದ್ಧದ ಟೀಕೆಗಳಿಗೆ ತ್ರಾಪೆ ...ಬ ಹೋಗಿ ಭಟ್ಟರು ಕೆಳಗಿಂದ ಮೇಲೆ ಉಲ್ಟಾಪಲ್ಟಾ ...ಗುಗಳನ್ನು ಮುದ್ರಿಸುವುದು, ಬಾಣ ಭಟ್ಟ ಎಂಬ ...ವಳಿಯ ಕಾಲಮ್ಮಿನಲ್ಲಿ ಚುಚ್ಚುವುದು, ತನ್ನ ...ತನಗಳನ್ನೇ ನೂರೆಂಟು ಮಾತೆಂದು ಬರೆಯುವುದು ... ಹಚ್ಚಿಕೊಂಡರು. ಇವೆಲ್ಲವೂ ಬಾಲಿಶ ...ಡಿಕೆಗಳಂತಿದ್ದವು. ತೂಕದ ದಿನಪತ್ರಿಕೆಯೊಂದಕ್ಕೆ ...ೇಕಾದ ಗಂಭೀರತೆಯನ್ನೇ ಈ ಕಾಲಮ್ಮುಗಳು ...ಗೆಡುಹಿದವು.

ಭೈರಪ್ಪ ಠುಸ್

...ಯಾಕೋ ಇದ್ಯಾವುದೂ ಬರಕತ್ತಾಗುತ್ತಿಲ್ಲ ಎನ್ನಿಸಿರಬೇಕು. ...ಯನ್ನೇ ಪತ್ತೆ ಹಚ್ಚಿದಂತೆ ಭಟ್ಟರು ಬ್ರಹ್ಮಾಸ್ತ್ರ ಬಿಟ್ಟರು. ... ಎಸ್.ಎಲ್. ಭೈರಪ್ಪನವರ ಕಾಲಂ. ಪ್ರತಾಪ್ ಸಿಂಹನ ... ಜಗತ್ತಿನ ಸುಧಾರಿತ ತಳಿಯೆಂಬಂತೆ ಭೈರಪ್ಪನವರ ...ಮ್ಮಗೆ 'ಪರ್ವ' ಎಂದು ಹೆಸರಿಟ್ಟರು. ಕಾದಂಬರಿಕೋರ ...ಪ್ಪನವರ ತಪೋಭಂಗ ಮಾಡ್ತಾ ಇದ್ದೀವಿ, ನೋಡ್ತಾ ಇರಿ ಭೈರಪ್ಪ ಕಾಲಮ್ಮಿಗೆ ಸರ್ಕ್ಯುಲೇಷನ್ನು ಕಿತ್ಕೊಂಡು ಹೋಗುತ್ತೆ ಜನ ಪೇಪರ್ ಖರೀದಿಗೆ ಕ್ಯೂ ನಿಂತ್ಕೋತಾರೆ ಎಂದೆಲ್ಲ ಭಟ್ಟರ ಗ್ಯಾಂಗ್ ಕುಣಿದದ್ದೇ ಬಂತು.

ಹೆಚ್ಚೂ ಕಮ್ಮಿ ವರ್ಷ ಕಾಲ ಭೈರಪ್ಪನವರ ಕಾಲಮ್ಮೇನೋ ಪ್ರಕಟವಾಯಿತು. ಆದರದೂ ಸಿಂಹನ ಬೆತ್ತಲೆ ಜಗತ್ತಿಗಿಂತಲೂ ಕಳಪೆಯಾಗಿತ್ತು. ಅದೇ ಕೇಸರಿ ಚಿಂತನೆ. ಅದೇ ಸನಾತನ ವಾದ. ಹೇಳಿದ್ದೇ ಹೇಳಿದ ಕಿಸುಬಾಯಿ ದಾಸನಂತೆ ಭೈರಪ್ಪಾಜಿ ಅಕ್ಷರ ಕೆತ್ತಿದ್ದೇ ಕೆತ್ತಿದ್ದು. ಕ.ಪ್ರ.ದ ಒಂದೇ ಒಂದು ಪ್ರತಿಯೂ ಹೆಚ್ಚಾಗಲಿಲ್ಲ. ಅಸಲಿಗೆ ಭೈರಪ್ಪನವರ ಕಾಲಮ್ಮೇ ಗಮನಾರ್ಹವಾಗಲಿಲ್ಲ. ಏಕೆಂದರೆ ಆ ಹೊತ್ತಿಗಾಗಲೇ ಕನ್ನಡಪ್ರಭವನ್ನು ಜನ ಮರೆತಾಗಿತ್ತು. ಸಿಂಹನ ಕಾಲಮ್ಮು, ವಿಕ್ರಮದ ಲೇಖನಗಳು, ತೊಗಾಡಿಯಾ ಭಾಷಣ, ಮುತಾಲಿಕ್ ವಾಗ್ಬಾಣಗಳಿಗಿಂತ ಭೈರಪ್ಪ ಕಾಲಮ್ಮು ಭಿನ್ನವಾಗಿರಲು ಸಾಧ್ಯವೆ?



ತಮಾಷೆಯೆಂದರೆ; 'ನೋಡ್ತಾ ಇರಿ ಭೈರಪ್ಪ ಏನೇನ್ ಬರೀತಾರೆ' ಎಂದು ಬರೋಬ್ಬರಿ ತಿಂಗಳಪೂರ್ತಿ ಜಾಹಿರಾತು ಕೊಟ್ಟರೂ ಪರ್ವ ಕಾಲಮ್ಮಿಗೆ ಬೋಣಿಯಾಗಿರಲಿಲ್ಲ!

ಈ ಮಧ್ಯೆ ಭಟ್ಟರ ಪಾಳೆಯದಲ್ಲೇ ಪರಸ್ಪರ ಕಚ್ಚಾಟಗಳಾದವು. ತ್ಯಾಗರಾಜ್ ಕಿತ್ತು ಹಾಕಿ ಆ ಜಾಗಕ್ಕೆ ಬಡ್ತಿಯನ್ನು ತಂದಿದ್ದಕ್ಕೆ ಭಟ್ಟರ ವಿರುದ್ಧ ತ್ಯಾಗರಾಜ್ ತಿರುಗಿಬಿದ್ದ ಗುಲ್ಲೆದ್ದಿತು. ಬಡ್ತಿ ಮತ್ತು ತ್ಯಾಗರಾಜ್ ಮಧ್ಯೆ ಮುಸುಕಿನ ಗುದ್ದಾಟಗಳಾದವು: ಭಟ್ಟರ ಆಪ್ತ ಬಳಗದ ವರದಿಗಾರರಿಗೆ ಐದೋ ಹತ್ತೋ ಸಾವಿರ ಸಂಬಳ ಹೆಚ್ಚಿಸಲಾಯಿತು. ಭಟ್ಟರ ಭಟ್ಟಂಗಿಗಳಲ್ಲದವರಿಗೆ ಕೇವಲ ಸಾವಿರ ಅಥವಾ ಎರಡು ಸಾವಿರ ಮಾತ್ರವೇ ಹೆಚ್ಚಿಸಿದ್ದು ಮತ್ತಷ್ಟು ರಾದ್ಧಾಂತವಾಯಿತು. ಯಾವ ಯೋಗ್ಯತೆಯೂ ಇಲ್ಲದೆ ಭಟ್ಟರ ಭಟ್ಟಂಗಿಗಳಾದವರಿಗೆ ಕೈತುಂಬಾ ಸಂಬಳ, ಎಲ್ಲಾ ಪ್ರತಿಭೆಯಿದ್ದೂ ಚೆಡ್ಡಿಗಳಲ್ಲದ ವರದಿಗಾರರಿಗೆ ಪುಡಿಕಾಸಿನ ಪಗಾರ!

ಗಿಮ್ಮಿಕ್ಕು ಟೆಕ್ನಿಕ್

ಚೆಡ್ಡಿ ಚಿಂತನೆಗಳಿಲ್ಲ ಎಂಬ ಒಂದೇ ಕಾರಣಕ್ಕೆ ಎಡಿಟೋರಿಯಲ್ ಕೋ-ಆರ್ಡಿನೇಟರ್ ಆಗಿದ್ದ ಅಹೋಬಲಪತಿಯವರನ್ನು ಕಿತ್ತು ಆ ಜಾಗಕ್ಕೆ ಭಟ್ಟಂಗಿ ಯತಿರಾಜ್‌ನನ್ನು ತರಲಾಯಿತು, ತಲೆಯಲ್ಲಿ ಏನಾದರೂ ಇದ್ದರೆ ತಾನೇ ಯತಿರಾಜ ಸಂಪಾದಕೀಯ ಬರೆಯುವುದು ಅಹೋಬಲಪತಿ ಕೆಲಸವನ್ನೇ ಬಿಟ್ಟರೆ ಯತಿರಾಜ್ ಕಲೆಕ್ಷನ್ನಿನಲ್ಲಿ ಬಿಜಿಯಾದರು. ಬರೆಯುವ ತಾಕತ್ತಿದ್ದ ಅಗಾಧ ಪ್ರತಿಭೆಯಿದ್ದ ದಾವೆಂಕಿಯನ್ನು ಕಿತ್ತು ಆ ಜಾಗಕ್ಕೆ ಏನೇನೂ ಬಾರದ ಹರೀಶ್ ಕೇರ ಎಂಬ ಮತ್ತೊಂದು ಭಟ್ಟಂಗಿಯನ್ನು ತಂದರು. ಪುರವಣಿಗಳ ಗುಣಮಟ್ಟ ಕುಸಿಯಿತು. ಹೇಗೂ ಪತ್ರಿಕೆ ನಡೆಯುತ್ತೆ ದುಡ್ಡು ಹಾಕೋರು ಯಾರೋ. ಸುದ್ದಿಯ ಗುಣಮಟ್ಟ, ವರದಿಗಳ ತೂಕ, ಲೇಖನಗಳ ಮಹತ್ವ ಕಟ್ಟಿಕೊಂಡು ಏನಾಗಬೇಕು? ಅಷ್ಟಕ್ಕೂ ಮ್ಯಾನೇಜ್‌ಮೆಂಟಿಗೆ ಕನ್ನಡವೆಲ್ಲಿ ಗೊತ್ತು?

ಇದು ವಿ. ಭಟ್ಟರ ಮನಸ್ಥಿತಿ. ಭೈರಪ್ಪರ ಪರ್ವ ಕಾಲಮ್ಮಿನಂತೆ ಅಡ್ವಾಣಿಯ ಸಲಹೆಗಾರರಾಗಿದ್ದ ಸುಧೀಂದ್ರ ಕುಲಕರ್ಣಿಯ ಪುಸ್ತಕದ ಗಿಮ್ಮಿಕ್ಕಿಗೆ ಕೈಯಿಟ್ಟರು. ಪತ್ರಿಕೆಯೊಂದು ಕನ್ನಡಿಗರಿಗೆ ಗೊತ್ತೇ ಇಲ್ಲದವನೊಬ್ಬನ ಪುಸ್ತಕ ಬಿಡುಗಡೆಯನ್ನು ಆ ಪಾಟಿ ಮಹತ್ವ ಕೊಟ್ಟು ಮಾಡುತ್ತಾ ಕೂತರೆ ಅದನ್ನು ಗಮನಿಸುವವರಾದರೂ ಯಾರು?

ಇಂಥ ಗಿಮ್ಮಿಕ್ಕು, ಹುಚ್ಚಾಟ, ಯಡವಟ್ಟುಗಳಲ್ಲೇ ಭಟ್ಟರ ಎರಡೂವರೆ ವರ್ಷ ಕಳೆದುಹೋಯಿತು. ಅದೇ ಮುತಾಲಿಕ್ ಶೈಲಿಯ ಚಿಂತನೆಗಳು, ವರದಿಗಳು. ಮಿಕ್ಕಂತೆ ಭಟ್ಟರ ತೀಟೆ ತೆವಲುಗಳು. ಓದುಗರ ವಿವೇಚನೆಗಿಂತಲೂ ತನ್ನ ಮೂಗಿನ ನೇರಕ್ಕೆ ಬರೆಯುತ್ತಾ ಹೋದರೆ ಅದು ಹೇಗೆ ತಾನೇ ಪತ್ರಿಕೆಯಾಗಲು ಸಾಧ್ಯ? ಈ ಪುರುಷಾರ್ಥಕ್ಕೆ ಭಟ್ಟರ ಸಂತತಿಯ ಚೇಲಾ ವರದಿಗಾರರಿಗೇಕೆ ಏಷ್ಯಾನೆಟ್ ಕಂಪನಿ ಕೈತುಂಬಾ ಸಂಬಳ ಕೊಟ್ಟು ಸಾಕುತ್ತದೆ?

ಅಷ್ಟಕ್ಕೂ, ಏಷ್ಯಾನೆಟ್ ಧಣಿಗೀಗ ಬಿಜೆಪಿ, ಅನಂತ್‌ಕುಮಾರ್ ಹಂಗಿಗಿಂತಲೂ ಕಾಂಗ್ರೆಸ್‌ನ ಅನಿವಾರ್ಯತೆಯೇ ಹೆಚ್ಚು ಏಕೆಂದರೆ ಮುಂಬರುವ ರಾಜ್ಯಸಭಾ ಚುನಾವಣೆ ಹೊತ್ತಿಗೆ ಕಾಂಗ್ರೆಸ್‌ನ ಹೆಚ್ಚುವರಿ ಮತಗಳು ಬೇಕು. ಹಾಗೊಮ್ಮೆ ಬಿಜೆಪಿ ಅನಿವಾರ್ಯವಾದರೂ ಅದಕ್ಕೊಂದು ಭಟ್ಟರ ದಂಡಪಿಂಡಗಳನ್ನು ಪೋಷಿಸಿಕೊಳ್ಳಬೇಕಾದ ಜರೂರತ್ತಿಲ್ಲ, ಹಾಗೇ ಬಿಟ್ಟರೆ ಭಟ್ಟರ ಖಯಾಲಿಗೆ ಸಿಲುಕಿದ ಕನ್ನಡ ಪ್ರಭದ ಕೊನೆಯುಸಿರೂ ಉಳಿಯುವುದಿಲ್ಲ, ಇದೆಲ್ಲ ಲೆಕ್ಕ ಹಾಕಿಯೇ ಭಟ್ಟರಿಗೆ ಗೇಟ್ ಪಾಸ್ ರೆಡಿ ಮಾಡಿದ್ದಾರೆ.

ನಕೋಜಾ...!

ಬಹುಶಃ ಇದು ಮೊದಲೇ ಗೊತ್ತಿತ್ತೇನೊ, 'ಕನ್ನಡ ಪ್ರಭ ಬಿಟ್ಟು ವಿಜಯ ವಾಣಿಯನ್ನು ಇಂಪ್ರೂವ್ ಮಾಡೋಣ ಅಂತಿದ್ದೀನಿ...' ಎಂದು ವಿಆರ್‌ಎಲ್ ಧಣಿ ವಿಜಯ್ ಸಂಕೇಶ್ವರ್‌ಗೆ ಮಸ್ಕಾ ಹೊಡೆದಿದ್ದಾರೆ. ಯಾಮಾರಲು ಸಂಕೇಶ್ವರ್ ತಾನೇ ದಡ್ಡರಲ್ಲವಲ್ಲ. 'ನಾನು ದುಡ್ಡ ಹಾಕಿ ನಿನ್ನ ಖಯಾಲಿಗೆ ಪತ್ರಿಕೆ ಮಾಡೋವಷ್ಟು ದಾರಿದ್ರ್ಯ ನನಗಿಲ್ಲ... ನಕೋಜಾ...' ಎಂದಿದ್ದಾರೆ. ಬಂದ ದಾರಿಗೆ ಸುಂಕವಿಲ್ಲ ಎಂದು ಜೋಲುಮೋರೆಯಲ್ಲೇ ಭಟ್ಟರು ವಾಪಸ್ಸಾಗಿದ್ದಾರೆ. ವಿಜಯ ಕರ್ನಾಟಕದ ಬಾಗಿಲು ಮುಚ್ಚಿ ಯಾವುದೋ ಕಾಲವಾಗಿತ್ತು. ಇನ್ನು ಉದಯವಾಣಿಗೆ ಭಟ್ಟರನ್ನು ಕಟ್ಟಿಕೊಂಡು ಹೆಣಗುವ ಕಷ್ಟ ಖಂಡಿತಾ ಇಲ್ಲ, ಸಂಕಗೆ ಹೋದರೆ ಮಾನ ಮೂರಾಬಟ್ಟೆ, ಹೊಸ ದಿಗಂತಕ್ಕೆ ಬಂದರೆ ಖಾಲಿ ತಟ್ಟೆ.

ಕೊನೆಗೆ ತಾನೇ ಒಂದು ಪತ್ರಿಕೆ ಮಾಡ್ತೀನಿ ಎಂದು ಬಿಜೆಪಿ ನಾಯಕ ಆರ್. ಅಶೋಕ್‌ಗೆ ದುಂಬಾಲು ಬಿದ್ದರಂತೆ. ತನ್ನ ಲಾಭಕ್ಕಲ್ಲದೇ ಇನ್ನಾರೋ ದಂಡಪಿಂಡಗಳನ್ನು ಸಾಕಲು ಅಶೋಕ್ ತಾನೇ ಮೂರ್ಖರಲ್ಲವಲ್ಲ, ಹೋಗಲಿ ಸ್ವಯಂ ನಿವೃತ್ತಿಯ ಪ್ಯಾಕೇಜಾದರೂ ಕೊಡಿ ಎಂದು ಏಷ್ಯಾನೆಟ್ ಮುಖ್ಯಸ್ಥರನ್ನು ಭಟ್ಟರು ಗೋಗರೆದರೆ ಅದಕ್ಕೂ ಚಿಕ್ಕಾಸಿನ ಕಿಮ್ಮತ್ತು ಸಿಕ್ಕಿಲ್ಲವಂತೆ. ಬಡಿಯಲು ಬಾಗಿಲುಗಳಿಲ್ಲ, ಕೊಂಡ ಟಿಕೆಟ್ಟಿಗೆ ಬಸ್ಸು ಬರುವುದೂ ಇಲ್ಲ.


ಅಂದಹಾಗೆ... ನೋಡ್ತಾ ಇರಿ ಏನೇನ್ ಮಾಡ್ತೀವಿ!

ನೋಡುದ್ರಲ್ಲಾ ಏನೇನ್ ಗತಿ ಕಾಣಿಸಿದ್ವಿ...?

■ ವರದಿಗಾರ

...ಾರವಾಡ ಅಂಜುಮಾನ್ ಚುನಾವಣೆ

...ತಮಾಟಗಾರ ಗುಂಪು ಗೆಲುವಿನ ಹೊಸ್ತಿಲಲ್ಲಿ



...ಒಂದು ಶತಮಾನದಷ್ಟು ಹಳೆಯದಾದ ...ಬ್ಬಳ್ಳಿ-ಧಾರವಾಡ ಅಂಜುಮಾನ್ ಸಂಸ್ಥೆಗೆ ಮೇ 10ರಂದು ...ನಾವಣೆ ನಡೆಯಲಿದೆ. 1914 ರಲ್ಲಿ ಅಬ್ದುಲ್ ...ರ್‌ಖಾನ್ ಪಠಾಣ ಎಂಬುವವರು ಮುಸ್ಲಿಂ ಸಮಾಜದ ...ವೃದ್ಧಿಗಾಗಿ, ಶೈಕ್ಷಣಿಕ ಸೌಲಭ್ಯಕ್ಕಾಗಿ ಧಾರವಾಡದಲ್ಲಿ ...ಬುನಾಡಿದ್ದೇ ಈ ಅಂಜುಮಾನ್ ಸಂಸ್ಥೆ. ಕೆಲವೇ ...ಂದ ಶುರುವಾದ ಸಂಸ್ಥೆ ಇಂದು 4 ಸಾವಿರಕ್ಕೂ ... ಜನರ ಸದಸ್ಯತ್ವ ಹೊಂದಿದೆ. ರಾಜಕೀಯ ...ವಣೆಗಳಲ್ಲಿ ಈ ಭಾಗದಲ್ಲಿ ಮುಸ್ಲಿಂ ಮತಗಳು ...ಯಕ ಪಾತ್ರ ವಹಿಸುವುದರಿಂದ ವಿವಿಧ ರಾಜಕೀಯ ...ಗಳೂ ಅಂಜುಮಾನ್ ಸಂಸ್ಥೆಯ ಚುನಾವಣೆಯಲ್ಲಿ ...ದೇ ಬೆಂಬಲಿಗರು ಗೆಲ್ಲಲಿ ಎಂದು ಒಳಗಿಂದೊಳಗೇ ...ತ್ತು ಪಡೆಸುವುದು ರಹಸ್ಯವಾಗೇನೂ ಉಳಿದಿಲ್ಲ ...ಕೀಯ ಮಹತ್ವಾಕಾಂಕ್ಷೆ ಹೊಂದಿರುವ ಮುಸ್ಲಿಂ ಯುವ ...ಕರಿಗೆ ಇದೊಂದು ವೇದಿಕೆಯಾಗಿಯೂ ಹೆಸರಾಗಿದೆ. ...ಂದರೆ ಇಲ್ಲಿ ಗೆದ್ದವರಿಗೆ ರಾಜಕೀಯ ಸ್ಥಾನಮಾನಗಳೂ ...ಕಿ ಬರುತ್ತಿವೆ. ಹೀಗಾಗಿ ಧಾರವಾಡ ಹಾಗೂ ಹುಬ್ಬಳ್ಳಿ ...ಜುಮಾನ್ ಸಂಸ್ಥೆಗಳು ಇಂದು ರಾಜಕೀಯ ಅಡ್ಡೆಗಳಾಗಿದೆ ...ಲೆ ತಪ್ಪಾಗಲಾರದು.

...ಹುಬ್ಬಳ್ಳಿ ಅಂಜುಮಾನ್ ಸಂಸ್ಥೆಗಿಂತ ಪೂರ್ವದಲ್ಲಿ ...ದ ಅಸ್ತಿತ್ವದಲ್ಲಿ ಧಾರವಾಡ ಅಂಜುಮಾನ್ ಸಂಸ್ಥೆ ...ತ್ತು. ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವ ಮೂಲಕ ಬಡ ಮುಸ್ಲಿಂರಿಗೆ ಶಿಕ್ಷಣ ನೀಡುವುದಕ್ಕೆ ತನ್ನನ್ನು ತೊಡಗಿಸಿಕೊಂಡಿತು. ಕಾಲಕ್ರಮೇಣ ರಾಜಕೀಯ ಹಾಗೂ ಆಳುವ ಸರ್ಕಾರಗಳ ಸಹಾಯ ಪಡೆದು ಹುಬ್ಬಳ್ಳಿ ಅಂಜುಮಾನ್ ಸಂಸ್ಥೆ ತನ್ನ ಕಾರ್ಯವ್ಯಾಪ್ತಿಯನ್ನು ಶಿಕ್ಷಣ ಕ್ಷೇತ್ರದಲ್ಲಿ ವಿಸ್ತರಿಸಿಕೊಂಡಿತು. ಆದರೆ ಧಾರವಾಡ ಅಂಜುಮಾನ್ ಸಂಸ್ಥೆ ಹೆಚ್ಚಿನ ಮುತುವರ್ಜಿ ವಹಿಸದ ಕಾರಣ ಹಿಂದುಳಿಯಿತು. ಆದರೂ ಧಾರವಾಡ ಅಂಜುಮಾನ್ ಸಂಸ್ಥೆ ತನ್ನದೇ ಛಾಪು ಉಳಿಸಿಕೊಂಡಿದೆ. ಅಂಜುಮಾನ್ ಸಂಸ್ಥೆ 8 ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದೆ. ಅಲ್ಲದೇ ಹಾನಗಲ್‌ನಲ್ಲಿ ಹೈಸ್ಕೂಲ ಹಾಗೂ ಜೂನಿಯರ್ ಕಾಲೇಜ್ ನಡೆಸುವುದರ ಜೊತೆಗೆ ಧಾರವಾಡದಲ್ಲಿ ಕಾಲೇಜ್, ಪ್ರಾಥಮಿಕ, ಮಾಧ್ಯಮಿಕ ಶಾಲೆ, ಬಿಎಡ್, ಬಿಬಿಎ ಮೊದಲಾದ ಶಿಕ್ಷಣ ನೀಡುವ ಸಂಸ್ಥೆಗಳನ್ನು ನಡೆಸುತ್ತಿದೆ.

ಧಾರವಾಡದಲ್ಲಿ ಮುಸ್ಲಿಂ, ಮರಾಠ, ದಲಿತ ಓಟುಗಳು ಕಾಂಗ್ರೆಸ್ ಗೆಲುವಿಗೆ ಕಾರಣವಾಗಿದ್ದವು. ಅದರಲ್ಲಿ ಅಂಜುಮಾನ್ ಪಾತ್ರ ದೊಡ್ಡದಾಗಿತ್ತು. ಹೀಗಾಗಿ ಧಾರವಾಡದಿಂದ ಎಸ್.ಆರ್. ಮೋರೆಯಂತಹ ಮರಾಠಿಗ ಕಾಂಗ್ರೆಸ್‌ನಿಂದ ಆಯ್ಕೆಗೊಳ್ಳುತ್ತಿದ್ದ ಹಾಗೂ ಮಂತ್ರಿಮಂಡಳದಲ್ಲಿ ಸ್ಥಾನ ಕೂಡ ಪಡೆಯುತ್ತಿದ್ದ. ಡಿ.ಕೆ.ನಾಯ್ಕರಂತಹ ಕುರುಬ ಸಮಾಜದವರು ವಿಧಾನಸಭೆ ಲೋಕಸಭೆಗೆ ಆಯ್ಕೆಗೊಳ್ಳುವಲ್ಲೂ ಧಾರವಾಡ ಅಂಜುಮಾನ್ ಸಂಸ್ಥೆಯ ಕೊಡುಗೆ ದೊಡ್ಡದಿದೆ.

ಆದರೆ ಚುನಾವಣೆಯಲ್ಲಿ ಗೆಲ್ಲುವುದಕ್ಕೆ ಮಾತ್ರ ಮುಸ್ಲಿಂ ಮತಗಳು ಬೇಕು ಎಂಬ ಎಸ್.ಆರ್. ಮೋರೆಯಂತಹ ಕಾಂಗ್ರೆಸ್ಸಿಗರಿಂದಾಗಿ ಧಾರವಾಡ ಅಂಜುಮಾನ್ ಮುಸ್ಲಿಂ ಮತಗಳು ಕೈಪಾಳಯ ಬಿಟ್ಟು ಅತ್ತಿತ್ತ ಹರಿದಾಡಲು ಆರಂಭಿಸಿದ್ದವು. ಅದರ ಫಲವಾಗಿಯೇ ಚಂದ್ರಕಾಂತ ಬೆಲ್ಲದ್‌ನಂಥ ಬಿಜೆಪಿ ಆಸಾಮಿ ಗೆದ್ದು ಬರುವಂತಾಗಿತ್ತು, ಈಗ ಅವನ ಮಗ ಅರವಿಂದ ಬೆಲ್ಲದ ತಂದೆಯ ಸ್ಥಾನದಲ್ಲಿ ಭದ್ರವಾಗಿ ತಳವೂರಲೂ ಮುಸ್ಲಿಂರನ್ನು ಕಡೆಗಣಿಸುತ್ತಿರುವ ಕಾಂಗ್ರೆಸ್ಸೇ ನೆರವಾಗುತ್ತಿದೆ. ಇಲ್ಲಿನ ಮುಸ್ಲಿಂ ಪ್ರಾಬಲ್ಯವನ್ನು ಅರಿತ ಹೆಚ್.ಡಿ. ಕುಮಾರಸ್ವಾಮಿ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಯುವ ಮುಸ್ಲಿಂ ನಾಯಕ ಇಸ್ಮಾಯಿಲ್ ತಮಾಟಗಾರನಿಗೆ ಜೆಡಿಎಸ್ ಟಿಕೆಟ್ ನೀಡಿದ್ದರು. ಆದರೆ ಬಸವರಾಜ ಹೊರಟ್ಟಿ ಒಳಗಿಂದೊಳಗೇ ಬಿಜೆಪಿ ಜೊತೆ ಒಪ್ಪಂದ ಮಾಡಿಕೊಂಡು ಬೆನ್ನಿಗೆ ಚೂರಿ ಹಾಕಿದ್ದರಿಂದ ತಮಾಟಗಾರ ಸೋಲಬೇಕಾಗಿ ಬಂದಿತ್ತು, ಇದರಿಂದ ಬೇಸತ್ತ ತಮಾಟಗಾರ ಈಗ ಕಾಂಗ್ರೆಸ್ ಪಕ್ಷ ಸೇರಿಕೊಂಡಿದ್ದಾರೆ.

ಈಗ ಮುಸ್ಲಿಂ ಸಮುದಾಯದಲ್ಲಿ ತಮಾಟಗಾರ ಪ್ರಭಾವಿ ಯುವ ನಾಯಕನಾಗಿ ಗುರುತಿಸಿಕೊಳ್ಳುತ್ತಿದ್ದಾನೆ. ಹಾಗಾಗಿ ಅಂಜುಮಾನ್ ಸಂಸ್ಥೆಯ ಚುನಾವಣೆಯಲ್ಲೂ ತನ್ನ ಪಾರಮ್ಯ ಮೆರೆಯುವುದು ಮುಕ್ಕಾಲು ಭಾಗ ಖಾತ್ರಿಯಾಗಿದೆ. ಹಾಗೇನಾದರು ಆದರೆ ಅದು ಕಾಂಗ್ರೆಸ್‌ಗೇ ಲಾಭ. ಯಾಕೆಂದರೆ ತಮಾಟಗಾರ ಈಗ ಕಾಂಗ್ರೆಸ್‌ನಲ್ಲೇ ಇರೋದರಿಂದ ಚುನಾವಣೆಗಳಲ್ಲಿ ಮುಸ್ಲಿಂ ಮತಗಳ ಖಾತ್ರಿ ಕಾಂಗ್ರೆಸ್‌ಗೆ ಇದ್ದಂತಿರುತ್ತದೆ. ಆದರೆ ಈಗಾಗಲೇ ರಾಜಕೀಯ ಸನ್ಯಾಸತ್ವ ಸ್ವೀಕರಿಸಿದಂತಿರುವ ಕಾಂಗ್ರೆಸ್‌ನ ಎಸ್.ಆರ್. ಮೋರೆ ತನ್ನ ವೈಯಕ್ತಿಕ ಲಾಭಕ್ಕೋಸ್ಕರ ಪಕ್ಷಕ್ಕೆ ಲುಕ್ಸಾನು ಮಾಡುವ ಹುನ್ನಾರದಲ್ಲಿದ್ದಾನೆ. ತನ್ನ ಮಗನ ರಾಜಕೀಯ ಮತ್ತು ರಿಯಲ್ ಎಸ್ಟೇಟ್ ದಂಧೆಯ ಸೇಫ್‌ಗಾರ್ಡ್‌ಗೋಸ್ಕರ ಈ ಚುನಾವಣೆಯಲ್ಲಿ ಇನ್ನೊಬ್ಬ ರಿಯಲ್ ಎಸ್ಟೇಟ್ ಕುಳ ರಸೂಲ ಧಾರವಾಡಕರನನ್ನು ತಮಾಟಗಾರನ ವಿರುದ್ಧ ಕಣಕ್ಕೆ ಇಳಿಸಿದ್ದಾನೆ. ಇತ್ತ ಬಸವರಾಜ್ ಹೊರಟ್ಟಿ ಕೂಡಾ ತನ್ನ ವಂಚನೆ ವಿರುದ್ಧ ತೊಡೆತಟ್ಟಿ ಹೊರನಡೆದ ತಮಟಾಗಾರನನ್ನು ಮಟ್ಟಹಾಕಲು ಅಂಜುಮಾನ್ ಸಂಸ್ಥೆಯ ಚುನಾವಣೆಯಲ್ಲಿ ಮುಸುಕಿನ ರಾಜಕಾರಣ ಶುರು ಮಾಡಿಕೊಂಡಿದ್ದಾನೆ. ತನ್ನ ಮಗ ವಸಂತನನ್ನು ಎಂಎಲ್‌ಸಿ ಚುನಾವಣೆಯಲ್ಲಿ ನಿಲ್ಲಿಸಿ ಸೋತು ಸುಣ್ಣವಾದರೂ ಹೊರಟ್ಟಿ ಸುಮ್ಮನಿಲ್ಲ.

ಧಾರವಾಡ ಅಂಜುಮಾನ್ ಸಂಸ್ಥೆಯಲ್ಲಿ ದಾನಿಗಳ ಕೋಟಾದಲ್ಲಿ 19 ಜನ, ಪ್ಯಾಟ್ರಾನ್ ಸದಸ್ಯತ್ವ 17 ಜನ, ಸಾಮಾನ್ಯ ಮತದಾರರು 3000 ಜನ ಒಟ್ಟು ಈ ಚುನಾವಣೆಯಲ್ಲಿ 4126 ಮತದಾರರು ಮತ ಚಲಾಯಿಸಲಿದ್ದಾರೆ. ಈಗಾಗಲೇ ಅರ್ಧ ಚುನಾವಣೆ ಅವಿರೋಧವಾದ ಸದಸ್ಯರಿಂದಲೇ ಮುಗಿದಿದೆ. 4 ಜನ ದಾನಿಗಳ ಕೋಟಾದಲ್ಲಿ, 3 ಜನ ಟ್ರಸ್ಟಿ ಕೋಟಾದಲ್ಲಿ ಮತ್ತು 5 ಜನ ಸಾಮಾನ್ಯ ವರ್ಗದಿಂದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಗೊಂಡಿದ್ದಾರೆ. 124 ಜನ ಎಕ್ಸಿಕ್ಯೂಟಿವ್ ಸದಸ್ಯರು ಅವಿರೋಧವಾಗಿ ಆಯ್ಕೆಗೊಳ್ಳುವ ಮೂಲಕ ಇಸ್ಮಾಯಿಲ್ ತಮಾಟಗಾರ ಬಣ ಜಯದ ಹೊಸ್ತಿಲಲ್ಲಿದೆ. ಇನ್ನೇನಿದ್ದರೂ ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿ




ಹಾಗೂ ಸಹ ಕಾರ್ಯದರ್ಶಿ ಸ್ಥಾನಕ್ಕೆ ಚುನಾವಣೆ ನಡೆಯಬೇಕಿದೆಯಷ್ಟೆ.

ಕಳೆದ ಬಾರಿ ಇದೇ ತಮಾಟಗಾರ ಹೆಚ್ಚು ಮತಗಳನ್ನು ಪಡೆದು ಅಂಜುಮಾನ್ ಸಂಸ್ಥೆಯ ಅಧ್ಯಕ್ಷರಾಗಿ ಆಯ್ಕೆಗೊಂಡಿದ್ದ. ಈಗ 2ನೇ ಬಾರಿಗೆ ಮತ್ತೆ ಅಧ್ಯಕ್ಷ ಸ್ಥಾನದ ಚುನಾವಣಾ ಕಣದಲ್ಲಿದ್ದರೆ, ಇದೇ ಗುಂಪಿನಿಂದ ಉಪಾಧ್ಯಕ್ಷ ಸ್ಥಾನಕ್ಕೆ ದಾಸನಕೊಪ್ಪ ಕಾರ್ಯದರ್ಶಿ ಸ್ಥಾನಕ್ಕೆ ಮನಿಯಾರ, ಸಹಕಾರ್ಯದರ್ಶಿ ಸ್ಥಾನಕ್ಕೆ ಶಿರಹಟ್ಟಿ ಸ್ಪರ್ಧಿಸಿದ್ದಾರೆ. ಹಿಂದಿನ ತನ್ನ ಅಧ್ಯಕ್ಷಾವಧಿಯಲ್ಲಿ ತಮಾಟಗಾರ, ಬೇರೆಯವರು ಆಕ್ರಮಿಸಿದ್ದ ಅಂಜುಮಾನ್ ಸಂಸ್ಥೆಗೆ ಸೇರಿದ ಜಮೀನನ್ನು ತಮ್ಮ ಸುಪರ್ದಿಗೆ ಪಡೆದು ಅದರ ಅಭಿವೃದ್ಧಿ ಕೆಲಸದಲ್ಲಿ ತೊಡಗಿಕೊಂಡಿದ್ದಾರೆ.

ಅಲ್ಲದೇ ತಮ್ಮ ಅವಧಿಯಲ್ಲಿ 4 ಕೋಟಿ 40 ಲಕ್ಷದಲ್ಲಿ ವಾಣಿಜ್ಯ ಮಳಿಗೆ ನಿರ್ಮಾಣ ಮಾಡಿ ಅದರಿಂದ ಆದಾಯ ಹರಿದುಬರುವಂತೆ ಮಾಡಿದ್ದಾರೆ. ಕೆಸಿಸಿ ಬ್ಯಾಂಕ್ ಎದುರು ಹಾಗೂ ಮೈಸೂರು ಬ್ಯಾಂಕ್ ಎದುರಿನ ಜಾಗದಲ್ಲಿ ಹೊಸ ವಾಣಿಜ್ಯ ಮಳಿಗೆ ನಿರ್ಮಾಣಗೊಳ್ಳುತ್ತಿವೆ. ಮಂಗಳಗಟ್ಟಿ ಗ್ರಾಮದಲ್ಲಿ ಅಂಜುಮಾನ್ ಸಂಸ್ಥೆ ಹೆಸರಿನಲ್ಲಿ ಫಾರಂಹೌಸ್ ನಿರ್ಮಾಣ ಮಾಡಲಾಗಿದೆ. ಇದೇರೀತಿ ಧಾರವಾಡ ಮುಸ್ಲಿಂ ಸಮಾಜದ ಸ್ಮಶಾನ ಜಾಗ ಅತಿಕ್ರಮಣ ತೆರವುಗೊಳಿಸುವುದಕ್ಕೂ ತಮಾಟಗಾರ ಮುಂದಾಗಿದ್ದರು. ಆದರೆ ಆಗ ಅಂಜುಮಾನ್ ಸಂಸ್ಥೆಯ ವಿರುದ್ಧ ದಲಿತರನ್ನು ಎತ್ತಿ ಕಟ್ಟಿ, ತಮಾಟಗಾರ ವಿರುದ್ಧ ದಲಿತ ದೌರ್ಜನ್ಯ ಕೇಸು ದಾಖಲಾಗುವಂತೆ ಪಿತೂರಿ ಮಾಡಿದ್ದ ರಿಯಲ್ ಎಸ್ಟೇಟ್ ಕುಳ ರಸೂಲ ಧಾರವಾಡಕರ ಇಂದು ಅದೇ ಸಂಸ್ಥೆಯ ಅಧ್ಯಕ್ಷ ಗಾದಿಗೆ ತಮಾಟಗಾರನಿಗೆ ಸಡ್ಡು ಹೊಡೆದು ನಿಂತಿದ್ದಾನೆ. ಇದಕ್ಕೆ ಹೊರಟ್ಟಿ ಮತ್ತು ಎಸ್.ಆರ್ ಮೋರೆಯಂತಹ ... ನೀಡುತ್ತಿದ್ದಾರೆ

■ ತುಬ್ಬಳ್ಳಿ ಯಾಂವ

ರಾಯಚೂರು: ಹುಲಿಗೆಮ್ಮನ ಗರ್ಭಗುಡಿ ಅತಿಕ್ರಮಣ



ವೆಂಕಟೇಶ ಆಚಾರ್

ಇಲ್ಲೊಂದು ವಿಚಿತ್ರ ಪ್ರಸಂಗವಿದೆ. ನೂರಾರು ವರ್ಷಗಳಿಂದ ದಲಿತರೇ ಪೂಜಾಕಾರ್ಯ ನಡೆಸುತ್ತಿದ್ದ ಹುಲಿಗೆಮ್ಮನ ಗುಡಿಗೆ ಇದೀಗ ದಿಢೀರನೆ ಬ್ರಾಹ್ಮಣ ಪೂಜಾರಿಯೊಬ್ಬ ವಕ್ಕರಿಸಿಬಿಟ್ಟದ್ದಾನೆ. ಇದು ನಡೆದದ್ದು ರಾಯಚೂರು ಜಿಲ್ಲೆಯ ಆರೋಲಿ ಗ್ರಾಮದ ಹುಲಿಗೆಮ್ಮನ ಗುಡಿಯಲ್ಲಿ. ಈ ಗುಡಿಗೆ ನೂರಾರು ವರ್ಷಗಳ ಇತಿಹಾಸವಿದೆ. ಮೇಲಾಗಿ ಕರ್ನಾಟಕ ಸರ್ಕಾರದ ಧಾರ್ಮಿಕ ದತ್ತಿ ಇಲಾಖೆಯ ಅಧಿಸೂಚಿತ ಪಟ್ಟಿಯಲ್ಲಿ ಈ ದೇವಸ್ಥಾನವೂ ಸೇರಿದೆ.

ಕೆಳ ವರ್ಗಗಳೇ ಹೆಚ್ಚಾಗಿ ಪೂಜಿಸುವ ಈ ಹುಲಿಗೆಮ್ಮನ ದೇವಸ್ಥಾನದ್ದು 200 ವರ್ಷಗಳಿಗೂ ಹೆಚ್ಚಿನ ಇತಿಹಾಸ. ಮುಂದೊಂದು ದಿನ ಈ ಗುಡಿ ಇಷ್ಟು ದೊಡ್ಡ ಮಟ್ಟಕ್ಕೆ ಬೆಳೆದು, ಇಂಥಾ ವಿವಾದಗಳಿಗೆ ದಾರಿಯಾಗುತ್ತದೆಂದು ಆ ದೇವಸ್ಥಾದ ಪೂಜಾರಿಗಳಿಗಿರಲಿ, ಸ್ವತಃ ಆ ಹುಲಿಗೆಮ್ಮನಿಗೂ ಗೊತ್ತಿರಲಿಲ್ಲವೇನೊ....

ಹುಲಿಗೆಮ್ಮ ಕೆಳಜಾತಿ-ವರ್ಗಗಳ ಆರ್ಥಿಕ-ಸಾಮಾಜಿಕ ಪ್ರತಿಬಿಂಬದಂತೆ. ಆರಂಭದ ದಿನಗಳಲ್ಲಿ ಮಳೆ-ಬಿಸಿಲು-ಗಾಳಿಗೆ ಮೈಯೊಡ್ಡಿಕೊಂಡೇ ಊರಿನ ಹೊರಗೆ ಈ ಹುಲಿಗೆಮ್ಮ ಬೆಳೆದಿದ್ದಾಳೆ. ಹುಲಿಗೆಮ್ಮನ ಭಕ್ತರು ತಮ್ಮ ಗುಡಿಸಲಿನ ಮನೆಗೆ ಬೆಳಕು ಇಲ್ಲದಿದ್ದರೇನು? ತಾಯಿ ಹುಲಿಗೆಮ್ಮನ ಗುಡಿಯಲ್ಲಿ ದೀಪ ಇದ್ದರೆ ತಮ್ಮ ಗ್ರಾಮ ಬೆಳಗೀತು ಎಂಬ ನಂಬಿಕೆಯಲ್ಲೇ ಗುಡಿಯ ದೀಪಕ್ಕೆ ಎಣ್ಣೆ ಹಾಕಿ, ದೀಪ ಬೆಳಗಿಸುತ್ತಾ ಬಂದಿದ್ದಾರೆ.

ಉತ್ತರ ಕರ್ನಾಟಕ ಭಾಗದ ಸೌದತ್ತಿ, ಚಂದ್ರಗುತ್ತಿಗಳಲ್ಲಿ ದೇವದಾಸಿ ಪದ್ಧತಿ, ಬೆತ್ತಲೆ ಸೇವೆಗೆ ಹೆಸರಾಗಿವೆ ಎಂಬುದು ನಮಗೆ ತಿಳಿದಿದೆ. ಹುಲಿಗಿ, ನೀರಮಾನ್ವಿ, ಆರೋಲಿ ಗುಡಿಗಳು ಅದೇ ಪರಂಪರೆಯವು. ಹಿಂದೆ ಇಲ್ಲೂ ದೇವದಾಸಿ, ಬೆತ್ತಲೆ ಸೇವೆ, ದೊಡ್ಡ ಬಲಿ ಎಲ್ಲವೂ ಇತ್ತು, ದಸಂಸ ಮತ್ತು ಇತರೆ ಪ್ರಜ್ಞಾವಂತರ ಸಂಘಟಿತ ಪ್ರತಿರೋಧದಿಂದ ಇಂದು ಇಲ್ಲವಾಗಿದೆ. ಆರೋಲಿಯಲ್ಲಿರುವುದು ಚಿಕ್ಕ ಹುಲಿಗೆಮ್ಮ. ಈಕೆಯ ಅಕ್ಕ ಹುಲಿಗಿಯ ಹಿರೆ ಹುಲಿಗೆಮ್ಮನ ಜಾತ್ರೆ ನಡೆದ ವಾರದ ಬಳಿಕ ತಂಗಿಯ ಜಾತ್ರೆ ಆರೋಲಿಯಲ್ಲಿ ನಡೆಯುತ್ತದೆ.

ಈ ಅಮ್ಮನಿಗೆ ಕೆಳವರ್ಗಗಳ ಜನತೆಯ ಪ್ರತಿ ಮನೆಮನೆಯೊಂದಿಗೂ ಕಳ್ಳು ಬಳ್ಳಿಯ ಸಂಬಂಧವಿದೆ. ಆಡಂಬರವಿಲ್ಲದ, ಸರಳವಾದ ಪೂಜೆ ಇಂಥಾ ಅಮ್ಮಂದಿರ ವಿಶೇಷ. ನಂಬಿಕೆಗೆ ಹೆಚ್ಚಿನ ಮಹತ್ವವಿರುವ ಈ ಜಾಗದಲ್ಲಿ ಸುಲಿಗೆಗೆ ಸ್ಥಾನವಿಲ್ಲ, ತನ್ನ ಅಕ್ಕ ತಂಗಿ ಮತ್ತಿತರ ಬಂಧುಗಳಂತೆ ಹುಲಿಗೆಮ್ಮ ಕೂಡ ಅಪ್ಪಟ ಮಾಂಸಾಹಾರಿ. ಇಲ್ಲಿ ಕೋಳಿ, ಕುರಿ, ಹೆಂಡದ ನೈವೇದ್ಯ ಸರ್ವೆ ಸಾಮಾನ್ಯವಾಗಿತ್ತು, ಇಂಥಾ ಶೂದ್ರ ಸಂಸ್ಕೃತಿ, ಪರಂಪರೆಗಳಿಗೆ ಸಾವಿರಾರು ವರ್ಷಗಳ ಇತಿಹಾಸವೇ ಇದೆಯೆಂದು ಬಲ್ಲವರು ಹೇಳುತ್ತಾರೆ.

ಈ ಹುಲಿಗೆಮ್ಮನಿಗೆ ಆರೋಲಿ ಗ್ರಾಮದ ಭೋವಿ ಸಮಾಜದವರೇ ಪೂಜಾರಿಗಳು. ಈ ಪೂಜಾರಿ ವಂಶಸ್ಥರು ಐದಾರು ತಲೆಮಾರುಗಳಿಂದಲೂ ಪೂಜಾ ಕಾರ್ಯ ನಡೆಸುತ್ತಾ ಬಂದಿದ್ದಾರೆ. ಶೂನ್ಯ ಆದಾಯದಿಂದ ಆರಂಭವಾದ ಈ ಗುಡಿಯ ಈಗಿನ ವಾರ್ಷಿಕ ಆದಾಯ ಸುಮಾರು 30 ಲಕ್ಷ! ಹೀಗಿರುವಾಗ ವಿವಾದಗಳು ಸೃಷ್ಟಿಯಾಗುವುದು ಸಹಜ ತಾನೇ?

ಈಗಿನ ಪೂಜಾರಿ ಮಲ್ಲಿಕಾರ್ಜುನ ಎಂಬುವವರ ಮೇಲೆ ಹಣದ ದುರುಪಯೋಗ ಮುಂತಾದ ಆರೋಪಗಳು ಕೇಳಿಬಂದವು. ಪೂಜಾರಿಯನ್ನು ಬದಲಾಯಿಸಬೇಕೆಂದು ಕೆಲವರು ಒತ್ತಾಯಿಸಿದ್ದರು. ಪೂಜಾರಿಯ ದುರ್ನೀತಿಯನ್ನು ಅವರ ಕುಟುಂಬಗಳ ಜನರೂ ವಿರೋಧಿಸಿದ್ದರು ಎಂಬುದು ಗಮನಿಸಬೇಕಾದ ಅಂಶ. ಈ ಗುಡಿ ಮುಜರಾಯಿ ಇಲಾಖೆಯಡಿ ಬರುವುದರಿಂದ ತಹಸೀಲ್ದಾರ್, ಎಸಿ ಕಚೇರಿಗಳಿಗೆ ದೂರು ನೀಡಲಾಯ್ತು. ಅಧಿಕಾರಿಗಳ ಮುಂದೆ ಪೂಜಾರಿ ತಪ್ಪೊಪ್ಪಿಗೆ ಹೇಳಿಕೆ ಕೊಡುವುದು ಅನಿವಾರ್ಯವಾಯ್ತು. ಜೊತೆಗೆ ದುರ್ಬಳಕೆ ಮಾಡಿಕೊಂಡಿದ್ದ 30 ಸಾವಿರ ಹಣವನ್ನು ವಾಪಸ್ ಕಟ್ಟಿ, ಅದಕ್ಕೆ ಸಂಬಂಧಿಸಿದ ರಸೀದಿಯನ್ನು ಅಧಿಕಾರಿಗಳಿಗೆ ಕೊಟ್ಟದ್ದೂ ಆಯ್ತು. ಆತನಿಗೆ ಎಚ್ಚರಿಕೆ ಕೊಟ್ಟು ಅಲ್ಲಿಗೆ ವಿಷಯವನ್ನು ಮುಕ್ತಾಯ ಮಾಡಬಹುದಿತ್ತು, ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದಿದ್ದರೆ ಆತನನ್ನು ಪೂಜಾಕಾರ್ಯದಿಂದ ರದ್ದುಗೊಳಿಸಿ, ಲಾಗಾಯ್ತಿನಿಂದ ನಡೆದುಬಂದ ರೀತಿಯಲ್ಲಿ ಅದೇ ಕುಟುಂಬದ ಅರ್ಹ ವ್ಯಕ್ತಿಯೊಬ್ಬರಿಗೆ ಈ ಜವಾಬ್ದಾರಿ ವಹಿಸಿಕೊಡಬಹುದಿತ್ತು, ಆದರೆ ನಡೆದಿದ್ದೇ ಬೇರೆ!

ತಟ್ಟೆಕಾಸಿಗೆ ಬ್ರಾಹ್ಮಣನ ಸ್ಕೆಚ್

ಇಂಥಾ ಸಂದರ್ಭಕ್ಕಾಗಿ ಕಾಯುತ್ತಿದ್ದ ಕೆಲವರು ಹುಲಿಗೆಮ್ಮನ ಗರ್ಭಗುಡಿಯನ್ನು ಆಕ್ರಮಿಸಿಕೊಳ್ಳಲು ಸ್ಕೆಚ್ ಹಾಕಿಬಿಟ್ಟರು. ತೆರೆಮರೆಯಲ್ಲಿ ಈ ಸ್ಕೆಚ್ ರೂಪಿಸಿದವರಲ್ಲಿ ವೆಂಕಟೇಶ ಆಚಾರ್ ಎಂಬ ಜನಿವಾರಧಾರಿ ಪ್ರಮುಖ.

ಸುಮಾರು 1000 ಕುಟುಂಬಗಳಿರುವ ಆರೋಲಿ ಗ್ರಾಮದಲ್ಲಿ ನಾಯಕ ಜನಾಂಗದವರೇ ಬಹುಸಂಖ್ಯಾತರು. ಎರಡನೇ ದೊಡ್ಡ ಸಂಖ್ಯೆಯೆಂದರೆ ಸುಮಾರು 150 ಮನೆಗಳಿರುವ ಮಾದಿಗ ಜನಾಂಗ. ಅದನ್ನು ಬಿಟ್ಟರೆ ಸುಮಾರು 50 ಮನೆಗಳು ಲಿಂಗಾಯತರು. ಹುಲಿಗೆಮ್ಮನ ಪೂಜಾರಿಗಳಾದ ಭೋವಿಗಳದು ಕೇವಲ -ಎಂಟು ಮನೆಗಳಷ್ಟೆ. ಬ್ರಾಹ್ಮಣ ವೆಂಕಟೇಶಾಚಾರ್‌ದು ಒಂದೇ ಕುಟುಂಬ.

ಹುಲಿಗೆಮ್ಮನ ಆದಾಯ ವೆಂಕಟೇಶಾಚಾರ್ ಬಾಯಲ್ಲಿ ನೀರು ತರಿಸಿತ್ತು, ಈ ಹಿಂದೆ 2011ರಲ್ಲಿ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಗೆ ತಾನೂ ಸದಸ್ಯನಾಗುತ್ತೇನೆಂದು ಅರ್ಜಿ ಗುಜರಾಯಿಸಿ ತಿರಸ್ಕೃತಗೊಂಡಿದ್ದ. ಹೇಗಾದರೂ ಗರ್ಭಗುಡಿಯಲ್ಲಿ ಜಾಗ ಹಿಡಿಯಬೇಕೆಂದು ಹವಣಿಸುತ್ತಿದ್ದ ಈ ಆಚಾರಿಗೆ ಪೂಜಾರಿಯ ಮೇಲಿನ ಆರೋಪ ಸುವರ್ಣಾವಕಾಶವಾಗಿ ಒದಗಿಬಂತು. ಈ ವಿಷಯಕ್ಕೆ ವೆಂಕಟೇಶಾಚಾರಿ ಬಳಸಿಕೊಂಡಿದ್ದು ಊರಿನ ಬಹುಸಂಖ್ಯಾತರಾದ ನಾಯಕ ಜನಾಂಗದ ಕೆಲ ಪುಢಾರಿಗಳನ್ನು.

ದಿನಾಂಕ 16-8-2012 ರಂದು ಈ ವೆಂಕಟೇಶಾಚಾರಿ ಮತ್ತು ಊರಿನ ಕೆಲ ಪುಢಾರಿಗಳು ಸೇರಿಕೊಂಡು ಪೂಜಾರಿಯನ್ನು ಬೆದರಿಸಿ ದೇವಸ್ಥಾನದ ಬೀಗದ ಕೀಲಿಯನ್ನು ಕಿತ್ತುಕೊಂಡೇಬಿಟ್ಟರು. ಭೋವಿ ಜನಾಂಗದವರು ಕೇವಲ ಎಂಟೇ ಕುಟುಂಬಗಳಾದ್ದರಿಂದ ಈ ದೌರ್ಜನ್ಯವನ್ನು ಪ್ರತಿರೋಧಿಸಲು ಸಾಧ್ಯವಾಗಲಿಲ್ಲ.

200 ವರ್ಷಗಳ ಹಿಂದಿನಿಂದಲೂ ಪೂಜೆ ಮಾಡುತ್ತಾ ಬಂದಿರುವ ಪೂಜಾರಿ ವಂಶಸ್ಥರು ತಹಸೀಲ್ದಾರ್‌ಗೆ, ಸಹಾಯಕ ಆಯುಕ್ತರುಗಳಿಗೆ ದೂರು ಕೊಟ್ಟರು. ಈ ಅಧಿಕಾರಿಗಳಿಬ್ಬರು ವೆಂಕಟೇಶಾಚಾರ್‌ಗೆ ನೋಟಿಸ್ ನೀಡಿ ಕಾನೂನು ಬಾಹಿರವಾಗಿ ದೇವಸ್ಥಾನ ಪ್ರವೇಶ ಮತ್ತು ಪೂಜಾರಿ ವೃತ್ತಿ ಮಾಡುತ್ತಿರುವ ಬಗ್ಗೆ ಆಕ್ಷೇಪಣೆ ಮಾಡಿ, ಕೂಡಲೇ ದೇವಸ್ಥಾನದ ಬೀಗದ ಕೀಲಿಯನ್ನು ತಹಸೀಲ್ದಾರ್ ಕೈಗೆ ಒಪ್ಪಿಸುವಂತೆ ಆದೇಶಿಸಿದರು.

ಆದರೆ ತಹಸೀಲ್ದಾರ್ ಆದೇಶಕ್ಕೆ ಆಚಾರಿ ಮತ್ತು ಆತನ ಪಟಾಲಂ ಕವಡೆ ಕಿಮ್ಮತ್ತೂ ಕೊಡಲಿಲ್ಲ. ಅನಿವಾರ್ಯವಾಗಿ ತಹಸೀಲ್ದಾರ್ ಈ ಬಗ್ಗೆ ಪೊಲೀಸ್ ಇನ್ಸ್‌ಪೆಕ್ಟರ್‌ಗೆ ದೂರು ನೀಡಿ ವೆಂಕಟೇಶ್ ಆಚಾರಿ ಅಕ್ರಮವಾಗಿ ದೇವಸ್ಥಾನಧ ಪೂಜೆ ನಡೆಸದಂತೆ ಆತನನ್ನು ನಿರ್ಬಂಧಿಸಿ ದೇವಸ್ಥಾನದ ಬೀಗದ ಕೈಯನ್ನು ಪಡೆದು ತಮ್ಮ ಕಚೇರಿಗೆ ತಲುಪಿಸಬೇಕೆಂದು ಸೂಚಿಸಿದರು. ಆದರೆ ಅಷ್ಟರಲ್ಲಾಗಲೇ ವೆಂಕಟೇಶಾಚಾರಿ ನಾಯಕ ಜನಾಂಗದ ಮುಖಂಡರನ್ನಿಟ್ಟುಕೊಂಡು ಸ್ಥಳೀಯ ಎಂಪಿ-ಎಂಎಲ್‌ಎಗಳ ಮೇಲೆ ಪ್ರಭಾವ ಬೀರಿದ್ದ. ಈ ಭಾಗದಲ್ಲಿ ನಾಯಕ ಜನಾಂಗದ ಓಟುಗಳೇ ನಿರ್ಣಾಯಕವಾದ್ದರಿಂದ ಅವರನ್ನು ಎದುರು ಹಾಕಿಕೊಳ್ಳುವ ರಿಸ್ಕು ಯಾರಿಗೂ ಬೇಡ. ಮೇಲಾಗಿ ಈ ಭಾಗದಲ್ಲಿ ಎಂಎಲ್ಎ, ಎಂಪಿ ಆಗಿರುವವರು ನಾಯಕ ಜನಾಂಗದವರೇ. ನಾಯಕರ ಓಟನ ಮೇಲೆ ಕಣ್ಣಿಟ್ಟಿರುವ ಕಾಂಗ್ರೆಸ್ ನಾಯಕ ಬೋಸರಾಜ್ ಈ ವಿಷಯದಲ್ಲಿ ಹೆಚ್ಚು ತಲೆ ಹಾಕಿದ್ದಾರೆಂಬ ಸುದ್ದಿಗಳೂ ಚಾಲ್ತಿಯಲ್ಲಿವೆ. ಒಟ್ಟಾರೆ ಪೊಲೀಸ್ ಇನ್ಸ್‌ಪೆಕ್ಟರ್‌ನ ಫೋನಿಗೆ ಭಾರೀ ತೂಕದ ಕರೆಗಳು ಬಂದವು. ಹಾಗಾಗಿ ಪೊಲೀಸರು ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ.

ಭೋವಿ ಸಮುದಾಯದವರು ಪೂಜಾರಿ ವೃತ್ತಿ ಉಳಿಸಿಕೊಳ್ಳಲು ಕಲಬುರ್ಗಿ ವಿಭಾಗೀಯ ಕೋರ್ಟಿಗೆ ಹೋದರು. ಜಿಲ್ಲಾಧಿಕಾರಿಗಳು ಈ ವಿಷಯದಲ್ಲಿ ಯೋಚಿಸಿ ನಿರ್ಧಾರ ತೆಗೆದುಕೊಳ್ಳಬೇಕೆಂದು ಕೋರ್ಟ್ ಆದೇಶಿಸಿತು. ಇಷ್ಟೆಲ್ಲಾ ಆಗೋದರಲ್ಲಿ 2 ವರ್ಷಗಳು ಕಳೆದುಹೋಗಿವೆ. ಸದ್ಯ ವೆಂಕಟೇಶಾಚಾರ್ ತಾತ್ಕಾಲಿಕ ಪೂಜಾರಿ ಎಂಬ ಹೆಸರಿನಲ್ಲಿ ಗರ್ಭಗುಡಿಗೆ ವಕ್ಕರಿಸಿದ್ದಾನೆ. ಅಂತಿಮ ನಿರ್ಣಯ ತೆಗೆದುಕೊಳ್ಳಬೇಕೆಂದರೆ ಬೆಂಗಳೂರಿನ ಧಾರ್ಮಿಕ ದತ್ತಿ ಇಲಾಖೆಯು ವಿಚಾರಣೆ ಪೂರ್ಣಗೊಂಡು ಅದರ ವರದಿ ಹೊರಬರಬೇಕು. ಧಾರ್ಮಿಕ ದತ್ತಿ ಇಲಾಖೆಯ ಅಧಿಕಾರಿಗಳನ್ನು ಬುಕ್ ಮಾಡುವ ಕೆಲಸ ಸದ್ಯ ಚಾಲ್ತಿಯಲ್ಲಿದೆ. ಇತ್ತ ವಂಶ ಪಾರಂಪರಿಕವಾಗಿ ಪೂಜಾರಿ ಕೆಲಸ ಮಾಡುತ್ತಿದ್ದ ಭೋವಿ ಸಮುದಾಯ[...] ಹುಲಿಗೆಮ್ಮನಿಂದ ದೂರ ಮಾಡಲಾಗಿದೆ.

ಧಾರ್ಮಿಕ ದತ್ತಿ ಇಲಾಖೆಯಿಂದ ವಿಚಾರಣೆ[...] ನೇಮಕಗೊಂಡಿದ್ದ ಪಂಡಿತೋತ್ತಮರು ವಿಚಾರಣೆಯ [...] ನಡೆಸುತ್ತಿದ್ದ ದಿನವೇ ಊರಿನ ದಲಿತ ಯುವಕರು [...] ನಾಟಕವನ್ನು ಪ್ರಶ್ನಿಸಿದ್ದಾರೆ. ಆಚಾರಿ ಮತ್ತು ಆತನ ಪ[...] ದಲಿತ ಯುವಕರಿಗೆ ಅವಾಚ್ಯವಾಗಿ, ಜಾತಿಸ[...] ಪದಗಳಿಂದ ಬೈದಿದ್ದಾರೆ. ಈ ಬಗ್ಗೆ ಈ ಆಚಾರಿ ಮ[...] ಮೇಲೆ ಅಟ್ರಾಸಿಟಿ ಕೇಸು ಕೂಡ ದಾಖಲಾಗಿದೆ.

ಬ್ರಾಹ್ಮಣ್ಯದ ಹಿಡಿತದಲ್ಲಿ ದೇವಸ್ಥಾನ[...]

ಈ ದೇಶದ ತಳ ಸಮುದಾಯಗಳು ಆರಾಧ[...] ಬಹುತೇಕ ದೈವಗಳು ಪುರೋಹಿತಶಾಹಿ 'ಹಿ[...] ಪುರಾಣ'ಗಳಲ್ಲಿರುವ ದೈವಗಳಿಗಿಂತ [...] ಹುಲಿಗೆಮ್ಮನಂತೆಯೇ ಮಾರಮ್ಮ, ಯಲ್ಲಮ್ಮ, ಚೌ[...] ಕಬ್ಬಾಳಮ್ಮ, ಕಾಳಮ್ಮ ಹೀಗೆ ನೂರಾರು ಹೆಣ್ಣು ದೈ[...] ಹೆಚ್ಚಾಗಿ ತಳಸಮುದಾಯದ ಆರಾಧ್ಯ ದೈವ[...] ಸಾಮಾಜಿಕವಾಗಿ ಮೇಲುಗೈ ಸಾಧಿಸಿದ್ದ ಜನಿವಾ[...] ಅನಾದಿಯಿಂದಲೂ ಈ ದೈವಗಳನ್ನು ಅಸಡ್ಡೆಯ[...] ನೋಡುತ್ತಾ ಬಂದಿರುವುದು ತಿಳಿದ ಸಂಗತಿ. ಆದ[...] ದೈವ ಕ್ಷೇತ್ರಗಳು ಹೆಚ್ಚು ಜನಪ್ರಿಯಗೊಂಡು, ಆರ್ಥಿಕ[...] ಬಲಿಷ್ಠಗೊಳ್ಳುತ್ತಿದ್ದಂತೆ ದಿಢೀರ್ ಬದಲಾವಣೆ[...] ಸಂಭವಿಸುತ್ತವೆ. ಅದೇನು ಮಾಯವೋ ಏನ[...] ಅನಾದಿಯಿಂದಲೂ ಪೂಜೆ ಮಾಡಿಕೊಂಡು ಬ[...] ತಳ ಸಮುದಾಯದ ಪೂಜಾರಿಗಳನ್ನು ಬದಿಗೆ ಸರಿ[...] ಸ್ಥಾನಕ್ಕೆ ಜನಿವಾರಧಾರಿಗಳು ವಕ್ಕರಿಸಿಬಿಡುತ್ತಾರೆ.

ಹುಲಿಗೆಮ್ಮನ ಅಜುಬಾಜಿನಲ್ಲೇ ಇಂಥಾ [...] ಉದಾಹರಣೆಗಳಿವೆ. ಮಂತ್ರಾಲಯದ ಬಳಿಯ ಗಾಣ[...] ಪಂಚಮುಖಿ ದೇವಸ್ಥಾನ ಇಂಥಾ ವಿದ್ಯಮಾನಕ್ಕೆ ಮತ್ತೊ[...] ನಿದರ್ಶನ. ಅಲ್ಲಿ ಮೂಲತಃ ಕುರುಬ ಜನಾಂಗದ ಪೂ[...]ಗಳಿದ್ದರು. ಕಲ್ಲೂರು ಮಹಾಲಕ್ಷ್ಮಿ ಗುಡಿ, ನೀರಮಾ[...] ಯಲ್ಲಮ್ಮ ಗುಡಿ ಎಲ್ಲವೂ ದಲಿತ ಶೂದ್ರ ಜಾ[...] ಪೂಜಾರಿಗಳನ್ನು ಹೊಂದಿದ್ದ ಗುಡಿಗಳು. ಹೆಚ್ಚು ಜನಪ್ರಿ[...]ಗಳಿಸಿದ ಈ ಗುಡಿಗಳ ಆರ್ಥಿಕ ವಹಿವಾಟು ಹೆಚ್ಚಾಗು[...] ಎಲ್ಲೆಡೆ ಬ್ರಾಹ್ಮಣ ಪೂಜಾರಿಗಳೇ ಆರತಿ ತಟ್ಟೆ ಹಿ[...] ನಿಂತಿದ್ದಾರೆ. ಅದೊಂದು ನಿಯಮವೇನೋ ಎಂಬ[...]

ಮುಗ್ಧ ಭಕ್ತಾದಿಗಳಿಗೆ ಬೇಕಿರುವುದು ದೈವಭಕ್ತಿ, [...] ಹಣದ ಚಲಾವಣೆ ಹೆಚ್ಚುತ್ತಿದ್ದ ಹಾಗೆ ವಕ್ಕರಿಸುವ ಮ[...] ಬೇಕಿರುವುದೇನು? ಬೆಲ್ಲ ಇದ್ದ ಕಡೆ ನೊಣ ಮುತ್ತು[...] ಅಂತ ಗಾದೆಮಾತು ಸುಮ್ಮನೆ ಬಂದಿಲ್ಲ ಬಿಡಿ. ಪೂಜಾರಿಗಳು ಬರೀ ತಟ್ಟೆಕಾಸು ಮತ್ತಿತರ ಆ[...] ಮಾಡಿಕೊಂಡು ಹೋದರೆ ಹೋಗಲಿ, ಪರವಾಗಿಲ್ಲ, [...] ಇವರ ಆಗಮನದೊಂದಿಗೆ ಬ್ರಾಹ್ಮಣ ಪಾರಮ[...] ಮೆರೆಯುವ ಹಲವು ಅನಿಷ್ಟ ಆಚರಣೆ[...] ಜಾಗಪಡೆದುಕೊಳ್ಳುತ್ತವೆ. ಗರ್ಭಗುಡಿಯ ಮೇಲೆ ಸಂಪ[...] ಹಕ್ಕು ಇವರ ಕೈ ಸೇರುತ್ತದೆ. ದೇವಸ್ಥಾನದ ಗರ್ಭಗು[...] ಹಿಡಿತ ಎಂದರೆ ಅದೊಂದು ಪವರ್ ಸೆಂಟರ್ ಇದ್ದ[...] ಇದರ ಜೊತೆಜೊತೆಗೆ ಅಸ್ಪೃಶ್ಯತೆಯಂಥ ಕೊ[...] ಆಚರಣೆಗಳೂ, ಇನ್ನಾವುದೋ ಸುಡುಗಾಡು ನಿಯ[...]ವಳಿಗಳು ಜೊತೆ ಸೇರಿಕೊಳ್ಳುತ್ತವೆ. ದೇವಸ್ಥಾನದ ಆವರ[...] ಮಾಂಸಾಹಾರ ನಿಷಿದ್ಧವೆನಿಸಿ, ಇದೇ ಗುಡಿಯನ್ನು ಕಟ್ಟಿ[...] ಸಮುದಾಯಗಳ ಆಹಾರ ಪದ್ಧತಿಯ[...] ಕೀಳುಗಾಣಿಸಲಾಗುತ್ತದೆ. ಶ್ರಮಜೀವಿಗಳಾದ ನಾ[...] ಜನಾಂಗದವರು ವೆಂಕಟೇಶಾಚಾರಿಯ ಹಿಕಮತ್ತನ್ನು [...] ಮಾಡಿಕೊಂಡು, ಈ ಆಚಾರಿಗೆ ಗೇಟ್‌ಪಾಸ್ ಕ[...] ಉತ್ತಮ ವ್ಯಕ್ತಿಯೊಬ್ಬರನ್ನು ನೇಮಿಸಿಕೊಳ್ಳುವುದು ಒಳ್ಳೆ[...]

ತಳ ಸಮುದಾಯಗಳ ಮೇಲೆ ನಡೆಯುತ್ತಿರುವ [...] ಸಾಂಸ್ಕೃತಿಕ ದಾಳಿಗಳನ್ನು ತಡೆಗಟ್ಟಲು ರಚನ[...] ಕಾರ್ಯಕ್ರಮಗಳು ಅಷ್ಟಾಗಿ ಕಂಡುಬರುತ್ತಿಲ್ಲ, [...] ವಿದ್ಯಮಾನಕ್ಕೆ ನಾಡಿನ ಪ್ರಗತಿಪರ ಸಂಘಟನೆಗಳು, ಚಿಂ[...] ಮೂಕ ಸಾಕ್ಷಿಗಳಾಗಿದ್ದೇವೆ. ಹೆಚ್ಚೆಂದರೆ ಬೆಂಗಳೂರಿ[...] ಮಹಾನಗರದಲ್ಲಿ ಒಂದು ಸೆಮಿನಾರ್ ನಡೆಸಿ ಚರ್ಚಿಸ[...] ಎಂಥಾ ವಿಪರ್ಯಾಸ ಅಲ್ಲವೆ?

● ಕುಮಾರ್ ಸವ[...]



ಹುಲಿಗೆಮ್ಮನ ದೇವಸ್ಥಾನ

ಕರ್ನಾಟಕ ಸರಕಾರ

ಸಂ: ಕಂದಾಯ/ ದೇವಸ್ಥಾನ/ 2012-13

ತಹಸೀಲ್ ಕಾರ್ಯಾಲಯ
ಮಾನವಿ
ದಿನಾಂಕ: 27-08-2012

ಅಕ್ರಮ ದೇವಸ್ಥಾನ ಪ್ರವೇಶ ವಿರುದ್ಧ ನೋಟೀಸ್

ನೋಟೀಸ್

ವಿಷಯ:- ಆರೋಲಿ ಗ್ರಾಮದ ಶ್ರೀ ಹುಲಿಗೆಮ್ಮದೇವಿ ದೇವಸ್ಥಾನದಲ್ಲಿ ಅಕ್ರಮವಾಗಿ ಪ್ರವೇಶ ಮಾಡಿ ಪೂಜೆ ಮಾಡುತ್ತಿರುವ ಬಗ್ಗೆ.

* * * * * *

ನೀವು ದಿನಾಂಕ: 16-8-2012 ರಂದು ಆರೋಲಿ ಗ್ರಾಮದ ಶ್ರೀ ಹುಲಿಗೆಮ್ಮ ದೇವಿ ದೇವಸ್ಥಾನದ

KARNATAKA STATE POLICE

FIRST INFORMATION REPORT
(Under Section 154 Cr.P.C)

Before the Honourable Court of Addl. District & Sessions Court, Raichur
Dist., Raichur

1. District : Raichur   Circle/Sub Division : Manvi Circle   PS : Manvi PS

Crime No : 0071/2015   FIR Date : 03/03/2015

ವೆಂಕಟೇಶ ಆಚಾರ್ ವಿರುದ್ಧ ಎಫ್‌ಐಆರ್

ಕಿಸೆಗಳ್ಳನಿಗೆ ಶಿಕ್ಷೆ-ದರೋಡೆಕೋರನಿಗೆ ಪಟ್ಟ!

ಮಲ್ಲಿಕಾರ್ಜುನನ ಬದಲಿಗೆ ಪೂಜಾರಿ ಸ್ಥಾನಕ್ಕೇರಿರುವ ವೆಂಕಟೇಶಾಚಾರಿ ಸಭ್ಯಸ್ಥನೆಂದು ಭಾವಿಸುವಂತಿಲ್ಲ. ಮೇಲಾಗಿ ಈತನಿಗೂ ಹುಲಿಗೆಮ್ಮನಿಗೂ ಎತ್ತಕಡೆಯಿಂದ ನೋಡಿದರೂ ಏನೇನೂ ಸಂಬಂಧವಿಲ್ಲ. ಈತ ಹುಟ್ಟಿನಿಂದ ಬ್ರಾಹ್ಮಣ ಜಾತಿಯವನಾದರೂ ಪೂಜಾರಿ ವೃತ್ತಿ ಮಾಡಿದವನಲ್ಲ, ಮೂಲತಃ ರಾಯಚೂರಿನಲ್ಲಿ ಮದುವೆ ಮುಂಜಿಗಳಲ್ಲಿ ಫೋಟೋ ಕ್ಲಿಕ್ಕಿಸಿಕೊಂಡು ಉದರ ಪೋಷಣೆ ಮಾಡಿಕೊಂಡಿದ್ದ. ಇದರಿಂದ ತೃಪ್ತನಾಗದೆ ಉತ್ತಮ ಅವಕಾಶ ಹುಡುಕಿ ಬೆಂಗಳೂರಿಗೆ ಹೊರಟ. ಅಲ್ಲಿ ಮಾಡಿದ ಕಾಯಕ ಏನು ಗೊತ್ತೆ? ಬೆಂಗಳೂರಿನ ನಂದಿನಿ ಲೇಔಟ್‌ನ ಜನರನ್ನು ನಂಬಿಸಿ ಬರೋಬ್ಬರಿ 14 ಲಕ್ಷ ರೂಪಾಯಿ ಕಮಾಯಿಸಿಕೊಂಡ. ಯಾವಾಗ ತಮ್ಮ ಹಣಕ್ಕೆ ಸಂಚಕಾರ ಬಂತೆಂದು ತಿಳಿಯಿತೋ ವಂಚಿತರೆಲ್ಲ ಸೇರಿ ವೆಂಕಟೇಶನಿಗೆ ಸರಿಯಾಗಿ ಗೂಸಾ ಕೊಟ್ಟರು. ಈ ಬಗ್ಗೆ ಈತ ಮತ್ತು ಇವನ ತಮ್ಮ ಗುರುರಾಜ ವಿರುದ್ಧ ಎಫ್‌ಐಆರ್ ಸಂಖ್ಯೆ 44/2011ರಲ್ಲಿ ಕಲಂ 341, 506 ಜೊತೆಗೆ 34 ಐ.ಪಿ.ಸಿಯಡಿ ಪ್ರಕರಣ ದಾಖಲಾಗಿದೆ. ದಿನಾಂಕ 2/2/2011 ರಂದು ಪೊಲೀಸರು ಈತನನ್ನು ಅರೆಸ್ಟ್ ಮಾಡಿದ್ದರು.

ಈಗ ಹುಲಿಗೆಮ್ಮನ ಪರಿಸ್ಥಿತಿ ಹೇಗಾಗಿದೆಯೆಂದರೆ ಸಣ್ಣ ಕಳ್ಳನನ್ನು ಶಿಕ್ಷಿಸಿ ಭಾರೀ ಖದೀಮನನ್ನು ಕಾವಲಿಗಿಟ್ಟಂತಾಗಿದೆ. ಈ ರೀತಿಯ ಅಪರಾಧ ಪ್ರಕರಣದ ಹಿನ್ನೆಲೆಯ ವ್ಯಕ್ತಿ ಹುಲಿಗೆಮ್ಮ ದೇವಸ್ಥಾನದ ಪೂಜಾರಿ ಹೇಗಾದ ಎಂಬುದು ಆಶ್ಚರ್ಯದ ಸಂಗತಿ. ಜಾತಿಯಲ್ಲಿ ಬ್ರಾಹ್ಮಣ ಎನ್ನುವ ಒಂದೇ ಕಾರಣವೇ? ಇತರೆ ಕನಿಷ್ಠ ಅರ್ಹತೆಗಳು ಬೇಡವೆ? ಧಾರ್ಮಿಕ ದತ್ತಿ ಇಲಾಖೆ ಕಾಯ್ದೆಯೇ ಹೇಳುವಂತೆ ಈ ರೀತಿಯ ಅಪರಾಧ ಹಿನ್ನೆಲೆ ಇರುವ ವ್ಯಕ್ತಿಗಳು ಯಾವುದೇ ದೇವಸ್ಥಾನದ ಪೂಜಾರಿ ಆಗುವಂತಿಲ್ಲ.

...ಅಂಬರೀಸಣ್ಣ ಕಾಂಗ್ರೆ ಪ್ರೆಸಿಡೆಂಟಾದ್ರೆ ಮಜಾ ಇರತದೆ!

...ರಾಷ್ಟ್ರಕವಿ ಆಯ್ಕೆಗೆಂದು ನೇಮಕಗೊಂಡಿದ್ದ ಸಮಿತಿ ...ಗಳನುಗಟ್ಟಲೆ ಅಳೆದು ಸುರಿದು ಸಾಕಾದರೂ ...ದಲ್ಲಿರುವ ಕವಿಗಳು ರಾಷ್ಟ್ರಮಟ್ಟಕ್ಕೇರಲೇ ಇಲ್ಲವಂತಲ್ಲಾ. ...ಕವಿಪಟ್ಟ ತಮ್ಮ ಕಡೆಗೆ ತಿರುಗಬಹುದೆಂದು ನಂಬಿದ್ದ ...ಬಾರ ಮತ್ತು ನಿಸ್ಸಾರ್ ಅಹಮದ್ ಕಡೆಗೂ ...ಶರಾದರಂತಲ್ಲಾ. ಕಂಬಾರ ಜನಪದ ಕವಿ; ಆತ ...ಕೊಂಡು ಬರೆದದ್ದೆಲ್ಲಾ ಜಾನಪದದಿಂದ. ಇನ್ನ ...ಯಾಗಿ ನೋಡಿದರೆ ಸಣ್ಣ ಮನುಷ್ಯ. ಕೇಡಿಗತನವೂ ... ನಿಸ್ಸಾರ್ ಅಹಮದ್‌ಗೆ ಈಗಾಗಲೇ ಸಿಗುವುದಕ್ಕಿಂತ ...ನ ಗೌರವ, ಬೆಲೆ ಸಿಕ್ಕೇಬಿಟ್ಟಿದೆ. ಇನ್ನ ಈ ಗೌರವಕ್ಕೆ ...ನರಾಗುವ ಅರ್ಹತೆಯುಳ್ಳ ಕಣವಿಯವರು ವ್ಯಕ್ತಿತ್ವದಲ್ಲಿ ...ಷ್ಟವರು. ಕಾವ್ಯದಲ್ಲಿ ಸಮನ್ವಯತೆ ಸಾಧಿಸಿದವರು. ...ರೆ ಅವರೇ ರಾಷ್ಟ್ರಕವಿ ಎಂದರೆ ಒಪ್ಪಲಾರರು. ...ಳಿದಂತೆ ಕನ್ನಡ ಕಾವ್ಯ ಭೂಮಿ ಬರಡಾಗಿ ...ಗಿರುವುದರಿಂದ, ರಾಷ್ಟ್ರಕವಿ ಬಿರುದೇ ಪ್ರಜಾಪ್ರಭುತ್ವಕ್ಕೆ ...ರುವ ಅವಮಾನ ಎಂಬ ವರದಿಯನ್ನು ಸಲ್ಲಿಸಿದರಂತಲ್ಲಾ. ...ವರದಿ ಅಂಶವನ್ನು ಆಡಿಕೊಂಡಿರುವ ಹಾಲಂಬಿ ...ಯಕ್ಷಗಾನದ ನಟ "ರಾಷ್ಟ್ರಕವಿ ಪದವಿ ಅರಸೊತ್ತಿಗೆಯ ...ಯುಳಿಕೆ ಎನ್ನುವುದಾದರೆ, ನೀವು ಈ ಕೂಡಲೇ ...ಮಹಲ್ ಹೊಡೆದು ಹಾಕಿ, ಜಯಮಹಲ್ ಬೀಳಿಸಿ. ...ಅರಮನೆಯನ್ನು ಕೂಡ ಜೆಸಿಬಿ ತರಿಸಿ ಡೆಮಾಲಿಷ್ ...ಇದೆಲ್ಲಾ ಆದಮೇಲೆ ಕನ್ನಂಬಾಡಿ ಕಟ್ಟೆಯನ್ನು ...ಹಾಕಿ" ಎಂದು ಚೀರಿದರಂತಲ್ಲಾ, ಥೂತ್ತೇರಿ!

******

...ಮಾರಸ್ವಾಮಿಯವರು ಉತ್ತರ ಕರ್ನಾಟಕದಲ್ಲಿ ಹೊಸ ...ಗ್ರೆಸ್ಸಿನಿಂದ ಅಲೆದು ಪಾರ್ಟಿ ಕಟ್ಟುತ್ತಿರಬೇಕಾದರೆ, ... ಆಸ್ತಿ ಮಾಡಿಕೊಟ್ಟ ಸತ್ಯ ಹೊರಬಿದ್ದಿದೆಯಲ್ಲಾ. ...ು ಆಸ್ತಿಯನ್ನು ಅಳಿಯ ದಾನ ಮಾಡಿದ ಎಂಬ ...ರ ಗಾದೆ ಅನಾದಿಕಾಲದಿಂದಲೂ ಚಾಲ್ತಿಯಲ್ಲಿರುವಾಗ, ... ಆಸ್ತಿಯನ್ನು ಅತ್ತೆಗೇ ದಾನ ಮಾಡಿದ ಅಳಿಯ ... ಕೀರ್ತಿಗೆ ಕುಮಾರಣ್ಣ ಭಾಜನರಾದರಂತಲ್ಲಾ. ಈ ...ಕುಮಾರಣ್ಣನನ್ನು ಕೇಳಿದರೆ "ಅಲ್ರಿ, ಹೆಣ್ಣು ಕೊಟ್ಟು ... ಹೊಸ ಕಣ್ಣು ಕೊಟ್ಟಂತ ತಾಯಿ ಸಮಾನರಾದ ...ಅತ್ತೆಗೆ. ಬಂದು ಮನೆ ಕಟ್ಟಿ ಕೊಳ್ಳಕಂತ ಜಾಗ ..., ಅದನ್ನು ಅಧಿಕಾರಿಗಳನ್ನು ಕೇಳಿ ಕಾನೂನು ರೀತಿ ...ಟಿಫಿಕೇಷನ್ ಮಾಡಿ, 60 ಲಕ್ಷ ರೂಪಾಯಿಗಳಿಗೆ ...ು ಮಾಡ್ತಕ್ಕಂತ ಪ್ರಕರಣ ಏನಿದೆ, ಅದು ಲೋಕಾಯುಕ್ತ ...ಸರು ತನಿಖೆ ಮಾಡ್ತಕ್ಕಂತ ವಿಷಯವೆ ಅನ್ನೋದರ ... ಕರ್ನಾಟಕದ ಆರು ಕೋಟಿ ಜನ ಯೋಚನೆ ...ಕ್ಕಂತ ವಿಷಯ. ನಮ್ಮ ತಂದೆ ಹೆಗಡೆ ಸರಕಾರದಲ್ಲಿ ...ಲ್ನಾಡಿ ಮಂತ್ರಿಗಳಾಗಿದ್ದಾಗ ಮೈಸೂರಿನಲ್ಲಿ ಪಾಪ ...ಗೆ ಮನೇಲಿದ್ದಂತ ಅವರ ನಾದಿನಿಗೆ ಒಂದು ಸೈಟು

ಕೊಟ್ಟಾಗ್ಲು ಇದೇ ತರ ಸುಳ್ಳು ಸುದ್ದಿಗಳನ್ನು ಪಬ್ಲಿಸಿಟಿಕ್ಕಂತ ಕೆಲಸವನ್ನು ಮಾಡಿದ್ರು. ಈಗ್ಲು ಅದೇ ಜನ ನನ್ನ ಅತ್ತೆಗೆ ಆರ್.ಟಿ. ನಗರದಲ್ಲಿ ಮನೆ ಕಟ್ಟಿಕೊಳ್ಳೊ ವಿಷಯದಲ್ಲಿ ಸಹಾಯ ಮಾಡಿದ್ದಕ್ಕೂ ಕಲ್ಲಾಕ್ತಾಯಿದಾರೆ. ಸೂಕ್ತ ಸಂದರ್ಭ ಬಂದಾಗ ಈ ಪ್ರಕರಣದ ಹಿಂದೆ ಯಾರ್ಯಾರಿದ್ದಾರೆ ಅನ್ನತಕ್ಕಂತದ್ದ ಮಾಧ್ಯಮದ ಮುಂದೆ ಹೇಳ್ತಿನಿ" ಅಂದಿಲ್ಲವಂತಲ್ಲಾ, ಥೂತ್ತೇರಿ!!

******

ರೆಬೆಲ್‌ಸ್ಟಾರ್ ಅಂಬರೀಶ್‌ರವರು ತಮ್ಮ ವಸತಿ ಖಾತೆ ವಿಷಯದಲ್ಲಿ ರೆಬೆಲ್ಲಾಗಿ ಪಾರ್ಟಿ ಪ್ರೆಸಿಡೆಂಟ್



ಆಗುತ್ತಾರಂತಲ್ಲಾ. ಈ ಸುದ್ದಿಯಿಂದಲೇ ಮಂಡ್ಯ ಜಿಲ್ಲೆಯ ಕಾಂಗ್ರೆಸಿಗಳು, ತ್ರಿಬಲ್ಸ್ ರಂ ಕುಡಿದು, ಚಿತ್ತಾದಂತೆ ಮಾತನಾಡತೊಡಗಿದ್ದಾರಂತಲ್ಲಾ. ಅಂಬಣ್ಣ ಪಾರ್ಟಿ ಪ್ರೆಸಿಡೆಂಟಾದರೆ ನನಗೆ ಎಮ್ಮೆಲ್ಲೆ ಟಿಕೆಟ್ ಗ್ಯಾರಂಟಿ, ನನಗೆ ಜಿಲ್ಲಾ ಪಂಚಾಯ್ತಿ ಟಿಕೆಟ್, ನನಗೆ ಪಟ್ಟಣ ಪಂಚಾಯ್ತಿ ಟಿಕೆಟ್, ಹೀಗೆ ರಾಜಕಾರಣದ ಅಮಲಲ್ಲಿ ತೇಲುವಂತಹ ವಾಟಿಸ್ಸೆಗಳೆಲ್ಲಾ ಮನಸ್ಸಿಗೆ ಬಂದಂತೆ

ಮಾತನಾಡುತ್ತಿದ್ದಾರಂತಲ್ಲಾ, ನಾವು ಈ ಬಗ್ಗೆ ವಾಟಿಸ್ಸೆಯನ್ನೇ ಕೇಳಿದರೆ ಹೇಗೆ ಅನ್ನಿಸಿ ಫೋನ್ ಮಾಡಲಾಗಿ ರಿಂಗಾಯ್ತು.

ರಿಂಗ್ ಟೋನ್: "ಯಕ್ಕ ನಿನ್ನ ಮಗಳು ನನಗೆ ಚಿಕ್ಕೋಳಾಗಲವ ಪಕ್ಕದ ಮನೆ..."

"ಹಲೋ ಯಾರೂ?"

"ನಾನು ವಾಟಿಸ್ಸೆ ಯಾಹೂ."

"ಗುಡ್‌ಮಾರ್ನಿಂಗ್! ಏನೇಳಿ ಸಾರ್?"

"ಅಂತೂ ಮಂಡ್ಯಾ ಜಿಲ್ಲೆಯವರಿಗೆ ಲಕ್ಕಿನ ಮ್ಯಾಲೆ ಲಕ್ಕು."

"ಯಾವ ಲಕ್ಕು ಸಾರ್ ಏನಿಸೇಸ?"

"ಅಂಬರೀಶ್ ಪಾರ್ಟಿ ಪ್ರಸಿಡೆಂಟ್ ಆಗ್ತರಂತೆ."

"ಮ್ಯಾಟ್ರು ನನಗೂ ಗೊತ್ತಾಯ್ತು ಸಾರ್. ಕಾಂಗ್ರೆಸ್ ಪಾರ್ಟಿ ಕತೆ ಮುಗಿಯೋ ಟೈಮಲ್ಲಿ ಫೈನಲ್ ಟಚ್‌ಗೆ ಅಂತ ಅಂಬರೀಶ್ ಟ್ರೈಟ್ ಮಾಡಬಹುದು. ವಾಟೆವರ್ ಇಟ್ ಮೇಬಿ ಗುಡ್ ಡಿಸಿಸನ್."

"ಅಂಗಂತಿಯಾ?"

"ಹೌದು ಸಾರ್. ವಸತಿ ಖಾತೆಗಿಂತ ಪಾರ್ಟಿ ಪ್ರಸಿಡೆಂಟ್ ಕೆಲಸ ಈಜಿ. ಟೂರೋಗಂಗಿಲ್ಲ, ಐಬಿಲುಳಕಳದು, ಪಾರ್ಟಿ ಮಾಡಿಕೊಂಡು ಬರದು ಇಷ್ಟೇ ಅಲವ ಸಾರ್? ಆಕ್ಚುವಲಿ ಕಾಂಗ್ರೆ ಪಾರ್ಟಿ ಪ್ರಸಿಡೆಂಟ್ ಕೆಲಸ ಈಜಿ ಸಾರ್."

"ಅಂಗಾದ್ರೆ, ಸಿದ್ದರಾಮಯ್ಯ ವಸತಿ ಖಾತೆನ ಪರಮೇಶ್ವರನಿಗೆ ಕೊಟ್ಟು, ಪಾರ್ಟಿ ಪ್ರಸಿಡೆಂಟಾಗಿ ಅಂಬರೀಶ್ ಮಾಡದೆ ಸರಿ ಅಂತಿಯಾ?"

"ಸರಿ, ಆದ್ರೂ ಅಂಗಾಗದಿಲವಲ್ಲ."

"ಯಾಕಾಗದಿಲ್ಲ?"

"ಹೈಕಮಾಂಡ್ ಮಂಡ್ಯದಲ್ಲಿ ಅಂಬರೀಶ್ ಪಾರ್ಟಿ ಯಂಗಿಟ್ಟವುನೆ ಅಂತ ನೋಡ್ತದೆ. ಕಳೆದ ಎಂಪಿ ಎಲಕ್ಷನ್‌ನ್ನಲಿ ರಮ್ಯ ಯಾಕೆ ಸೋತ್ಲು ಅಂತನೂ ನೋಡ್ತದೆ. ಆದ್ರಿಂದ ಅವುರು ಅಂಬರೀಸನ್ನ ಅಂಗೇ ಮಡಿಕಂದಿರತರೆ ಸಾರ್."

"ಅಂಗೇ ಮಡಿಕಂದಿರತರೆ ಅಂದ್ರೆ?"

"ಅಂದ್ರೆ ಅವುನೊಂತರ ಒಳ್ಳೆ ಮನ್ಸ ಸಾರ್, ಜೆಡಿಎಸ್‌ನಲ್ಲಿದ್ರೆ ಅಪ್ಪಮಕ್ಕಳ ಆಡಿಯಾಳಾಗಿರಬೇಕು, ಬಿಜೆಪಿಗೋದ್ರೆ ಮಳೆಯಾಳ ಮಾತಾಡಬೇಕು, ಅದೇ ಕಾಂಗ್ರೆಸ್‌ನಲ್ಲಿದ್ರೆ ತಮ್ಮಷ್ಟಕ್ಕೆ ಸ್ವತಂತ್ರವಾಗಿ ಕುಡಕಂಡು, ತಿನ್ನಕಂಡು, ಬದುಕಿರಬಹುದು. ಒಳ್ಳೆ ಮನ್ಸ ಅಂತ ಅನ್ನಿಸಿಕೊಬಹುದು."

"ಅಂತೂ ಅಂಬರೀಶ್ ಒಳ್ಳೆ ಮನ್ಸ ಅಂತ ಒಪ್ಪಿಗೊಂಡ

ಥೂತ್ತೇರಿ

▸ ಯಾಹೂ

ಮ್ಯಾಲೆ ಆತ ಪಾರ್ಟಿ ಪ್ರೆಸಿಡೆಂಟ್ ಯಾಕಾಗಬಾರದು?"

"ಪಾರ್ಟಿ ಪ್ರೆಸಿಡೆಂಟ್ ಅಂದ್ರೆ ಎದುರು ಪಾರ್ಟಿ ಎದುರುಸೊ ಒಳ್ಳೆ ಲೀಡರಾಗಬೇಕು ಸಾರ್. ಅಂಬರೀಶ್ ಎಲ್ಲಾರಿಗೂ ಬೇಕಾದೋನಾಗಬೇಕು ಅಂತ ಇರದರಿಂದ ಪಾರ್ಟಿ ಜನ ಹುಮ್ಮಸ್ಸು ಕಳಕತ್ತರೆ. ಈಗಾಗ್ಲೆ ಅಂಬರೀಶ್‌ನಾಗೆ ತುಂಬಾ ಸುಸ್ತಾಗಿದ್ರಿಂದ ಪಾರ್ಟಿ ಮನಿಕತ್ತದೆ. ಇದ್ದಲದಕ್ಕಿಂತ ಇನ್ನೊಂದು ಡೇಂಜರಸ್ ಪಾಯಿಂಟು ಯಾರಿಗೂ ಗೊತ್ತಿಲ್ಲ."

"ಏನದು ಡೇಂಜರಸ್ ಪಾಯಿಂಟು?"

"ಅಂಬರೀಸಣ್ಣ ನಂಬಿದೋರ ಕೈಬುಡದಿಲ್ಲ, ಅಂಗಾಗಿ ತನಗೆ ಊಟ, ವಸತಿ ಏರ್ಪಾಡು ಮಾಡಿದೋರಿಗೆ, ಅಂಬರೀಶ್ ಕಿ ಜೈ ಅಂದೋರಿಗೆ ಟಿಕೆಟ್ ಕೊಟ್ಟುಬುಡ್ತನೆ. ಹೈಕಮಾಂಡ್ ಅಬ್ಜಕ್ಷನ್ ಮಾಡಿದ್ರೆ ರಾಜಿನಾಮೆ ಕೊಟ್ಟುಬುಡ್ತನೆ."

"ಅಂಗಾದ್ರಿದು ಡೇಂಜರಸ್ ಪಾಯಿಂಟ್ ಬುಡು."

"ಇದಕ್ಕಿಂತ ಡೇಂಜರೊಂದಿದೆ ಸಾರ್. ದಟೀಸ್ ಮೋಸ್ಟ್ ಇಂಪಾರ್ಟೆಂಟು."

"ಅದೇನಪ್ಪ ಅಂತದ್ದು"

"ದೇವೇಗೌಡ್ರು, ಕುಮಾರಣ್ಣ ಹೇಳಿದ್ರು ಅಂತ ಜೆಡಿಎಸ್ ಎದ್ರಿಗೆ ಯಾವನೋ ನಸ್ತಂತ ಕ್ಯಾಂಡಿಡೇಟನೂ ಹಾಕಬುಡ್ತನೆ. ಆಗ ಜೆಡಿಎಸ್ ಕಾಂಗ್ರೆಸ್ಸಿಗಿಂತ ಜಾಸ್ತಿ ಸೀಟ್ ತಗಂಡ್ರೂ ತಗತ್ತೆಯ. ಆಗ ಅಂಬರೀಶ್‌ಗೂ ಒಳ್ಳೆದಾಯ್ತದೆ, ಜೆಡಿಎಸ್‌ಗೂ ಒಳ್ಳೆದಾಯ್ತದೆ."

"ಅದ್ಹಂಗೆ?"

"ಈ ಅಂಬರೀಶು ರಾಜಿ ಮಾಡದ್ರಲ್ಲಿ ನಿಸ್ಸೀಮ. ಇಂಥೋರು ನಮ್ಮೂರು ಕಡೆ ಜಾಸ್ತಿ ಅಂಗಾಗಿ ಕಾಂಗ್ರೆಸ್, ಜೆಡಿಎಸ್ ಸಮ್ಮಿಶ್ರ ಸರ್ಕಾರ ಬರಂಗೂ ಮಾಡಬುಲ್ಲ ಅಂತೂ ಏನಾರ ಮಾಡ್ತನೆ ಸಾರ್. ಏನಾರ ಮಾಡ್ಲಿ ಆ ಬಿಜೆಪಿಗಳು ತಿರಗ ಪವರಿಗೆ ಬರದಂಗೆ ಮಾಡಿದ್ರೆ ಸಾಕು ಸಾರ್."

"ಬಿಜೆಪಿನ್ನಾಕೆ ಅಷ್ಟು ದ್ವೇಷ ಮಾಡ್ತಿ?"

"ಯಾಕೆ ಅಂದ್ರೆ ಆ ಪಾರ್ಟೀಲಿ ಯಾರಿಗೂ ತಲೆ ಸರಿಯಿಲ್ಲ ಸಾರ್."

"ಥೂತ್ತೇರಿ!!!" ■


...ಲ್ಬರ್ಟ್ ಐನ್‌ಸ್ಟೀನ್‌ರ ದುಬಾರಿ ಡೈವೋರ್ಸ್

1903ರಲ್ಲಿ ಆಲ್ಬರ್ಟ್ ಐನ್‌ಸ್ಟೀನ್ ಮಲೇವಾ ಮಾರಿಕ್‌ಳನ್ನು ...ವೆಯಾದಾಗ, ಅವರು ಪರಸ್ಪರ ಆಳವಾಗಿ ಪ್ರೀತಿಸುತ್ತಿದ್ದರು; ಆದರೆ ...ಸದ ಅಂಚಿಗೆ ತಳ್ಳಲ್ಪಟ್ಟ ಬಡವರಾಗಿದ್ದರು. ಅವಳಿಗೆ ಪಾಲಿಟೆಕ್ನಿಕ್ ... ಪಾಸು ಮಾಡಲಾಗಿರಲಿಲ್ಲ; ಅವನಿಗೆ ಯಾವುದೇ ಶೈಕ್ಷಣಿಕ ಕ್ಷೇತ್ರದಲ್ಲಿ ...ಗ ಸಿಕ್ಕಿರಲಿಲ್ಲ. ಆದರೆ, 1909ರಲ್ಲಿ ಐನ್‌ಸ್ಟೀನ್ ತನ್ನ ಮೊದಲ ... ಉದ್ಯೋಗ ಗಳಿಸುವುದರಲ್ಲಿ ಯಶಸ್ವಿಯಾದ ಮತ್ತು ತನ್ನ ವೃತ್ತಿಜೀವನದಲ್ಲಿ ... ವೇಗವಾಗಿ ಮೇಲೇರತೊಡಗಿದ. ಐದು ವರ್ಷಗಳ ಅವಧಿಯೊಳಗೇ ... ಪ್ರಪಂಚದ ಅತ್ಯಂತ ಪ್ರತಿಷ್ಠಿತ ಪ್ರಾಧ್ಯಾಪಕ ಹುದ್ದೆಯನ್ನು ಹೊಂದಿದ್ದ ...ಜಗತ್ಪ್ರಸಿದ್ಧಂತ ಕೀರ್ತಿವಂತನಾಗಿದ್ದ. ಬೊಹೇಮಿಯನ್ ಬುದ್ಧಿಜೀವಿಗಳು ...ಸ್ಸ್ ಲೋಕದ ತಾರೆಗಳಾಗಿದ್ದರು. ಚೆಲುವೆಯರಿಗೆ ಅವನು ಚುಂಬಕ ... ಉಳ್ಳವನಾದ ಮತ್ತು ಸುಲಭದಲ್ಲಿ ತಡೆದುಕೊಳ್ಳಲಾರದಷ್ಟು ...ಕಾರಿಯಾಗಿದ್ದ, ಇಷ್ಟು ಹೇಳಿದರೆ ಸಾಕಾದೀತಲ್ಲವೇ? ಯಾಕೆಂದರೆ ...ನ್‌ಗೆ 'ಪತಿ ನಿಷ್ಠೆ'ಯಲ್ಲಿ ನೊಬೆಲ್ ಪ್ರಶಸ್ತಿ ಸಿಗಲು ಸಾಧ್ಯವೇ ಇರಲಿಲ್ಲ. ... ಪತ್ನಿ ಮಲೇವಾ ಇದರಿಂದೆಲ್ಲ ಘಾಸಿಗೊಳಗಾದಳು. ತನ್ನ ಸ್ವಂತದ ... ಅವಕಾಶಗಳನ್ನು ತನ್ನ ಪತಿಯ ವೃತ್ತಿ ಯಶಸ್ಸಿಗಾಗಿ ಅವಳು ತ್ಯಾಗ ...ಳು. ಈಗ ಅವನು ಪಡ್ಡೆ ಹುಡುಗನಂತೆ ಬೇಜವಾಬ್ದಾರಿಯಿಂದ ...ತ್ತಿದ್ದಾನೆ; ಅದೇ ಹೊತ್ತಿಗೆ ಅವಳು ಅವನ ಮಕ್ಕಳನ್ನು ನೋಡಿಕೊಳ್ಳುವ ...ಯಾಗಿದ್ದಳು. ಅವರಿಬ್ಬರ ನಡುವೆ ಗಂಭೀರ ಕಲಹಗಳು ಏರ್ಪಟ್ಟವು. ...ದಾಗಿ ಐನ್‌ಸ್ಟೀನ್ ಅವಳಿಂದ ದೂರ ಹೋಗುವಂತಾಯಿತು. ಅವಳು ... ವೈಯಕ್ತಿಕ ಸ್ವಾತಂತ್ರ್ಯವನ್ನು ಕಡಿತಗೊಳಿಸಲು ಪ್ರಯತ್ನಿಸಿದಾಗಲೆಲ್ಲಾ ... ಪ್ರಬಲವಾಗಿ ವಿರೋಧಿಸತೊಡಗಿದ. ಅವರ ದಾಂಪತ್ಯ ಜೀವನ ...ತಿಯು ... ಹೋಗತೊಡಗಿತು.

...12ರಿಂದ ಮೊದಲುಗೊಂಡು, ಐನ್‌ಸ್ಟೀನ್ ತನ್ನ ಸೋದರ ಸಂಬಂಧಿ ... ಪ್ರೀತಿಸತೊಡಗಿದ. ಅವಳು ಐನ್‌ಸ್ಟೀನ್‌ನನ್ನು "ಅವನು ಇರುವ ..." ಪ್ರೀತಿಸುವ ಮನೋಭಾವದವಳಾಗಿದ್ದಳು. ಮುಖ್ಯವಾಗಿ ಮಹಿಳೆಯರ ...ಯುತ್ತಾ, ಮರೆಗುಳಿ ಪ್ರೊಫೆಸರ್ ಆಗಿ ತನ್ನ ಭೌತಶಾಸ್ತ್ರದ ಸಿದ್ಧಾಂತಗಳ ...ಮುಳುಗಿಹೋಗುತ್ತಾ ಆದರೆ ಪ್ರಪಂಚದಾದ್ಯಂತ ಶ್ರೇಷ್ಠ ವಿಜ್ಞಾನಿ ಎನ್ನುವ ...ಖ್ಯಾತನಾಗಿ ಐನ್‌ಸ್ಟೀನ್ ಅಚ್ಚುಕಟ್ಟು / ಅವ್ಯವಸ್ಥೆಯ ಜೀವನ ನಡೆಸುತ್ತಿದ್ದ.

ಎಲ್ಲಾಗೆ ತಿಳಿದಿತ್ತು; ತನಗಿಂತಲೂ ಅವನು ತನ್ನ ಭೌತಶಾಸ್ತ್ರದ ಕೆಲಸವನ್ನೇ ಹೆಚ್ಚು ಪ್ರೀತಿಸುತ್ತಿದ್ದ-ಎಂದು.

ಮಲೇವಾ ಮತ್ತು ಎಲ್ಸಾ-ತಮ್ಮ ಸ್ವಭಾವಗಳಲ್ಲಿ ಸಂಪೂರ್ಣವಾಗಿ ಭಿನ್ನರಾಗಿದ್ದರು. ಮಲೇವಾ ಐನ್‌ಸ್ಟೀನ್‌ನ ಬೌದ್ಧಿಕ ಸಹೋದ್ಯೋಗಿ ಆಗಿದ್ದವಳು.



ಎಲ್ಸಾಗೆ ಅಡುಗೆ ಮಾಡುವುದೆಂದರೆ ಇಷ್ಟ. ಒಮ್ಮೆ ಅವಳು ಹೀಗೆ ಹೇಳಿದ್ದಳು: ಐನ್‌ಸ್ಟೀನ್ ಏನು ಮಾಡುತ್ತಿದ್ದಾನೆಂದು ತನಗೆ ನಿಜಕ್ಕೂ ತಿಳಿದಿಲ್ಲ, ಅವನು ಪ್ರಸಿದ್ಧ ಭೌತಶಾಸ್ತ್ರಜ್ಞ ಎನ್ನುವ ಪ್ರಾಥಮಿಕ ಅರಿವು ಮಾತ್ರ ಅವಳಿಗಿತ್ತು.

1914ರಲ್ಲಿ ಐನ್‌ಸ್ಟೀನ್ ತನ್ನ ಪತ್ನಿ ಮಲೇವಾಗೆ ಈ ರೀತಿಯ ನೋಟಿಸು ನೀಡಿದ.

- ❖ ಅವಳು ಅವನ ಬಟ್ಟೆಗಳನ್ನು ಒಗೆದು, ಒಪ್ಪಓರಣವಾಗಿಡುವ ಕೆಲಸ ಮಾಡಬೇಕು.
- ❖ ಅವನ ಕೋಣೆಯಲ್ಲಿ ಅವನಿಗೆ ಊಟ, ತಿಂಡಿಗಳನ್ನು ನೀಡಬೇಕು.
- ❖ ಅವನ ಕೋಣೆಯನ್ನು ಸ್ವಚ್ಛವಾಗಿಡಬೇಕು.
- ❖ ಅವನ ಮೇಜು, ಡೆಸ್ಕ್‌ಗಳಲ್ಲಿರುವ ಕಾಗದ, ಪುಸ್ತಕಗಳನ್ನು ಮುಟ್ಟಬಾರದು.
- ❖ ಅವನಿಂದ ಯಾವುದೇ ದೈಹಿಕ ಸುಖ ನಿರೀಕ್ಷಿಸಬಾರದು.
- ❖ ಅವನಿಗೆ ಇಷ್ಟವಿಲ್ಲದಿದ್ದರೆ, ಅವನ ಜತೆ ಮಾತನಾಡಬಾರದು. ಅವನನ್ನು ಅವನಷ್ಟಕ್ಕೆ ಬಿಟ್ಟು ಬಿಡಬೇಕು. ಏಕಾಂತಭಂಗ ಮಾಡಬಾರದು.

ಆಲ್ಬರ್ಟ್ ಐನ್‌ಸ್ಟೀನ್‌ನ ಈ ಬೇಡಿಕೆಗಳನ್ನು ಮಲೇವಾ ತಿರಸ್ಕರಿಸಿದಳು. ತನಗೆ ಡೈವೋರ್ಸ್ ಕೊಡು ಎಂದು ಐನ್‌ಸ್ಟೀನ್ ಮಲೇವಾಳ ಹತ್ತಿರ ಬೇಡಿಕೊಂಡ. ಆದರೆ ಅವಳು ಉದ್ಧಟತನದಿಂದ ನಿರಾಕರಿಸಿದಳು. ಅಂತಿಮವಾಗಿ 1918ರಲ್ಲಿ ಅವನು ವಿಶೇಷವಾದ ಕೊಡುಗೆಯನ್ನು ಅವಳ ಮುಂದಿಟ್ಟ. ಅವಳು ಅವನಿಗೆ ಡೈವೋರ್ಸ್ ನೀಡಿದರೆ ಅವನು ಅವಳಿಗೆ ತನ್ನ ಶೈಕ್ಷಣಿಕ ವೃತ್ತಿಯ ವೇತನದ ಅರ್ಧದಷ್ಟು ಕೊಡುತ್ತಾನೆ ಮತ್ತು ಮುಂದೆ ಎಲ್ಲಾದರೂ ಅವನಿಗೆ ನೊಬೆಲ್ ಪ್ರಶಸ್ತಿ ಲಭಿಸಿದರೆ ಆ ನೊಬೆಲ್ ಪ್ರಶಸ್ತಿಯಿಂದ ಸಿಗುವ ಎಲ್ಲಾ ಬಹುಮಾನದ ಹಣವನ್ನು ಅವಳಿಗೆ ನೀಡಲು ತಯಾರಿದ್ದಾನೆ...!!!

ತುಂಬಾ ನೋವಿನ ಚಿಂತನೆ, ಚರ್ಚೆಗಳ ಬಳಿಕ ಮಲೇವಾ ಮಾರಿಸ್ ತನ್ನ ಗಂಡನ ಈ ವಿಶೇಷ ಕೊಡುಗೆ ಸ್ವೀಕರಿಸಲು ಒಪ್ಪಿಕೊಂಡಳು. ಮಲೇವಾಳಿಂದ ಐನ್‌ಸ್ಟೀನ್ ಡೈವೋರ್ಸ್ ಪಡೆದ ಮತ್ತು ಕೂಡಲೇ ಎಲ್ಸಾಳನ್ನು ವಿವಾಹವಾದ.

1922ರಲ್ಲಿ ಆಲ್ಬರ್ಟ್ ಐನ್‌ಸ್ಟೀನ್ ತನ್ನ ಮೊದಲ ಹೆಂಡತಿ ಮಲೇವಾ ಮಾರಿಕ್‌ಗೆ ಕೊಟ್ಟ ಮಾತನ್ನು ಉಳಿಸಿಕೊಂಡ. ತನಗೆ ನೊಬೆಲ್ ಬಹುಮಾನದಿಂದ ಸಿಕ್ಕಿದ 5,00,000 ಸ್ವೀಡಿಶ್ ಡಾಲರ್‌ಗಳನ್ನು ಪೂರ್ತಿಯಾಗಿ ಅವಳಿಗೆ ನೀಡಿದ...!!!

(ಆಧಾರ: ರಾಬರ್ಟ್ ಎಲ್.ಪಿಕ್ಕೊನಿ. ಐನ್‌ಸ್ಟೀನ್ ಫಾರ್ ಎವರಿವನ್. ಜೈಕೋ. 2010 ಪುಟ 245)

ಅದೇ ಪುಸ್ತಕದಲ್ಲಿರುವ ಈ ಹೇಳಿಕೆ

"ಭೂಮಿಯ ಎಲ್ಲಾ ಸಮುದ್ರ, ಸಾಗರಗಳ ದಡಗಳಲ್ಲಿ ಎಷ್ಟು ಮರಳಿನ ಕಣಗಳಿವೆಯೋ, ಅವುಗಳಿಗಿಂತಲೂ ಹೆಚ್ಚು ಸಂಖ್ಯೆಯ ನಕ್ಷತ್ರಗಳು ವಿಶ್ವದಲ್ಲಿವೆ" - ಪುಟ 211

ಐನ್‌ಸ್ಟೀನ್‌ಗೆ ವಿಶ್ವದ ಈ ಅಗಾಧತೆಯ ಅರಿವು ಇತ್ತು. ಅದ್ದರಿಂದಲೇ ಅವನು ಮರೆಗುಳಿ ಪ್ರೊಫೆಸರ್ ಆಗುವುದು ಅನಿವಾರ್ಯವಾಗಿತ್ತು. ಅವನು ನಿಜವಾದ ಅರ್ಥದ ವಿಶ್ವ ಮಾನವ ಆಗಿದ್ದ, ಅವನ ಚೇತನ ಅನಿಕೇತನವಾಗಿತ್ತು.

ಡಾ. ಜಯಪ್ರಕಾಶ ಉಪಾಧ್ಯ, ಕುಂದಾಪುರ


ಸತ್ಯದ ಬೆಳಕಿನ ವಚನ ತವನಿಧಿ

'ಜಂಗಮಕ್ಕೆ ಮಾತಾಪಿತರಿಲ್ಲ, ಜಂಗಮಕ್ಕೆ ಜಾತಿ ಬಂಧುಗಳಿಲ್ಲ, ಜಂಗಮಕ್ಕೆ ನಾಮರೂಪಗಳಿಲ್ಲ, ಜಂಗಮಕ್ಕೆ ಕುಲಗೋತ್ರಗಳಿಲ್ಲ, ಜಂಗಮಕ್ಕೆ ಮಲಮಾಯೆಗಳಿಲ್ಲ ನೋಡಾ ಅಖಂಡೇಶ್ವರಾ' ಎಂದು ಷಣ್ಮುಖ ಶಿವಯೋಗಿಗಳು ಜಂಗಮದ ವ್ಯಾಖ್ಯಾನ ಮಾಡಿದ್ದಾರೆ. ಅತ್ಯಂತ ಸೂಕ್ತವಾದ ವ್ಯಾಖ್ಯಾನವಿದು. ಈ ವ್ಯಾಖ್ಯಾನವು ಬಸವಧರ್ಮಕ್ಕೆ ಬರೆದ ಭಾಷ್ಯದಂತಿದೆ. ಜಂಗಮ ಎಂಬುದು ಎಲ್ಲವನ್ನೂ ಒಳಗೊಂಡಿರುವಂಥದ್ದು. ಎಲ್ಲವನ್ನೂ ಒಳಗೊಂಡಾಗ ಅದು ಸಹಜವಾಗಿಯೆ ಎಲ್ಲವನ್ನೂ ಮೀರಿ ನಿಂತಿರುತ್ತದೆ. ಆಗ ಆ 'ಜಂಗಮ' ಎಂಬ ಅಳಿವಿಲ್ಲದ ಚೈತನ್ಯವು ಎಲ್ಲವೂ ಆಗಿರುತ್ತದೆ. ಮಾತಾ, ಪಿತ, ಜಾತಿ, ಬಂಧು, ಕುಲ, ಗೋತ್ರ, ಮಲಮಾಯೆ ಹೀಗೆ ಎಲ್ಲವನ್ನೂ ಮೀರುತ್ತಲೇ ಮಂಗಳಕರವಾದುದರ ಕಡೆಗೆ ನಮ್ಮನ್ನು ಮುನ್ನಡೆಸುವಂತದ್ದಾಗಿದೆ.

ಈ ಸತ್ಯದ ಬೆಳಕನ್ನು ನಮಗೆಲ್ಲ ನೀಡುವ ಮಹತ್ವಾಕಾಂಕ್ಷೆಯೊಂದಿಗೆ ಶರಣರಾದ ಪ್ರಕಾಶ ಕಲೆಟ್ಟಿ ಅವರು ನಿರಂತರವಾಗಿ ನಮ್ಮ ಮನಸ್ಸನ್ನು ಬೆಳಗುವ ವಚನ ಸಂಪತ್ತನ್ನು ಚಾಕಚಕ್ಯತೆಯಿಂದ ಕ್ರೋಢೀಕರಿಸಿ 'ವಚನ ತವನಿಧಿ' ರೂಪದಲ್ಲಿ ನಮಗೆ ಕೊಟ್ಟಿದ್ದಾರೆ. ಇದೊಂದು ಜ್ಞಾನದ ಬಲದಿಂದಾಗುವ ಕಠಿಣಸಾಧ್ಯವಾದ ಕಾರ್ಯವಾಗಿದೆ. ಇಂಥ ಒಂದು ವಿಶಿಷ್ಟವಾದ ವಚನಸಂಕಲನ ಈ ಪ್ರಮಾಣದಲ್ಲಿ ಇಷ್ಟೊಂದು ತರ್ಕಬದ್ಧವಾಗಿ ಹಿಂದೆಂದೂ ಆಗಿಲ್ಲ ಎಂದು ಹೇಳಬಯಸುತ್ತೇನೆ. ಇಲ್ಲಿನ ಪ್ರತಿ ವಚನವನ್ನು ವ್ಯಕ್ತಿತ್ವ ವಿಕಸನ ಮತ್ತು ಸಾಮಾಜಿಕ ಜವಾಬ್ದಾರಿಯ ಹಿನ್ನೆಲೆಯಲ್ಲಿ ಆಯ್ಕೆ ಮಾಡಲಾಗಿದೆ. ಈ ಆಯ್ಕೆಗಾಗಿ ವರ್ಷಗಳೇ ಹಿಡಿದಿವೆ. ಆದರೆ ಇಂಥ ಜನಕಲ್ಯಾಣದ ವಚನಗಳ ಆಯ್ಕೆಯ ಪ್ರಜ್ಞೆ ಮೂಡುವುದಕ್ಕಾಗಿ ಅವರು ಇಲ್ಲಿಯವರೆಗಿನ ತಮ್ಮ ಬದುಕನ್ನೇ ಮುಡಿಪಾಗಿಟ್ಟಿರಬಹುದು ಎಂಬ ಆಲೋಚನೆ ಹೊಳೆಯದೆ ಇರದು.

ಇಡೀ ವಚನ ಸಾಹಿತ್ಯವನ್ನು ಗಮನಿಸಿದಾಗ ನಮ್ಮ ಮುಂದೆ ಅನೇಕ ಸವಾಲುಗಳು ಎದ್ದು ನಿಲ್ಲುವವು. ಅವುಗಳಲ್ಲಿನ ಪ್ರಕ್ಷಿಪ್ತ ವಚನಗಳು ನಮಗೆ ಮೊದಲು ಎದುರಾಗುತ್ತವೆ. ಅನೇಕ ಹಸ್ತಪ್ರತಿಗಳ ಬಗ್ಗೆಯೆ ಸಂಶಯಗಳು ಶುರುವಾಗುತ್ತವೆ. ತಾಡೋಲೆಗಳು ಶಿಲಾಶಾಸನಗಳಂತೆ ಸಾವಿರಾರು ವರ್ಷ ಬಾಳಿಕೆ ಬರುವಂಥವುಗಳಲ್ಲ, ನೂರಾರು ವರ್ಷಗಳಲ್ಲಿ ಪುಡಿಪುಡಿಯಾಗುವಂಥವು. ಅವುಗಳ ಸಂರಕ್ಷಣೆಗೆ ವಿಶೇಷ ಕಾಳಜಿ ವಹಿಸಬೇಕಾಗುತ್ತದೆ. ಲಿಪಿಕಾರರಿಂದ ಪದೆ ಪದೆ ಅವುಗಳ ಪ್ರತಿ ಮಾಡಿಸಬೇಕಾಗುತ್ತದೆ. ಹಿಂದಿನ ಕಾಲದಲ್ಲಿ ಮುದ್ರಣ ವ್ಯವಸ್ಥೆ ಇಲ್ಲದ ಕಾರಣ ತಾಡೋಲೆಗಳಲ್ಲಿ ಪ್ರತಿ ಮಾಡುತ್ತ ವಿದ್ವಜ್ಜನರಿಗೆ ದೊರೆಯುವ ವ್ಯವಸ್ಥೆ ಮಾಡಬೇಕಿತ್ತು. ಹೀಗೆ ಪ್ರತಿ ಮಾಡುವಾಗ ಲಿಪಿಕಾರರ ಭಾಷಾ ಸಾಮರ್ಥ್ಯವೂ ಪ್ರಮುಖ ಪಾತ್ರ ವಹಿಸುತ್ತಿತ್ತು. ಭಾಷೆಯ ಆಳವಾದ ಪರಿಜ್ಞಾನವಿಲ್ಲದ ಲಿಪಿಕಾರರು ಕೆಲವೊಂದು ಕಡೆ ಕಾಗುಣಿತ ದೋಷಗಳನ್ನು ಮತ್ತೆ ಕೆಲವೊಂದು ಕಡೆ ವೈಚಾರಿಕ ದೋಷಗಳನ್ನು ಮಾಡಿದ್ದು ಕಂಡುಬರುತ್ತದೆ. ಬಸವಣ್ಣನವರ 'ಅರಸು ಮುನಿದಡೆ ನಾಡೊಳಗಿರಬಾರದಯ್ಯಾ' ವಚನದಲ್ಲಿ 'ಗಂಡ ಮುನಿದಡೆ ಮನೆಯೊಳಗಿರಬಾರದಯ್ಯಾ' ಎಂಬ ವಾಕ್ಯ ಬರುತ್ತದೆ. ಅದು ಮೂಲದಲ್ಲಿ 'ಗಂಡ ಮುನಿದಡೆ ಹೆಂಡತಿಯಾಗಿ ಮನೆಯೊಳಗಿರಬಾರದಯ್ಯಾ' ಎಂದಿದೆ. ಈ ಮೂಲ ವಾಕ್ಯದಲ್ಲಿನ 'ಹೆಂಡತಿಯಾಗಿ ಇರಬಾರದು' ಎಂಬುದರ ಅರ್ಥ ಲಿಪಿಕಾರನ ವೈಚಾರಿಕ ಶಕ್ತಿಯನ್ನು ಮೀರಿದಾಗ ಆ ಅರ್ಥದ ವಿಚಾರದಲ್ಲಿ ಆತನಿಗೆ ಗೊಂದಲ ಗಳೇಳುತ್ತವೆ. ಆ ಲಿಪಿಕಾರನಿಂದ ವಚನಗಳ ಪ್ರತಿಮಾಡಿಸು ವವರಿಗೆ ಕೂಡ ಅರ್ಥವಾಗದೆ ಇದ್ದಾಗ ಅವಘಡಗಳು ಸಂಭವಿಸುತ್ತವೆ. ಆಗ 'ಗಂಡ ಮುನಿದಡೆ ಮನೆಯೊಳಗಿ ರಬಾರದು' ಎಂಬ ಬಸವಣ್ಣನವರ ಸ್ತ್ರೀಪರ ಆಶಯಕ್ಕೆ ವಿರುದ್ಧವಾದ ಅರ್ಥ ಸೂಸುವ ವಚನವಾಗಿ ಮುಂದುವರಿಯುತ್ತದೆ. ಇಂಥ ಅನೇಕ ತಪ್ಪುಗಳು ವಿವಿಧ ವಚನ ಸಂಪಾದನಾಕಾರರ ವಚನ ಸಂಪುಟಗಳಲ್ಲಿ ಕಂಡುಬರುತ್ತಿವೆ. 'ಹೆಂಡತಿಯಾಗಿ ಇರಬಾರದು' ಎಂದರೆ ಆಕೆ ಆ ಮನೆಯಲ್ಲಿ ಸೊಸೆಯಾಗಿ, ತಾಯಿಯಾಗಿ, ಅತ್ತಿಗೆಯಾಗಿ ಇರಬೇಕು. ಆದರೆ ಮುನಿದ ಗಂಡನಿಗೆ ಹೆಂಡತಿಯಾಗಿ ಇರಬಾರದು. ಹೀಗೆ ಬಸವಣ್ಣನವರು ಸ್ತ್ರೀಪರವಾಗಿ ನಿಲ್ಲುತ್ತಾರೆ. ಆದರೆ ಸಂಪುಟದಲ್ಲಿ ಪ್ರಕಟವಾದ ವಚನದಲ್ಲಿ ಇದಕ್ಕೆ ತದ್ವಿರುದ್ಧವಾದ ಅರ್ಥ ಹೊರಹೊಮ್ಮುತ್ತದೆ.

ಲಿಪಿಕಾರರು ಕಾಲಕಾಲಕ್ಕೆ ತಕ್ಕಂತೆ ವಚನಗಳನ್ನು ಜಾತಿಜಂಗಮರು ಮುಂತಾದ ಪಟ್ಟಭದ್ರರ ಆಶಯಗಳಂತೆ ತಿದ್ದಿದ್ದೂ ಕಂಡುಬರುತ್ತದೆ. ಈ ತಿದ್ದುವಿಕೆ ಬಸವಪ್ರಿಯರಿಂದಲೂ ಆಗಿದೆ. ಜನಸಮುದಾಯಕ್ಕೆ ವಚನಗಳು ಅರ್ಥವಾಗಲೆಂದು ಬಸವಪ್ರಿಯರು ಆಯಾ ಕಾಲದ ಭಾಷೆ ಮತ್ತು ಅಂದಂದಿನ ಶಿಷ್ಟಾಚಾರದೊಂದಿಗೆ ಬದಲಾಯಿಸಲು ಪ್ರಯತ್ನಿಸಿದ್ದಾರೆ. ಡಾ. ಎಂ.ಎಂ. ಕಲಬುರ್ಗಿ ಅವರಂಥ ವಚನ ಸಂಪಾದಕರು 20 ನೆಯ ಶತಮಾನಕ್ಕೆ ತಕ್ಕಂತೆ 'ಱ' (ಶಕಟರೇಫ) ಬದಲಿಗೆ 'ರ' ಅಕ್ಷರವನ್ನೂ 'ೞ' (ರಳ) ಬದಲಿಗೆ 'ಳ' ಅಕ್ಷರವನ್ನೂ ಸೇರಿಸಿದ್ದಾರೆ. ಕೆಲವೆಡೆ 'ಡ'ಕಾರಗಳು 'ರ'ಕಾರಗಳಾಗಿವೆ. ಆಧುನಿಕ ಓದುಗರಿಗೆ ಅನುಕೂಲವಾಗುವ ಸದುದ್ದೇಶದಿಂದಲೇ ಅವರು ಹೀಗೆ ಮಾಡಿದ್ದಾರೆ. ಆದರೆ ಈ ತಿದ್ದುವಿಕೆಯಿಂದಾಗಿ ಅನೇಕ ವಚನಗಳು ಮೂಲ ಅರ್ಥಕ್ಕೆ ವಿರುದ್ಧವಾದ ಅರ್ಥವನ್ನು ಕೊಡುತ್ತಿವೆ ಮತ್ತು ಮೂಲ



ಭಾಷಾಸೌಂದರ್ಯಕ್ಕೆ ಅಡ್ಡಿಯಾಗುತ್ತಿವೆ. ಅವರು ತಿದ್ದುಪಡಿ ಮಾಡಿದ ಅಕ್ಷರಗಳ ಮುಂದೆ, ಆವರಣಗಳಲ್ಲಿ ಮೂಲ ಅಕ್ಷರಗಳನ್ನು ಇಡುವ ಮೂಲಕ ಈ ಸಮಸ್ಯೆಯನ್ನು ಬಗೆಹರಿಸಬಹುದಿತ್ತು. ಹೇಳುವುದಿಷ್ಟೇ ದುರುದ್ದೇಶದಿಂದ ಮಾಡಿದ ತಿದ್ದುಪಡಿಗಳಿಂದಷ್ಟೇ ಅಲ್ಲದೆ ಸದುದ್ದೇಶದಿಂದ ಮಾಡಿದ ತಿದ್ದುಪಡಿಗಳಿಂದಲೂ ವಚನಸಾಹಿತ್ಯ ನಲುಗಿದೆ.

ಬಸವಣ್ಣನವರ 'ಮಱೆಯಲಾಗದು ಹರಿಯ ... .. ನಮ್ಮ ಕೂಡಲಸಂಗಮದೇವರ ಮಱೆಯ ಬಹುದು' ಎಂಬ ವಚನದ ಅರ್ಥ ಹರಿಯ ಮೇಲೆ ಅವಲಂಬಿತ ಆಗಲಿಕ್ಕಾಗದು.. ... ಆದರೆ ನಮ್ಮ ಕೂಡಲಸಂಗಮದೇವರ ಮೇಲೆ ಅವಲಂಬಿತ ಆಗಬಹುದು ಎಂಬ ಅರ್ಥವನ್ನು ಮತ್ತು ಆ ಮೂಲಕ ಏಕದೇವೋಪಾಸನೆಯನ್ನು ಧ್ವನಿಸುತ್ತದೆ. ಆದರೆ 'ಱ'ಕಾರವನ್ನು ತೆಗೆದು ಅದರ ಜಾಗದಲ್ಲಿ 'ರ'ಕಾರ ಇಟ್ಟಾಗ ತದ್ವಿರುದ್ಧ ಅರ್ಥ ಕೊಡುತ್ತದೆ. ಅಂದರೆ ಕೂಡಲಸಂಗಮದೇವರನ್ನು ಮರೆಯಬಹುದು ಆದರೆ ಹರಿಯನ್ನು ಮರೆಯಲಿಕ್ಕಾಗದು ಎಂದು ಬಸವಣ್ಣನವರು ಹೇಳಿದಂತಾಗುತ್ತದೆ!

ಇನ್ನು ಬಸವಾದಿ ಶರಣರ ವಚನಗಳಲ್ಲಿ ಸಂಸ್ಕೃತ ಶ್ಲೋಕಗಳನ್ನು ಸೇರಿಸಿದ್ದು ಕೂಡ ದೊಡ್ಡ ಸಮಸ್ಯೆಯಾಗಿದೆ. ವೈದಿಕ ಚಿಂತನೆಯನ್ನು ಅಲ್ಲಗಳೆಯುವುದಕ್ಕಾಗಿ ಕೆಲವೊಂದು ಕಡೆಗಳಲ್ಲಿ ಶರಣರು ಸಂಸ್ಕೃತ ಶ್ಲೋಕಗಳನ್ನು ಬಳಸಿದ್ದಾರೆ. ಆದರೆ ಯಥಾಸ್ಥಿತಿವಾದಿಗಳು ಅನೇಕ ಕಡೆ ಮೂಲ ವಚನಗಳ ಮಧ್ಯೆ ಆ ವಚನಗಳ ಅರ್ಥಕ್ಕೆ ಸಮೀಪವಾದ ಅರ್ಥವನ್ನು ನೀಡುವ ಸಂಸ್ಕೃತ ವಾಕ್ಯಗಳನ್ನು ಸೃಷ್ಟಿಸಿ ಸೇರಿಸುವುದರ ಮೂಲಕ 'ವಚನಗಳಿಗೂ ಮೊದಲೇ ಇಂಥ ವಿಚಾರಗಳು ಸಂಸ್ಕೃತ ಗ್ರಂಥಗಳಲ್ಲಿ ಇದ್ದವು' ಎಂಬ ಭ್ರಮೆಯನ್ನು ಹುಟ್ಟಿಸಿದ್ದಾರೆ. ಕಲ್ಯಾಣದಲ್ಲಿ ಶರಣರ ಸಾವುನೋವು ಸಂಬಂಧಿಸಿದ ನಂತರದ ಶತಮಾನಗಳಲ್ಲಿ ಇಂಥ ಸೇರ್ಪಡೆಗಳು ನಡೆದಿವೆ.

"ವೀರಶೈವ ಧರ್ಮವು ಸನಾತನ ಶೈವಧರ್ಮದ ಒಂದು ಶಾಖೆಯಾಗಿದೆ. ಕಾಮಿಕಾದಿ ವಾತುಲಾಂತಗಳಾದ 28 ಶಿವಾಗಮಗಳ ಉತ್ತರ ಭಾಗದಲ್ಲಿ ಈ ಧರ್ಮದ ಸಮಗ್ರ ತತ್ವಸಿದ್ಧಾಂತಗಳು ಪ್ರತಿಪಾದಿತವಾಗಿವೆ. ಜೊತೆಗೆ ವೇದಗಳು, ಶಿವಪುರಾಣ, ಲಿಂಗಪುರಾಣ ಹಾಗೂ ಸ್ಕಂದಪುರಾಣಾದಿಗಳಲ್ಲಿಯೂ ಉಲ್ಲೇಖಗೊಂಡಿವೆ. ಅದರಂತೆ ಬ್ರಹ್ಮಸೂತ್ರ ಮತ್ತು ಉಪನಿಷತ್ತುಗಳ ವೀರಶೈವ ಭಾಷ್ಯಗಳಲ್ಲಿಯೂ ವಿಸ್ತೃತವಾಗಿ ವಿವರಿಸಲ್ಪಟ್ಟಿವೆ. ಆದ್ದರಿಂದ ವೇದ, ಆಗಮ, ಉಪನಿಷತ್ ಭಾಷ್ಯ ಹಾಗೂ ಸ್ಕಂದ ಪುರಾಣಗಳು ವೀರಶೈವ ಧರ್ಮದ ಮೂಲಸೂತ್ರಗಳೆಂದು ತಿಳಿದುಕೊಳ್ಳಬೇಕು" ಎಂದು ಕಾಶಿ ಜಗದ್ಗುರುಗಳಾದ ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ತಿಳಿಸಿದ್ದಾರೆ. ಈ ವೀರಶೈವಕ್ಕೂ ಬಸವಣ್ಣನವರು ಸ್ಥಾಪಿಸಿದ ಲಿಂಗಾಯತ ಧರ್ಮಕ್ಕೂ ಯಾವ ಸಂಬಂಧವೂ ಇಲ್ಲ ಎಂದು ಹೇಳಬೇಕಾಗುತ್ತದೆ.

ವೀರಶೈವರ ಧರ್ಮಗ್ರಂಥವಾದ 'ಸಿದ್ಧಾಂತ ಶಿಖಾಮಣಿ'ಯ ವಿಚಾರಗಳೇ ವಚನಗಳಲ್ಲಿವೆ ಎಂದು ಪಂಚಾಚಾರ್ಯರಲ್ಲೊಬ್ಬರಾದ ಕೇದಾರ ಜಗದ್ಗುರು ಭೀಮಾಶಂಕರಲಿಂಗ ಅವರು ವಾದಿಸುತ್ತಾರೆ. ವಚನ ಚಳವಳಿಯ ನಂತರ ಮೂರು ಶತಮಾನಗಳು ಕಳೆದ ಮೇಲೆ ಸಿದ್ಧಾಂತಶಿಖಾಮಣಿ ರಚಿತವಾಗಿದ್ದು ಅದರ ವಿಚಾರಗಳು ವಚನಗಳಲ್ಲಿ ಬರಲು ಹೇಗೆ ಸಾಧ್ಯ?

ಇಷ್ಟೆಲ್ಲ ಗೊಂದಲಗಳ ಸೃಷ್ಟಿಯ ಜೊತೆಗೆ ಇನ್ನೊಂದು ದೊಡ್ಡ ಸಮಸ್ಯೆ ಎಂದರೆ ಪ್ರಕ್ಷಿಪ್ತ ವಚನಗಳದ್ದು. ಪಟ್ಟಭದ್ರ ಹಿತಾಸಕ್ತಿಗಳು ಮೂಲ ವಚನಕಟ್ಟುಗಳೊಳಗೆ ಅನೇಕ ಪ್ರಕ್ಷಿಪ್ತ ವಚನಗಳನ್ನು ಸೇರಿಸುವ ಮೂಲಕ ವಚನಕಾರರ ಆಶಯಕ್ಕೆ ವಿರುದ್ಧವಾದ ಚಿಂತನಾಕ್ರಮಗಳನ್ನು ಹರಿಬಿಟ್ಟವೆ.

ಕೆಲವೊಂದು ಕಡೆ ಮೂಲ ವಚನಗಳಲ್ಲಿನ ಮಹತ್ವದ ಶಬ್ದಗಳನ್ನು ತೆಗೆದು ಅವುಗಳ ಸ್ಥಾನದಲ್ಲಿ ತಮ್ಮ ಹಿತಾಸಕ್ತಿಯನ್ನು ಕಾಪಾಡುವ ಶಬ್ದಗಳನ್ನು ಸೇರಿಸಲಾಗಿದೆ. ಸಿದ್ಧರಾಮೇಶ್ವರರ ವಚನವೊಂದರಲ್ಲಿ 'ಚಾತುರ್ವರ್ಣಾತೀತನೆ ವೀರಶೈವ' ಎಂಬ ವಾಕ್ಯ ಬರುತ್ತದೆ. ಬಸವಣ್ಣನವರ ಕ್ರಾಂತಿಕಾರಕ ಲಿಂಗಾಯತ ಅಥವಾ ಲಿಂಗವಂತ ಧರ್ಮದ ಬಗ್ಗೆ ಅಸಹನೆಯುಳ್ಳವರು ಈ ಮೂಲ ವಾಕ್ಯದಲ್ಲಿನ 'ಲಿಂಗವಂತ' ಪದ ತೆಗೆದು 'ವೀರಶೈವ' ಪದ ಸೇರಿಸಿದ್ದಾರೆಂಬುದು ಮೇಲ್ನೋಟಕ್ಕೇ ಸಾಬೀತಾಗುತ್ತದೆ. ಪಟ್ಟಭದ್ರ ಹಿತಾಸಕ್ತಿಗಳು ಈ ರೀತಿ ಎಲ್ಲ ವಚನಕಾರರ ವಚನಗಳಲ್ಲಿ ತಮಗೆ ಅವಶ್ಯ ಎನಿಸಿದಲ್ಲೆಲ್ಲ ಮಾಡಿವೆ.

'ವೀರಶೈವ ಧರ್ಮ ಬಸವಣ್ಣನವರಿಗಿಂತ ಪ್ರಾಚೀನ. ತಮ್ಮ ವಚನಗಳಲ್ಲಿ ಅವರು ವೀರಶೈವನಾದೆ ಎಂದು ಹೇಳಿದ್ದಾರೆ ಹೊರತು ಲಿಂಗಾಯತನಾದೆ ಎಂದು ಎಲ್ಲಿಯೂ ಹೇಳಿಲ್ಲ' ಎಂದು ಡಾ.ಎಂ.ಚಿದಾನಂದಮೂರ್ತಿ ಅವರು ಹಲಬುತ್ತಲೇ ಇರುತ್ತಾರೆ. ವಚನಕಾರರ ವಚನಗಳಲ್ಲಿನ ಲಿಂಗವಂತ ಮತ್ತು ಲಿಂಗಾಯತ ಪದಗಳನ್ನು ತೆಗೆದು ಅವುಗಳ ಜಾಗದಲ್ಲಿ ವೀರಶೈವ ಪದ ಸೇರಿಸುವ ಕುಕೃತ್ಯ ಶತಮಾನಗಳಿಂದ ಸಾಗಿ ಬಂದಿದೆ ಎಂಬುದು ವಚನ ಅಭ್ಯಾಸಿಗೆ ಸಹಜವಾಗಿಯೇ ತಿಳಿದುಬರುವುದು. ಆದ್ದರಿಂದ ಚಿದಾನಂದಮೂರ್ತಿ ಅವರ ಹಲಬುವಿಕೆ ಅರ್ಥವಿಲ್ಲದ್ದು ಎಂಬುದು ಸ್ಪಷ್ಟವಾಗುತ್ತದೆ.


ಕಲ್ಯಾಣದಲ್ಲಿ ಆಗಬೇಕಾಗಿದ್ದ ಕ್ರಾಂತಿಗೆ ವಿರುದ್ಧವಾಗಿ ಪ್ರತಿಕ್ರಾಂತಿ ನಡೆಸಿದ ಶಾಸ್ತ್ರದ ಪುರೋಹಿತಶಾಹಿ ಮತ್ತು ಶಸ್ತ್ರದ ರಾಜ್ಯಶಾಹಿ ಶಕ್ತಿಗಳು ಶರಣರ ಹತ್ಯೆ ಮಾಡಿದವು. ಅವರ ಕ್ರಾಂತಿಕಾರಿ ವಚನಸಾಹಿತ್ಯ ಕಟ್ಟುಗಳನ್ನು ಸುಟ್ಟುಹಾಕಿದವು. ರಾಜ್ಯಶಕ್ತಿಗೆ ಪರ್ಯಾಯವಾಗಿ ನಡೆಯಲಿದ್ದ ಜನಶಕ್ತಿಯ ಕ್ರಾಂತಿಯನ್ನು ಪಟ್ಟಭದ್ರ ಹಾಗೂ ಯಥಾಸ್ಥಿತಿವಾದಿ ಹಿತಾಸಕ್ತಿಗಳು ಹೀಗೆ ತಡೆಗಟ್ಟಿದವು. ಆ ಸಂದರ್ಭದಲ್ಲಿ ಅಳಿದುಳಿದ ವಚನಕಾರರು ಮತ್ತು ಇತರ ಶರಣರು ಕಲ್ಯಾಣದಿಂದ ದಿಕ್ಪಾಲಾಗಿ ಹೋದರು. ಅವರು ಹೋದಲ್ಲೆಲ್ಲ ನಂಬಿಗಸ್ಥರಿಗೆ ವಚನಕಟ್ಟುಗಳನ್ನು ಕೊಟ್ಟರು. ವಚನಕಟ್ಟುಗಳ ರಕ್ಷಣೆಗಾಗಿ ಚನ್ನಬಸವಣ್ಣನವರ ನೇತೃತ್ವದಲ್ಲಿ ಉಳಿವಿಯ ಕಡೆಗೆ ಹೊರಟ ಶರಣರು ಮಾರ್ಗಮಧ್ಯದಲ್ಲಿ ಕಲ್ಯಾಣದ ಸೈನಿಕರನ್ನು ಎದುರಿಸುತ್ತಲೇ, ಸಾವು-ನೋವುಗಳನ್ನು ಅನುಭವಿಸುತ್ತ ಉಳವಿ ತಲುಪಿದರು. ಹಾಗೆ ತಲುಪುವ ಮೊದಲೇ ಅನೇಕ ವಚನಕಟ್ಟುಗಳನ್ನು ಕಲ್ಯಾಣ ಮತ್ತು ಉಳವಿ ಮಧ್ಯೆ ಇರುವ ವಿವಿಧ ಕಡೆಗಳಲ್ಲಿ ವಿತರಿಸುವುದರ ಮೂಲಕ ಜನಸಮುದಾಯಕ್ಕೆ ಲಭ್ಯವಾಗುವಂತೆ ಮಾಡಿದರು.

15 ಮತ್ತು 16ನೇ ಶತಮಾನದಲ್ಲಿ ವಚನ ಸಂಕಲನಕಾರರು ಹುಟ್ಟುವ ಹೊತ್ತಿಗೆ 12ನೇ ಶತಮಾನದ ವಚನ ಚಳವಳಿ ಸ್ಥಗಿತಗೊಂಡು ಅದಾಗಲೆ ಮೂರು ಶತಮಾನಗಳು ಕಳೆದುಹೋಗಿದ್ದವು. 12ನೇ ಶತಮಾನದಲ್ಲಿ ಶೇಕಡಾ 90ಕ್ಕೂ ಹೆಚ್ಚು ಮಂದಿ ವಚನಕಾರರು ಮತ್ತು ವಚನಕಾರ್ತಿಯರು ಕೆಳ, ಹಿಂದುಳಿದ ಮತ್ತು ದಲಿತ ವರ್ಗಕ್ಕೆ ಸೇರಿದವರಾಗಿದ್ದರು. 12ನೇ ಶತಮಾನದ ನಂತರ ಬಂದ ವಚನಕಾರರಲ್ಲಿ ಈ ವರ್ಗಗಳಿಗೆ ಸೇರಿದ ವಚನಕಾರರು ಮತ್ತು ವಚನಕಾರ್ತಿಯರು ಕಂಡುಬರುವುದಿಲ್ಲ. ಚಳವಳಿ ಸ್ಥಗಿತಗೊಂಡ ನಂತರ ಇವರ ಧ್ವನಿ ಅಡಗಿಹೋಗಿದೆ. ನಂತರ ಬಂದ ವಚನಕಾರರು ಮಠಮಾನ್ಯಗಳಿಗೆ ಸಂಬಂಧಿಸಿದವರಾಗಿದ್ದಾರೆ. ಇಂಥ ಶತಮಾನಗಳಲ್ಲಿ ಸಂಕಲನಕಾರರು ಬಂದಿದ್ದಾರೆ.

12ನೇ ಶತಮಾನದಲ್ಲಿ ಚಳವಳಿಯಾಗಿದ್ದ ಲಿಂಗಾಯತ ಧರ್ಮ, ತದನಂತರದ ಶತಮಾನಗಳಲ್ಲಿ ಸಾಂಸ್ಥಿಕ ಧರ್ಮವಾಗಿ ರೂಪುಗೊಳ್ಳುತ್ತ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿತು. ಈ ಸಂದರ್ಭದಲ್ಲಿ ಅದು ತನ್ನ ಹೋರಾಟದ ಗುಣವನ್ನು ಕಳೆದುಕೊಂಡಿತು. ಆಗ ನಡೆ-ನುಡಿ ಸಿದ್ಧಾಂತದ ಚಿಂತನೆಗಳು ಹಿಂದೆ ಸರಿದು ಧಾರ್ಮಿಕತೆ, ಸಾಂಪ್ರದಾಯಿಕ ಆಚರಣೆ ಮತ್ತು 'ಇಲ್ಲಿ' ಸಲ್ಲುವುದರ ಕಡೆಗೆ ಗಮನ ಕೊಡದೆ 'ಅಲ್ಲಿ' ಸಲ್ಲುವುದರ ಕಡೆಗೇ ಕನವರಿಸುವ ಚಿಂತನೆಗಳು ಪ್ರಧಾನ ಸ್ಥಾನ ಪಡೆದವು. 12ನೇ ಶತಮಾನದ ಚಳವಳಿಯನ್ನು ರೂಪಿಸಿದ ವಚನಸಾಹಿತ್ಯ 15 ಮತ್ತು 16ನೇ ಶತಮಾನದ ಶೂನ್ಯಸಂಪಾದನಾಕಾರ ಪ್ರಯತ್ನದಿಂದಾಗಿ ಪ್ರಗರಣದ ರೂಪದಲ್ಲಾದರೂ ಜನಸಮುದಾಯಕ್ಕೆ ಲಭ್ಯವಾಯಿತು. ಆದರೆ ಆ ಶೂನ್ಯಸಂಪಾದನೆಗಳಲ್ಲಿನ ನಾಟಕೀಯ ಅಂಶಗಳೇ ಇಂದು ಪ್ರಚಲಿತವಾಗಿವೆ. ಹೀಗೆ ವಿವಿಧ ಸನ್ನಿವೇಶಗಳಲ್ಲಿ ವಚನಸಾಹಿತ್ಯ ಬದಲಾವಣೆಗೆ ಒಳಗಾಗುತ್ತಲೇ ಬಂದಿದೆ. ವೀರಶೈವವಾದಿಗಳಂತೂ ಈ ವಚನಸಾಹಿತ್ಯ ಮತ್ತು ಬಸವಣ್ಣನವರ ಮೇಲೆ ಹಲ್ಲುಮಸಿಯುತ್ತಲೇ ಬಂದಿದ್ದಾರೆ. ಇಂದಿಗೂ ಅವರ ಹಲ್ಲುಮಸಿಯುವಿಕೆ ನಿಂತಿಲ್ಲ. ಚಿದಾನಂದಮೂರ್ತಿ ಅವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹಿಂದೂಧರ್ಮ ಮತ್ತು ವೀರಶೈವ ಬೇರೆ ಅಲ್ಲ; ವೀರಶೈವ ಮತ್ತು ಲಿಂಗಾಯತ ಬೇರೆ ಅಲ್ಲ; ಆದ್ದರಿಂದ ಹಿಂದೂಧರ್ಮ ಮತ್ತು ಲಿಂಗಾಯತ ಧರ್ಮ ಬೇರೆ ಅಲ್ಲ ಎಂಬ ಅಸತ್ಯವನ್ನು ಗೊಬೆಲ್ಸನ ಹಾಗೆ ಸಾವಿರಾರು ಬಾರಿ ಹೇಳುತ್ತ ಸತ್ಯ ಮಾಡುವುದರಲ್ಲೇ ತಲ್ಲೀನರಾಗಿದ್ದಾರೆ.


ವೀರಶೈವವು ಪುರಾತನವಾದುದೆಂದಲೂ ಬಸವಣ್ಣನವರು ಆ ಪುರಾತನ ಧರ್ಮಕ್ಕೆ ಸಂಬಂಧಿಸಿದ ಭಕ್ತವರ್ಗದವರೆಂತಲೂ ಬಿಂಬಿಸುವುದೇ ಜಾತಿಜಂಗಮರ ಬಹುದೊಡ್ಡ ಹುನ್ನಾರವಾಗಿದೆ. ವೀರಶೈವರು ವರ್ಣಾತೀತ ಹಿಂದೂಗಳೆಂದು ಮತ್ತು ಲಿಂಗಿಬ್ರಾಹ್ಮಣರೆಂದು ಅಲ್ಲದೆ ವೀರಶೈವ ಹಾಗೂ ಲಿಂಗಾಯತ ಬೇರೆ ಅಲ್ಲ ಎಂದು ಭ್ರಮೆ ಹುಟ್ಟಿಸಲಾಯಿತು. ವೀರಶೈವದಲ್ಲೂ ನಾಲ್ಕುವರ್ಣಗಳಿವೆ ಎಂದು ಕೂಡ ಪಟ್ಟಭದ್ರರು ಪ್ರಚಾರ ಮಾಡಲು ಪ್ರಯತ್ನಿಸಿದರು. 1904ರಲ್ಲಿ ಧಾರವಾಡದಲ್ಲಿ ಅಖಿಲ ಭಾರತ ವೀರಶೈವ ಮಹಾಸಭೆಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಶಿರಸಂಗಿ ಲಿಂಗರಾಜರ ಮೂಲಕವೂ ವೀರಶೈವ ಪದಕ್ಕೆ ಹೆಚ್ಚಿನ ಮಹತ್ವ ಬರುವಂತೆ ನೋಡಿಕೊಳ್ಳಲಾಯಿತು.

1908ರಲ್ಲಿ ಹಾನಗಲ್ಲ ಕುಮಾರಸ್ವಾಮಿಗಳು ಶಿವಯೋಗ ಮಂದಿರ ಸ್ಥಾಪನೆ ಮಾಡಿದಾಗ ಅಲ್ಲಿ ಕನ್ನಡ ಭಾಷೆಗೆ ಮತ್ತು ವಚನಗಳಿಗೆ ಪ್ರಾಶಸ್ತ್ಯ ನೀಡದೆ ಸಂಸ್ಕೃತಕ್ಕೆ ಮತ್ತು ಶಿವಾಗಮಗಳಿಗೆ ಪ್ರಾಶಸ್ತ್ಯ ನೀಡಲಾಯಿತು. ಕನ್ನಡದ ದಾರಿಯಿಂದ 'ಲಿಂಗಾಯತ' ಮತ್ತು ಸಂಸ್ಕೃತದ ದಾರಿಯಿಂದ 'ವೀರಶೈವ' ಎಂಬುದನ್ನು ಚಿದಾನಂದ ಮೂರ್ತಿ ಅಂಥವರನ್ನು ಬಿಟ್ಟು ಬೇರೆ ಯಾರೂ ಅಲ್ಲಗಳೆಯಲು ಸಾಧ್ಯವಿಲ್ಲ.



(ಮುಂದುವರೆಯುವುದು)

■ ರಂಜಾನ್ ದರ್ಗಾ




ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಅಗ್ರಹಾರದ ಶಂಕರನೇಕೆ ಹಾಗೆ?

ಶ್ರೀ ಶಂಕರ ಭಗವತ್ಪಾದ ಎಂಬ ಬ್ರಾಹ್ಮಣಾಧಿಕ್ಯದ ...ಗೆ ಬಾಲ್ಯದಲ್ಲಿಯೇ ಬ್ರಾಹ್ಮಣರಿಗೆ ಸಿಗಬೇಕಾಗಿರುವ ...ಾ ಸವಲತ್ತುಗಳೆಲ್ಲವೂ ಸಿಕ್ಕಿತ್ತು. ವಾಸ ಅಗ್ರಹಾರದಲ್ಲಿ, ...ಂತ ಸೀಮಿತ ಪರಿಧಿ. ಜನಪರವಾದ, ಸಮಾಜಮುಖಿ ...ದಂತಹ ಯಾವುದೇ ಚಿಂತನೆಗೂ ಅವಕಾಶವಿಲ್ಲವೇನೋ ...ಬಂತಹ ಒಂದು ಪರಿಸರ. ಅವನು ಬ್ರಾಹ್ಮಣೇತರ ...ಯರೊಡನೆ ಬೆರೆತಿದ್ದಂತಹ, ಆಡಿದ್ದಂತಹ ಉಲ್ಲೇಖಗಳೂ ...ವಾಗಿ ಎಲ್ಲೂ ಸಿಗುತ್ತಿಲ್ಲ. ಅವನು ದೇವರ ಬಗ್ಗೆ, ...ತ್ವದ ಬಗ್ಗೆ, ಪುರಾತನ ಶಾಸ್ತ್ರಗಳ ಬಗ್ಗೆ, ಮಂತ್ರಗಳ ... ಆಸಕ್ತಿ ಬೆಳೆಸಿಕೊಳ್ಳಲು ಸಾಧ್ಯವಾಗಿತ್ತೇ ಹೊರತು, ...ನು ಕಥಕ್ಕಳಿಯಂತಹ ಕಲಾಪ್ರಕಾರವನ್ನು ನೋಡಿದ್ದು, ...ಮನ ವೇಷವನ್ನು ಧರಿಸಿದ್ದ ಪಾತ್ರಧಾರಿ ಸತ್ತದ್ದು ಸಾವಿನ ... ಆಳವಾಗಿ ಯೋಚಿಸಿದಂತಹ ನಿದರ್ಶನವಿದೆ. ಆತ ...ಲ ಸಂನ್ಯಾಸಿಯಾಗಿ ಪರಿವ್ರಾಜಕನಾಗಿ ಅಲೆದಾಡುವಾಗ ...ನ ಜಮೀನುದಾರರು ಮತ್ತು ಬಡವರ ಕೆಲವು ದೃಶ್ಯಗಳೂ ...ದ ಅವನನ್ನು ತಟ್ಟಿವೆ. ಆದರೆ, ಅವು ಕೇವಲ ...ಕ್ಷಣಿಕವಾಗಿರಲು ಅಷ್ಟೆಯೇ ಹೊರತು, ಇನ್ನಾವ ...ರೀತಿಯಲ್ಲಿಯೂ ಅವನಲ್ಲಿ ಹೊಸ ಚಿಂತನೆಗಳನ್ನು ಅಥವಾ ...ಸಮಾಜಮುಖಿಯಾಗಿರುವಂತಹ ಆಲೋಚನೆಗಳು ...ಟ್ಟಲೇ ಇಲ್ಲ.

ಬಸವನೆಂಬ ಅಗ್ರಹಾರದ ಹುಡುಗ



...ಸಾಮಾನ್ಯವಾಗಿ ತಾವು ನೋವನ್ನು ಅನುಭವಿಸಿದ್ದರೆ ...ಾತ್ರವೇ ಧ್ವನಿ ಎತ್ತುವುದು, ಹೋರಾಡುವುದು ಎಂಬ ...ತನ್ನು ಸುಳ್ಳಾಗಿಸಿದ್ದು ಬಸವಣ್ಣ. ಆದರೆ, ಶಂಕರ ಎಂಬ ...ಹ್ಮಣ ಯಾವ ರೀತಿಯಲ್ಲಿಯೂ ಬಸವಣ್ಣನಿಗೆ ...ಹೋಲಿಕೆಯಾಗಲು ಸಾಧ್ಯವೇ ಇಲ್ಲ. ಇಬ್ಬರಿಗೂ ...ವಾಂತರವಿದೆ. ಬಸವನ ನೆನೆವಾಗ ಶಂಕರನೆಂಬ ...ತಿವಾದಿಯನ್ನು ನೆನೆದರೆ, ಪಾಪವೆಂಬುದು ಇದ್ದರೆ, ಅದು ...ಾ ಸುತ್ತಿಕೊಳ್ಳುವಂತಹ ಅಪರಾಧ ಎಸಗಿದಂತಾಗುತ್ತದೆ. ...ದರೂ ಈಗ ನೆನೆಯುವ ಸಂದರ್ಭ ಬಂದಿದೆ.

ಬಸವನೆಂಬ ಬಾಲಕನೂ ಅಗ್ರಹಾರದಲ್ಲಿ ಸವಲತ್ತುಗಳ ...ೀತ ಬೆಳೆದ ಹುಡುಗನೇ. ಆದರೆ ರಜಸ್ವಲೆಯಾದ ...ಳನ್ನು ದೂರಕ್ಕೆ ಕೂರಿಸಿದರೆ, ಪ್ರಕೃತಿ ಸಹಜವಾದ ...ಯಕ್ಕೆ ಅವಳನ್ನು ಏಕೆ ದೂರೀಕರಿಸಬೇಕು ಎಂದು ...ನಷ್ಟು ಸಾಮಾನ್ಯ ಪ್ರಶ್ನೆ ಇತ್ತು. ಎಲ್ಲರ ತಂದೆ ಭಗವಂತ ...ದಾಗ, ತಾನು ದೇವಾಲಯಕ್ಕೆ ಹೋಗಬಹುದಾದರೆ, ...ಲೆಯ, ಮಾದಿಗ ಇತರರು ಏಕೆ ಹೋಗಬಾರದು, ...ಸ್ಪೃಶ್ಯರಾಗಿರುವ ಅವರಿಗೆ ಭಗವಂತ ...ದೆಯಾಗಿರುವುದಿಲ್ಲವೇ ಎಂಬ ಪ್ರಾಥಮಿಕ ಪ್ರಶ್ನೆ ...ತ್ತಿತ್ತು, ಕಲ್ಲು ನಾಗರಕ್ಕೆ ಹಾಲನ್ನು ಎರೆಯುವ ಜನ, ...ೇ ನಿಜವಾದ ಹಾವು ಎದುರಾದರೆ ಕೊಂದರೆ ...ಟಾಗುವ ಸಹಜವಾದ ಆಚ್ಚರಿ ಉಂಟಾಗುತ್ತಿತ್ತು, ಇಂಥಾ ...ಮಾನ್ಯ ಪ್ರಶ್ನೆ, ಪ್ರಾಥಮಿಕ ಅರಿವು, ಸಹಜವಾದ ...ನೋಭಾವಗಳಿಂದ ಕೂಡಿದ್ದ ಬಸವಣ್ಣನಿಗೆ ತನ್ನ ನಿತ್ಯ ...ಜ ಭಾಷೆಯಲ್ಲಿ ಸಂವಹನ ಮಾಡಲು ಸಾಧ್ಯವಾಯಿತು. ...ಸಾಮಾನ್ಯರನ್ನು ಕೂಡಿಕೊಂಡು ಬದುಕನ್ನು ...ತ್ತುಗೊಳಿಸಿಕೊಳ್ಳುವ ಶಿಸ್ತಿಗೆ ಒಳಪಡುವ ಸಂಸ್ಕೃತಿಯನ್ನು ...ಟ್ಟುಹಾಕಲು ಸಾಧ್ಯವಾಯಿತು. ಪ್ರಜಾಪ್ರಭುತ್ವವನ್ನು ...ಬಿಂಬಿಸುವಂತಹ ಅನುಭವ ಮಂಟಪವನ್ನು ಸ್ಥಾಪಿಸಲು ...ಧ್ಯವಾಯಿತು. ಎಂದಿಗೂ ವಾದವಿವಾದಗಳನ್ನು ಮಾಡದೇ ...ಂತ ಸಂವಾದದಿಂದ ವಿಚಾರ ವಿನಿಮಯ ...ಾಡಿಕೊಳ್ಳಲಾಯಿತು. ಅದು ಮಾತಾದ ಕನ್ನಡದಲ್ಲಿ ...ದರು, ಕೇಳಿದರು, ಸಂವಾದಿಸಿದರು. ಚರ್ಚೆಗಳಾಗಿದ್ದು ..., ಕೇಳಿಗೊಂಡ ಹೂರ ಮುಕ್ತಾಯ ಹುಟ್ಟು ಹುಟ್ಟುವಂತೆ,

ವಿಚಾರವಿಚಾರಗಳಿಂದ ಹೊಸ ವಿಚಾರಗಳ ನಿರೀಕ್ಷೆಯಲ್ಲಿ ಇದ್ದವರು ಅವರು. ಸಂಸಾರವನ್ನು ತುಚ್ಛೀಕರಿಸದೇ ಕುಟುಂಬವರ್ಗದ ಎಲ್ಲರನ್ನೂ ತಮ್ಮೊಡನೆ ಕೂಡಿಸಿಕೊಂಡು ದೊಡ್ಡ ಕುಟುಂಬವನ್ನಾಗಿಸಿ ಮಹಾಮನೆ ಮಾಡಿಕೊಂಡವರು. ಎಲ್ಲದಕ್ಕಿಂತ ಮುಖ್ಯವಾಗಿ ಕಾಯಕವನ್ನು ಧಾರಣ ಮಾಡಿದವರು. ಹಾಗಾಗಿ ಶ್ರಮಿಕರು, ಸೇವಕರು, ಕೂಲಿಕಾರರು ಎಲ್ಲರೂ ಎಲ್ಲಾ ಬಗೆಯ ಕೆಲಸಗಳನ್ನು ಮಾಡುವವರೊಡನೆ ಬೆರೆಯುವಂತಿತ್ತು, ಅಲ್ಲಿ ಕೆಲಸದ ಬಗ್ಗೆ ಕೀಳರಿಮೆಯಾಗಲಿ, ಮೇಲರಿಮೆಯಾಗಲಿ ಇರದೇ, ಕಾಯಕದ ಮಹತ್ವವನ್ನು ಕಂಡಿದ್ದರು. ಅಲ್ಲಿ ಆಧ್ಯಾತ್ಮವಿತ್ತು, ಸಾಮಾಜಿಕ ಚಿಂತನೆಯಿತ್ತು, ನವ ಸಮಾಜದ ತುಡಿತವಿತ್ತು. ಹಾಗಾಗಿ ಬಸವಣ್ಣ ತನ್ನದೊಂದು ಸಿದ್ಧಾಂತವನ್ನು ಮುಂದಿಟ್ಟುಕೊಂಡು ತಾನು ಫೌಂಡರ್ ಪ್ರೆಸಿಡೆಂಟ್ ಆಗಿ ದಿಗ್ವಿಜಯಕ್ಕೆಂದು, ವಾದದಿಂದ ಇತರ ಸಿದ್ಧಾಂತಿಗಳನ್ನು ಬಗ್ಗು ಬಡಿಯಲು ಎಲ್ಲಿಗೂ ಹೋಗಲಿಲ್ಲ. ಶರಣು ಎಂದವರಿಗೆ ಶರಣು ಶರಣಾರ್ಥಿ ಶಿವ ಶರಣ ಎಂದು ಮರುವಂದಿಸುವ ಸೌಜನ್ಯವಿತ್ತು, ಎನಗಿಂತ ಕಿರಿಯರಿಲ್ಲ ಎಂಬ ವಿನಯವಿತ್ತು, ಸಂಸ್ಕೃತವೇನು, ಪ್ರಾಚೀನ ಪೈಶಾಚಿಕ ಭಾಷೆ ಎಂದೆನಿಸುವಂತಹ ಪುರಾತನ ಭಾಷೆಗಳನ್ನೂ ಬಲ್ಲವರಾಗಿದ್ದರು. ಅವರಿಗೆ ಸ್ಪಷ್ಟವಾಗಿಯೇ ಪರಿಚಯವಿದ್ದ ಜೈನ ಧರ್ಮವನ್ನಾಗಲಿ, ಬೌದ್ಧ ಧರ್ಮವನ್ನಾಗಲಿ ವಾದಕ್ಕೋ, ಪ್ರತಿವಾದಕ್ಕೋ ಎಂದಿಗೂ ಎಳೆ ತರಲಿಲ್ಲ.


ಮಲೆಯಾಳಂನಲ್ಲಿ ಬರೆಯದ ಶಂಕರ

ಆದರೆ, ಈ ಶಂಕರ, ಅದೇ ಅಗ್ರಹಾರದ ಪ್ರಾಡಕ್ಟ್ ಚಿಂತನೆಯ ಕ್ರಮದಲ್ಲೇ ತೀರಾ ಎಳಸಾಗಿ ಹೋದ. ಕಾಟೇವಾಡದಿಂದಾಚೆಗೆ ತನ್ನ ಕಣ್ಣುಗಳನ್ನು ಎತ್ತಲೂ ಹರಿಸಲೇ ಇಲ್ಲ. ಹಾಗಾಗಿಯೇ ಅವನಿಂದ ಯಾವ ಸಾಮಾಜಿಕ ಕ್ರಾಂತಿ ಮಾಡಲು ಸಾಧ್ಯವಾಗಲಿಲ್ಲ. ಅಷ್ಟೇ ಅಲ್ಲದೇ, ತನ್ನ ನೆಲದ ಭಾಷೆಯಾದ ಮಲೆಯಾಳಂನಲ್ಲಿ ಬರೆಯದೇ ಹೋದ. ಶೂದ್ರರನ್ನು ಮತ್ತು ಶ್ರಮಿಕರನ್ನು ಅತ್ಯಂತ ಹೇಯವಾಗಿ ನಡೆಸಿಕೊಳ್ಳುತ್ತಿದ್ದ ಮೇಲ್ವರ್ಗದವರ ವಿರುದ್ಧವಾಗಿ ಧ್ವನಿ ಎತ್ತಲೇ ಇಲ್ಲ. ಅವನ ಕಾಲದಲ್ಲಿ ಅತ್ಯಂತ ಶೋಚನೀಯ ಸ್ಥಿತಿಯಲ್ಲಿದ್ದಂತಹ ಈಳವರಾದಿಯಾಗಿ ಅನೇಕ ಕೆಳವರ್ಗದ ಜನರ ಸಂಪರ್ಕಕ್ಕೆ ಅವನು ಹೋಗಲೇ ಇಲ್ಲ. ಬ್ರಹ್ಮಸೂತ್ರಗಳನ್ನು, ಉಪನಿಷತ್ತುಗಳನ್ನು, ವೇದಗಳನ್ನು ಮಾತ್ರ ಓದಿಕೊಂಡು ಅವಕ್ಕೆ ಯಾವುದೇ ಇತರ ಮೇಧಾವಂತ ಬ್ರಾಹ್ಮಣವಟುಗಳಂತೆ ಭಾಷ್ಯಗಳನ್ನು ಬರೆಯತೊಡಗಿದ್ದ. ಆತನಿಗೆ ಅದರಿಂದ ಯಾರಿಗೇನು ಉಪಯೋಗ ಎಂಬ ಆಲೋಚನೆ ಬರುವುದರಿರಲಿ, ಹಿಂದಿನ ಭಾಷ್ಯಕಾರರನ್ನು ಮೀರಿಸುವಂತಹ ಜಿದ್ದು ಉಂಟಾದವನಂತೆ ವ್ಯಾಖ್ಯಾನಿಸತೊಡಗಿದ. ಕೇರಳದಲ್ಲಿ ಎಂದಿಗೂ ಸಂಸ್ಕೃತವೇನೂ ಆಡು ಭಾಷೆಯಾಗಿರಲಿಲ್ಲ, ಆದರೂ ಅದರಲ್ಲಿ ಅತಿ ಪ್ರಬುದ್ಧವಾದ ರಚನೆಗಳನ್ನು ಮಾಡಿದ. ಅತಿ ಮುಖ್ಯವಾಗಿ ಆತನಿಗೆ ದೈವತ್ವದಲ್ಲಿ ಒಂದು ಕುರುಡು ನಂಬಿಕೆಯಿತ್ತು, ಅದರಂತೆ ತಾನೂ ಆ ಪದವಿಗೇರಿ ಸಮಸ್ತ ಲೋಕವನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಬಹುದೇನೋ ಎಂಬಂತಹ ತೀರಾ ಬಾಲಿಶವಾದಂತಹ ಅಥವಾ ಅಪ್ರಬುದ್ಧವಾದಂತಹ ಆಕಾಂಕ್ಷೆ ಗುಪ್ತಗಾಮಿನಿಯಾಗಿತ್ತೇನೋ ಎಂಬಷ್ಟರ ಮಟ್ಟಿಗೆ (ಅಧ್ಯಾತ್ಮದ ಅರ್ಥ ಮೀರಿ) ತಾಂತ್ರಿಕತೆಗೆ ಗಮನ ಹರಿಸುತ್ತಾನೆ. ದೈವತ್ವದ ಶಕ್ತಿ ಸಂಪಾದನೆಯ ಮಾರ್ಗವೆಂಬಂತೆ ಆರಾಧನೆಗಳನ್ನು ಗಮನಿಸುತ್ತಾನೆ. ಬಹುಶಃ ಆತನ ಎಲ್ಲಾ ಸುಪ್ತವಾದ ಆಕಾಂಕ್ಷೆಗಳು ವಿಫಲವಾಗುತ್ತಾ ಬರುತ್ತಿದ್ದಂತೆ, ದೈವತ್ವವೇ ತಾನಾಗುವಂತಹ ಅಹಂಬ್ರಹ್ಮಾಸ್ಮಿಯ ಸಿದ್ಧಾಂತವನ್ನು ವಾದದ ಮೂಲಕವಾದರೂ ದಿಗ್ವಿಜಯದ ರೂಪದಲ್ಲಿ ಕೊಂಡೊಯ್ದ. ದಿಗ್ವಿಜಯವು ಆಡಳಿತಾರೂಢರ, ಪ್ರಭುತ್ವದವರ, ಅಹಂಕಾರಿಗಳ, ಮನೋಭಾವದಲ್ಲಿರುವಂತಹದ್ದು, ಶಬ್ದ ಸಂಪತ್ತಿನಲ್ಲಿರುವಂತಹದ್ದು ಎಂದು ಮರೆಯದಿರೋಣ. ಅವರು ಯಾವಾಗಲೂ ಆಕ್ರಮಣಕಾರಿಯಾಗಿಯೇ ಇರುತ್ತಾರೆ. ತಮ್ಮ ವಿರೋಧದ ನೆಲೆಗಳನ್ನು ಧೂಳೀಪಟ ಮಾಡಲು ಸಂಚು ಹೂಡುತ್ತಾರೆ. ಸಾವಿಲ್ಲದ ದೇವರಾಗಲು ಸಾಧ್ಯವಿಲ್ಲದೇ ಹೋದಾಗ, ಸಾಯಲಾರದಂತಹ, ಎದುರಿರದಂತಹ ಸಿದ್ಧಾಂತದ ಮೂಲಕ ತಾವು ಅಮರರಾಗಿರಬೇಕು ಎನ್ನುವ ರುಗ್ಣ ಮನೋಭಾವದವರು. ದೇವರಾಗಬೇಕು, ದೈವತ್ವದ ಪದವಿ ಬೇಕು ಎಂದು ಬರುವ ಆಲೋಚನೆ ಅಹಂಕಾರಿಗಳಿಗೆ, ಅತೀ ಮೇಲರಿಮೆ ಉಳ್ಳವರಿಗೆ ಮಾತ್ರವೇ.

ಅಂತಹ ದೈವತ್ವದ ಪರಿಕಲ್ಪನೆಯನ್ನೇ ತ್ಯಜಿಸಿದಂತಹ ಬೌದ್ಧ ಚಿಂತನೆಗಳು ವ್ಯಾಪಕವಾಗತೊಡಗಿದರೆ ಶಂಕರ ಗೂಂಡಾಗಿರಿ ಮಾಡದೇ ಇನ್ನೇನು!

ಶಂಕರಾಚಾರ್ಯನ ಪ್ರತಿಗಾಮಿತನ

ಪ್ರೊ. ಕೆ ಎಸ್ ಭಗವಾನ್ ತಮ್ಮ ಶಂಕರಾಚಾರ್ಯನ ಪ್ರತಿಗಾಮಿತನದಲ್ಲಿ, ಶಂಕರನ ಬ್ರಾಹ್ಮಣಾಧಿಕ್ಯದ




ಅಮಾನವೀಯ ನಿಲುವು ಮತ್ತು ಅಸ್ಥಿಮಿತ ಮನಸ್ಸಿನ ಒಲವುಗಳಂತೆ ಕಾಣುವ ವಿಚಾರಗಳನ್ನು ಪ್ರಸ್ತುತಪಡಿಸುತ್ತಾ ಒಂದು ಮಾತು ಹೇಳುತ್ತಾರೆ. "ವಾಸ್ತವವನ್ನು ತಿರಸ್ಕರಿಸಿದ ಚಿಂತನೆ ಅಸ್ಪಷ್ಟವಾಗುತ್ತದೆ. ಅಸ್ಪಷ್ಟವಾದಾಗ ಅಂಧಾತ್ಮಕ (ಡಾಗ್ಮ್ಯಾಟಿಕ್) ಆಗುತ್ತದೆ. ಅಂಧಾತ್ಮಕವಾದಾಗ ತೆರೆದ ಮನಸ್ಸಿರುವುದಿಲ್ಲ, ಮುಕ್ತ ಮನಸ್ಸಲ್ಲ ಅಂದರೆ ಮೃತ ಮನಸ್ಸು. ಮೃತ ಮನಸ್ಸು ತಾನೂ ನಾರುವುದಲ್ಲದೇ ಎಲ್ಲವನ್ನೂ ದುರ್ನಾತಗೊಳಿಸುತ್ತದೆ. ಶಂಕರಾಚಾರ್ಯ ಇಂಥ ತುಚ್ಛ ಚಿಂತನೆಯ ಪ್ರತಿನಿಧಿಯಾಗಿದ್ದಾನೆ" ಎಂದು. ಹೌದು, ಆಗಲೇ ನನಗೆ ಬಸವಣ್ಣ ನೆನಪಾಗಿದ್ದು. ಬಸವಣ್ಣ ತಾನು ಯಾವುದೇ ಮೇಲ್ವರ್ಗದ ಪರಿಸರದಲ್ಲಿ ಹುಟ್ಟಿ ದೊರಕುವ ಎಲ್ಲಾ ಗೌರವ ಸವಲತ್ತುಗಳನ್ನು ಹೊಂದಿದ್ದರೂ ವಾಸ್ತವವನ್ನು ನೋಡುವ ಸ್ವತಂತ್ರ ಚಿಂತನೆ ಇತ್ತು. ಹಾಗಾಗಿ ಬಸವಣ್ಣ ಎಂದಿಗೂ ಡಾಗ್ಮ್ಯಾಟಿಕ್ ಕಡೆಗೆ ಜಾರುವ ಪ್ರಮೇಯವೇ ಬರಲಿಲ್ಲ.

ಆದರೆ ಶಂಕರನದು ಬೇರೆಯೇ ಕಥೆ.

ಇದೇ ಶಂಕರ, ತನ್ನ ವೈದಿಕ ವಾದದ ವಿರೋಧಿಗಳಾದ ಬೌದ್ಧರನ್ನು ತನ್ನ ಸಂಕುಚಿತ ಮತ್ತು ಗೊಡ್ಡು ಸಿದ್ಧಾಂತದಿಂದ ಎಂದಿಗೂ ವಾದದಿಂದಾಗಲಿ ಹೊಡೆಯಲು ಸಾಧ್ಯವಾಗುತ್ತಿರಲಿಲ್ಲ. ಇನ್ನು ಸಂವಾದವಂತೂ ಬೇಕಾಗಿಯೇ ಇರಲಿಲ್ಲ. ಹಾಗಾಗಿ ಅವನು ಅನುಸರಿದ ಮಾರ್ಗ ನೋಡಿ.

ಕೆ.ಎಸ್. ಭಗವಾನರು ಉಲ್ಲೇಖಿಸುತ್ತಾರೆ, "ಶಂಕರಾಚಾರ್ಯ ಶೂದ್ರರಿಗೆ ಜ್ಞಾನವನ್ನು ನಿರಾಕರಿದ್ದಷ್ಟೇ ಅಲ್ಲ ಅವನು ಮಾಡಿದ ಮಹಾಪರಾಧ. ತನ್ನ ಸಿದ್ಧಾಂತಕ್ಕೆ ಬೃಹತ್ ಪ್ರಮಾಣದಲ್ಲಿ ಎದುರಾದ, ಬಲವಾಗಿ ಬೇರೂರಿದ್ದ ಬುದ್ಧಧಮ್ಮವನ್ನು ನಾಶಮಾಡಲು ಅವನು ತುಂಬಾ ಅನಾಗರಿಕ, ಅಸಂಸ್ಕೃತ, ಬರ್ಬರ, ಹೇಯ ವಿಧಾನಗಳನ್ನು ಅನುಸರಿಸಿದ. ಅವನು ತನ್ನ ವಿದ್ವತ್ತು ಮತ್ತು ವಾದದ ಮೂಲಕ ಬೌದ್ಧರನ್ನು ಸೋಲಿಸಿದ ಎಂಬುದು ಕೇವಲ ಬೂಟಾಟಿಕೆ. ವಾದದಲ್ಲಿ ಸೋಲುವುದು ಎಂದರೆ ಏನರ್ಥ? ವಾದಗಳು ಭಿನ್ನಾಭಿಪ್ರಾಯ ಮತ್ತು ಭಿನ್ನ ದೃಷ್ಟಿಕೋನಗಳಲ್ಲವೇ? ಹಾಗಿರುವಾಗ ಗೆಲ್ಲುವುದಾಗಲಿ, ಸೋಲುವುದಾಗಲಿ ಎಲ್ಲಿ ಬಂತು? ಇದು ಘನ ಮೋಸದ ದೊಡ್ಡ ಕಥೆ. ಆಳುವ ವರ್ಗದ ಬೆಂಬಲದಿಂದ ಜನಪರವಾಗಿದ್ದ ಬೌದ್ಧರನ್ನು ಅವನು ನಿರ್ನಾಮ ಮಾಡಿದನು. ದಕ್ಷಿಣದಲ್ಲಿ ಪಲ್ಲವರು, ಪಶ್ಚಿಮದಲ್ಲಿ ಚಾಲುಕ್ಯರು ಬ್ರಾಹ್ಮಣ ಧರ್ಮವನ್ನು ನಿಷ್ಠೆಯಿಂದ ಪೋಷಿಸುತ್ತಿದ್ದ ಪ್ರಬಲ ರಾಜಮನೆತನಗಳಾಗಿದ್ದವು. ಅವರ ಅಭಯ ಹಸ್ತವಿಲ್ಲದಿದ್ದರೆ ಶಂಕರಾಚಾರ್ಯ ಮುಂದೆ ಹೇಳುವಂಥ ದುಸ್ತರವಾದ ಹೀನಕೃತ್ಯಕ್ಕೆ ಕೈ ಹಾಕುತ್ತಿರಲಿಲ್ಲ. ಬುದ್ಧ ಧಮ್ಮದ ಒಂದು ಗಟ್ಟಿ ನೆಲೆಯಾಗಿದ್ದ ನಾಗಾರ್ಜುನ ಕೊಂಡವನ್ನು ತನ್ನ ಅಸಂಖ್ಯಾತ ಅನುಯಾಯಿಗಳೊಡನೆ ಹೋಗಿ ಸ್ವಂತ ಮೇಲ್ವಿಚಾರಣೆಯಲ್ಲಿ ಧ್ವಂಸ ಮಾಡಿದನು. ಬೌದ್ಧರು, ಬೌದ್ಧ ವಿಗ್ರಹಗಳು, ಸ್ತೂಪಗಳು ಮತ್ತು ಸ್ಮಾರಕಗಳನ್ನು ನಿರ್ನಾಮ ಮಾಡಿದ ಎಂದು ನಾಗಾರ್ಜುನಕೊಂಡದಲ್ಲಿ ಮೊಟ್ಟ ಮೊದಲಿಗೆ ಭೂಶೋಧನೆ ನಡೆಸಿದ ಭಾರತ ಮತ್ತು ಸಿಲೋನಿನ ಪ್ರಾಚ್ಯಶಾಸ್ತ್ರ ಇಲಾಖೆಯ ಮಹಾನಿರ್ದೇಶಕರಾಗಿದ್ದ ಎ.ಎಚ್. ಲಾಂಗ್‌ಹರ್ಸ್ಟ್ "ನಾಗಾರ್ಜುನಕೊಂಡದ ಬೌದ್ಧಾವಶೇಷಗಳು" ಎಂಬ ತಮ್ಮ ಅಮೂಲ್ಯ ಗ್ರಂಥದಲ್ಲಿ ದಾಖಲು ಮಾಡಿದ್ದಾರೆ.


"ನಾಗಾರ್ಜುನಕೊಂಡದಲ್ಲಿ ಎಲ್ಲಾ ಕಟ್ಟಡಗಳೂ ಕ್ರೂರ ರೀತಿಯಲ್ಲಿ ಧ್ವಂಸವಾಗಿರುವುದನ್ನು ನೋಡಿದರೆ ಎದೆ ನಡುಗುತ್ತದೆ. ಅದು ಕೇವಲ ನಿಧಿ ಅನ್ವೇಷಕರ ಕೆಲಸವೆಂದು ಹೇಳುವಂತಿಲ್ಲ, ಏಕೆಂದರೆ ಬಹುಪಾಲು ಸ್ತಂಭಗಳು, ವಿಗ್ರಹಗಳು ಮತ್ತು ಶಿಲ್ಪಗಳನ್ನು ಮನಸೇಚ್ಛೆ ಒಡೆದು ಚೂರುಚೂರು ಮಾಡಿದ್ದಾರೆ. ಅಮರಾವತಿಯಲ್ಲಿ ಇರುವಂತೆ ಅದರ ಸನಿಹದಲ್ಲಿ ಪಟ್ಟಣ ಇದ್ದಿದ್ದರೆ ಆಧುನಿಕ ನಿರ್ಮಾಪಕರು ಈ ಜಾಗವನ್ನು, ಭಾರತದಲ್ಲಿ ಬಹುತೇಕ ಆಗಿರುವಂತೆ, ಲೂಟಿ ಮಾಡಿದ್ದಾರೆಂದು ಭಾವಿಸಬಹುದಿತ್ತು, ಆದರೆ ಇದು ನಾಗಾರ್ಜುನಕೊಂಡದಲ್ಲಿ ಎಂದೂ ನಡೆಯಲಿಲ್ಲ, ಏಕೆಂದರೆ, ಅದರ ಆಜುಬಾಜಿನಲ್ಲಿ ಯಾವ ಪಟ್ಟಣಗಳಿಲ್ಲ, ಆ ಕಣಿವೆಯೊಳಕ್ಕೆ ಹೋಗಿಬರಲು ಗಾಡಿದಾರಿಗಳಿಲ್ಲ. ಮಧ್ಯಯುಗದ ಮಹಾ ಹಿಂದೂ ತತ್ವಜ್ಞಾನಿ ಮತ್ತು ಗುರು ಶಂಕರಾಚಾರ್ಯ ತನ್ನ ಹಿಂಬಾಲಕರ ಹಿಂಡಿನೊಡನೆ ಬಂದು ಬೌದ್ಧ ಸ್ಮಾರಕಗಳನ್ನು ನಾಶಪಡಿಸಿದನೆಂದು ಸ್ಥಳೀಯ ಐತಿಹ್ಯ ಹೇಳುತ್ತದೆ. ಇದು ಹಾಗಿರಲಿ, ಹಾಳಾದ ಕಟ್ಟಡಗಳಿರುವ ಈ ಕಣಿವೆಯ ಸಾಗುವಳಿ ಜಮೀನನ್ನು ಶಂಕರಾಚಾರ್ಯನಿಗೆ



ಕೆ.ಎಸ್. ಭಗವಾನ್

ಉಂಬಳಿಯಾಗಿ ಕೊಟ್ಟ ವಾಸ್ತವ ಸಂಗತಿ ಇಂದಿಗೂ ಉಳಿದಿದೆ. ಆ ಮಹಾ ಗುರುವಿನ ಅನುಯಾಯಿಗಳ ಧಾರ್ಮಿಕ ಮುಖಂಡನ ಅನುಮತಿಯಿಂದ ನಾನು ಇಲ್ಲಿ ಭೂಶೋಧನೆ ಮಾಡಲು ಸಾಧ್ಯವಾಯಿತು. ಗುಂಟೂರು ಜಿಲ್ಲೆ ಪುಷ್ಪಗಿರಿಯಲ್ಲಿ ವಾಸಿಸುವ ಬ್ರಾಹ್ಮಣ ಜಗದ್ಗುರು ನಲ್ಲಮಲೈನಲ್ಲಿರುವ ಶ್ರೀಶೈಲಂ ದೇವಾಲಯದ ವಾರಸುದಾರನಾಗಿದ್ದಾನೆ. ಮೂಲತಃ ಒಂದು ಬೌದ್ಧ ತಾಣವಾಗಿದ್ದಂತೆ ಕಾಣುವ ಈ ದೇವಸ್ಥಾನವನ್ನು ಅದೇ ರೀತಿಯಲ್ಲಿ ನಿಸ್ಸಂದೇಹವಾಗಿ ವಶಪಡಿಸಿಕೊಳ್ಳಲಾಯಿತು.

ಶಂಕರಾಚಾರ್ಯನ ಗೂಂಡಾಗಿರಿಯನ್ನು ಸಂಪೂರ್ಣವಾಗಿ ತಿಳಿಯಲು ಕೆ ಎಸ್ ಭಗವಾನರ "ಶಂಕರಾಚಾರ್ಯ ಮತ್ತು ಪ್ರತಿಗಾಮಿತನ" ಒಂದು ಪ್ರವೇಶಿಕೆ. ■



ಸ್ಮಾರ್ಟ್ ಸಿಟಿ ಎಂಬ ವಂಚನೆ

ಈಗ ಸುದ್ದಿಯಲ್ಲಿರುವ ಸ್ಮಾರ್ಟ್ ಸಿಟಿಗಳು ವಾಸ್ತವವಾಗಿ ಇಂಡಸ್ಟ್ರಿಯಲ್ ಕಾರಿಡಾರ್ ಯೋಜನೆಯ ಒಂದು ಅಂಗ ಮಾತ್ರ. ಈ ಯೋಜನೆ ಈಗ ವಿವಾದದಲ್ಲಿರುವಂತೆ ತೋರುವ ಭೂತಿದ್ದುಪಡಿ ಮಸೂದೆಯೊಂದಿಗೆ ತಳುಕು ಹಾಕಿಕೊಂಡಿದೆ. 2020 ರ ಹೊತ್ತಿಗೆ 75% ಗ್ರಾಮೀಣ ಜನರನ್ನು ಒಕ್ಕಲೆಬ್ಬಿಸಿ ನಗರಗಳ ಕೊಳಚೆ ಪ್ರದೇಶಗಳಿಗೆ ದಬ್ಬುವುದು, ಕೃಷಿಭೂಮಿಯನ್ನು ಕಿರಿದುಗೊಳಿಸಿ, ನಗರೀಕರಣದ ಮೂಲಕ ಜಾಗತಿಕ ಮತ್ತು ಸ್ಥಳೀಯ ಗುತ್ತಿಗೆದಾರರಿಗೆ/ಉದ್ಯಮಿಗಳಿಗೆ ಲಾಭಮಾಡಿಕೊಡುವುದು ಈ ಯೋಜನೆಯ ಉದ್ದೇಶ. ಇದರ ರೂವಾರಿ ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಸರಕಾರ. ಅಭಿವೃದ್ಧಿಯ ಹೆಸರಿನಲ್ಲಿ ಈ ಯೋಜನೆಯನ್ನು ಈಗ 'ಪೀಸ್ ಮೀಲ್ ಚಿತ್ರ'ದ ಮೂಲಕ ಬಿಡಿ ಬಿಡಿಯಾಗಿ ಘೋಷಿಸಿ ಅನುಷ್ಠಾನಗೊಳಿಸುತ್ತಿರುವುದು ಮೋದಿ ನೇತೃತ್ವದ ಸ್ವದೇಶ ಪ್ರೇಮದ ಎನ್‌ಡಿಯೆ ಸರಕಾರ. ರಾಜಕೀಯ ನಿರಕ್ಷರಿಗಳೂ ಮೂಢರೂ ಆದ ಪತ್ರಕರ್ತರು ಮಾತ್ರ ಇದನ್ನು ಕೊಂಡಾಡುತ್ತಿದ್ದಾರೆ. ಅಮಾಯಕ ಜನರು ಇಂಥ ಯೋಜನೆಗಳನ್ನು ತಮಗಾಗಿ ನಡೆಯುತ್ತಿರುವ ಅಭಿವೃದ್ಧಿಯೆಂದು ನಂಬುತ್ತಾರೆ. ಜನಪರ ಕಾಳಜಿಯುಳ್ಳ ಪತ್ರಿಕೆಗಳು ಇಂಥ ಯೋಜನೆಗಳ ಹೊರ ಚಿತ್ರಣದ ವರದಿಗೆ ತೃಪ್ತರಾಗದೆ ಅವುಗಳ ಇನ್ನೊಂದು ಮುಖವನ್ನೂ ಜನಸಾಮಾನ್ಯರಿಗೆ ಪರಿಚಯ ಮಾಡಿಕೊಡುವಂತೆ ಜನಾಭಿಪ್ರಾಯವನ್ನು ರೂಪಿಸುವಂತೆ ಉತ್ತೇಜಿಸುವ ಪ್ರಯತ್ನ ಮಾಡೋಣ.

- ವಿ.ಎನ್.ಲಕ್ಷ್ಮೀನಾರಾಯಣ, ಮೈಸೂರು

ದಲಿತ ಸಿಖ್ಖರ ಅರಣ್ಯರೋದನ

ಪಂಜಾಬಿನ ಮೊಗಾದಲ್ಲಿ ಆಕಾಲಿ ದಳದ ಮುಖ್ಯಮಂತ್ರಿ ಬಾದಲ್ ಕುಟುಂಬಕ್ಕೆ ಸೇರಿದ ಬಸ್ಸಿನಲ್ಲಿ 13 ವರ್ಷದ ದಲಿತ ಹುಡುಗಿಗೆ ಹಾಗೂ ಅವಳ ತಾಯಿಗೆ ಲೈಂಗಿಕ ಕಿರುಕುಳ ಕೊಟ್ಟು ಬಸ್ಸಿನಿಂದ ಹೊರದೂಡಿ ಹುಡುಗಿಯ ಮರಣ ಸಂಭವಿಸಿದೆ. ಈ ಕೃತ್ಯದ ಹಿಂದಿರುವ ಆರ್ಬಿಟ್ ಎವಿಯಶನ್ ಕಂಪನಿಯ ನೌಕರರ ಪುಂಡಾಟಕ್ಕೆ ಮೂಲ ಕಾರಣ ಅದು ಮುಖ್ಯಮಂತ್ರಿ ಕುಟುಂಬದ ಬಸ್ ಆಗಿದ್ದು ತಾವು ಏನು ಮಾಡಿದರೂ ನಡೆಯುತ್ತದೆ ಎಂಬ ಭಂಡತನ. ಅಷ್ಟೇ ಅಲ್ಲದೆ ಪಂಜಾಬಿನ ಸಿಖ್ ಸಮಾಜದಲ್ಲಿಯೂ ಆಳವಾಗಿರುವ ಜಾತೀಯತೆಯೂ ಕಾರಣವಾಗಿದೆ.

ಪಂಜಾಬಿ ಹಿಂದೂಗಳಂತೆ ಅಲ್ಲಿಯ ಸಿಖ್ ಸಮಾಜದಲ್ಲೂ ದಲಿತರಿದ್ದಾರೆ. ಆರ್ಥಿಕ ಅಭಿವೃದ್ಧಿಯ ಹೊರತಾಗಿಯೂ ದೇಶದ ಇತರ ಭಾಗದಂತೆ ಪಂಜಾಬಿನಲ್ಲೂ ದಲಿತ ಸಿಖ್ಖರ ಬಾಳು ಅವಮಾನಕರವಾಗಿದೆ. ನಮ್ಮ ಮಂಗಳೂರಿನಲ್ಲೂ ಸುಮಾರು ಇಪ್ಪತ್ತು ಸಿಖ್ ಕುಟುಂಬಗಳು ಶಾಶ್ವತವಾಗಿ ನೆಲೆಸಿದ್ದು ಅವರು ಸ್ಥಳೀಯರಷ್ಟೇ ಶುದ್ಧವಾಗಿ ತುಳು ಕನ್ನಡ ಮಾತನಾಡುತ್ತಾರೆ. ಆದರೆ ತಾವೆಲ್ಲ ದಲಿತ ಸಿಖ್ಖರು (ಮಝಬಿ ಸಿಖ್) ಎಂದು ತಮ್ಮ ಕಪ್ಪು ಮೈಬಣ್ಣ ತೋರಿಸುತ್ತಾ ಹೇಳುತ್ತಾರೆ.

"ನಾವು ಪಂಜಾಬಿನ ಮೂಲ ನಿವಾಸಿಗಳಾಗಿದ್ದು ಅಲೆಕ್ಸಾಂಡರ್ ಹಾಗೂ ಪರ್ಷಿಯನ್ನರ ದಾಳಿಯ ಕಾಲದಲ್ಲೂ ನಮ್ಮ ಪೂರ್ವಜ ದಲಿತರು ಊರ ಹೊರಗೆಯೇ ಇರುತ್ತಿದ್ದರಿಂದ ಕಾಮಾಂಧ ವಿದೇಶಿ ಯವನ ಸೈನಿಕರ ಕೈಯಿಂದ ನಮ್ಮ ಪೂರ್ವಜರ ಹೆಂಗಸರು ಬಚಾವಾದರು. ಹಾಗಾಗಿ ನಾವು ಶುದ್ಧ ಭಾರತೀಯ ರಕ್ತ ಉಳಿಸಿಕೊಂಡಿದ್ದೇವೆ. ಆದಕ್ಕಾಗಿ ಕಪ್ಪಗಿದ್ದೇವೆ ಹಾಗೂ ದಕ್ಷಿಣ ಭಾರತೀಯರ ಚಹರೆ ಹೊಂದಿದ್ದೇವೆ. ಆದರೆ ಎರಡು ಸಾವಿರ ವರ್ಷಗಳ ಹಿಂದೆ ಮೇಲ್ಜಾತಿಯ ಹೆಂಗಸರು ಯವನ ಸೈನಿಕರಿಗೆ ಬಲಿಯಾದುದರ ಪರಿಣಾಮ ಅವರಿಗೆ ಗ್ರೀಕ್-ಪರ್ಷಿಯನ್ನರಂತೆ ಎತ್ತರ ನಿಲುವಿನ ಬಿಳಿ ವರ್ಣದ ಪೀಳಿಗೆ ಜನಿಸಿತು. ಹಾಗಾಗಿ ಇಂದಿಗೂ ನಮ್ಮ ಕಪ್ಪು ಮೈಬಣ್ಣದಿಂದ ನಮ್ಮನ್ನು ಪಂಜಾಬಿನಲ್ಲಿ ಗುರುತಿಸುವುದು ಸುಲಭ. ಆದರಿಂದಾಗಿ ನಾವು ಅಡಿಗಡಿಗೆ ಬಸ್ಸು, ಟ್ರೇನು ಸಾರ್ವಜನಿಕ ಸ್ಥಳಗಳಲ್ಲಿ ತಾರತಮ್ಯಕ್ಕೆ ತುತ್ತಾಗುತ್ತೇವೆ, ಆದರ ಪರಿಣಾಮವೇ



ಮೊಗಾ ಬಸ್ಸಿನಲ್ಲಿಯ ಅಮಾನುಷ ದೌರ್ಜನ್ಯ" ಎಂದು ಮಂಗಳೂರಿನ ಸಿಖ್ಖರೊಬ್ಬರು ನಮಗೆ ಹೇಳಿದರು. ಈಗ ಪಂಜಾಬಿನಲ್ಲಿ ಮೇಲ್ಜಾತಿ ಸಿಖ್ಖರ ಪಕ್ಷವಾದ ಆಕಾಲಿ ದಳದೊಡನೆ ಬಿಜೆಪಿಯೂ ಸರಕಾರದಲ್ಲಿ ಪಾಲುದಾರರಾಗಿರುವುದರಿಂದ ಜಾತಿ ತಾರತಮ್ಯ ಹೆಚ್ಚುತ್ತಿದೆಯಂತೆ.

- ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು

ಪತ್ರಿಕೆ ಓದಿ ಬೇಸರ ಮತ್ತು ಉಲ್ಲಾಸ!

ಬೆಂಗಳೂರಿನ ಜಾಹಿರಾತು ಮಾಫಿಯಾ ಸಾವಿರಾರು ಕೋಟಿ ನುಂಗಿ ಅಟ್ಟಹಾಸ ಮೆರೆಯುತ್ತಿರುವುದು, ಬೇಲಿಯೇ ಎದ್ದು ಹೊಲ ಮೇಯುವ ಲೋಕಾಯುಕ್ತದ ಶತಭ್ರಷ್ಟ ಅಧಿಕಾರಿಗೆ ಪ್ರಮೋಷನ್ ಗಿಫ್ಟ್, ಜೀವನವಿಡಿ ಪ್ರಾಮಾಣಿಕವಾಗಿದ್ದು ಭ್ರಷ್ಟರ ವಿರುದ್ಧ ಹೋರಾಡಿದ ಅಧಿಕಾರಿಗೆ ಸಹಜ ನಿವೃತ್ತಿಯ ಮೂರು ದಿನ ಮೊದಲು ಕಡ್ಡಾಯ ನಿವೃತ್ತಿ, ಮುಖ್ಯಮಂತ್ರಿಗೆ ಪತ್ರಿಕಾ ಸಂಪಾದಕನ ಕನ್ನಡ ಉಚ್ಚಾರದ ಕ್ಲಾಸು ಮತ್ತು ವಿಜ್ಞಾನದ ಹೆಸರಲ್ಲಿ ಸರಕಾರಿ ಭೂಮಿ ಕಬಳಿಸುವ ಅವನ ಹುನ್ನಾರು, ಇವನ್ನೆಲ್ಲ ತಮ್ಮ ಪತ್ರಿಕೆಯಲ್ಲಿ ಓದುವಾಗ ನಾವು ಭಾರತದ ಇಂತಹ ಪರಮಪಾವನ ನೆಲದಲ್ಲಿ ಹುಟ್ಟಲೇಬಾರದಿತ್ತು ಎನಿಸುತ್ತದೆ. ಶತನೀಚರ ಕರ್ಮಗಳನ್ನು ತಮ್ಮ ಪತ್ರಿಕೆಯಲ್ಲಿ ತಾವು ಬಹಿರಂಗಪಡಿಸಿದಾಗ - ನೀವು ಎಷ್ಟೇ ಪ್ರಯತ್ನಪಟ್ಟರೂ ಭಾರತದಲ್ಲಿ ಪುರಾಣಕಾಲದಿಂದ ಇರುವ ಈ ಭ್ರಷ್ಟಾಚಾರ ಮತ್ತು ಜಾತಿಕ್ರೌರ್ಯ ಎಂದಿಗೂ ನಿಲ್ಲಲಾರದು. ಹಾಗಿರುವಾಗ ತಮ್ಮ ಪತ್ರಿಕೆ ಓದುವುದನ್ನೇ ನಿಲ್ಲಿಸಿದರೆ ಇಂತಹ ಸುದ್ದಿಗಳ ಗೊಡವೆಯಿಲ್ಲದೇ ನಮ್ಮ ಮನಸಿಗೆ ಸ್ವಲ್ಪ ನೆಮ್ಮದಿ ಸಿಗಬಹುದು ಎಂದು ಅನಿಸುವುದು ನಿಜ.

ಆದರೆ ಕುರುಕ್ಷೇತ್ರ ಯುದ್ಧ ಮುದುಕರ ನೂಕಾಟವಾಗಿತ್ತೇ ಎಂಬ ಲಘು ಲೇಖನ ಓದುವಾಗ ಮತ್ತು ತರುಣ ಕೀಚಕ ಹಣ್ಣು ಹಣ್ಣು ಮುದುಕಿ ದ್ರೌಪದಿಯನ್ನು ನೋಡಿ ಕಾಮಾಂಧನಾಗುವ ದೃಶ್ಯ ಹಾಗೂ ಇತರ ಮುದುಕರ ಬಯಲಾಟದ ದೃಶ್ಯಗಳನ್ನು ಕಲ್ಪಿಸಿಕೊಂಡಾಗ ಹೊಟ್ಟೆ ಹುಣ್ಣಾಗುವಷ್ಟು ನಗು ಬಂದು ಮನಸ್ಸು ಉಲ್ಲಸಿತವಾಗುತ್ತದೆ.

- ಹರೀಶ್ ಎಂ ರಾವ್, ಬೆಳಗಾವಿ

ಪುರಾಣ ಪುರುಷರು ಬೋನ್‌ಲೆಸ್ ಐಟಮ್‌ಗಳೇ?

ಶ್ರೀಯುತ ಪ್ರವೀಣ್ ಶೆಟ್ಟರ ಮಹಾಭಾರತದ ಮರುವ್ಯಾಖ್ಯಾನವನ್ನು ವಿಶ್ಯುವಲ್ಲಾಗಿ ಕಲ್ಪಿಸಿಕೊಳ್ಳುತ್ತಾ ಓದಲು ಬರೋಬ್ಬರಿ ಅರ್ಧಗಂಟೆ ಹಿಡಿಯಿತು. (ಮೇಲುಮೇಲಕ್ಕೆ ಕಣ್ಣಾಡಿಸಿ ಅರ್ಜೆಂಟಾಗಿ ಇದನ್ನ ಓದಿದರೆ ಮಜಾ ಸಿಗದು). ಹಿಂದೂಶಾಸ್ತ್ರಗಳು ಜನರಿಗೆ ಬೋಧಿಸುವ ಬದುಕಿನ ಮುಖ್ಯ ಗುರಿ (ತುಳುವಿನಲ್ಲಿ ಗುರಿಯೆಂದರೆ ಹೊಂಡ ಎಂದರ್ಥ) ಯೆಂದರೆ ಅದು ಸ್ವರ್ಗ ಪ್ರಾಪ್ತಿ- ಮೋಕ್ಷಸಾಧನೆ (ಯ ಹೆಸರಲ್ಲಿ ಹೊಂಡಕ್ಕೆ ಬೀಳಿಸುವುದು). ಆತ ಎಂತಹ ಪಾಪಿಯೇ ಆದರೂ ಆತ ಯುದ್ಧದಲ್ಲಿ ಸತ್ತರೆ ನೇರ ಸ್ವರ್ಗವಂತೆ. ಯುದ್ಧದಲ್ಲಿ ಸಾಯದ ಸ್ವಯಂ ಯಮನ ಮಗನಾದ ಧರ್ಮರಾಯ ತನ್ನ ತಪ್ಪೊಂದಕ್ಕೆ ಪ್ರಾಯಶ್ಚಿತ್ತವಾಗಿ ಕೊನೆಗೆ ನರಕದರ್ಶನ ಮಾಡಿಕೊಂಡೇ ಸ್ವರ್ಗಕ್ಕೆ ಹೋದಾಗ ಸ್ವರ್ಗದಲ್ಲಿದ್ದ ದುರ್ಯೋಧನಾದಿಗಳನ್ನು ಕಂಡು ಅಚ್ಚರಿ ಹಾಗೂ ಅಸಮಾಧಾನವುಂಟಾಯಿತಂತೆ. ಹೀಗಾಗಿ ಮಹಾಭಾರತ ಕಾಲದ ಮುದುಕರುಗಳೆಲ್ಲ ನೇರವಾಗಿ ಸ್ವರ್ಗಸ್ಥರಾಗಲು ತಮ್ಮ ಇಳಿವಯಸ್ಸಿನಲ್ಲಿ ಈ ಯುದ್ಧವೆಂಬ ಶಾರ್ಟ್ ಕಟ್ ತಂತ್ರವನ್ನ ಹೆಣೆದಿರಬೇಕು. (ಆದರೆ ಇಚ್ಛಾಮರಣಿ ಭೀಷ್ಮ ಯುದ್ಧದಲ್ಲಿ ಸಾಯಬೇಕಾಗಿ ಬಂದರೂ ಸಾಯದೇ ಸ್ವರ್ಗದ ಡೋರ್ ಓಪನ್ ಮಾಡುವ ದಿನವಾದ ಉತ್ತರಾಯಣದ ತನಕ ಸ್ಪೆಷಲ್ ಎಂಟ್ರಿಗೆಂದು ಶರಶಯ್ಯೆಯಲ್ಲೇ ಮಲಗಿ ಕಾದದ್ದು ಮಾತ್ರ ವಿಶೇಷ).

ಹೊಸ ಜನರೇಷನ್‌ನ ಮಕ್ಕಳ ಮಾರ್ಕ್ಸ್‌ನ ಹಾಗೆ 80 ಪ್ಲಸ್ 90 ಪ್ಲಸ್ ನಿಂದಲೇ ಗುರುತಿಸಿಕೊಂಡು ರಣರಂಗದಲ್ಲಿ ಬಡಿದಾಡಿದ ಈ ವೃದ್ಧ ಯೋಧರನ್ನು ಕಲ್ಪಿಸಿಕೊಂಡು ಈಗ ಆ ಯುದ್ಧವನ್ನು ಮರುಸೃಷ್ಟಿಸಿದರೆ ರಣರಂಗದ ತುಂಬೆಲ್ಲ ಕನ್ನಡಕ, ಹಲ್ಲುಸೆಟ್ ಊರುಗೋಲುಗಳೇ ಚೆಲ್ಲಾಡಿ ಬಿದ್ದಿರುವುದನ್ನ ನೋಡಬೇಕಾದೀತು.

ಪ್ರವೀಣ್ ಶೆಟ್ಟರು ಎತ್ತಿದ ವಯಸ್ಸಿನ ಪ್ರಶ್ನೆಗೆ ಸಂಪ್ರದಾಯವಾದಿಗಳಲ್ಲಿ ಸಿದ್ಧ ಉತ್ತರ ಇದ್ದೇ ಇರುತ್ತದೆ. ಮಾನವರ ಆಯುಸ್ಸು, ದೇಹದಾರ್ಢ್ಯತೆ, ಚಿಂತನೆ ಇವೆಲ್ಲವೂ ಚತುರ್ಯುಗಗಳಲ್ಲಿ ಬೇರೆಬೇರೆ ರೀತಿ ಇರುತ್ತದೆ ಎಂಬುದು ಅವರ ವಾದ. ಕೃಷ್ಣನ ದ್ವಾಪರಯುಗದಲ್ಲಿ ಹೆಚ್ಚೆಂದರೆ ಇನ್ನೂರೋ ಮುನ್ನೂರೋ ವಯಸ್ಸಿನವರಿದ್ದರೆ, ರಾಮನ ಕೃತಯುಗದಲ್ಲಿ ಎಲ್ಲಕ್ಕೂ ಸಾವಿರದಾಚೆಗಿನ ದಾರಾಳಿಗಳ ಲೆಕ್ಕಾಚಾರ. ಪ್ರವೀಣ್ ಶೆಟ್ಟರು ಉಲ್ಲೇಖಿಸಿದಂತೆ ಈ ಯುಗ ಪ್ರಭಾವಗಳೆಲ್ಲ ಕೇವಲ ಭೂಗ್ರಹದ ಭಾರತ ಭಾಗಕ್ಕಷ್ಟೇ ಅನ್ವಯವೇ ಹೊರತು ಆಗಿನವರಿಗೆ ಸಮಕಾಲೀನರಾಗಿ ಬದುಕಿದ್ದ ಆಫ್ರಿಕಾ, ಅಮೆರಿಕಾ, ಆಸ್ಟ್ರೇಲಿಯಾ ಖಂಡವಾಸಿಗಳಿಗಲ್ಲ ಎಂಬುದು ಗಮನಾರ್ಹ. ಅವರೆಲ್ಲ ಸರಾಸರಿ 60-70ಕ್ಕೇ (ವಾಸ್ತವವಾಗಿ ಸರಾಸರಿ ಆಯಸ್ಸು ಹೆಚ್ಚಿದ್ದು ಈಗ. ಆ ಕಾರಣಕ್ಕೇ ದಾಖಲೆಯ ಸಂಖ್ಯೆಯಲ್ಲಿ ಭಾರತವೂ ಸೇರಿದಂತೆ ವಿಶ್ವಾದ್ಯಂತ ಹಿರಿಯ ನಾಗರಿಕರು ಹೆಚ್ಚುತ್ತಲೇ ಇದ್ದಾರೆಂದು ಅಂಕಿಅಂಶಗಳೇ ಸ್ಪಷ್ಟಪಡಿಸುತ್ತಲಿವೆ) 'ಶುಭಂ' ಹೇಳುತ್ತಿದ್ದರು. ಆದರೂ ಈ ಕಲಿಗಾಲದಲ್ಲೂ ನೂರಿನ್ನೂರು ಅಲ್ಲ ಸಾವಿರವರ್ಷ ವಯಸ್ಸಿನವರೂ ಬದುಕಿದ್ದಾರೆಂದು ನಂಬುವ ಆಸ್ತಿಕರು ಬೇಕಾದಷ್ಟಿದ್ದಾರೆ. ಅದೂ ಕೂಡ ನಮ್ಮಯ ಭಾರತದ ಹಿಮಾಲಯದ ಗುಹೆಗಳಲ್ಲಂತೆ. 'ಹಿಮಾಲಯದ ಮಹಾತ್ಮ'ರು ಪುಸ್ತಕ ಬರೆದ ಸ್ವಾಮಿರಾಮರ ಈ ದಾಖಲೆ(?)ಯನ್ನಾಧರಿಸಿಯೇ ಆಪ್ತಮಿತ್ರ ಭಾಗ-2 'ಆಪ್ತರಕ್ಷಕ' ಸಿನಿಮಾ ತಯಾರಿಸಿದ್ದು ಗೊತ್ತಿದೆ ತಾನೆ?

ಗೌರಿ ಲಂಕೇಶ್ ಪತ್ರಿಕೆಯೂ ಸೇರಿ ಅನೇಕ ಪತ್ರಿಕೆ-ಮಾಧ್ಯಮಗಳಲ್ಲಿ ಈ ರೀತಿಯ 'ಕೆದಕುವ' ಕಾರ್ಯದ ಬಗ್ಗೆ ಅಸಮಾಧಾನ/ ಅಪಸ್ವರ ವ್ಯಕ್ತವಾಗಿದ್ದನ್ನು ನೋಡಿದ್ದೇನೆ. ಸರ್ವಶಕ್ತ ದೇವರ ಕಥೆ ಬಿಡಿ ಜುಜುಬಿ ಸ್ವಾಮೀಜಿಗಳು, ಬ್ರಾಹ್ಮಣರೆಂದರೇನೇ ಏನೋ ಅವ್ಯಕ್ತ ಭಯತೋರುವ ಜನರು ಈಗಲೂ ಇದ್ದಾರೆ. ಅವರ ಕುರಿತು ಅಪದ್ಧ ಮಾತಾಡುವುದು ಪಾಪವೆನ್ನುವವರು ಎಲ್ಲೆಲ್ಲೂ ಇದ್ದಾರೆ. ದೇವರು ಧರ್ಮದ ಹೆಸರಲ್ಲಿ ಸಂಪ್ರದಾಯವಾದಿಗಳ ತಂತ್ರಗಳಿಗೆ ಬಲಿಬೀಳುವುದು ಇಂತಹ ಮುಗ್ಧ ಜನರೇ. ಇಂತಹವರ ಭ್ರಮೆ ಕಳಚಲು ಇಂತಹ ಲೇಖನಗಳು ಯಾವತ್ತೂ ಸಹಕಾರಿ (ಮೂರ್ತಿರಾಯರ 'ದೇವರು' ಕೃತಿಯನ್ನು ಓದಿ ಚಿಂತನೆಯ ದಿಕ್ಕನ್ನೇ ಬದಲಿಸಿಕೊಂಡವರಿದ್ದಾರೆ).

ಬದುಕಿದ್ದಾಗ ನಮ್ಮ ದೇಹದಲ್ಲಿನ ಗಟ್ಟಿಭಾಗಗಳಾದ ಹಲ್ಲು -ಮೂಳೆಗಳು ರೋಗವೋ ಇನ್ಯಾವುದೋ ಕಾರಣಕ್ಕೆ ಹಾಳಾಗಬಹುದು ಇಲ್ಲಾ ಶಿಥಿಲಗೊಳ್ಳಬಹುದು ಆದರೆ ಅದು ಮಣ್ಣಿಗೆ ಸೇರಲ್ಪಟ್ಟಾಗ ಬಹುತೇಕ ಇದ್ದ ಸ್ಥಿತಿಯಲ್ಲೇ ಇರುತ್ತವೆ. ಕೋಟ್ಯಾಂತರ ವರ್ಷಗಳ ಹಿಂದಿದ್ದ ಜೀವಿಗಳ ಇಂತಹ ಗಟ್ಟಿ ಭಾಗದ ಅವಶೇಷಗಳು ನಮಗೆ ಇವತ್ತಿಗೂ ಭೂಗರ್ಭದಲ್ಲಿ ದೊರೆಯುತ್ತಿದ್ದರೆ ಬಲಾಢ್ಯ ದೈತ್ಯಾಕಾರದ 'ಗಟ್ಟಿಜೀವ'ಗಳೆಂದೇ ಬಿಂಬಿಸಲ್ಪಟ್ಟ (ಕಣ್ಣಿಲ್ಲದ ಕುರುಡರಿಗೆ ಸ್ಪರ್ಶಜ್ಞಾನ ಅಧಿಕ. ಅಂತಾದ್ದರಲ್ಲಿ ಅಂಧ ಧೃತರಾಷ್ಟ್ರ ಕಬ್ಬಿಣದ ಮೂರ್ತಿಯನ್ನೇ ಭೀಮನೆಂಬ ಮನುಷ್ಯನೆಂದು ಭಾವಿಸಿ ಆಲಂಗಿಸಿ ಪುಡಿ ಮಾಡಿದ್ದನಲ್ಲವೇ) ನಮ್ಮ ಪೌರಾಣಿಕ ಯೋಧರ ಒಂದು ಅವಶೇಷವೂ ಸಿಗದಿರಲು ಕಾರಣವಾದರೂ ಏನು? ಅವರೇನು ಬೋನ್ ಲೆಸ್ ಮನುಷ್ಯರೇ? ಇದ್ದರೂ ಇರಬಹುದು ಯಾರಿಗ್ಗೊತ್ತು....!!!

- ಅವಿನಾಶ್ ಎಂ ಎಸ್, ನೆಲ್ಲಿಕಾರ್

ವಿಭಟ್ಟ ಮತ್ತಾತನ ಗುರು ಆಂಧ್ರಕ್ಕೆ ಹೋಗಲಿ ಪ್ಲೀಸ್

'ಕನ್ನಡ ಪ್ರಭ' ದೈನಿಕದ ಸಂಪಾದಕರು ಸಿದ್ದರಾಮಯ್ಯನವರ ಕನ್ನಡ ಉಚ್ಚಾರವನ್ನು ಗೇಲಿ ಮಾಡುತ್ತಾ ಯಾರೋ ಒಬ್ಬ ಸೋಕಾಲ್ಡ್ ಆಧ್ಯಾತ್ಮ ಗುರುವಿಗೆ ಬೆಂಗಳೂರಿನಲ್ಲಿ ಮೂಲಭೂತ ವಿಜ್ಞಾನ ಕೇಂದ್ರ ಸ್ಥಾಪಿಸಲು 150 ಎಕ್ರೆ ಜಮೀನು ಕೊಡುವಂತೆ ತನ್ನ ಲೇಖನದ ಮೂಲಕ ಮುಖ್ಯಮಂತ್ರಿಗಳ ಮೇಲೆ ಒತ್ತಡ ಹಾಕಿ ತನ್ನ ಪತ್ರಿಕೆಯ ದುರುಪಯೋಗ ಮಾಡಿ ಪತ್ರಿಕಾಧರ[illegible] ಅಪಚಾರ ಮಾಡಿದ್ದಾರೆ. ಅದರಲ್ಲೂ ನೆರೆಯ ಆಂ[illegible] ಮುಖ್ಯಮಂತ್ರಿ ನಾಯ್ಡುವಿನ ಗುಮ್ಮ ತೋರಿಸಿದ್ದು [illegible] ಬಾಲಿಶ ತಂತ್ರವಾಗಿದೆ. ನಾಯ್ಡು ತನ್ನಲ್ಲಿಗೆ ಬರು[illegible] ಕರೆದಿರುವಾಗ ಆ ಆಧ್ಯಾತ್ಮ ಗುರು ಆಂಧ್ರಕ್ಕೆ ಹೋ[illegible] ಅಭ್ಯಂತರವೇನು? ಬೆಂಗಳೂರಿನ ಹೊಸ ಕೆಂಪೇ[illegible] ವಿಮಾನ ನಿಲ್ದಾಣದಿಂದ ಬೆಂಗಳೂರು ನಗ[illegible] ಬರುವುದಕ್ಕಿಂತ ಅಲ್ಲಿಂದ ಕೇವಲ 40 ಕಿ.ಮೀ [illegible] ದೂರ ಇರುವ ಆಂಧ್ರದ ಗಡಿ ಕೇವಲ ಅರ್ಧ ಗಂಟೆ[illegible] ತಲುಪಲು ಸಾಧ್ಯ ಎಂದು ನಾಯ್ಡುರವರೇ ಬೆಂಗಳೂ[illegible] ಉದ್ಯಮಿಗಳನ್ನು ತನ್ನಲ್ಲಿಗೆ ಆಹ್ವಾನಿಸುವಾಗ ಹೇಳಿದ್ದರಲ್ಲ[illegible] ಹಾಗಿರುವಾಗ ಈ ಆಧ್ಯಾತ್ಮ ಗುರು ಬೆಂಗಳೂ[illegible] ಜನಸಂದಣಿಗಿಂತ ಆಂಧ್ರ ಗಡಿಯಾಚೆ ಪ್ರಶಾಂತ ಸ್ಥಳ[illegible] ತನ್ನ ಸೋ ಕಾಲ್ಡ್ ವಿಜ್ಞಾನ ಕೇಂದ್ರ ಸ್ಥಾಪಿಸಿದರೆ ಬೆಂಗಳೂ[illegible] ಬಿಸಿನೆಸ್ ಅಲ್ಲಿ ಸೆಳೆದುಕೊಂಡು ಹೆಚ್ಚು ಧಾರ್ಮಿಕ ಬಿಸಿ[illegible] ಮಾಡಬಹುದು. ಮೇಲಾಗಿ ನಾಯ್ಡು 150 ಎಕರೆ[illegible] ಹೆಚ್ಚು ಭೂಮಿ ಸಹ ಕೊಡಬಹುದು. ಇಷ್ಟು ಒಳ್ಳೆ[illegible] ಆಫರ್ ಇರುವಾಗ ಆ ಆಧ್ಯಾತ್ಮಿಕ ಗುರುವಿಗೆ ಬೆಂಗಳೂ[illegible]ನಿಂದ ಕೇವಲ 40 ಕಿ.ಮೀ ದೂರದ ಆಂಧ್ರಕ್ಕೆ ಹೋ[illegible] ಲಾಭವೇ ಹೆಚ್ಚು, ಮೇಲಾಗಿ ಯಾವುದೋ ತೆಲುಗು [illegible] ಪೇಜಾವರ ಮಠಾಧೀಶರಿಗೆ 600 ಕೋಟಿ ರೂಪಾ[illegible] ದಾನ ಕೊಡುವ ನಾಟಕದಂತೆ ಆಂಧ್ರದ ಇನ್ನೊಬ್ಬ ಖದಿ[illegible] ಬೆಂಗಳೂರಿನ ಅಧ್ಯಾತ್ಮ ಗುರುವಿಗೆ ಒಂದು ಸಾವಿರ ಕೋ[illegible] ದಾನ ಕೊಟ್ಟರೂ ಕೊಡಬಹುದು. ಹಾಗಿರುವಾಗ ಇಂ[illegible] ಸುವರ್ಣ ಅವಕಾಶ ಕ[illegible] ಸಂಪಾದಕ ಹಾಗೂ ಅ[illegible] ಅಧ್ಯಾತ್ಮದ ಬಿಸಿನೆಸ್ ಪಾ[illegible] ಬಿಡಲೇ ಬಾರದು. ಆಂ[illegible] ಹೋಗಲೇಬೇಕು. ಜ[illegible] ತನ್ನ ಕನ್ನಡ ಪತ್ರಿಕೆಯು[illegible] ಆಂಧ್ರ ಗಡಿಗೆ ಶಿಫ್ಟ್ ಮಾ[illegible] ಬೆಂಗಳೂರಿನ ಆಪರ ಪ್ರಾಪ[illegible] ಮಾರಿದರೆ ಬಂಪರ್ [illegible] ಸಹ ಬರಬಹುದು. ನಿಜ[illegible] ಈ ಮೂಲಭೂತ ವಿಜ್ಞಾನ ಕೇಂದ್ರವೆಂದರೆ ಬೇರೇ[illegible] ಅಲ್ಲ, ಅದು ಹಿಂದೂ ಕಂದಾಚಾರ ಮೂಢನಂಬಿಕೆ ಪ[illegible] ಹೋಮ ಪುರಾಣ [illegible]ವುಗಳಿಗೆ ವೈಜ್ಞಾನಿಕ ಆಧಾರ[illegible] ಎಂದು ಸಮರ್ಥಿಸಲು ಕಪಟ ಶಬ್ದಗಳ ಜಾಲ ಹೆಣೆಯ[illegible] ಸ್ಥಾಪಿಸುವ ಒಂದು ಹಿಂದೂತ್ವ ಲ್ಯಾಬ್ ಅಷ್ಟೇ.

ಮೂಲ ಪ್ರಶ್ನೆಯೆಂದರೆ ಎಲ್ಲಾ ಧರ್ಮದ ವ್ಯಾಪಾರಿ[illegible] ಬೆಂಗಳೂರೇ ಯಾಕೆ ಬೇಕು? ಬೆಂಗಳೂರಿಗೆ ಮೊ[illegible] ಮೊದಲು ವಕ್ಕರಿಸಿದ್ದು ಆಂಧ್ರದ ಪುಟ್ಟಪರ್ತಿ ಸಾಯಿಬಾ[illegible] ಕೇರಳದ ಮಲೆಯಾಳಿ ಅನುತಾನಂದಮಯಿ ಅಮ್ಮ ಬ[illegible] ಬೆಂಗಳೂರಲ್ಲಿ ಯಡಿಯೂರಪ್ಪರಿಂದ 20 ಎಕರೆ ಭೂ[illegible] ಉಚಿತವಾಗಿ ಪಡೆದು ಅಲ್ಲಿ ಮೆಡಿಕಲ್ ಕಾಲೇ[illegible] ಕಟ್ಟಿಸುತ್ತಿದ್ದಾಳೆ. ತಮಿಳುನಾಡಿನ ಕುಖ್ಯಾತ ನಿತ್ಯಾನಂದಸ್ವಾ[illegible] ಬಿಡದಿಯಲ್ಲಿ ಆಶ್ರಮ ಸ್ಥಾಪಿಸಿ ನಡೆಸಿದ ಕರ್ಮಕಾ[illegible] ಜಗತ್ತಿಗೆಲ್ಲಾ ಗೊತ್ತಿದೆ. ಅರೆ-ತಮಿಳ ವಯ್ಯಾರಿ ಗುರುವಿ[illegible] ಆರ್ಟ್ ಆಫ್ ಚೀಟಿಂಗಿನ ಫೈವ್ ಸ್ಟಾರ್ ಆಶ್ರಮ ಸ್ಥಾಪಿ[illegible] ಬೆಂಗಳೂರೇ ಬೇಕು. ಬೆಂಗಳೂರಿಗೆ ಹತ್ತಿರದ ಮೈಸೂ[illegible] ಆಂಧ್ರದಿಂದ ವಕ್ಕರಿಸಿ ಗೂಟ ಊರಿದ ಗಣ[illegible] ಸಚ್ಚಿದಾನಂದ ಸ್ವಾಮಿ ಎಂಬ ತೆಲುಗನೂ ಮೈಸೂರಿ[illegible] ಭಾರಿ ಆಶ್ರಮ ಕಟ್ಟಿಸಿ ದೇವರ ಬಿಸಿನೆಸ್ ಚೆ[illegible] ಮಾಡುತ್ತಿದ್ದಾನೆ. ಮಲೆಯಾಳಿ ಹರೇಕೃಷ್ಣನೊಬ್ಬ ಇಸ[illegible] ಹೆಸರಲ್ಲಿ ಬೆಂಗಳೂರಿನ ಮಹಾಲಕ್ಷ್ಮೀ ಲೇಔಟ್‌ನಲ್ಲಿ [illegible] ಬೆಟ್ಟವನ್ನೇ ಕಬಳಿಸಿ ಅಕ್ಷಯಪಾತ್ರೆ ಹೆಸರಲ್ಲಿ ಒಳ್ಳೆ[illegible] ಕೇಟರಿಂಗ್ ಬಿಸಿನೆಸ್ ಮಾಡುತ್ತಿದ್ದಾನೆ. ನಮ್ಮ ಕರಾ[illegible] ತೀರದ ಪೇಜಾವರರೂ ಪಾದಪೂಜೆ ಮಾಡಿಸಿಕೊ[illegible] ಯಾವಾಗಲೂ ಉತ್ತರ ಕರ್ನಾಟಕಕ್ಕೆ ಓಡುತ್ತಾರೆ, [illegible] ಅವರಿಗೆ ಮೆಡಿಕಲ್ ಕಾಲೇಜು ಹಾಗೂ ಆಶ್ರಮ ಸ್ಥಾಪಿ[illegible] ಬೆಂಗಳೂರೇ ಬೇಕು. ಎಲ್ಲಾ ಬಾಬಾ ಅಮ್ಮ ಸ್ವಾಮಿಗ[illegible] ಮೆಡಿಕಲ್ ಕಾಲೇಜು ಸ್ಥಾಪಿಸಿ ಜನಸೇವೆ ಮಾಡಲು ಅ[illegible] ಹಿಂದುಳಿದ ರಾಯಚೂರು ಕೊಪ್ಪಳ ಜಿಲ್ಲೆಗಳು ಯ[illegible] ಕಾಣಿಸುತ್ತಿಲ್ಲ? ಈಗ ಕನ್ನಡ ಪ್ರಭ ಸಂಪಾದಕನ ಅಧ್ಯಾ[illegible] ಬಿಸಿನೆಸ್ ಪಾರ್ಟ್ನರ್ ಸಹ ಕತ್ತು ಹಿಡಿದು ದೂಡಿದ[illegible] ಬೆಂಗಳೂರು ಬಿಟ್ಟು ಆಂಧ್ರಕ್ಕೆ ಹೋಗುವುದಿಲ್ಲ ಎ[illegible] ಹಟ ಹಿಡಿದು ಸಿದ್ದರಾಮಯ್ಯನವರ ಉಚ್ಚಾರ ಸರಿಪಡಿ[illegible] ನೆಪದಲ್ಲಿ ಅವರನ್ನು ಬ್ಲಾಕ್-ಮೇಲ್ ಮಾಡಿ 150 [illegible] ಅಲ್ಲದಿದ್ದರೂ ಒಂದು ಐದು ಎಕ್ರೆಯಾದರೂ ಕಬಳಿ[illegible] ನೋಡುತ್ತಿದ್ದಾನೆ.

ಸಿದ್ದರಾಮಯ್ಯನವರೇ, ಇಂತಹವರಿಗೆ ಬೆಂಗಳೂ[illegible] ಒಂದು ಗುಂಟೆ ಸ್ಥಳವನ್ನೂ ಕೊಡಬೇಡಿ. ಬೇಕಾ[illegible] ನಾಯ್ಡುವಿನ ಆಂಧ್ರಕ್ಕೆ ಹೋಗಲು ಫ್ರೀ ಬಸ್ ಟಿ[illegible] ಕೊಡಿಸಿಬಿಡಿ ಸಾಕು. ಕರ್ನಾಟಕದಂತೆಯೇ ಆಂಧ್ರದಲ್ಲಿ[illegible] ಅಧ್ಯಾತ್ಮದ ವ್ಯಾಪಾರಕ್ಕೆ ಒಳ್ಳೆಯ ಭವಿಷ್ಯವಿದೆ.

- ಜೆ. ರವಿಕಿರಣ, ಮೈಸ[illegible]




ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೆ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬ[illegible]

ಗಾಂಧಿಯ ಸುತ್ತ ವೈಭವೀಕರಣದ ಹುತ್ತ

'ಗಾಂಧಿ ನಿಜಕ್ಕೂ ಮಹಾತ್ಮರೇ? ಎಂಬ ಅಂಬೇಡ್ಕರ್‌ರ ಪ್ರಶ್ನೆ, ಮತ್ತವರ ಉತ್ತರ' ಲೇಖನ (ಮೇ 6, 2015ರ ಸಂಚಿಕೆ) ವಿಚಾರ ಪ್ರಚೋದಕವಾಗಿದೆ. ಗಾಂಧಿಯನ್ನು ಸಂಪೂರ್ಣವಾಗಿ ಮತ್ತು ಸರಿಯಾಗಿ ಅರ್ಥಮಾಡಿಕೊಂಡವರು ಹಾಗೂ ಗಾಂಧಿಯ ಬಗ್ಗೆ ಪ್ರಾಮಾಣಿಕವಾಗಿ, ಆಳವಾಗಿ ಮತ್ತು ವಿಸ್ತಾರವಾಗಿ ವಿಮರ್ಶೆ ಕೈಗೊಂಡವರು ಅಂಬೇಡ್ಕರ್ ಒಬ್ಬರೇ ಎಂಬುದು ನನ್ನ ಅಭಿಪ್ರಾಯ. ಈ ವಿಷಯದಲ್ಲಿ ಅಂಬೇಡ್ಕರ್ ಅವರಿಗೆ ಸಮಾನರಲ್ಲದಿದ್ದರೂ ಸನಿಹಕ್ಕೆ ಬಂದವರೆಂದರೆ ಕನ್ನಡದ ಮಟ್ಟಿಗೆ ಯು.ಆರ್.ಅನಂತಮೂರ್ತಿ. ಉಳಿದೆಲ್ಲರ 'ಗಾಂಧಿ ವಿಮರ್ಶೆ'ಗಳಲ್ಲಿ ಪೂರ್ವಗ್ರಹ, ಅಜ್ಞಾನ, ಅಧ್ಯಯನದ ಕೊರತೆ, ಚಿಂತನೆಯ ಕೊರತೆ, ಸ್ವಾರ್ಥ, ಗುಪ್ತ ಉದ್ದೇಶ, ಬೂಟಾಟಿಕೆ ಈ ಅವಗುಣಗಳಲ್ಲಿ ಒಂದು ಅಥವಾ ಒಂದಕ್ಕಿಂತ ಹೆಚ್ಚು ಅವಗುಣಗಳು ಅಡಕವಾಗಿರುವು ದರಿಂದಲೇ ಎಂ.ಕೆ.ಗಾಂಧಿಯು ಇಂದು 'ಮಹಾತ್ಮ' ನಾಗಿಯೂ ಮೆರೆಯುತ್ತಿದ್ದಾರೆ ಮತ್ತು ದುಷ್ಟನಾಗಿಯೂ ಕಾಣಿಸುತ್ತಿದ್ದಾರೆ! ಇದು ಈ ದೇಶದ ಒಂದು ದುರಂತ.

ಗಾಂಧಿಯು ಭಾರತವನ್ನು ಪ್ರೀತಿಸುತ್ತಿದ್ದುದು ಮತ್ತು ಭಾರತಕ್ಕಾಗಿ ತನ್ನ ಜೀವನವನ್ನು ಸವೆಸಿದ್ದು ಎಷ್ಟು ಸತ್ಯವೋ, ಅವರಿಗೆ ಸ್ವಪ್ರತಿಷ್ಠೆ ಮತ್ತು ಕೀರ್ತಿಲಾಲಸೆಗಳಿದ್ದದ್ದೂ ಅಷ್ಟೇ ಸತ್ಯ. ತಾನು ಹೇಳಿದ್ದೇ ಸರಿ, ಅದೇ ನಡೆಯಬೇಕು ಎಂಬ ಸಾತ್ವಿಕ ಹಠ ಒಂದೆಡೆಯಾದರೆ, ಅಂತರ್ಗತವಾಗಿದ್ದ ಕೀರ್ತಿಲಾಲಸೆ ಇನ್ನೊಂದೆಡೆ, ಈ ಉಭಯ ಅವಗುಣಗಳು ಸದಾ ಅವರನ್ನು ನಿರ್ದೇಶಿಸುತ್ತಿದ್ದವು. ಈ ಅವಗುಣಗಳಿಂದ ಹೊರತಾಗದಿದ್ದಲ್ಲಿ ಗಾಂಧಿಯವರಿಂದ ಈ ದೇಶಕ್ಕೆ ಇನ್ನೂ ಹೆಚ್ಚಿನ ಇತ್ಯಾತ್ಮಕ ಕೊಡುಗೆ ಲಭ್ಯವಾಗುತ್ತಿತ್ತು. ಈ ಅವಗುಣಗಳು ಅವರನ್ನು ಜೀವಿತಾವಧಿಯಲ್ಲೇ 'ಮಹಾತ್ಮ'ನನ್ನಾಗಿಸಲು ಒಂದು ರೀತಿಯಲ್ಲಿ ನೆರವಾದವಾದರೂ ತದನಂತರ ಅವರ ವ್ಯಕ್ತಿತ್ವದ ವೈಭವೀಕರಣಕ್ಕೂ ಒಂದು ಮಟ್ಟದಲ್ಲಿ ಕಾರಣವಾದವು.

'ಅಡು ಮುಟ್ಟದ ಸೊಪ್ಪಿಲ್ಲ' ಎನ್ನುವಂತೆ, ಗಾಂಧಿಯು ಮಾತನಾಡದ ವಿಷಯವಿಲ್ಲ. ಆದರೆ, ಗಾಂಧಿ ಗತಿಸಿದ ನಂತರ ಅವರ ವೈಭವೀಕರಣವು ಯಾವ ಮಟ್ಟಕ್ಕೆ ಹೋಗಿದೆಯೆಂದರೆ, ಪ್ರಪಂಚದ ಯಾವುದೇ ವಿದ್ಯಮಾನವಿರಲಿ, ಯಾವುದೇ ವಿಷಯವಿರಲಿ, ಅದರ ಕುರಿತು 'ಅಂದು ಗಾಂಧಿ ಹೇಳಿದ ಮಾತು' ಅಭಿಪ್ರಾಯ ನಿರ್ಮಾಣದ ಸಾಧನವಾಗಿ ಇಂದು ಬಳಸಲ್ಪಡುತ್ತಿದೆ! 'ಗಾಂಧಿ ಹೀಗೆ ಹೇಳಿದ್ದಾರೆಂದ ಮೇಲೆ ಮುಗೀತು; ದುಸರಾ ಮಾತಿಲ್ಲ' ಎಂಬ ರೀತಿಯಲ್ಲಿ ಇಂದಿನ ಅಭಿಪ್ರಾಯ ನಿರ್ಮಾತೃಗಳು ಗಾಂಧಿಯನ್ನು ಬಳಸಿಕೊಳ್ಳುತ್ತಿದ್ದಾರೆ! ಇದರಿಂದಾಗಿ, ಇಂದಿನ ಅದೆಷ್ಟೋ ಪ್ರಾಜ್ಞ ಚಿಂತನಗಳಿಗೆ ಬೆಲೆಯಿಲ್ಲವಾಗಿದೆ ಮತ್ತು ಅದೇ ವೇಳೆ, ಗಾಂಧಿಯನ್ನು (ಗಾಂಧಿಯ ಈ ಹೇರುವಿಕೆಯನ್ನೂ) ವಿರೋಧಿಸುವ ಯುವಕರ ಸಂಖ್ಯೆ ಹೆಚ್ಚುತ್ತಿದೆ! ಈ ಒಟ್ಟು ಬೆಳವಣಿಗೆಯು ದೇಶಕ್ಕೆ ಭವಿಷ್ಯದಲ್ಲಿ ಅಪಾಯಕಾರಿ. ಪುರಂದರದಾಸ, ಕನಕದಾಸ,



ಬಸವಣ್ಣನವರ ಹೆಸರುಗಳಲ್ಲಿ ಕೋಟಾ ಕೀರ್ತನೆ, ವಚನಗಳು ಬೆಳಕು ಕಂಡಿರುವಂತೆ ಗಾಂಧಿಯ ಹೆಸರಲ್ಲಿ ಖೊಟ್ಟಿ ಹೇಳಿಕೆಗಳೂ ಬೆಳಕು ಕಂಡಿವೆ!

ಗಾಂಧಿಯೇ ಸರ್ವಸ್ವವಾಗಿರುವ ವಾತಾವರಣದಿಂದ ಹೊರಬಂದು ಇತರ ಪ್ರಾಜ್ಞ ಚಿಂತನಗಳನ್ನು ಅರಿಯುವ ಉದ್ದೇಶದಿಂದ ಮಾತ್ರವಲ್ಲ, ಗಾಂಧಿಯ ಬಗ್ಗೆಯೂ ಸರಿಯಾಗಿ ಅರಿತುಕೊಳ್ಳಲು ಕೂಡ, ನಾವೆಲ್ಲ ಅಂಬೇಡ್ಕರರ ಬದುಕು, ಬರಹಗಳು ಮತ್ತು ಭಾಷಣಗಳನ್ನು ಸಮಗ್ರವಾಗಿ ಅಧ್ಯಯನ ಮಾಡಬೇಕು. ಭಾರತದ ಸ್ವಾತಂತ್ರ್ಯಪೂರ್ವೇತಿಹಾಸ ಮತ್ತು ಭವಿಷ್ಯ ಭಾರತದ ನಿರ್ಮಾಣ ಈ ಎರಡು ವಿಷಯಗಳ ಸೂಕ್ತ ಜ್ಞಾನಕ್ಕೂ ಅಂಬೇಡ್ಕರ್ ಅಧ್ಯಯನ ಅಗತ್ಯ. ಅಂಬೇಡ್ಕರ್ ಅವರನ್ನು ಒಂದು ವರ್ಗಕ್ಕೆ ಮಾತ್ರ ಸೀಮಿತಗೊಳಿಸಿ ನೋಡುವಂಥ ಮಿಥ್ಯಾದೃಷ್ಟಿಯನ್ನು (ಅಥವಾ ದುರುದ್ದೇಶಭರಿತ ದೃಷ್ಟಿಯನ್ನು) ತೊರೆದು ಪ್ರಾಮಾಣಿಕವೂ ವಿಶಾಲವೂ ಆದ ದೃಷ್ಟಿಯನ್ನು ಹೊಂದಿದ್ದಲ್ಲಿ ಮಾತ್ರ ಈ ಅಧ್ಯಯನ ಫಲಪ್ರದವಾದೀತು ಮತ್ತು ದೇಶಕ್ಕೆ ಎಲ್ಲ ರೀತಿಯಲ್ಲಿಯೂ ಒಳ್ಳೆಯದಾದೀತು.

ಗಾಂಧಿಯ ಹೆಸರೆತ್ತಿ ಈ ಬರಹ ಪ್ರಾರಂಭಿಸಿರುವು ದರಿಂದ, ಅಂಬೇಡ್ಕರ್ ಅವರು ಗಾಂಧಿ ಕುರಿತು ಹೇಳಿರುವ ಒಂದು ಮಾತಿನೊಂದಿಗೆ ಈ ಬರಹವನ್ನು ಮುಗಿಸಲಿಚ್ಛಿಸುತ್ತೇನೆ. 1943ರ ಜನವರಿ 18ರಂದು ಪುಣೆಯಲ್ಲಿ ಅಂಬೇಡ್ಕರ್ ಅವರು ಮಾಡಿದ ಭಾಷಣವು ಅದೇ ವರ್ಷ ಮಾರ್ಚ್ 15ರಂದು ಮುದ್ರಣಗೊಂಡಿದ್ದು, ಅದರಲ್ಲಿನ ಕೆಲವು ವಾಕ್ಯಗಳು ಹೀಗಿವೆ: 'ಗಾಂಧಿ ತಾನು ಹಿಂದೂ ಎಂಬುದನ್ನು ಒಪ್ಪಿಕೊಳ್ಳಬೇಕೆಂದು ಜಿನ್ನಾ ಒತ್ತಾಯಪಡಿಸುತ್ತಾರೆ. ಜಿನ್ನಾ ತಾನು ಮುಸಲ್ಮಾನ ಮುಖಂಡರಲ್ಲೊಬ್ಬ ಎಂಬುದನ್ನು ಒಪ್ಪಿಕೊಳ್ಳಬೇಕೆಂದು ಗಾಂಧಿ ಒತ್ತಾಯಪಡಿಸುತ್ತಾರೆ. ಭಾರತದ ಈ ಇಬ್ಬರು ಮುಖಂಡರುಗಳಲ್ಲಿ ಕಂಡುಬರುವಂತಹ ರಾಜಕೀಯ ದಿವಾಳಿತನ ಎಂದೆಂದೂ ಕಂಡುಬಂದಿರಲಿಲ್ಲ. ಪ್ರತಿಯೊಂದನ್ನೂ ವಿರೋಧಿಸುವುದನ್ನೇ ತಮ್ಮ ಕಸುಬನ್ನಾಗಿ ಮಾಡಿಕೊಂಡಿರುವ, ಯಾವುದನ್ನೂ ಒಪ್ಪಿಕೊಳ್ಳದ ಮತ್ತು ಸಮಯಕ್ಕೆ ತಕ್ಕಂತೆ ಮಾತನಾಡುವ ವಕೀಲರುಗಳಂತೆ, ಇವರಿಬ್ಬರೂ ದೀರ್ಘ ಮತ್ತು ಕೊನೆಯಿಲ್ಲದ ಉಪನ್ಯಾಸಗಳನ್ನು ಮಾಡುತ್ತಿದ್ದಾರೆ. ಬಿಕ್ಕಟ್ಟಿನ ನಿವಾರಣೆಗೆ ಯಾವುದೇ ಸೂಚನೆ ಮಾಡಿದ್ದರೂ ಅವರ ಶಾಶ್ವತವಾದ 'ನಕಾರ' ಉತ್ತರ ದೊರೆಯುವುದು.' (ಡಾ. ಬಾಬಾಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು, ಸಂಪುಟ 1, ಪುಟ 317).

ಗಾಂಧಿ ಮತ್ತು ಜಿನ್ನಾ ಅವರ ಮಿತಿಗಳು ಮತ್ತು ದೌರ್ಬಲ್ಯ, ಅವರ ಸ್ವಪ್ರತಿಷ್ಠೆ, ಅಂಬೇಡ್ಕರರ ದೂರದೃಷ್ಟಿ, ವಿಶಾಲದೃಷ್ಟಿ, ಪರಿಜ್ಞಾನ, ಪ್ರಾಮಾಣಿಕತೆ ಮತ್ತು ದೇಶ ಹಿತದ ಬಯಕೆ, ಇವೆಲ್ಲವೂ ಈ ವಾಕ್ಯಗಳಿಂದಾಗಿ ನಮ್ಮ ಅರಿವಿಗೆ ಬರುತ್ತದಷ್ಟೆ. ಅಂಬೇಡ್ಕರ್, ಗಾಂಧಿ ಮೊದಲಾದವರನ್ನು ಅರಿಯಲು ಮಾತ್ರವಲ್ಲ, ಭಾರತದ ನೈಜ ಅಭ್ಯುದಯಕ್ಕಾಗಿಯೂ ನಾವೆಲ್ಲ ಅಂಬೇಡ್ಕರರ ಬದುಕು, ಬರಹಗಳು ಮತ್ತು ಭಾಷಣಗಳನ್ನು ಅಧ್ಯಯನ ಮಾಡಬೇಕು. ಇದಾಗಬೇಕಾದರೆ, ಮೊದಲು, ಗಾಂಧಿಯ ವೈಭವೀಕರಣ ನಿಲ್ಲಬೇಕು; ಜೊತೆಗೆ, ಅಂಬೇಡ್ಕರ್ ಎಂಬ ಮಹಾತೇಜವನ್ನು ಒಂದು ವರ್ಗದ ಚೌಕಟ್ಟಿನ ಬಂಧನದಿಂದ ಮುಕ್ತಗೊಳಿಸಬೇಕು; ಇಡೀ ದೇಶವು ತೆರೆದ ಮನದಿಂದ ತೇಜವನ್ನು ಸ್ವೀಕರಿಸಬೇಕು. ಪ್ರಾಮಾಣಿಕ ಹಾಗೂ ಸಮಗ್ರ ಅಧ್ಯಯನ ನಡೆಯಿತೆಂದರೆ, ಅಂಬೇಡ್ಕರರು ಎಲ್ಲ ಪ್ರಜ್ಞಾವಂತರಿಗೂ ಸ್ವೀಕಾರಾರ್ಹರಾಗಿ ಕಂಡುಬರುವುದು ನಿಶ್ಚಿತ.

- ಎಚ್. ಆನಂದರಾಮ ಶಾಸ್ತ್ರಿ, ಬೆಂಗಳೂರು

ಮಾಧ್ಯಮ: ಕಾವಲುಗಾರನಿಂದ ಧಣಿ ವಾಣಿಯಾಗುವ ದಿಕ್ಕಿನಲ್ಲಿ?


ಮಾಧ್ಯಮಗಳನ್ನು ಬಳಸಿಕೊಂಡು ಅಧಿಕಾರಕ್ಕೆ ಬರುವ ಸರ್ವಾಧಿಕಾರಿ, ಫ್ಯಾಸಿಸ್ಟ್ ಪ್ರಭುತ್ವಗಳ ಪ್ರಪ್ರಥಮ ಗುರಿಯೇ ಮಾಧ್ಯಮಗಳ ಮೇಲೆ ಸಂಪೂರ್ಣ ನಿಯಂತ್ರಣ. ಕಾರಣ ಬಲು ಸರಳ. ಮಾಧ್ಯಮಗಳನ್ನು ಹತೋಟಿಯಲ್ಲಿರಿಸಿ ಕೊಂಡಾಗ ತನಗೆ ಬೇಕಾದುದನ್ನಷ್ಟೆ ಪ್ರಚಾರ ಮಾಡಬಹುದು. ಬೇಡವಾದುದನ್ನು ಮುಚ್ಚಿಡಬಹುದು. ಮೋದಿ ಸರ್ಕಾರವೂ ಇದನ್ನೇ ಮಾಡಹೊರಟಿರುವ ಸತ್ಯ ಅದರ ನಡೆಗಳಿಂದ ಸ್ಪಷ್ಟವಾಗುತ್ತಿದೆ.

2002ರ ಗುಜರಾತ್ ನರಮೇಧದ ಕಾಲದಲ್ಲಿ ಸ್ಥಳೀಯ ಗುಜರಾತಿ ಮಾಧ್ಯಮದ ಬಾಯ್ಮುಚ್ಚಿಸುವಲ್ಲಿ ಯಶಸ್ವಿಯಾಗಿದ್ದ ಮೋದಿಗೆ ಮುಖ್ಯವಾಹಿನಿಯ ಮಾಧ್ಯಮಗಳ ಮೇಲೆ ಹೆಚ್ಚೇನೂ ಪ್ರಭಾವ ಬೀರಲು ಆಗಿರಲಿಲ್ಲ. ಆದುದರಿಂದಲೇ ಆತನಿಗೆ ತನ್ನನ್ನು ಮೇಲುಕೆಳಗು ಮಾಡಿದ ಪ್ರಗತಿಪರ, ಜಾತ್ಯತೀತ ನಿಲುವಿನ ಪತ್ರಕರ್ತರನ್ನು ಕಂಡರಾಗದು. 2014ರ ಚುನಾವಣಾ ಪ್ರಚಾರದ ಕಾಲದಲ್ಲಿ ಆತ ಇಂತಹ ಪತ್ರಕರ್ತರ ವಿರುದ್ಧ ನೇರ ವಾಗ್ದಾಳಿ ಮಾಡಿ ಅವರು ಭ್ರಷ್ಟರು, ಪಕ್ಷಪಾತಿಗಳು, ಗಾಳಿ ಬಂದತ್ತ ತೂರುವವರು ಎಂದೆಲ್ಲ ಆರೋಪ ಮಾಡಿದ್ದ. ತನ್ನ ಸಭೆಗಳಲ್ಲಿ ಭಾಗವಹಿಸುವ ಜನ ಉತ್ಸಾಹವನ್ನು, ಸಂಭ್ರಮವನ್ನು ತೋರಬೇಕು, ಆಗಷ್ಟೆ ಟಿವಿಗಳು, ಪತ್ರಿಕೆಗಳು ವರದಿ ಮಾಡುತ್ತವೆ ಎಂದಿದ್ದ. ಯುವಜನಾಂಗವನ್ನು ಮತ್ತು ಹೊಸ ಮತದಾರರನ್ನು ನೇರವಾಗಿ ಸಂಪರ್ಕಿಸಲು ಆತ ಸಾಮಾಜಿಕ ಮಾಧ್ಯಮಗಳನ್ನೇ ಹೆಚ್ಚು ಬಳಸಿಕೊಂಡ ಸಂಗತಿ ಯಾರಿಗೆ ತಾನೆ ಗೊತ್ತಿಲ್ಲ!

ಚುನಾವಣೆ ಗೆದ್ದ ಬಳಿಕವೂ ಪ್ರಗತಿಪರ ಪತ್ರಕರ್ತರನ್ನು ಮರೆಯದ ಮೋದಿ ಅವರನ್ನು 'ಗಲೀಜು ಹರಡಿಸುವ' ನೊಣಗಳಿಗೆ ಹೋಲಿಸಿದ್ದ. ಅವರು ಪೂರ್ವನಿರ್ಧರಿತ ಉತ್ತರಗಳನ್ನು ಇಟ್ಟುಕೊಂಡೆ ಪ್ರಶ್ನೆ ಕೇಳುತ್ತಾರೆಂದು ದೂರಿದ್ದ. ಈಗ ಎಲ್ಲವೂ ಬದಲಾಗುತ್ತಿದೆ.

ಸುದ್ದಿ ನಿಯಂತ್ರಣ

ಮೋದಿ ಸರ್ಕಾರ ದೇಶವಾಳಲು ಪ್ರಾರಂಭಿಸಿದ ಗಳಿಗೆ ಯಿಂದಲೇ ಅದರ ಸುದ್ದಿ ನಿಯಂತ್ರಣ ನೀತಿ ಜಾರಿಗೆ ಬಂದಿದೆ. ಇವತ್ತು ಮಾಧ್ಯಮದ ಮಂದಿ ಮಂತ್ರಿ, ಅಧಿಕಾರಿ ಗಳನ್ನು ನೇರವಾಗಿ ಸಂಪರ್ಕಿಸಿ ಅವರಿಂದ ಯಾವುದೇ ಹೇಳಿಕೆ ಪಡೆಯಲು ಸಾಧ್ಯವಿಲ್ಲ. ಅವರು ಕೇವಲ ಅಧಿಕೃತ ವಕ್ತಾರನಿಂದಲೇ ಮಾಹಿತಿ ಪಡೆದುಕೊಳ್ಳಬೇಕು ಎಂಬ ನಿಯಮ ಜಾರಿಗೊಂಡಿದೆ. ಸರ್ಕಾರಿ ಮತ್ತು ಖಾಸಗಿ ಮಾಧ್ಯಮಗಳೆರಡೂ ಸರ್ಕಾರದ ಬಗ್ಗೆ ಸದಭಿಪ್ರಾಯ ಮೂಡಿಸುವ ಕಾರ್ಯಕ್ರಮಗಳನ್ನು ಮಾತ್ರ ಪ್ರಸಾರ ಮಾಡ ಬೇಕು ಎಂದಾಗಿದೆ. ಇಂತಹ ಅನುಕೂಲಕರ ಪರಿಸ್ಥಿತಿಯನ್ನು ನಿರ್ಮಿಸಿಕೊಂಡ ಬಳಿಕವೂ ಕೆಲವು ಪ್ರಗತಿಪರ ಮಾಧ್ಯಮ ಗಳು 'ಭೂಸ್ವಾಧೀನ ಮಸೂದೆ ರೈತವಿರೋಧಿ' ಮುಂತಾದ




ಸುದ್ದಿಗಳನ್ನು ಹರಡಿಸುತ್ತಾ ಸರ್ಕಾರದ ವಿರುದ್ಧ ಅಪಪ್ರಚಾರ ದಲ್ಲಿ ತೊಡಗಿವೆ ಎಂಬ ಆರೋಪ ಮೋದಿ ಬೆಂಬಲಿಗರಿಂದ ಕೇಳಿಬರುತ್ತಿದೆ.

ಪ್ರಸಾರ ಭಾರತಿ, ದೂರದರ್ಶನ, ಆಕಾಶವಾಣಿಗಳ ನಿಯಂತ್ರಣ

ಮೋದಿ ಸರ್ಕಾರದ ಗುರಿ ಈಗ ಪ್ರಸಾರ ಭಾರತಿ, ದೂರದರ್ಶನ, ಆಕಾಶವಾಣಿ ಮುಂತಾದ ಸರ್ಕಾರಿ ಸ್ವಾಮ್ಯದ ಮಾಧ್ಯಮಗಳ ಮೇಲೆ ನೆಟ್ಟಿದೆ. ಅದು ಅವನ್ನೆಲ್ಲ ತನಗೆ ಬೇಕಾದಂತೆ ಬಗ್ಗಿಸಿಕೊಳ್ಳುವ ತಂತ್ರವನ್ನು ಪ್ರಯೋಗಿಸಲು ಆರಂಭಿಸಿದೆ. ಮೋದಿ ಪ್ರಧಾನಿಯಾದ ಮೂರು ತಿಂಗಳೊಳ ಗಾಗಿ ಪ್ರಸಾರ ಭಾರತಿಯ ಅಧ್ಯಕ್ಷರನ್ನು ಕೆಳಗಿಳಿಸಿ ಆ ಜಾಗಕ್ಕೆ ಆರೆಸ್ಸೆಸ್ ಪ್ರಣೀತ ವಿವೇಕಾನಂದ ಇಂಟರ್‌ನ್ಯಾಷನಲ್ ಫೌಂಡೇಷನ್‌ನ ಸೂರ್ಯಪ್ರಕಾಶ ಎಂಬವರನ್ನು ನೇಮಿಸಲಾಗಿದೆ. ಅಂದಹಾಗೆ ಪ್ರಸಕ್ತ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್, ಪ್ರಧಾನಿ ಕಚೇರಿಯ ಪ್ರಧಾನ ಕಾರ್ಯದರ್ಶಿ ನೃಪೇಂದ್ರ ಮಿಶ್ರಾ ಮತ್ತು ಹೆಚ್ಚುವರಿ ಕಾರ್ಯದರ್ಶಿ ಪಿ.ಕೆ.ಮಿಶ್ರಾ ಇವರೆಲ್ಲ ಇದೇ ವಿವೇಕಾನಂದ ಫೌಂಡೇಷನ್‌ನ ಹಿನ್ನೆಲೆಯಿಂದ ಬಂದವರು. ಮೋದಿ ಸರ್ಕಾರ ಈಗ ಪ್ರಸಾರ ಭಾರತಿ ಕಾಯ್ದೆಗೆ ತಿದ್ದುಪಡಿ ತಂದು ಪ್ರಸಕ್ತವಾಗಿ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಿರುವ ಹೆಚ್ಚಿನ ಜವಾಬ್ದಾರಿಗಳನ್ನು ಅಧ್ಯಕ್ಷರಿಗೆ ಹಸ್ತಾಂತರಿಸಲು ನಿರ್ಧರಿಸಿದೆ. ಆಗ ಪ್ರಸಾರ ಭಾರತಿ ಒಂದೇ ಅಲ್ಲ ದೂರದರ್ಶನ ಮತ್ತು ಆಕಾಶವಾಣಿ ಕೂಡಾ ಸೂರ್ಯ ಪ್ರಕಾಶನ ಮುಷ್ಟಿಯೊಳಗಿರುತ್ತವೆ. ಮೋದಿ ತನ್ನ 'ಮನ್ ಕಿ ಬಾತ್' ಕಾರ್ಯಕ್ರಮಕ್ಕೆ ಆಕಾಶವಾಣಿಯನ್ನು ಆಯ್ದುಕೊಂಡದ್ದು ಹಲವು ಕಾರಣಗಳಿಗಾಗಿ. ಒಂದು, ಅದು ದೇಶದ ಮೂಲೆಮೂಲೆಗೂ ತಲುಪುತ್ತದೆ. ಎರಡು, ಅಲ್ಲಿರುವುದು ಕೇಳುಗರು ಮಾತ್ರ; ನೋಡುಗರಿಲ್ಲ. ಮೂರು, ಆಕಾಶವಾಣಿ ಕಾರ್ಯಕ್ರಮಗಳ ಬಗ್ಗೆ ಕಾಮೆಂಟ್ ಮಾಡುವವರು ಯಾರೂ ಇಲ್ಲ. ಈಗ ಮೋದಿಯ ಕಣ್ಣು ಲೋಕಸಭಾ ಟಿವಿ ಮತ್ತು ರಾಜ್ಯಸಭಾ ಟಿವಿಗಳ ಮೇಲೂ ಬಿದ್ದಿದೆ. ಲೋಕಸಭೆಯಲ್ಲಿ ಸಂಖ್ಯಾಬಲವಿರುವ ಜೊತೆಗೆ ಅಧ್ಯಕ್ಷೆಯೂ ಬಿಜೆಪಿ ಬಗ್ಗೆ ಒಲವುಳ್ಳವರೇ ಆಗಿರುವುದರಿಂದ ಲೋಕಸಭಾ ಟಿವಿಯ ವಶೀಕರಣ ಕಷ್ಟವಲ್ಲ. ಆದರೆ ರಾಜ್ಯಸಭಾ ಟಿವಿ ಮಂಡಳಿಯ ನೇತೃತ್ವ ವಹಿಸಿರುವವರು ಕಾಂಗ್ರೆಸ್ ನಿಕಟವರ್ತಿ ಹಮೀದ್ ಅನ್ಸಾರಿ ಆಗಿರುವುದರಿಂದ ಅಲ್ಲಿ ಸ್ವಲ್ಪ ಹಿನ್ನಡೆ ಉಂಟಾಗಿದೆ. ಹಾಗಾಗಿ ತಂತ್ರಗಾರಿಕೆ ಬದಲಾಗಿದೆ. ಚಾನಲ್ ವಿರುದ್ಧ ಹಲವು ಆರೋಪಗಳು ಕೇಳಿಬರಲಾರಂಭಿಸಿವೆ. ಇದರರ್ಥ ರಾಜ್ಯಸಭಾ ಟಿವಿಯ ನಿಯಂತ್ರಣಕ್ಕೆ ಕ್ಷಣಗಣನೆ ಆರಂಭವಾಗಿದೆ.

ಸಮುದಾಯ ರೇಡಿಯೊಗಳ ನಿಯಂತ್ರಣ

ಸಮುದಾಯ ರೇಡಿಯೊಗಳ ಮೇಲೂ ಸರ್ಕಾರದ ಕರಿನೆರಳು ಬೀಳುತ್ತಿದೆ. ಸಮುದಾಯ ರೇಡಿಯೊಗಳು ಆರ್ಥಿಕವಾಗಿ ಸರ್ಕಾರವನ್ನೆ ಅವಲಂಬಿಸಿರುವ ಕಾರಣ ಪ್ರತಿರೋಧ ಕಷ್ಟಸಾಧ್ಯ. ಈಗಾಗಲೆ ಮನ್ ಕಿ ಬಾತ್ ಕಾರ್ಯಕ್ರಮದ ಪ್ರಸಾರ ಕಡ್ಡಾಯವಾಗಿದೆ. ಸಮುದಾಯ ರೇಡಿಯೊಗಳ ಪ್ರಸಾರದ ವಸ್ತುವನ್ನು ಪರೀಕ್ಷಿಸುವ ಸಲುವಾಗೆಂದೆ ಈ ಬಾರಿಯ ಬಜೆಟ್‌ನಲ್ಲಿ 10 ಕೋಟಿ ರೂಪಾಯಿಗಳನ್ನು ಮೀಸಲಿಡಲಾಗಿದೆ. ಕೆಲವು ತಿಂಗಳ ಹಿಂದೆ ಸಮುದಾಯ ರೇಡಿಯೊಗಳನ್ನು ಸಂಪರ್ಕಿಸಿದ ಮಾಹಿತಿ, ಪ್ರಸಾರ ಸಚಿವಾಲಯ, ಅವು ಮೋದಿಯ ಸ್ವಚ್ಛ ಭಾರತ್, ಬೇಟಿ ಬಚಾವೊ ಬೇಟಿ ಪಢಾವೊ, ಜನ ಧನ್ ಇತ್ಯಾದಿ ಯೋಜನೆಗಳ ಸುತ್ತ ಕಾರ್ಯಕ್ರಮಗಳನ್ನು ತಯಾರಿಸುವಂತೆ "ಸಲಹೆ" ಇತ್ತಿದೆ. ಗುಪ್ತಚರ ಇಲಾಖೆಯೂ ಫೋನ್ ಮೂಲಕ ಅವರ ವಿವಿಧ ಕಾರ್ಯಕ್ರಮಗಳು ಮತ್ತಿತರ ವಿಷಯಗಳ ಬಗ್ಗೆ ವಿವರಗಳನ್ನು ಪಡೆಯತೊಡಗಿದೆ. ಅವು ತಮ್ಮ ಕಾರ್ಯಕ್ರಮಗಳ ಅಧಿಕೃತ ಮುದ್ರಿತ ದಾಖಲೆಗಳನ್ನು ಸಲ್ಲಿಸಬೇಕೆಂದು ಆದೇಶಿಸಲಾಗಿದೆ. ಪ್ರತಿದಿನ ಪ್ರಸಾರ ಮಾಡಲಿರುವ ಕಾರ್ಯಕ್ರಮಗಳ ವಿವರಗಳಿರುವ ಮುದ್ರಿತ ದಾಖಲೆಗಳನ್ನು ಆಯಾ ದಿನವೆ ಈಮೇಲ್ ಮೂಲಕ ಮಾಹಿತಿ, ಪ್ರಸಾರ ಸಚಿವಾಲಯಕ್ಕೆ ಕಳುಹಿಸಬೇಕೆಂಬ ಆದೇಶ ಇದೇ ಏಪ್ರಿಲ್ 30ರಂದು ಹೊರಬಿದ್ದಿದೆ. ಸಚಿವಾಲಯದ ಕಾರ್ಯದರ್ಶಿಯ ಪ್ರಕಾರ ಆತನಿಗೆ ಆದೇಶದ ವಿಚಾರ ತಿಳಿದಿರಲಿಲ್ಲವಂತೆ; ಅದನ್ನು ಹಿರಿಯ ಅಧಿಕಾರಿಯೊಬ್ಬರು ಕಳುಹಿಸಿದ್ದರಂತೆ! ಇದು



ನಿಜವೆಂದು ಇಟ್ಟುಕೊಂಡರೂ ಯಾವ ಅಧಿಕಾರಿಯೂ ಕಾರ್ಯದರ್ಶಿಯನ್ನು ಬೈಪಾಸ್ ಮಾಡುವ ದಿಟ್ಟತೆಯನ್ನು ತಂತಾನೇ ತೋರಲು ಸಾಧ್ಯವಿಲ್ಲ. ಕಾರ್ಯದರ್ಶಿಗಿಂತಲೂ ಹೆಚ್ಚು ಪ್ರಭಾವಶಾಲಿಯಾದ ಆ ಮೂರನೆ ವ್ಯಕ್ತಿ ಯಾರೆಂದು ಊಹಿಸಲು ಕಷ್ಟವಿಲ್ಲ.


ಹೊಗಳುಭಟ ಮಾಧ್ಯಮಗಳ ಅವಾಂತರ

ಇಂದು ಹೆಚ್ಚಿನ ಖಾಸಗಿ ಮಾಧ್ಯಮಗಳ ಮಾಲಿಕತ್ವ ಮೋದಿ ಪರ ಕಾರ್ಪೋರೇಟುಗಳ ಕೈಗೆ ದಾಟಿರುವುದು, ಅವೆಲ್ಲವೂ ಇಂದು ಮೋದಿ ಸರ್ಕಾರದ ಭಟ್ಟಂಗಿಗಳಂತೆ ವರ್ತಿಸುತ್ತಿರುವುದು ಇದೆಲ್ಲ ಕಾಕತಾಳೀಯವಲ್ಲ. ಇವುಗಳ ಅತಿರೇಕದ ವರದಿಗಾರಿಕೆಗೆ ದೇಶದಲ್ಲಿ ಎಷ್ಟಾಗಬೇಕಿತ್ತೋ ಅಷ್ಟು ವಿರೋಧ ವ್ಯಕ್ತವಾಗಿಲ್ಲವಾದರೂ ನೇಪಾಳದಲ್ಲಿ ತಕ್ಕ ಶಾಸ್ತಿಯಾಗಿದೆ. ಭಾರತೀಯ ಮಾಧ್ಯಮಗಳ ಅಬ್ಬರದ ದೇಶಭಕ್ತಿ ಪ್ರದರ್ಶನದಿಂದ ರೋಸಿಹೋದ ನೇಪಾಳಿಗರು ತಮ್ಮ ಆಕ್ರೋಶವನ್ನು ಸಾಮಾಜಿಕ ಮಾಧ್ಯಮಗಳ ಮೂಲಕ ವ್ಯಕ್ತಪಡಿಸಿದ್ದಾರೆ. ಭಾರತೀಯ ಸೇನೆಯ ನೆರವು ಕಾರ್ಯಾಚರಣೆಯ ಉತ್ಪ್ರೇಕ್ಷಾಭರಿತ ವರದಿಗಳು, ನೇಪಾಳಿ ಅಧಿಕಾರಿಗಳ ಜೊತೆಗಿನ ಅನುಚಿತ ವರ್ತನೆ ಮತ್ತು ಇಡೀ ದುರಂತವನ್ನು ಟಿವಿ ಧಾರಾವಾಹಿ ತರಹ ಬಿಂಬಿಸಿದ ಪರಿ ಎಂಥವರನ್ನೂ ಸಿಟ್ಟಿಗೆಬ್ಬಿಸುವ ಹಾಗಿಲ್ಲವೆ?

(ಆಧಾರ: 25.4.2015ರ ತೆಹೆಲ್ಕಾ, ಪಳ್ಳಿ ಅಲಿ ಶ್ರೀನಿವಾಸರ ಲೇಖನ; ದ ಹಿಂದು, 1.3.2015 ಮತ್ತು 3.5.2015 ಸಂಚಿಕೆಗಳು) ■

Registered No.RNP/KA/BGS/2036/2014-16 Posted at :BGPSO, Mysore Road, Bangalore-26 Friday R B P LANKESH, Kannada Weekly Price Rs. 15/- 20-05-2015 RNI No. KARKAN200

ಟಾಲಿವುಡ್‌ಗೆ ಇಂದ್ರಜಿತ್ ಲಂಕೇಶ್




ಇತ್ತೀಚೆಗೆ ನಮ್ಮ ಕನ್ನಡದ ನಿರ್ದೇಶಕರು ಬೇರೆ ಭಾಷಾ ಸಿನಿಮಾಗಳ ಕಡೆಗೆ ಮುಖ ಮಾಡುತ್ತಿರುವುದು ಸರ್ವೇಸಾಮಾನ್ಯವಾಗಿದೆ. ಈಗ ಆ ಪಟ್ಟಿಗೆ ಸೇರ್ಪಡೆ ಆಗಿರುವ ಮತ್ತೊಂದು ಹೆಸರು ನಿರ್ದೇಶಕ ಇಂದ್ರಜಿತ್ ಲಂಕೇಶ್ ಅವರದ್ದು. ಇವರು ಕನ್ನಡದಲ್ಲಿ ನಿರ್ದೇಶಿಸಿರುವ 'ಲವ್ ಯೂ ಆಲಿಯಾ' ಚಿತ್ರ ತೆಲುಗಿನಲ್ಲೂ ನಿರ್ಮಾಣವಾಗಲಿದ್ದು ಅದನ್ನು ಸ್ವತಃ ಇಂದ್ರಜಿತ್ ಅವರೇ ಕೆಲವು ಬದಲಾವಣೆಯ ಜೊತೆಗೆ ನಿರ್ದೇಶಿಸಲಿದ್ದಾರಂತೆ.

ಸದ್ಯ 'ಮಜಾ ಟಾಕೀಸ್'ನಲ್ಲಿ ಬಿಜಿ ಆಗಿರುವ ಇಂದ್ರಜಿತ್ "ಲವ್ ಯೂ ಆಲಿಯಾ' ಚಿತ್ರದ ಸ್ಕ್ರಿಪ್ಟ್ ಗುಣವೇ ಅಂಥದ್ದು. ಅದನ್ನು ಯಾವುದೇ ಭಾಷೆಯಲ್ಲಾದರೂ ಮಾಡಬಹುದು. ತೆಲುಗು ವರ್ಷನ್‌ನಲ್ಲಿ ತೆಲುಗಿನ ಕಲಾವಿದರು ಇರುತ್ತಾರಲ್ಲದೆ ಮುಖ್ಯ ಪಾತ್ರಧಾರಿಗಳು ಹಾಗೆಯೇ ಇರುತ್ತಾರೆ" ಎಂದಿದ್ದಾರೆ.

ಹೊಸ ಅವತಾರದಲ್ಲಿ ಕ್ರೇಜಿ ಸ್ಟಾರ್

ತಮ್ಮ ನಿರ್ದೇಶನದ ಚಿತ್ರಗಳು ಬಾಕ್ಸ್ ಆಫೀಸ್‌ನಲ್ಲಿ ಸತತ ಸೋಲನ್ನು ಕಾಣುತ್ತಿರುವಾಗ ಕ್ರೇಜಿ ಸ್ಟಾರ್ ರವಿಚಂದ್ರನ್ ಈಗ ಬೇರೆ ಕ್ಷೇತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಈಗಾಗಲೇ ಕಲರ್ಸ್ ಕನ್ನಡ ಚಾನೆಲ್ ನಡೆಸುವ ರಿಯಾಲಿಟಿ ಶೋ ಒಂದರಲ್ಲಿ ಜಡ್ಜ್ ಆಗಿರುವ ರವಿ ಈಗ 'ಆರ್‌ಜೆ' ಆಗಿ ಎಫ್.ಎಂಗೂ ಹಾರಿದ್ದಾರೆ. ಹೌದು ನಟ ರವಿಚಂದ್ರನ್ ಅವರು 92.7 ಬಿಗ್ ಎಫ್‌ಎಮ್‌ನಲ್ಲಿ ಸೋಮವಾರದಿಂದ ಶನಿವಾರದವರೆಗೆ ರಾತ್ರಿ 7 ರಿಂದ 10ರ ತನಕ ಕೇಳುಗರೊಂದಿಗೆ ಮಾತನಾಡುವುದರ ಜೊತೆಗೆ ತಮ್ಮ ಜೀವನದಲ್ಲಿ ಆದ ಅನುಭವಗಳು, ಘಟನೆಗಳು, ಹಲವಾರು ವಿಷಯಗಳನ್ನೂ ಹಂಚಿಕೊಳ್ಳುತ್ತಿದ್ದಾರೆ. ಅಲ್ಲದೆ ಜನರು ಕೇಳುವ ಪ್ರಶ್ನೆಗಳಿಗೆ ಸೂಕ್ತ ಉತ್ತರಗಳನ್ನೂ ನೀಡಲಿದ್ದಾರೆ. ನಿಮಗೆ ತಿಳಿಯದ ರವಿಚಂದ್ರನ್ ವಿಷಯಗಳನ್ನು ಕೂಡ ಅವರು ರೇಡಿಯೋ ಮೂಲಕ ಹೇಳಿಕೊಳ್ಳಲು ಹೊರಟಿದ್ದಾರೆ.



ಮಾನವೀಯತೆ ಮೆರೆದ ಸಲ್ಮಾನ್ ಖಾನ್

ನೇಪಾಳ ಭೂಕಂಪದಿಂದ ತತ್ತರಿಸಿದ ಸಂತ್ರಸ್ತರಿಗೆ ಬಾಲಿವುಡ್‌ನ ಬ್ಯಾಡ್ ಮ್ಯಾನ್ ಸಲ್ಮಾನ್ ಖಾನ್ 10 ಕೋಟಿ ರೂಪಾಯಿ ಪರಿಹಾರದ ಜೊತೆಗೆ ತನ್ನ ಎರಡು ಹೆಲಿಕಾಪ್ಟರ್‌ಗಳನ್ನೂ ನೀಡಿದ್ದಾನಂತೆ. ಅಷ್ಟೇ ಅಲ್ಲದೇ ಜಮ್ಮು ಕಾಶ್ಮೀರದ ಹಳ್ಳಿಯೊಂದರಲ್ಲಿ ಆರು ಮಂದಿ ಕುಟುಂಬದ ಹಣೆಬರಹವನ್ನೇ ಬದಲಾಯಿಸಿದ್ದಾನಂತೆ.



ಅದು ಹೇಗೆ ಅಂದರೆ ಚಿತ್ರೀಕರಣಕ್ಕೆಂದು ಸಲ್ಮಾನ್ ಜಮ್ಮು ಕಾಶ್ಮೀರದ ಹಳ್ಳಿಯೊಂದಕ್ಕೆ ಹೋದಾಗ ಅಲ್ಲಿ ಓರ್ವ ವೃದ್ಧ ವಿಧವೆ ತನ್ನ ವಿಧವೆ ಮಗಳು ಮತ್ತು ನಾಲ್ಕು ಮೊಮ್ಮಕ್ಕಳನ್ನು ಸಾಕಲು ಸಿಕ್ಕಾಪಟ್ಟೆ ಕಷ್ಟ ಪಡುತ್ತಿರುವುದನ್ನು ಕಂಡು ಆಕೆಗೆ 15 ಲಕ್ಷ ಧನಸಹಾಯ ಮಾಡಿದ್ದಲ್ಲದೇ ಆಕೆಯ 18 ವರ್ಷದ ಮೊಮ್ಮಗನಿಗೆ ಸಿನಿಮಾ ಸೆಟ್‌ನಲ್ಲಿ ಕೆಲಸ ಕೊಡಿಸಿ ಆತನನ್ನು ಮುಂಬೈಗೂ ಕರೆದುಕೊಂಡು ಹೋಗಿ ಮಾನವೀಯತೆ ಮೆರೆದಿದ್ದಾರಂತೆ. ಬೇರೆ ವಿಷಯಗಳಲ್ಲದಿದ್ದರೂ ಈ ವಿಷಯದಲ್ಲಿ ಸಲ್ಮಾನ್ ಬೇರೆ ನಟರಿಗೆ ಮಾದರಿಯಾಗಿದ್ದಾರೆ.

ಅಪಘಾತಕ್ಕೀಡಾದ ನಟಿಯ ಅಳಲು



ಇತ್ತೀಚೆಗೆ 'ವಾರಿಯರ್' ಚಿತ್ರದ ಶೂಟಿಂಗ್‌ಗೆ ತೆರಳುವಾಗ ನಾಯಕಿ ನೇಹ ಸಕ್ಸೇನಾ ಅಪಘಾತದಲ್ಲಿ ತೀವ್ರ ಗಾಯಗೊಂಡು ಚಿಕಿತ್ಸೆ ಪಡೆಯಲು ಹರಸಾಹಸ ಪಟ್ಟರು.

ಆ ಭಯಾನಕ ಅಪಘಾತದ ಬಗ್ಗೆ ನೇಹ ಅವರು ತಮ್ಮ ಫೇಸ್‌ಬುಕ್‌ನಲ್ಲಿ ವಿವರಿಸಿದ್ದಾರೆ. ಅವರು ಹೇಳುವ ಪ್ರಕಾರ "ಕನ್ನಡ ಚಿತ್ರ 'ವಾರಿಯರ್'ನ ಚಿತ್ರೀಕರಣಕ್ಕಾಗಿ ರಾತ್ರಿ ಪ್ರಯಾಣ ಮಾಡಬೇಕಾಗಿತ್ತು ಅದೂ ಟೆಂಪೋ ಟ್ರಾವೆಲ್ಲರ್‌ನಲ್ಲಿ. ನಾನು ಮೊದಲಿಗೆ ಒಪ್ಪಲಿಲ್ಲ. ಒಬ್ಬಳೇ ಟಿ.ಟಿಯಲ್ಲಿ ಬರುವುದಿಲ್ಲ. ಬರುವುದಾದರೆ ಯಾರಾದರೂ ಟೀಮ್ ಮೆಂಬರ್ ಅನ್ನು ಜೊತೆಗೆ ಕಳುಹಿಸಿ ಅಂದೆ. ಆದರೆ ಅವರು ಹಾಗೇ ಮಾಡಲಿಲ್ಲ. ಕಡೆಗೆ ನಿರ್ಮಾಪಕರ ಒತ್ತಾಯಕ್ಕೆ ಮಣಿದು ನನ್ನ ಸಹಾಯಕ ಧನುಷರನ್ನು ಕರೆದುಕೊಂಡು ರಾತ್ರಿ 10.30ಕ್ಕೆ ಹೊರಟೆ. ಒಂದು ಗಂಟೆ ಅವಧಿಯಲ್ಲಿ ಹತ್ತು ಬಾರಿ ಟೀ, ಸಿಗರೇಟು ಸೇದಲು ಚಾಲಕ ಗಾಡಿ ನಿಲ್ಲಿಸಿದ್ದ. ವಾಹನ ಚಲಿಸುತ್ತಲೇ ನಿದ್ರೆ ಮಾಡುತ್ತಿದ್ದ. ಜೊತೆಗೆ ಆತ ಮದ್ಯವನ್ನು ಸಹ ಸೇವಿಸಿದ್ದ. ಅಪಘಾತವಾದಾಗ ನಾನು ಎಚ್ಚರವಾಗಿದ್ದೆ. ಚಾಲಕ ಟಿ.ಟಿಯಿಂದ ಜಿಗಿದ. ಟಿ.ಟಿ ಮೂರು ಪಲ್ಟಿ ಹೊಡೆಯಿತು. ನಾನು ಎರಡು ಗಂಟೆ ಕಾಲ ಒಬ್ಬಳೇ ಟಿ.ಟಿಯಲ್ಲಿ ಸಿಲುಕಿಕೊಂಡಿದ್ದೆ. ನನ್ನ ಮೂಗು ಮತ್ತು ಬಾಯಿಗೆ ಪೆಟ್ಟು ಬಿದ್ದು ರಕ್ತ ಸುರಿಯುತ್ತಿತ್ತು. ನಮ್ಮ ಸಿನಿಮಾದ ಮ್ಯಾನೇಜರ್ ದಿನೇಶ್‌ಗೆ ಅಪಘಾತದ ಬಗ್ಗೆ ತಿಳಿಸಿ ನಿರ್ಮಾಪಕರಿಗೆ ಸುದ್ದಿ ಮುಟ್ಟಿಸುವಂತೆ ಹೇಳಿದೆ. ಅಲ್ಲಿಗೆ ಬಂದ ಯಾರೋ ಮೂವರು ಕಿಡಿಗೇಡಿಗಳು ಘಟನೆಯನ್ನು ದುರುಪಯೋಗಪಡಿಸಿಕೊಳ್ಳಲು ನೋಡಿದಾಗ ಅಲ್ಲಿಂದ ಹೇಗೋ ತಪ್ಪಿಸಿಕೊಂಡು ರಸ್ತೆಗೆ ಬಂದೆ. ದೇವರಂತೆ ಬಂದ ಮಂಜು ನನ್ನನ್ನು ಗುರುತಿಸಿ ಕಾರಿನಲ್ಲಿ ತುಮಕೂರು ಆಸ್ಪತ್ರೆಗೆ ಸೇರಿಸಿದರು. ಅಲ್ಲಿಂದ ಫೋರ್ಟಿಸ್ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗಾಗಿ ದಾಖಲಾದೆ. ನನ್ನ ಶಸ್ತ್ರಚಿಕಿತ್ಸೆಗಾಗಿ ನಾಲ್ಕು ಗಂಟೆಗಳ ಅವಧಿ ವೈದ್ಯರು ಕಾಯಬೇಕಾಯಿತು. ಏಕೆಂದರೆ ಶಸ್ತ್ರಚಿಕಿತ್ಸೆಗಾಗಿ ಹಣ ತುಂಬಬೇಕಾಗಿತ್ತು, ನನ್ನ ಪರಿಸ್ಥಿತಿ ಕೆಟ್ಟದಾಗಿತ್ತು ಮತ್ತು ಚಿತ್ರತಂಡದವರು ಯಾರೂ ಅತ್ತ ಕಡೆ ಸುಳಿಯಲಿಲ್ಲ. ಕೇಳಿದರೆ ಅದು ನಮ್ಮ ಜವಾಬ್ದಾರಿ ಅಲ್ಲ ಎಂದರು. ಇಲ್ಲಿಯವರೆಗೂ ಅವರು ಯಾರೂ ಒಂದು ಕರೆ ಕೂಡ ಮಾಡಿ ವಿಚಾರಿಸಿಕೊಳ್ಳಲಿಲ್ಲ. ನಾನೇ ಹಣ ಕಟ್ಟಿ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡೆ. ಚಿತ್ರರಂಗದ ಒಂದು ಚಿತ್ರದ ಭಾಗವಾಗಿ ನನಗೆ ಇದೆಲ್ಲ ಆದದ್ದು ನಿರಾಸೆ ತರಿಸಿದೆ. ಚಿತ್ರರಂಗದ ಮೇಲಿದ್ದ ಗೌರವ ಕಡಿಮೆಯಾಗಿ ಭಯ ಶುರುವಾಗಿದೆ. ನನಗೆ ನನ್ನ ತಾಯಿ ಬಿಟ್ಟರೆ ಯಾರೂ ಇಲ್ಲ. ಅಕಸ್ಮಾತ್ ನಾನು ಸತ್ತೆ ಹೋಗಿದ್ದರೆ ಏನಾಗುತ್ತಿತ್ತು? ಒಂದು ಚಿತ್ರದ ನಾಯಕಿಯನ್ನು ಹೀಗೆ ನಡೆಸಿಕೊಳ್ಳುವುದು ಸರಿಯಾ?" ಇದು ನಾಯಕಿ ನೇಹಾ ಸಕ್ಸೇನಾ ಅವರ ಬೇಸರದ ಮಾತುಗಳು.

ಈಗ ಚಿತ್ರೀಕರಣಕ್ಕೆ ಸಹಕರಿಸಲಿಲ್ಲ ಎಂದು ನೇಹಾ ವಿರುದ್ಧ 'ವಾರಿಯರ್' ಚಿತ್ರದ ನಿರ್ದೇಶಕ ಮತ್ತು ನಿರ್ಮಾಪಕ ಕಂಪ್ಲೇಂಟ್ ಕೊಡುವ ಬೆದರಿಕೆಯನ್ನೂ ಹಾಕಿದ್ದಾರಂತೆ. ಇದರಿಂದಾಗಿ ನೇಹಾ ಕೂಡ ನಿರ್ಮಾಪಕ ಮತ್ತು ನಿರ್ದೇಶಕರೇ ತಮ್ಮೊಂದಿಗೆ ಸಹಕರಿಸಲಿಲ್ಲ ಎಂದೂ ದೂರು ಸಲ್ಲಿಸುತ್ತಾರಂತೆ.

ಸದ್ಯಕ್ಕೆ ನೇಹಾ ಸಕ್ಸೇನಾ ಅವರ ಆಸ್ಪತ್ರೆಯ ವೆಚ್ಚವನ್ನು ಭರಿಸಿರುವ ಕರ್ನಾಟಕ ವಾಣಿಜ್ಯ ಮಂಡಳಿ ದೂರುಗಳನ್ನು ಹೇಗೆ ಬಗೆಹರಿಸುತ್ತದೋ ಕಾದು ನೋಡಬೇಕು.

ನಾಟಿ 'ಕೋಳಿ' ಜಗ

ಕನ್ನಡ ಚಿತ್ರರಂಗದಲ್ಲಿ ವಿವಾದಗಳಿಗೇನು ಕೊರತೆಯೇ ಇಲ್ಲ. ಪ್ರ ಒಂದಲ್ಲ ಒಂದು ವಿವಾದ ಇಲ್ಲಿ ಸೃಷ್ಟಿಯಾಗುತ್ತಲೇ ಇರುತ್ತದೆ. ಈಗ ಮತ್ತೊಂದು ಸೇರ್ಪಡೆ ತುಪ್ಪದ ಬೆಡಗಿ ರಾಗಿಣಿಯ 'ನಾಟಿ ಕೋಳಿ'

ವಿಷಯ ಏನಪ್ಪ ಅಂದರೆ ರಾಗಿಣಿ ಅಭಿನಯಿಸುತ್ತಿರುವ 'ನಾಟಿ ಚಿತ್ರದ ಹಾಟ್ ಫೋಟೋ ಶೂಟ್ ವಿಲ್ಸನ್ ಗಾರ್ಡನ್ ಸ್ಟುಡಿಯೊ ಸದ್ದಿಲ್ಲದೆ ನಡೆಯುತ್ತಿತ್ತು, ಅಲ್ಲಿಗೆ ಏಕಾಏಕಿ ಆಗಮಿಸಿದ 'ಹುಲಿ' ನಿರ್ಮಾಪಕ ಶಿವಪ್ರಕಾಶ್ ಮತ್ತು ಇತರರ ನಡುವೆ ಢಿಶುಂ ಢಿಶುಂ ನಡೆಯಿತು.

ಅವತ್ತು ನಡೆದ ಘಟನೆಯ ಬಗ್ಗೆ ಮಾತನಾಡಿದ ನಿರ್ಮಾಪಕ ಅವರು "ಏಪ್ರಿಲ್ 29ರ ಸಂಜೆ 4 ಗಂಟೆಯಿಂದ ವಿಲ್ಸನ್ ಗಾ ಸ್ಟುಡಿಯೋದಲ್ಲಿ ನಮ್ಮ ಚಿತ್ರದ ನಾಯಕಿ ರಾಗಿಣಿ ಮತ್ತು ನಾಯಕ ಗೌಡರ ಜೊತೆ 'ನಾಟಿ ಕೋಳಿ' ಚಿತ್ರದ ಫೋಟೋಶೂಟ್ ಮಾಡುತ್ತಿರು ಸಂಜೆ 7.25ಕ್ಕೆ ಬಂದ 'ಹುಲಿ' ಚಿತ್ರದ ನಿರ್ಮಾಪಕ ಶಿವಪ್ರಕಾಶ್ ಎಂಬು ಅಪ್ಪಣೆಯಿಲ್ಲದೆ ಒಳಗೆ ಪ್ರವೇಶಿಸಿದ್ದಲ್ಲದೇ. ನಮ್ಮ ಚಿತ್ರದ ನಿ ಶ್ರೀನಿವಾಸರಾಜು ಅವರಿಗೆ 'ರಾಗಿಣಿ ನನ್ನ ಗರ್ಲ್‌ಫ್ರೆಂಡ್, ಈ ಚಿ ನಿರ್ದೇಶಿಸಿದ್ರೆ ಕೊಲೆ ಮಾಡುತ್ತೇನೆ' ಎಂದು ಅವರ ಕುತ್ತಿಗೆಗೆ ಕೈಹಾ ಅವರನ್ನು ತಡೆಯಲು ಬಂದ ನನ್ನನ್ನೂ ಅವಾಚ್ಯ ಶಬ್ದಗಳಿಂದ ನಿಂದಿ ನನ್ನ ಮೇಲೆ ಹಲ್ಲೆ ನಡೆಸಿದ ನಂತರ ಅವರು ಪರಾರಿಯಾದರು" ಎಂ

ಈ ಸಂಬಂಧ ಶಿವಪ್ರಕಾಶ್ ವಿರುದ್ಧ ಫಿಲಂ ಚೇಂಬರ್ ನಿರ್ಮಾಪಕರ ಸಂಘಕ್ಕೆ ದೂರು ನೀಡಲಾಗಿದೆ. ಜೊತೆ ಘಟನೆಯಿಂದ ಚಿತ್ರ ತಂಡ ಅಪ್ಸೆಟ್ ಆಗಿದ್ದು ಈಗ " ನಮ್ಮ ಚಿತ್ರಕ್ಕೆ ಬೇಡವೇ ಬೇಡ. ರಾಗಿಣಿ ಅವರಿಗೆ ಮುಂಗ ನೀಡಿದ್ದ ಹತ್ತು ಲಕ್ಷ ರೂಪಾಯಿಗಳ ಜೊತೆಗೆ ವಸ್ತ ಕೊಳ್ಳಲು ನೀಡಿದ್ದ ಆರು ಲಕ್ಷ ರೂಪಾಯಿಗಳನ್ನು ನಮಗೆ ಕೊಡಲಿ. ಅಷ್ಟೇ ಅಲ್ಲದೆ ಫೋಟೋ ಶ ಆದ ನಷ್ಟ ಎರಡೂವರೆ ಲಕ್ಷಗಳು. ಎಲ್ಲವೂ ಹದಿನೆಂಟೂವರೆ ಲಕ್ಷ ರೂಪಾಯಿಗಳಾಗುತ್ತದೆ. ಹಣವನ್ನು ಆಕೆ ನೀಡಬೇಕು" ಎಂಬುದು ಅವರು ಕರ್ನಾಟಕ ಚಲನಚಿತ್ರ ವಾಣಿಜ್ಯ ಮ ದೂರು ಸಲ್ಲಿಸಿದ್ದಾರೆ.

ಜೊತೆಗೆ "ಈ ಘಟನೆಯಿಂದ ನಿರ್ದೇ ಅಪಮಾನವಾಗಿದ್ದು, ಅವರು ಇನ್ನು ರಾಗಿಣಿ ಜೊತೆ ಕೆಲಸ ಮಾಡಲು ಸಾ ಹಾಗಾಗಿ ಅವರನ್ನು ಚಿತ್ರದಿಂದ ಕೈಬಿ ನಿರ್ಧರಿಸಿದ್ದೇವೆ" ಎಂದಿದ್ದಾರೆ ವೆಂಕ

ಈ ಘಟನೆಯ ಬಗ್ಗೆ ಪ್ರತಿಕ್ರಿಯಿ ರಾಗಿಣಿ "ನನಗೇನೂ ಗೊತ್ತಿಲ್ಲ. ಅವರು ಹಾಗೆ ಮಾಡಿದರೋ ಏನೋ ಹಲ್ಲೆ ನ ನಾನು ಘಟನಾ ಸ್ಥಳದಲ್ಲಿ ಇರಲಿಲ್ಲ. ನೇರಾನೇರ ಮಾತನಾಡುವ ಹುಡುಗಿ ಯಾವ ಬಾಯ್ ಫ್ರೆಂಡೂ ಎಂದಿದ್ದಾರೆ.

ಹಲ್ಲೆ ಮಾಡಿದ್ದಕ್ಕೆ ಶಿವಪ್ರಕಾಶ ಕೇಳಿದ್ದಾರೆ. ಆದರೆ ನಿರ್ಮಾಪಕ ಬಿಡದೆ ಕುಳಿತಿದ್ದಾರೆ. ರಾಗಿಣಿಯ ಪ್ರಿಯಾಮಣಿ ಬರುವ ಸಾಧ್ಯತೆ ಮುಂದೇನಾಗಬಹುದು ಎಂ ಕಾದು ನೋಡಬೇಕಾಗಿದೆ.



ಸಿನಿಮಾ ಸು
ಕಾರ್ತಿಕ್ ಸಿ.ಎ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com